₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | **ಕಲಬುರಗಿ** | ಬೆಳಗಾವಿ ಭಾನುವಾರ 22.12.2024 ಸಂಪುಟ: 67 ಸಂಚಿಕೆ: 227 ಪುಟಗಳು: 10+4 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

# ವಿಶ್ವವಾಣಿ

ವಿಶ್ವಾಸವೇ ವಿಶ್ವ

## ಶ್ರೀಜಿತ್ ಶತಕದಬ್ಬರ

ಕರ್ನಾಟಕ ತಂಡದ ವಿಕೆಟ್‌ಕೀಪರ್, ಬ್ಯಾಟ್ಸ್‌ಮನ್ ಕೆ.ಎಲ್ ಶ್ರೀಜಿತ್ ಶತಕದ ನೆರವಿನಿಂದ ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ವಿಜಯ್ ಹಜಾರೆ ಟ್ರೋಫಿ ಪಂದ್ಯದಲ್ಲಿ ಮುಂಬೈ ನೀಡಿದ 382 ರನ್‌ಗಳ ಬೃಹತ್ ಗುರಿ ಬೆನ್ನಟ್ಟಿದ ಕರ್ನಾಟಕ ತಂಡ 22 ಎಸೆತಗಳು ಬಾಕಿ ಇರುವಂತೆಯೇ 3 ವಿಕೆಟ್ ಕಳೆದುಕೊಂಡು ಜಯ ಗಳಿಸಿದೆ. ಶ್ರೀಜಿತ್ 101 ಎಸೆತಗಳಲ್ಲಿ 20 ಬೌಂಡರಿ ಹಾಗೂ 4 ಸಿಕ್ಸರ್‌ಗಳ ಸಹಿತ ಅಜೇಯ 150 ರನ್‌ಗಳನ್ನು ಸಿಡಿಸಿದರು.


ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ KALYANA KARNATAKA REGION DEVELOPMENT BOARD

ಕರ್ನಾಟಕ ಸರಕಾರ

GOVERNMENT OF KARNATAKA

# ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಕಲಬುರಗಿ

SRI JAYADEVA INSTITUTE OF CARDIOVASCULAR SCIENCE & RESEARCH

## ಕೆ.ಕೆ. ಆರ್‌.ಡಿ.ಬಿ ಅನುದಾನದಲ್ಲಿ ನಿರ್ಮಾಣವಾದ ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ 371 ಹಾಸಿಗೆ ಸಾಮರ್ಥ್ಯದ ಕಲಬುರಗಿ ಶಾಖೆಯ ಲೋಕಾರ್ಪಣೆ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

**ಸರ್ವರಿಗೂ ಹಾರ್ದಿಕ ಸ್ವಾಗತ**

ಶ್ರೀ ಸಿದ್ದರಾಮಯ್ಯ
ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಕಲಬುರಗಿಯಲ್ಲಿ ಕೆಕೆಆರ್‌ಡಿಬಿಯಿಂದ ನಿರ್ಮಾಣವಾಗಿರುವ ಜಯದೇವ ಹೃದ್ರೋಗ ಆಸ್ಪತ್ರೆಯ ಮುಂಭಾಗದಲ್ಲಿ ರಾಜ್ಯಸಭೆ ವಿರೋಧ ಪಕ್ಷದ ನಾಯಕರಾದ ಶ್ರೀ ಡಾ. ಮಲ್ಲಿಕಾರ್ಜುನ ಖರ್ಗೆ, ವೈದ್ಯಕೀಯ ಶಿಕ್ಷಣ ಸಚಿವರಾದ ಡಾ. ಶರಣಪ್ರಕಾಶ್ ಪಾಟೀಲ್, ಕೆಕೆಆರ್‌ಡಿಬಿ ಅಧ್ಯಕ್ಷ ಡಾ. ಅಜಯಸಿಂಗ್, ಆರ್‌ಡಿಪಿಆರ್, ಐಟಿಬಿಟಿ ಸಚಿವರಾದ ಶ್ರೀ ಪ್ರಿಯಾಂಕ್ ಖರ್ಗೆ ಇದ್ದಾರೆ.

### ಯೋಜನೆ ವಿವರ

- ಕಲಬುರಗಿ ನಗರದಲ್ಲಿ ಶ್ರೀ ಜಯದೇವ ಹೃದ್ರೋಗ ವಿಜ್ಞಾನಗಳ ಸಂಸ್ಥೆಯ **371** ಹಾಸಿಗೆ ಸಾಮರ್ಥ್ಯದ ಪ್ರತ್ಯೇಕ ಆಸ್ಪತ್ರೆಯ ಕಟ್ಟಡ ನಿರ್ಮಾಣ ಕಾಮಗಾರಿಗೆ ರೂ.**262.20** ಕೋಟಿಗಳ ಮೊತ್ತಕ್ಕೆ ಹಾಗೂ ಉಪಕರಣಗಳಿಗಾಗಿ ರೂ.**56.77** ಕೋಟಿಗಳ ಮೊತ್ತಕ್ಕೆ ಒಟ್ಟು ರೂ.**318.97** ಕೋಟಿಗಳ ಮೊತ್ತಕ್ಕೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.
- ಕ.ಕ.ಪ್ರ.ಅ.ಮಂಡಳಿಯ ಪ್ರಾದೇಶಿಕ ನಿಧಿ ಅಡಿ ಹಾಗೂ ಎಲ್ಲಾ ಜಿಲ್ಲೆಗಳ ಮ್ಯಾಕ್ರೋ ಯೋಜನೆಯಡಿ ಶ್ರೀ ಜಯದೇವ ಹೃದ್ರೋಗ ವಿಜ್ಞಾನಗಳ ಸಂಸ್ಥೆಯ ಕಟ್ಟಡ ಕಾಮಗಾರಿಗೆ ರೂ.**262.20** ಕೋಟಿಗಳು ಮತ್ತು ಉಪಕರಣಗಳಿಗಾಗಿ ರೂ.**40.00** ಕೋಟಿಗಳು ಒಟ್ಟು ರೂ. **302.20** ಕೋಟಿಗಳ ಮೊತ್ತಕ್ಕೆ ಮಂಜೂರಾತಿ ನೀಡಲಾಗಿರುತ್ತದೆ.

ಕೆಕೆಆರ್‌ಡಿಬಿಯಿಂದ ಕಲಬುರಗಿಯಲ್ಲಿ ನಿರ್ಮಾಣವಾದ ಜಯದೇವ ಆಸ್ಪತ್ರೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಯೋಜನೆ, ಸಾಂಖ್ಯಿಕ ಖಾತೆ ಸಚಿವರಾದ ಶ್ರೀ ಡಿ. ಸುಧಾಕರ, ಮಂಡಳಿ ಅಧ್ಯಕ್ಷ, ಜೇವರ್ಗಿ ಶಾಸಕ ಡಾ. ಅಜಯಸಿಂಗ್ ಇದ್ದಾರೆ.

**ದಿನಾಂಕ 22-12-2024 ಭಾನುವಾರ**

ಸ್ಥಳ: ಎಸ್. ಎಮ್. ಪಂಡಿತ್ ರಂಗಮಂದಿರದ ಎದುರು,
ಸರ್ದಾರ್ ವಲ್ಲಭ ಭಾಯಿ ಪಟೇಲ್ ರಸ್ತೆ, ಕಲಬುರಗಿ
ಸಮಯ : ಬೆಳಗ್ಗೆ 11.30 ಗಂಟೆಗೆ

## ಸಮಾಚಾರ ಸಣ್ಣದಲ್ಲ

### ಮತದಾರ ಹೆಸರು ಸೇರ್ಪಡೆಗೆ ಡಿಸಿ ಸೂಚನೆ

**ಯಾದಗಿರಿ:** ಚುನಾವಣಾ ಆಯೋಗದ ನಿರ್ದೇಶನದ ಮೇರೆಗೆ, ಯಾದಗಿರಿ ಜಿಲ್ಲೆಯ ವ್ಯಾಪ್ತಿಯ ನಾಲ್ಕು ವಿಧಾನಸಭಾ ಕ್ಷೇತ್ರಗಳಲ್ಲಿ ಸಾರ್ವಜನಿಕರು ತಮ್ಮ ಹೆಸರು ಮತದಾರರ ಪಟ್ಟಿಯಲ್ಲಿ ಯುವಕರು, ಯುವತಿಯರು ಅಥವಾ ಸಾರ್ವಜನಿಕರು ಹೊಸದಾಗಿ ಹೆಸರು ಸೇರ್ಪಡೆಗಾಗಿ ನಮೂನೆ-6ರಲ್ಲಿ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಸುಶೀಲಾ.ಬಿ ಅವರು ತಿಳಿಸಿದ್ದಾರೆ.

ಈ ಕುರಿತು ಮಾಹಿತಿ ನೀಡಿರುವ ಅವರು, ಮತದಾರರ ಪಟ್ಟಿಯಲ್ಲಿ ಹೆಸರಿದ್ದು, ಅವರುಗಳು ಸ್ಥಳಾಂತರ ಹೊಂದಿದ್ದಲ್ಲಿ, ಮೃತ ಹೊಂದಿದ್ದಲ್ಲಿ, ಹೆಸರು ಪುನರಾವರ್ತನೆಯಾಗಿದ್ದಲ್ಲಿ ಅವರುಗಳ ಹೆಸರನ್ನು ತೆಗೆದು ಹಾಕಲು ನಮೂನೆ-7ರಲ್ಲಿ, ಹೆಸರು ಇತ್ಯಾದಿ ತಿದ್ದುಪಡಿ ಬಯಸಿದ್ದಲ್ಲಿ ನಮೂನೆ-8ರಲ್ಲಿ ಸೂಕ್ತ ದಾಖಲೆಯೊಂದಿಗೆ ಅರ್ಜಿಗಳನ್ನು ಸಂಬಂಧಪಟ್ಟ ಮತಗಟ್ಟೆ ಮಟ್ಟದ ಅಧಿಕಾರಿ (ಬಿ.ಎಲ್.ಒ) ರವರಿಗೆ ನೀಡಲು ಸೂಚನೆ ನೀಡಲಾಗಿದೆ. ಅದರಂತೆ ಮತದಾರರ ಪಟ್ಟಿಯಲ್ಲಿ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಮತದಾರರ ಪಟ್ಟಿಯ ಬಗ್ಗೆ ಏನಾದರೂ ಮಾಹಿತಿ ತಿಳಿಯಬೇಕಾಗಿದ್ದಲ್ಲಿ ಸಹಾಯವಾಣಿ ಕೇಂದ್ರದ ದೂ.ಸಂ.918473200671ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ವೈದ್ಯಕೀಯ ಶಿಬಿರ ನಾಳೆಯಿಂದ

**ಯಾದಗಿರಿ:** ವಿಶೇಷಚೇತನರಿಗೆ ವೈದ್ಯಕೀಯ ಶಿಬಿರಗಳನ್ನು ಆಯೋಜಿಸಲಾಗಿದ್ದು, ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಜಿಲ್ಲಾ ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣಾಧಿಕಾರಿ ಶರಣಪ್ಪ ಪಾಟೀಲ ಅವರು ತಿಳಿಸಿದ್ದಾರೆ. ಡಿ.23 ರಂದು ಬೆಳಿಗ್ಗೆ 10 ರಿಂದ ಸಂಜೆ 5 ಗಂ.ವರೆಗೆ ಯಾದಗಿರಿ ಜಿಲ್ಲಾ ಆಸ್ಪತ್ರೆಯಲ್ಲಿ ಶಿಬಿರ ಆಯೋಜನೆ ಮಾಡಲಾಗಿದ್ದು, ಡಿ.24 ರಂದು ಬೆಳಿಗ್ಗೆ ಗುರುಮಠಕಲ್ ತಾಲೂಕು ಆಸ್ಪತ್ರೆಯಲ್ಲಿ, 25 ರಂದು ಶಹಾಪುರ ತಾಲೂಕು ಆಸ್ಪತ್ರೆ, 26 ರಂದು ವಡಗೇರಾ ತಾಲೂಕ ಆಸ್ಪತ್ರೆ, ಹಾಗೂ 27 ರಂದು ಸುರಪುರ ತಾಲೂಕ ಆಸ್ಪತ್ರೆಯಲ್ಲಿ ಕೊನೆಯದಾಗಿ 28 ರಂದು ಹುಣಸಗಿ ತಾಲೂಕು ಆಸ್ಪತ್ರೆಯಲ್ಲಿ ಶಿಬಿರ ನಡೆಯಲಿದೆ. ಹೆಚ್ಚಿನ ಮಾಹಿತಿಗಾಗಿ ಭೀಮರಾಯ ಮೊ.ನಂ.9742865853, ಸುರಪುರ ಮಾಳಪ್ಪ ಮೊ.ನಂ.9945373847, ಶಹಾಪುರ ನಾಗರಾಜ ಮೊ.ನಂ.8296107462 ಸಂಪರ್ಕಿಸಬಹುದು.

### ಕೃಷಿ ಪ್ರಶಸ್ತಿಗಾಗಿ ಅರ್ಜಿ ಆಹ್ವಾನ

**ಬೀದರ:** 2024-25ನೇ ಸಾಲಿನ ಕೃಷಿ ಇಲಾಖೆಯ ಆತ್ಮ ಯೋಜನೆಯಡಿ ಜಿಲ್ಲಾ ಮಟ್ಟದ ಹಾಗೂ ತಾಲೂಕು ಮಟ್ಟದ ಕೃಷಿ ಪಂಡಿತ ಪ್ರಶಸ್ತಿಗೆ ವಿವಿಧ ಕೃಷಿ ಚಟುವಟಿಕೆಗಳಲ್ಲಿ ಅತ್ಯುತ್ತಮ ಸಾಧನೆಗೈದ ರೈತ, ರೈತ ಮಹಿಳೆಯರಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಬೀದರ ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಅರ್ಹರು ಸಂಬಂಧಪಟ್ಟ ರೈತ ಸಂಪರ್ಕ ಕೇಂದ್ರಗಳನ್ನು ಸಂಪರ್ಕಿಸಿ ಭರ್ತಿ ಮಾಡಿದ ಅರ್ಜಿಗಳನ್ನು ಡಿ.31ರೊಳಗಾಗಿ ಸಂಬಂಧಪಟ್ಟ ರೈತ ಸಂಪರ್ಕ ಕೇಂದ್ರಗಳಿಗೆ ಸಲ್ಲಿಸುವುದು ಹಾಗೂ ಹೆಚ್ಚಿನ ಮಾಹಿತಿಗಾಗಿ ಹತ್ತಿರದ ರೈತ ಸಂಪರ್ಕ ಕೇಂದ್ರಗಳನ್ನು ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಚೇರಿಯನ್ನು ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

### ಸ್ಕ್ಯಾವೆಂಜರ್ಸ್ ಮರು ಸಮೀಕ್ಷೆ

**ಬೀದರ:** ಹಳ್ಳಿಖೇಡ (ಬಿ) ಪುರಸಭೆ ವ್ಯಾಪ್ತಿಯಲ್ಲಿ ಮ್ಯಾನುವಲ್ ಸ್ಕ್ಯಾವೆಂಜರ್ಸ್ ಮರು ಸರ್ಮೀಕ್ಷೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಹಳ್ಳಿಖೇಡ (ಬಿ) ಪುರಸಭೆ ಮುಖ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಮ್ಯಾನುವೆಲ್ ಸ್ಕ್ಯಾವೆಂಜರ್ಸ್ ನೇಮಕಾತಿ ನಿಷೆಧ ಮತ್ತು ಪುನರ್ವಸತಿ ಅಧಿನಿಯಮ 2013 ರನ್ನು ಜಾರಿಗೆ ತಂದಿರುತ್ತದೆ. (The Prohibition of Employment as Manual Scavengers and their rehabilitation Act: 2013) ರ ಸೆಕ್ಷನ್ 2(1) (ಜಿ) ರಲ್ಲಿ ಮ್ಯಾನುವಲ್ ಸ್ಕ್ಯಾವೆಂಜಿಂಗ್ ಕಾರ್ಯದಲ್ಲಿ ದೈಹಿಕವಾಗಿ ತೊಡಗಿರುವವರು ಅಂದರೆ ಒಣ ಶೌಚಾಲಯಗಳನ್ನು ಸ್ವಚ್ಛಗೊಳಿಸುವುದು, ನೈರ್ಮಲ್ಯ ಶೌಚಾಲಯಗಳಿಂದ ಹೊರಗೋಗಿ ತೆರೆದ ಪ್ರದೇಶದಲ್ಲಿ ಸಂಗ್ರಹವಾಗುವ ಮಾನವ ಮಲವನ್ನು ಸ್ವಚ್ಛಗೊಳಿಸುವ ವ್ಯಕ್ತಿಗಳು ಅಗತ್ಯ ದಾಖಲಾತಿಗಳೊಂದಿಗೆ ಡಿ.27 ರೊಳಗಾಗಿ ಹಳ್ಳಿಖೇಡ (ಬಿ) ಪುರಸಭೆಯ ಆರೋಗ್ಯ ಶಾಖೆಯಲ್ಲಿ ಅಗತ್ಯ ದಾಖಲೆಗಳೊಂದಿಗೆ ಹೆಸರನ್ನು ನೊಂದಾಯಿಸಿಕೊಳ್ಳಬೇಕು. ಅವಧಿ ಮುಗಿದ ನಂತರ ಬಂದ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಹಳ್ಳಿಖೇಡ(ಬಿ) ಪುರಸಭೆ ಆರೋಗ್ಯ ಶಾಖೆಯನ್ನು ಸಂಪರ್ಕಿಸಬಹುದಾಗಿದೆ ಎಂದು ಅವರು ತಿಳಿಸಿದ್ದಾರೆ.

ಗೆಜೆಟಿಯರ್
ಪ್ರತಿ ಮಂಗಳವಾರ
ಇದು ಅನುಕ್ಷಣದ ಆ್ಯಪ್

{ಸತೀಶ್ ಜಾರಕಿಹೊಳಿ} ಸಚಿವ

ಸದನದಲ್ಲಿ ಈ ರೀತಿಯ ಘಟನೆಗಳು ನಡೆಯುವುದು ಹೊಸದಲ್ಲ, ಇಂತಹ ವಿಷಯವನ್ನು ಮುಂದುವರಿಸುವುದಕ್ಕಿಂತ ಬಿಟ್ಟುಬಿಡುವುದು ಒಳ್ಳೆಯದು. ಈಗಾಗಲೇ ಸಿ.ಟಿ ರವಿ ಹೇಳಿಕೆ ನೀಡಿಲ್ಲ ಎಂದು ಹೇಳಿದ್ದು ಇಲ್ಲಿಗೆ ವಿಷಯ ಮುಗಿಸಿದರೆ ಒಳಿತು.

## ಕನ್ನಡಕ್ಕೆ ಹೋರಾಡಿದ ಡಾ.ಚನ್ನಬಸವ ಪಟ್ಟದ್ದೇವರು

# ಹೀರೆಮಠ ಸಂಸ್ಥಾನದಿಂದ ಶಿಕ್ಷಣ ಕ್ರಾಂತಿ

ಸ್ವಾಮಿ ಭದ್ರೇಶಕುಮಾರ ಭಾಲ್ಕಿ

ಇಲ್ಲಿಯ ಮಠದ ಚನ್ನಬಸವ ಪಟ್ಟದೇವರ ಕೊಡುಗೆ ಅಪಾರ. ಅವರು ಏನಗಿಂತ ಕಿರಿಯರಿಲ್ಲ ದೇವರಿಗಿಂತ ಹಿರಿಯರಿಲ್ಲ ಎನ್ನುವಂತೆ ಅವರು ತಮ್ಮ ಜೀವನದುದ್ದಕ್ಕೂ ಮುಗಿದ ಕೈ ಬಾಗಿದ ತಲೆ ಅವರದಾಗಿತ್ತು.

ಡಾ.ಚನ್ನಬಸವ ಪಟ್ಟದೇವರ ಮೊದಲ ಹೆಸರು ಮಹಾರುದ್ರಪ್ಪ. ಇವರು ಬೀದರ್ ಜಿಲ್ಲೆಯ ಅವರ ತಾಲೂಕಿನ ಬುಳ್ಳಾ ಮನೆತನದ ರಾಜಪ್ಪ ಸಂಗಮ್ಮ ದಂಪತಿಗಳಿಗೆ ಹುಟ್ಟಿದರು. ಇವರು ಐದು ವರ್ಷ ಇರುವಾಗಲೇ ತಂದೆ ತಾಯಿಯನ್ನು ಕಳೆದುಕೊಂಡು ಅನಾಥರಾದರು. ಇವರು ಬಾಲ್ಯದಲ್ಲಿ ಇರುವಾಗಲೇ ಅನಾಥರಾಗಿ ಕಮಲನಗರ ಮಠದಲ್ಲಿ ಕಾಂತಿ ಭಿಕ್ಷೆ ಬೇಡಿ ಜೀವನ ಸಾಗಿಸುತ್ತಿದ್ದರು. ಹಾಗೆ ಮಠಗಳ ಧನಕಾಯೋನು ಬದುಕು ನಡೆಸುತ್ತಿರುವಾಗ ಭಾಲ್ಕಿ ಹಿರೇಮಠದ ಶ್ರೀಸಿದ್ಧ ಬಸವ ಸ್ವಾಮಿಗಳು ದೀಕ್ಷೆ ನೀಡಿ ಸಂಸ್ಕಾರ ಬೋಧಿಸಿ ಚನ್ನಬಸವ ಎಂಬ ಹೆಸರಿಟ್ಟು ಸಮೀಪದ ಮುಧೋಳ ಶಿವಯೋಗಿ ಸ್ವಾಮಿಗಳ ಸೇವೆಗೆ ಕಳಿಸಿದರು.

ಈ ಹೊತ್ತಿಗಾಗಲೇ ಚನ್ನಬಸವ ಅಕ್ಷರ ಜ್ಞಾನ ಪಡೆದು ಮರಾಠಿ ಕನ್ನಡ ರಾಶಿ ಕಲಿತಿದ್ದರು. ಕನ್ನಡ ಭಾಷೆ ಮೋಡಿ ಲಿಪಿಯಲ್ಲಿ ಬರೆಯುತ್ತಿದ್ದರಂತೆ. ಇವರ ಅಕ್ಷರ ಪ್ರೀತಿಯನ್ನು ಕಂಡು ಶಿವಲಿಂಗ ಸ್ವಾಮಿಗಳು ಕೇದಾರಗಳಂಗಪ್ಪನವರ ಹತ್ತಿರ ಕನ್ನಡ ಕಲಿಯಲು ಕಳಿಸಿದರು.

ಭಾಲ್ಕಿಯ ಮಠಕ್ಕೆ ಪಟ್ಟಾಧಿಕಾರಿಗಳನ್ನು ಕಾಶಿರಾಯ ದೇಶಮುಖ ಹಾಗೂ ಶಿವಲಿಂಗಪ್ಪ ಖಂಡ್ರೆ ಇದಕ್ಕಾಗಿ ಯೋಗ್ಯರನ್ನು ಹುಡುಕುತ್ತಿರುವಾಗ ನಿಷ್ಠೆ, ಕರುಣೆ,

ಸಚ್ಚಾರಿತ್ರ್ಯ ಮೈಗೂಡಿಸಿಕೊಂಡು ತಿಳುವಳಿಕೆಯಿಂದ ಜ್ಞಾನಿಯಾಗಿದ್ದ ಕ್ರಿಯಾಶೀಲ ಚನ್ನಬಸವ ಜನಾನುರಾಗಿಯಾಗಿ ಬೆಳೆಯುತ್ತಿರುವುದನ್ನು ದೇಶಮುಖರು ಗಮನಿಸಿ ಇವರಿಗೆ ಭಾಲ್ಕಿ ಹಿರೇಮಠ ಪಟ್ಟ ಅಧ್ಯಕ್ಷರನ್ನಾಗಿ 1924ರಲ್ಲಿ ಮಾಡಿದರು.ಆಗ ಅವರು ಚನ್ನಬಸವ ಪಟ್ಟದ್ದೇವರು ಆದರು.

ಮನುಷ್ಯನಿಗೆ ಅತ್ಯಂತ ಮುಖ್ಯವಾದದ್ದು ಅರಿವು ಆಧುನಿಕ ಭಾಷೆಯಲ್ಲಿ ಅರಿವು ಎಂದರೆ ಶಿಕ್ಷಣ. ಶಿಕ್ಷಣದಿಂದ ಸಾಮಾಜಿಕ ಅರಿವು ಸಾಧ್ಯವೆಂದು ತಿಳಿದು ಪಟ್ಟದ್ದೇವರು ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿದರು.

ಮೊಟ್ಟಮೊದಲು 1926 ರಲ್ಲಿ ಇಂದಿನ ಆಂಧ್ರಪ್ರದೇಶದ ನಾರಾಯಣಖೇಡ ತಾಲೂಕಿನ ಮೋರ್ಗಿಯಲ್ಲಿ ಶಾಂತಿವರ್ಧಕ ಗುರುಕುಲ ಆಶ್ರಮ ಎಂಬ ಕನ್ನಡ ಪ್ರಾರ್ಥಮಿಕ ಶಾಲೆ ಆರಂಭಿಸಿದರು. ಬಸವಾದಿ ಶರಣರ ತತ್ವಗಳನ್ನು ಅಳವಡಿಸಿಕೊಂಡು ಬಂದಿರುವ ಡಾಕ್ಟರ್ ಚನ್ನಬಸವ ಪಟ್ಟದ್ದೇವರು.

ಕಲ್ಯಾಣ ಕರ್ನಾಟಕದ ನಡೆದಾಡುವ ದೇವರು, ಅನಾಥ ಮಕ್ಕಳ ಬದುಕಿಗೆ ಆಸರೆಯಾಗಿ ಬೆಳಕಾದವರು.

> ನಿಜಾಮನ ಆಳ್ವಿಕೆಯ ಕಾಲದಲ್ಲಿ ಹೊರಗಡೆ ಉರ್ದು ಬೋರ್ಡನ್ನು ಹಾಕಿ ಒಳಗಡೆ ಕನ್ನಡವನ್ನು ಕಲಿಸಿದ ಲಿಂಗೈಕ್ಯ ಚೆನ್ನಬಸವ ದೇವರು ಈ ಭಾಗದ ನಡೆದಾಡುವ ದೇವರು ಕನ್ನಡಿಗರ ಮನೆದೇವರಾಗಿ ಇಂದಿಗೂ ಪೂಜ್ಯರನ್ನು ಆರಾಧಿಸಲಾಗುತ್ತಿದೆ. ಕನ್ನಡವನ್ನು ಉಳಿಸಿ ಬೆಳಸಿದ ಶ್ರೇಯಸು ಪೂಜ್ಯರಿಗೆ ಸಲ್ಲುತ್ತದೆ.
> -ಶಶಿಧರ ಕೋಸಂಬೆ, ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ

ಇವರಿಗೆ ಕಾಯಕ ಸಂತ ತ್ರಿವಿಧ ದಾಸೋಹಿ ಅನ್ನಿಸಿಕೊಂಡಿದ್ದಾರೆ. ತ್ರಿವಿಧ ದಾಸೋಹದ ಮೂಲಕ ಅನೇಕ ಕಡುಬಡವರ, ಧೀನರ, ಅನಾಥರ ಆಶ್ರಯದಾತರು.

ಅಂದು ಅವರು ಮಹಿಳೆರಿಗಾಗಿ ಶಿಕ್ಷಣದ ಅನುಕೂಲ ಇಲ್ಲದಿರುವಾಗ ಮಹಿಳಾ ಕಾಲೇಜನ್ನು ಸ್ಥಾಪಿಸಿದರು. ಹೀಗಾಗಿ ಅನೇಕ ಹೆಣ್ಣು ಮಕ್ಕಳು ಶಿಕ್ಷಣ ಪಡೆದು ಇಂದು ಅವರು ಉನ್ನತ ಹುದ್ದೆಯಲ್ಲಿದ್ದಾರೆ. ಭಾಲ್ಕಿಯ ಹಿರೇಮಠದ ಅಪ್ಪ ಡಾಕ್ಟರ್ ಚನ್ನಬಸವ ಪಟ್ಟದ್ದೇವರು ಇಡೀ ಕನ್ನಡಿಗರ ಮನೆ ದೇವರಾಗಿದ್ದಾರೆ. ಇಂತಹ ಅವತಾರ ಪುರುಷರು ಮತ್ತೊಮ್ಮೆ ಉದಯಿಸಿ ಬರಲಿ ಎಂದು ಹೇಳುತ್ತಾ ಶ್ರೀಗಳವರ ಪಾದರವಿಂದಗಳಿಗೆ ನಮಿಸುತ್ತಾ ಅವರಿಗೆ ನನ್ನ ಕೋಟಿ ಕೋಟಿ ಪ್ರಣಾಮಗಳು.

# ಕಲ್ಯಾಣದಲ್ಲಿ ಕಳ್ಳರ ಗ್ಯಾಂಗ್

**ಬಸವಕಲ್ಯಾಣ:** ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಮಾರಕಾಸ್ತ್ರ ಹಿಡಿದು ಮತ್ತೆ ಕಳ್ಳರ ಗ್ಯಾಂಗ್ ಕಾಣಿಸಿಕೊಂಡಿದ್ದು, ಒಂದೇ ದಿನ ಎರಡು ಗ್ರಾಮಗಳ ಒಂಬತ್ತು ಮನೆಗಳಲ್ಲಿ ಕಳ್ಳತನಕ್ಕೆ ಯತ್ನಿಸಿದ ಕಳ್ಳರ ಅಟ್ಟಹಾಸದಿಂದ ಸಾರ್ವಜನಿಕರಲ್ಲಿ ಆತಂಕ ಶುರುವಾಗಿದೆ.

ಬೈಕ್ ಮೇಲೆ ರಾಜಾರೋಷವಾಗಿ ಬಂದ 6 ಜನ ಕಳ್ಳರ ತಂಡ, 9 ಮನೆಗಳಲ್ಲಿ ಬೀಗ ಮುರಿದು ಕಳ್ಳತನ ಮಾಡಲು ಯತ್ನಿಸಿದ ಘಟನೆ ತಾಲೂಕಿನ ಉಮ್ಮಾಪೂರ, ಕೊಂಗೆವಾಡಿ ತಾಂಡಾ ಗ್ರಾಮಗಳಲ್ಲಿ ಜರುಗಿದೆ. ಬುಧವಾರ ನಸುಕಿನ ಜಾವ 2.30 ಗಂಟೆ ಸುಮಾರಿಗೆ ಎರಡು ಬೈಕ್‌ಗಳ ಮೇಲೆ ಮಾರಕಾಸ್ತ್ರಗಳೊಂದಿಗೆ ಬಂದ 6 ಜನ ಕಳ್ಳರ ತಂಡ, ಉಮ್ಮಾಪೂರ, ಕೊಂಗೆವಾಡಿ ತಾಂಡಾ ಗ್ರಾಮಗಳಲ್ಲಿ ಕಳ್ಳತನ ಮಾಡಿ ನಾಪತ್ತೆಯಾಗಿದ್ದಾರೆ. ಪೊಲೀಸರು ಮಾತ್ರ ನಿದ್ರೆಯಲ್ಲಿದ್ದಾರೆ ಎಂದು ಸಾರ್ವಜನಿಕರು ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ.

ಉಮ್ಮಾಪೂರ ಗ್ರಾಮದಲ್ಲಿ ಮನೆಗಳ ಬೀಗ ಮುರಿದು ಕಳ್ಳತನ ಮಾಡಿದ ನಂತರ 2 ಮನೆಗಳಿಗೆ ಕಳ್ಳರೆ ಮತ್ತೆ ಹೊಸದಾಗಿ ಬೀಗಹಾಕಿ ಹೋಗಿದ್ದಾರೆ ಎಂದು ತಿಳಿದು ಬಂದಿದೆ. ಕಳ್ಳರ ಕೃತ್ಯ ಸಿಸಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಪ್ರತ್ಯೇಕ ಮೂರು ಪ್ರಕರಣ ದಾಖಲು: ಉಮ್ಮಾಪೂರ ಹಾಗೂ ಕೊಂಗೆವಾಡಿ ತಾಂಡಾ ಗ್ರಾಮದಲ್ಲಿ ಕಳ್ಳತನ ಪ್ರಕರಣಕ್ಕೆ



ಸಂಬಂಧಪಟ್ಟಂತೆ ಬಸವಕಲ್ಯಾಣ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಒಂದೇ ದಿನ ಮೂರು ಪ್ರಕರಣಗಳು ದಾಖಲಾಗಿದ್ದು, ಉಮ್ಮಾಪೂರ ಗ್ರಾಮದ ಸಮಿಯೋದ್ದೀನ್ ಮನೆಯಿಂದ 83,000 ನಗದು ಹಣ, 5ಗ್ರಾಮ್ ಚಿನ್ನದ ಉಂಗುರ, 5 ತೊಲೆ ಬೆಳ್ಳಿ ಸೇರಿದಂತೆ ಒಟ್ಟು 1,37000 ಸಾವಿರ ಮೌಲ್ಯದ ವಸ್ತು ಕಳ್ಳತನವಾಗಿದೆ ಎಂದು ಪ್ರಕರಣ ದಾಖಲಾಗಿದೆ. ಅದೇ ಗ್ರಾಮದ ಶಕುಂತಲಾ ಕಿಶನ್ ಗಾಯಕ್ವಾಡ್ ಅವರ ಮನೆಯಿಂದ ಬಂಗಾರ ನಗದು ಹಣ ಸೇರಿ ಒಟ್ಟು ,1 ಲಕ್ಷ ಹತ್ತು ಸಾವಿರ ಮೌಲ್ಯದ ವಸ್ತುಗಳು ಕಳ್ಳತನವಾಗಿವೆ. ಕೊಂಗೆವಾಡಿ ತಾಂಡ ಗ್ರಾಮದ ಸುಭಾಷ್ ಚೌಹಾಣ್ ಅವರ ಮನೆಯಿಂದ ಬಂಗಾರ, ನಗದು ಹಣ ಸೇರಿ 1 ಲಕ್ಷ ಹತ್ತು ಸಾವಿರ ಮೌಲ್ಯದ ವಸ್ತುಗಳು ಕಳ್ಳತನವಾಗಿವೆ ಎಂದು ಪ್ರಕರಣ ದಾಖಲಾಗಿದೆ. ಪ್ರಕರಣ ದಾಖಲಿಸಿಕೊಂಡ ಪೊಲೀಸರು ಕಳ್ಳರ ಪತ್ತೆಗೆ ಬಲೆ ಬೀಸಿದ್ದಾರೆ.

# ಆರೋಗ್ಯ ಸೇವೆಯ ಸದುಪಯೋಗ ಪಡೆಯಿರಿ

## ಆರೋಗ್ಯ ಇಲಾಖೆ ನೂತನ ಕಟ್ಟಡವನ್ನು ರಾಜಾ ವೇಣುಗೋಪಾಲ ಲೋಕಾರ್ಪಣೆ

**ಸುರಪುರ:** ವಿವಿಧ ಆರೋಗ್ಯ ಸೇವೆಗಳು ಇಂದು ಜನರ ಮನೆ ಬಾಗಿಲಿಗೆ ಬರುತ್ತಿದ್ದು, ಕ್ಷೇತ್ರದ ಜನತೆ ಆರೋಗ್ಯ ಇಲಾಖೆಯ ಸೇವೆಗಳ ಸದುಪಯೋಗಪಡೆದುಕೊಳ್ಳಬೇಕು ಎಂದು ಶಾಸಕ ರಾಜಾ ವೇಣುಗೋಪಾಲ ನಾಯಕ ಕೋರಿದರು.

ನಗರದ ಸಾರ್ವಜನಿಕ ಸರಕಾರಿ ಆಸ್ಪತ್ರೆಯಲ್ಲಿ ಆರೋಗ್ಯ ಇಲಾಖೆಯ ನೂತನ ಕಟ್ಟಡಗಳು ಮತ್ತು ವಿವಿಧ ಸೇವೆಗಳನ್ನು ಶನಿವಾರ ಉದ್ಘಾಟಿಸಿ ಮಾತನಾಡಿದ ಅವರು, ಕೆಲ ಚಿಕಿತ್ಸೆ, ಸೌಲಭ್ಯಗಳಿಗಾಗಿ ಬೇರೆ ಜಿಲ್ಲೆಗಳಿಗೆ ಹೋಗುವ ಪರಿಸ್ಥಿತಿಯಿತ್ತು. ಹಾಗೂ ಸಾಕಷ್ಟು ಹಣ ಕೂಡ ಖರ್ಚಾಗುತ್ತಿತ್ತು. ಆದರೆ ನಮ್ಮ ಕ್ಷೇತ್ರದಲ್ಲಿಯೇ ಈಗ ಆ ಸೌಲಭ್ಯಗಳು ಸಿಗುತ್ತಿವೆ ಎಂದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಮಹೇಶ ಬಿರಾದಾರ್ ಮಾತನಾಡಿ, ಸುರಪುರ ಆಸ್ಪತ್ರೆಗೆ ಸ್ತ್ರೀರೋಗ ತಜ್ಞರನ್ನು ಶೀಘ್ರದಲ್ಲಿ ನೇಮಿಸುತ್ತೇವೆ. ಸಾರ್ವಜನಿಕರು ಸಹಕಾರ ನೀಡಿದರೆ ಇನ್ನೂ ಹೆಚ್ಚಿನ ಸೇವೆ ನೀಡುತ್ತೇವೆ ಎಂದರು.

ಕಾಂಗ್ರೆಸ್ ಮುಖಂಡ ಅಬ್ದುಲ್ ಅಲಿಂ ಗೋಗಿ ಮಾತನಾಡಿದರು. ಟಿಎಚ್‌ಒ ಡಾ.ಆರ್.ವಿ.ನಾಯಕ ಪ್ರಾಸ್ತಾವಿಕ ಮಾತನಾಡಿದರು. ನಗರಸಭೆ ಅಧ್ಯಕ್ಷೆ ಹೀನಾ ಕೌಸರ್, ಉಪಾಧ್ಯಕ್ಷ ರಾಜಾ ಪಿಡ್ಡನಾಯಕ (ತಾತಾ), ಯಾದಗಿರಿ ಟಿಎಚ್‌ಒ ಹನುಮಂತರೆಡ್ಡಿ, ಯುವ ಕಾಂಗ್ರೆಸ್ ಜಿಲ್ಲಾಧ್ಯಕ್ಷ ರಾಜಾ ಕುಮಾರ ನಾಯಕ, ನಗರಸಭೆ ಸದಸ್ಯರಾದ ಸುಜಾತಾ ಜೇವರ್ಗಿ, ನರಸಿಂಹಕಾಂತ ಪಂಚಮಗಿರಿ, ಸುವರ್ಣಾ ಎಲಿಗಾರ, ಮುಖಂಡರಾದ ರಾಜಾ ವಾಸುದೇವ ನಾಯಕ, ಮಲ್ಲಣ್ಣ ಸಾಹುಕಾರ ಮುಧೋಳ, ಬಸವರಾಜ ಜಮದ್ರಖಾನಿ, ದೊಡ್ಡ ದೇಸಾಯಿ ದೇವರಗೋನಾಲ,

### ವಿವಿಧ ಸೇವೆಗಳ ಉದ್ಘಾಟನೆ

**ನೂತನ ಸಿಟಿ ಸ್ಕ್ಯಾನ್ ಕೇಂದ್ರ, ಪ್ರಯೋಗಾಲಯ, ರಕ್ತ ಶೇಖರಣಾ ಘಟಕ, ಅತ್ಯಾಧುನಿಕ ಯಂತ್ರಗಳ ಚಾಲನೆ. ಹೊರ ರೋಗಿಗಳ ಸ್ಕ್ಯಾನಿಂಗ್ ಮತ್ತು ಡಿಜಿಟಲ್ ಎಕ್ಸರೇ ಯಂತ್ರ, ದ್ರವ ವೈದ್ಯಕೀಯ ಆಮ್ಲಜನಕಗಳ ಉತ್ಪಾದನಾ ಘಟಕ, ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿ ವಸತಿ ಗೃಹಗಳ ಉದ್ಘಾಟನೆ ಜರುಗಿತು.**

ಸುರಪುರ ಆರೋಗ್ಯ ಇಲಾಖೆಯ ನೂತನ ಕಟ್ಟಡಗಳ, ವಿವಿಧ ಸೇವೆಗಳ ಜನಾರ್ಪಣೆ ಕಾರ್ಯಕ್ರಮವನ್ನು ಶಾಸಕ ರಾಜಾ ವೇಣುಗೋಪಾಲ ನಾಯಕ ಉದ್ಘಾಟಿಸಿದರು.

### ನಗರಕ್ಕೆ ಲೋಕಾರ್ಪಣೆ ಐತಿಹಾಸಿಕ ದಿನ

**ಮಹತ್ವಾಕಾಂಕ್ಷಿಯ ಸಿಟಿ ಸ್ಕ್ಯಾನಿಂಗ್ ಸೇರಿ ಆರೋಗ್ಯ ಇಲಾಖೆ ವಿವಿಧ ಕಟ್ಟಡ ಮತ್ತು ಸೇವೆಗಳ ಲೋಕಾರ್ಪಣೆ ಇದೊಂದು ಐತಿಹಾಸಿಕ ದಿನವಾಗಿದೆ. ಸಿಟಿ ಸ್ಕ್ಯಾನಿಂಗ್ ಬಹು ಬೇಡಿಕೆಯಾಗಿತ್ತು. ಬೇರೆಡೆಗೆ ಹೋದರೆ 4-5 ಸಾವಿರ ಖರ್ಚಾಗುತ್ತಿತ್ತು. ಇಲ್ಲಿ ಬಿಪಿಎಲ್‌ಗೆ 600, ಎಪಿಎಲ್‌ಗೆ 800 ಕಡಿಮೆ ದರದಲ್ಲಿ ಸೇವೆ ಲಭ್ಯವಿರುತ್ತದೆ. ಈ ಆಸ್ಪತ್ರೆಯಲ್ಲಿ ಪ್ರತಿ ದಿನ 400-500, ತಿಂಗಳಲ್ಲಿ 10-12 ಸಾವಿರ ರೋಗಿಗಳು ಚಿಕಿತ್ಸೆ ಪಡೆಯುತ್ತಾರೆ. 90-100 ಲ್ಯಾಪ್ರೋಸ್ಕೋಪಿ ಆಗುತ್ತವೆ. ಕಳೆದ ವರ್ಷ 630 ಜನರಿಗೆ ಕಣ್ಣಿನ ಶಸ್ತ್ರ ಚಿಕಿತ್ಸೆ ಮಾಡಲಾಗಿದೆ ಎಂದು ತಾಲೂಕು ಆರೋಗ್ಯಾಧಿಕಾರಿ ಡಾ. ಆರ್.ವಿ.ನಾಯಕ ಹೇಳಿದರು.**

ರವಿಚಂದ್ರ ಸಾಹುಕಾರ ಆಲ್ದಾಳ, ವೆಂಕಟೇಶ ಹೊಸಮನಿ, ಅಬ್ದುಲ್ ಗಫಾರ್ ನಗನೂರಿ, ಶೇಖ್ ಮಹಿಬೂಬ್ ಒಂಟಿ, ಭೀಮನಗೌಡ ಲಕ್ಷ್ಮಿ ಹೆಮನೂರ ವೇದಿಕೆಯಲ್ಲಿದ್ದರು. ನಗರಸಭೆ ಸದಸ್ಯರು, ವೈದ್ಯರು, ಸಿಬ್ಬಂದಿ, ಸಾರ್ವಜನಿಕರು ಇದ್ದರು. ಮರೆಪ್ಪ ನಾಯಕ ಸ್ವಾಗತಿಸಿದರು. ಜಯಾ ಬಾಯಿ ಪ್ರಾರ್ಥಿಸಿದರು. ಅಂಬ್ರೇಶ ಚೆಲ್ಲಾಳ ನಿರೂಪಿಸಿದರು. ಅಶ್ವಿನಿ ವಂದಿಸಿದರು.

# ಮಕ್ಕಳ ಸೇವೆಗೆ ತಾಯಿ ಸದಾ ಸಿದ್ಧ: ಕಂಠಿ ಶ್ರೀ

**ಕೆಂಭಾವಿ:** ಜಗತ್ತಿನಲ್ಲಿ ಮಕ್ಕಳಿಗಾಗಿ ತನ್ನೆಲ್ಲಾ ಕೆಲಸವನ್ನು ಬದಿಗಿಟ್ಟು ಸೇವೆ ಮಾಡುವ ಜೀವವಿದ್ದರೆ ಅದು ತಾಯಿಯೊಬ್ಬಳೆ ಎಂದು ಮುದನೂರು ಕಂಠಿ ಮಠದ ಸಿದ್ದ ಚನ್ನಮಲ್ಲಿಕಾರ್ಜುನ ಸ್ವಾಮಿಜಿ ಬಣ್ಣಿಸಿದರು.

ಪಟ್ಟಣದ ನಂದಿ ಶಿಕ್ಷಣ ಹಾಗೂ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಸ್ಪಂದನ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಿದ್ದ ಮಾತೃ ಮಿಲನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿ ಮಗುವಿಗೆ ತಾಯಿಯೆ ಮೊದಲ ಗುರು. ಮನೆಯಿಂದಲೆ ಮಗು ಸಂಸ್ಕೃತಿ ಮತ್ತು ಸಂಸ್ಕಾರ ಕಲಿಯುತ್ತದೆ. ಹಾಗಾಗಿ ಮಗುವಿನ ಬೆಳವಣಿಗೆಯಲ್ಲಿ ತಾಯಿಯ ಪಾತ್ರ ಬಹು ಮುಖ್ಯವಾದದ್ದು ಎಂದು ಅಭಿಪ್ರಾಯಪಟ್ಟರು.

ಪ್ರತಿಯೊಂದು ಮಗು ಬೆಳೆಯುತ್ತಲೇ ಮನೆಯಲ್ಲಿನ ಸಂಸ್ಕಾರವನ್ನು ಅನುಕರಣೆ ಮಾಡುತ್ತಾ ಬೆಳೆಯುತ್ತದೆ ಆದ್ದರಿಂದ ಪ್ರತಿಯೊಬ್ಬ ಪಾಲಕರೂ ಮನೆಯಲ್ಲಿ ಉತ್ತಮ ಸಂಸ್ಕಾರ ಪಾಲಿಸಬೇಕು. ಸದಾ ಸಂಸಾರದ ಜಂಜಾಟದಲ್ಲಿರುವ ತಾಯಂದಿರಿಗೆ ಮಾತೃ ಮಿಲನ ಕಾರ್ಯಕ್ರಮದ ಮೂಲಕ ಹುರುಪು ತುಂಬುವ ಕೆಲಸ ಮಾಡುತ್ತಿರುವ ಸ್ಪಂದನಾ ಶಾಲೆಯ ಕಾರ್ಯ ಶ್ಲಾಘನೀಯವಾಗಿದೆ ಎಂದರು.

ಪಾಲಕರಾದ ಡಾ.ಮೀರಾ.ಎಸ್. ಜೋಶಿ ಮಾತನಾಡಿದರು.

ಮಾತೃ ಮಿಲನ ಕಾರ್ಯಕ್ರಮದಲ್ಲಿ ತಾಯಂದಿರು ಎಲ್ಲ ಮರೆತು

> ಇಂದಿನ ಆಧುನಿಕ ಯುಗದಲ್ಲಿ ಅನಾದಿ ಕಾಲದಿಂದಲೂ ಬಂದಿರುವ ಪದ್ಧತಿಗಳನ್ನು ಮರೆಯುತ್ತಿದ್ದು, ಇದರಿಂದ ನಮ್ಮ ಮಕ್ಕಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಮಕ್ಕಳಿಗೆ ದಿನದಲ್ಲಿ ಅರ್ಧ ಗಂಟೆಯಾದರು ಸಮಯ ನೀಡಬೇಕು.
> -ಡಿ.ಸಿ.ಪಾಟೀಲ, ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಕಾರ್ಯದರ್ಶಿ

ಮಕ್ಕಳಾಗಿ ಆಟದಲ್ಲಿ ಭಾಗವಹಿಸಿ ಖುಷಿಪಡುತ್ತಾರೆ ಎಂದು ಹರ್ಷ ವ್ಯಕ್ತಪಡಿಸಿದರು.

ದಸರಾ ಉತ್ಸವಸಮಿತಿ ಅಧ್ಯಕ್ಷ ಮಹಿಪಾಲರಡ್ಡಿ ಡಿಗ್ಗಾವಿ ಕಾರ್ಯಕ್ರಮ ಉದ್ಘಾಟಿಸಿದರು. ಬಾಬುಗೌಡ ಮಾಲಿ ಪಾಟೀಲ, ಸಿ.ಆರ್.ಪಿ ಬಂದೇನವಾಜ ನಾಲತ್ವಾಡ, ಸಂಗಣ್ಣ ತುಂಗಿ, ಗುರುಮೂರ್ತಿ ಪತ್ತಾರ, ಸಂಸ್ಥೆಯ ಅಧ್ಯಕ್ಷ ವಿಕಾಸ ಸೊನ್ನದ, ಡಾ. ಡಾ. ಪ್ರವೀಣ ಪಾಟೀಲ, ರಾಘವೇಂದ್ರ, ನರಸಿಂಹ ನಡ್ಡೆ, ವೀರೇಶ ಭಜಂತ್ರಿ ಇದ್ದರು.

# ನಮ್ಮ ಕರ್ನಾಟಕ ಸೇನೆಯಿಂದ ಪ್ರತಿಭಟನೆ 27ಕ್ಕೆ

**ಶಹಾಪುರ:** ನಗರದ ಸರಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಸಹಾಯಕ ಆಡಳಿತಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿ ನಿವೃತ್ತರಾದ ರುಕ್ಮಿಣಿ ಮತ್ತು ಆಸ್ಪತ್ರೆ ಆಡಳಿತಾಧಿಕಾರಿ ಡಾ.ಯಲ್ಲಪ್ಪ ಪಾಟೀಲ್ ವಿರುದ್ಧ ಟೌನ್ ಹಾಲ್‌ನಲ್ಲಿರುವ ತಾಲೂಕ ಆರೋಗ್ಯ ಅಧಿಕಾರಿಗಳ ಕಾರ್ಯಾಲಯದ ಎದುರು ಡಿ.27 ರಂದು ಪ್ರತಿಭಟನೆ ನಡೆಸಲಾಗುವುದು ಎಂದು ನಮ್ಮ ಕರ್ನಾಟಕ ಸೇನೆ ತಾಲೂಕ ಅಧ್ಯಕ್ಷ ಸಿದ್ದು ಪಟ್ಟೆದಾರ ತಿಳಿಸಿದ್ದಾರೆ. ಈ ಕುರಿತು ಮಾತನಾಡಿದ ಅವರು ಸುಳ್ಳು ದಾಖಲೆ ಸೃಷ್ಟಿಸಿ ಸರಕಾರಕ್ಕೆ ವಂಚಿಸಿದ ಸಹಾಯಕ ಆಡಳಿತಾಧಿಕಾರಿ (ನಿವೃತ್ತ) ರುಕ್ಮಿಣಿ ರವರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸುವಂತೆ ಆರೋಗ್ಯ ಇಲಾಖೆಯ ಆಯುಕ್ತರು ಜಿಲ್ಲಾ ಆರೋಗ್ಯ ಅಧಿಕಾರಿಗಳ

ಮೂಲಕ ತಾಲೂಕ ಆಡಳಿತ ವೈದ್ಯಧಿಕಾರಿ ಡಾ.ಯಲ್ಲಪ್ಪ ಅವರಿಗೆ ರುಕ್ಮಿಣಿ ಅವರ ಮೇಲೆ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ದೂರು ದಾಖಲಿಸಲು ಜುಲೈ 24 ರಂದು ಲಿಖಿತ ಆದೇಶ ಮಾಡಿದರೂ ಕೂಡ ಇಲ್ಲಿಯವರೆಗೆ ಯಾವುದೇ ಪ್ರಕರಣ ದಾಖಲಿಸದೇ ಕಾಲ ಹರಣ ಮಾಡಿ ಕರ್ತವ್ಯ ಲೋಪ ವೇಸಗಿದ್ದಾರೆ. ಕರ್ತವ್ಯಲೋಪ ಎಸಗುತ್ತಿರುವ ಡಾ.ಯಲ್ಲಪ್ಪ ಪಾಟೀಲ ಅವರನ್ನು ಅಮಾನತು ಮಾಡುವಂತೆ ಹಾಗೂ ಸುಳ್ಳು ದಾಖಲೆ ಸೃಷ್ಟಿಸಿ ಸರಕಾರಕ್ಕೆ ವಂಚಿಸಿದ ಸಹಾಯಕ ರುಕ್ಮಿಣಿ ಅವರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸುವಂತೆ ಆಗ್ರಹಿಸಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಅನುಮತಿ ನೀಡಿ, ಸೂಕ್ತ ಬಂದೋಬಸ್ತ ಕಲ್ಪಿಸಿ ಕೊಡುವಂತೆ ಮನವಿ ಮಾಡಿದ್ದಾರೆ.

# ಶಾ ರಾಜೀನಾಮೆಗೆ ದಲಿತ ಸಂಘಟನೆ ಆಗ್ರಹ

**ಔರಾದ್:** ಸಂಸತ್ತಿನಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಬಗ್ಗೆ ಲಘುವಾಗಿ ಮಾತನಾಡಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ರಾಜೀನಾಮೆಗೆ ಆಗ್ರಹಿಸಿ ಪ್ರೊ.ಬಿ.ಕೃಷ್ಣಪ್ಪ ಸ್ಥಾಪಿಸಿದ ಕರ್ನಾಟಕ ದಲಿತ ಸಂಘರ್ಷ ಸಮಿತಿ ಪದಾಧಿಕಾರಿಗಳು ರಾಷ್ಟ್ರಪತಿಗಳಿಗೆ ಬರೆದ ಮನವಿ ಪತ್ರವನ್ನು ತಾಲೂಕು ತಹಸೀಲ್ದಾರ ಮಲಶೆಟ್ಟಿ ಚಿದ್ರೆ ಅವರಿಗೆ ಸಲ್ಲಿಸಿದರು.

ಅಂಬೇಡ್ಕರ್ ಅವರ ಹೆಸರು ಉಚ್ಚರಿಸುವ ಬದಲು ದೇವರ ಹೆಸರು ಉಚ್ಚರಿಸಿದರೆ ಏಳು ಜನ್ಮದವರೆಗೂ ಸ್ವರ್ಗ ಪಡೆಯಬಹುದು ಎಂದು ಹೇಳಿ ಅಂಬೇಡ್ಕರ್ ಅವರಿಗೆ ಅಪಮಾನ ಮಾಡಿದ್ದಾರೆ. ಶೀಘ್ರದಲ್ಲೇ ಅಮಿತ್ ಶಾ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು. ಅತ್ಯಂತ ಹಗುರವಾಗಿ ನಾಲಿಗೆ ಮೇಲೆ ಹಿಡಿತವಿಲ್ಲದೆ ಮಾತನಾಡಿರುವುದು ಸಂವಿಧಾನ

### ಶಾ ಅವರು ರಾಜೀನಾಮೆಗೆ ಮನವಿ

**ಸಂವಿಧಾನ ಶಿಲ್ಪಿಯ ಬಗ್ಗೆ ಪದೇ ಪದೇ ಬಿಜೆಪಿಯ ಕೆಲವು ಮುಖಂಡರು ಸಂವಿಧಾನ ಕುರಿತು ಇಲ್ಲಸಲ್ಲದ ಹೇಳಿಕೆ ನೀಡುತ್ತಿದ್ದಾರೆ. ಅವರಿಗೆ ಶೋಭೆ ತರುವಂತದ್ದಲ್ಲ ಸಂವಿಧಾನ ಎಲ್ಲರಿಗೂ ಅನ್ವಯವಾಗುವ ನಿಟ್ಟಿನಲ್ಲಿ ಅಂಬೇಡ್ಕರ್ ಅವರು ಸಾಮಾಜಿಕ ನ್ಯಾಯ ಕಲ್ಪಿಸಿಕೊಟ್ಟಂತಹ ಮಹಾನ್ ವ್ಯಕ್ತಿಯ ಬಗ್ಗೆ ಮಾತನಾಡಿರುವ ಅಮಿತ್ ಶಾ ಅವರು ರಾಜೀನಾಮೆ ನೀಡಬೇಕು ಎಂದು ಮನವಿ ಪತ್ರದಲ್ಲಿ ಒತ್ತಾಯಿಸಿದ್ದಾರೆ.**



ಪ್ರೊ.ಬಿ.ಕೃಷ್ಣಪ್ಪ ಸ್ಥಾಪಿಸಿದ ಕರ್ನಾಟಕ ದಲಿತ ಸಂಘರ್ಷ ಸಮಿತಿ ಪದಾಧಿಕಾರಿಗಳು ರಾಷ್ಟ್ರಪತಿಗಳಿಗೆ ಮನವಿಯನ್ನು ತಾಲೂಕು ತಹಸೀಲ್ದಾರ ಮಲಶೆಟ್ಟಿ ಚಿದ್ರೆ ಅವರಿಗೆ ಸಲ್ಲಿಸಿದರು.

ವಿರೋಧಿ. ಸಂವಿಧಾನ ಗೌರವಿಸುವುದಿಲ್ಲ ಎನ್ನುವುದು ಸಾಬಿತಾಗಿದೆ. ಇವರ ಆರ್‌ಎಸ್‌ಎಸ್ ಸಂಘ ಪರಿವಾರದ ಸಿದ್ಧಾಂತ ಎತ್ತಿ ತೋರಿಸುತ್ತದೆ.

ಬಿಜೆಪಿಯವರು ಸಂವಿಧಾನ ಮತ್ತು ಅಂಬೇಡ್ಕರ್ ವಿರೋಧಿ ಎಂಬುದು ಗೃಹ ಸಚಿವರು ತೋರಿಸಿಕೊಟ್ಟಿದ್ದಾರೆ ಕೂಡಲೇ ಪ್ರಧಾನಿ ಮೋದಿಯವರು ಗೃಹಸಚಿವ ಅಮಿತ್ ಶಾ ರಾಜೀನಾಮೆ ಪಡೆಯುವಂತೆ ಒತ್ತಾಯಿಸಿದ್ದಾರೆ. ಜಿಲ್ಲಾ ಸಂಚಾಲಕ ಧನರಾಜ ಮುಸ್ತಾಪೂರೆ, ತಾಲೂಕು ಸಂಚಾಲಕ ಜೈ ಪ್ರಕಾಶ ಅಷ್ಠೂರೆ ಈದ್ದರು.

# ಸಮಾಜದ ಸಮೃದ್ಧಿಗೆ ಕ್ರಿಸ್‌ಮಸ್ ಆಚರಣೆ

**ಔರಾದ:** ಸಮಾಜದಲ್ಲಿ ಶಾಂತಿ ಸಮೃದ್ಧಿ ನೆಲೆಸಲು ಪ್ರಾರ್ಥಿಸುವುದು ಹಾಗೂ ಎಲ್ಲಾ ಧರ್ಮಿಯರನ್ನು ಒಗ್ಗೂಡಿಸುವ ನಿಟ್ಟಿನಲ್ಲಿ ಕ್ರಿಸ್ ಮಸ್ ಹಬ್ಬವನ್ನು ಆಚರಿಸಲಾಗುತ್ತದೆ.

ಇದು ಒಂದು ಪವಿತ್ರ ಹಬ್ಬವಾಗಿದೆ ಎಂದು ಸಂತಪೂರ ಹೋಲಿಕ್ರಾಸ್ ಸಂಸ್ಥೆಯ ಸಂಚಾಲಕ ಫಾದರ್ ಕ್ಲೇವನ್ ಹೇಳಿದರು. ಔರಾದ ತಾಲೂಕಿನ ಸಂತಪೂರ ದೀಪಾಲಯ ಸಮಾಜ ಸೇವಾ ಸಂಸ್ಥೆ ವತಿಯಿಂದ ಆಯೋಜಿಸಿದ ಕ್ರಿಸ್ ಮಸ್ ಹಬ್ಬ ಆಚರಣೆಯಲ್ಲಿ ಕೇಕ್ ಕತ್ತರಿಸಿ ಸಿಹಿ ಹಂಚುವ ಮೂಲಕ ಹಬ್ಬಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಏಸು ಕ್ರಿಸ್ತರು ವಿಶ್ವಕ್ಕೆ ಶಾಂತಿ ಸಹಬಾಳ್ವೆ ನೀಡಿ ಎಲ್ಲ ಜನಾಂಗಕ್ಕೂ ಸರ್ವ ಧರ್ಮದವರಿಗೂ ಒಳ್ಳೆಯ ಸಂದೇಶ ನೀಡಿದ್ದಾರೆ.

ಪ್ರತಿಯೊಬ್ಬರು ಮೊದಲು ಎಲ್ಲ ಧರ್ಮಗಳನ್ನು ಗೌರವಿಸಬೇಕು. ಎಲ್ಲ ಕಾರ್ಯಕ್ರಮಗಳಲ್ಲಿ ಭಾಗಿಯಾಗಬೇಕು. ಆಗ ಮಾತ್ರ ಗಾಂಧಿಜಿ ಕಂಡ ರಾಮ ರಾಜ್ಯದ ಕನಸು ನನಸಾಗುತ್ತದೆ. ಕ್ರಿಸ್ತ ರಾಜರ ಸಂದೇಶಗಳನ್ನು ಎಲ್ಲರು ಅನುಸರಿಸಬೇಕು ಎಂದರು.

ಕಾಂಗ್ರೆಸ್ ಮುಖಂಡ ಸುಧಾಕರ್ ಕೊಳ್ಳುರ್ ಮಾತನಾಡಿ, ವಿಶ್ವಗುರು ಬಸವಣ್ಣನವರು ಹೇಳಿದಂತೆ ಇವನಾರವ ಇವನಾರವ ಎನ್ನದೇ , ಇವ ನಮ್ಮವ ಇವ ನಮ್ಮವ ಎಂದಾಗ ಮಾತ್ರ ಇಂತಹ ಹಬ್ಬಗಳಿಗೆ ಒಂದು ಅರ್ಥ ಬರುತ್ತದೆ ಎಂದರು.

ಸ್ಥಳೀಯ ಎಸ್‌ಬಿಐ ಶಾಖೆ ವ್ಯವಸ್ಥಾಪಕ ಸುರೇಶ ಮಾತನಾಡಿದರು. ದೀಪಾಲಯ ಸಮಾಜ ಸೇವಾ ಸಂಸ್ಥೆಯ ಮುಖ್ಯಸ್ಥೆ ಸಿಸ್ಟರ್ ಲಿನೇಟ್, ಸಿಸ್ಟರ್ ರೀಮಾ, ಸಿಸ್ಟರ್ ಶಕುಂದಾ,

ಔರಾದ್ ತಾಲೂಕಿನ ಸಂತಪುರ ದೀಪಾಲಯ ಸಮಾಜ ಸೇವಾ ಸಂಸ್ಥೆ ಏರ್ಪಡಿಸಿದ ಕ್ರಿಸ್‌ಮಸ್ ಹಬ್ಬ ಆಚರಣೆಯಲ್ಲಿ ಕೇಕ್ ಕತ್ತರಿಸಿ ಸಿಹಿ ಹಂಚಿದರು.

> ಮನುಷ್ಯನಿಗೆ ಕ್ಷಮಿಸುವ, ಸಾಮಾಜಿಕ ಕಾರ್ಯಗಳಿಗೆ ಕೈಜೋಡಿಸುವ ಗುಣವಿರಬೇಕು. ವಿವಿಧತೆಯಲ್ಲಿ ಏಕತೆಯನ್ನು ಕಂಡ ನಮ್ಮ ದೇಶದಲ್ಲಿ ಎಲ್ಲ ಜನಾಂಗದವರು ಎಲ್ಲ ಧಾರ್ಮಿಕ ಆಚರಣೆಗಳಲ್ಲಿ ಭಾಗವಹಿಸಿ ಎಲ್ಲರಿಗೂ ಸಹಕಾರ ನೀಡುತ್ತಾರೆ. ಇದುವೇ ಬಾಂಧವ್ಯದ ಭವಸಾಗರವಾಗಿದೆ.
> -ಸುಧಾಕರ್ ಕೊಳ್ಳುರ್, ಕಾಂಗ್ರೆಸ್ ಮುಖಂಡ

ವೀರಬಾಹು, ಪರಮೇಶ್ವರ, ರುಬೇನ್, ಸುರೇಶ್ ಇತರರಿದ್ದರು. ಸುಂದರರಾಜ್ ಸ್ವಾಗತಿಸಿ ನಿರೂಪಣೆ ಮಾಡಿದರು.

# ಸೋಯಾಬಿನ್ ಖರೀದಿ ಕೇಂದ್ರ ಆರಂಭಿಸಿ

**ಔರಾದ್:** ವಿಧಾನಸಭಾ ಕ್ಷೇತ್ರದಲ್ಲಿ ರೈತರು ಹೆಚ್ಚಿನ ಪ್ರಮಾಣದಲ್ಲಿ ಸೋಯಾಬಿನ್ ಬೆಳೆ ಬೆಳೆಯುತ್ತಾರೆ. ಸಕಾಲಕ್ಕೆ ಖರೀದಿ ಕೇಂದ್ರಗಳನ್ನು ತೆರೆದು ರೈತರಿಗೆ ಅನುಕೂಲ ಮಾಡಿಕೊಡಬೇಕು ಎಂದು ಶಾಸಕ ಪ್ರಭು ಚವ್ಹಾಣ ಒತ್ತಾಯಿಸಿದರು. ಬೆಳಗಾವಿ ಅಧಿವೇಶನದಲ್ಲಿ ಈ ಕುರಿತು

ಜವಳಿ, ಕಬ್ಬು ಅಭಿವೃದ್ಧಿ, ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಅವರನ್ನು ಚುಕ್ಕೆ ಗುರುತಿಲ್ಲದ ಪ್ರಶ್ನೆ ಕೇಳಿದ್ದಾರೆ. ಇದಕ್ಕೆ ಉತ್ತರಿಸಿದ ಸಚಿವರು ಬೀದರ ಜಿಲ್ಲೆಯ ವ್ಯಾಪ್ತಿಯಲ್ಲಿ ಒಟ್ಟು 80 ಖರೀದಿ ಕೇಂದ್ರಗಳನ್ನು ತೆರೆದು, 2024ರ ಡಿಸೆಂಬರ್ 2ರ ಅಂತ್ಯಕ್ಕೆ 7320 ನೋಂದಾಯಿತ ರೈತರ ಪೈಕಿ 1977 ರೈತರಿಂದ 22,986 ಕ್ವಿಂಟಾಲ್‌ಗಳಷ್ಟು ಸೋಯಾಬೀನ್ ಖರೀದಿಸಲಾಗಿದೆ ಎಂದು ಮಾಹಿತಿ ನೀಡಿದರು. ಸರಕಾರದ ಬೆಂಬಲ ಬೆಲೆ ಯೋಜನೆಯಡಿ ಖರೀದಿ ಕೇಂದ್ರ ತೆರೆದಿರುವುದು ಸರಿ ಆದರೆ ಸೋಯಾಬಿನ್ ಕಟಾವು ಮುಗಿಯುವ ಸಂದರ್ಭದಲ್ಲಿ ತೆರೆದರೆ ಉಪಯೋಗವಾಗಲು ಹೇಗೆ ಸಾಧ್ಯ. ಎಲ್ಲಾ ಕಡೆ ಖರೀದಿ ಕೇಂದ್ರ ಆರಂಭಿಸುತ್ತಿಲ್ಲ. ಅಧಿಕಾರಿಗಳ ನಿರ್ಲಕ್ಷ್ಯದಿಂದ ಎಲ್ಲಾ ರೈತರಿಗೆ ಯೋಜನೆಯ ಲಾಭ ಸಿಗುತ್ತಿಲ್ಲ. ಮುಂಬರುವ ದಿನಗಳಲ್ಲಿ ಈ ಸಮಸ್ಯೆ ಬರದಂತೆ ಎಚ್ಚರ ವಹಿಸಬೇಕು. ಬೆಳೆ ಕಟಾವು ಸಮಯದಲ್ಲಿ ಖರೀದಿ ಕೇಂದ್ರ ಆರಂಭಿಸಬೇಕು ಎಂದು ಸಚಿವರಿಗೆ ಶಾಸಕ ಚವ್ಹಾಣ ಮನವಿ ಮಾಡಿದರು.

# ತಿಂಗಳಲ್ಲೆ ಕಿತ್ತು ಬರ್ತಿದೆ ರಸ್ತೆಯ ಡಾಂಬರ್

**ಶಹಾಪುರ:** ನಗರದ ಡಿಗ್ರಿ ಕಾಲೇಜು ಕಮಾನ್‌ನಿಂದ ಶ್ರೀಸಾಯಿ ವಿದ್ಯಾನಿಕೇತನ ಶಾಲೆಯ ವರೆಗೆ ಲ್ಯಾಂಡರ್ಮಿಯಲ್ಲಿ 1ಕೋಟಿ 65 ಲಕ್ಷ ರು. ವೆಚ್ಚದಲ್ಲಿ ರಸ್ತೆ ಕಾಮಗಾರಿ ಪ್ರಾರಂಭಿಸಿದ್ದು ಕಳಪೆ ಮಟ್ಟದ ಸಾಮಾಗ್ರಿಗಳನ್ನು ಬಳಸಲಾಗುತ್ತಿದ್ದು, ಕೂಡಲೇ ಅಧಿಕಾರಿಗಳು ಇದನ್ನು ಪರಿಶೀಲಿಸಿ ಉತ್ತಮ ರಸ್ತೆ ನಿರ್ಮಾಣಕ್ಕೆ ಆದ್ಯತೆ ನೀಡಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಈಗಾಗಲೇ ಮಾದರಿ ಡಿಗ್ರಿ ಕಾಲೇಜು ಆವರಣದಲ್ಲಿ ಪೂರ್ಣಗೊಂಡ ರಸ್ತೆ ಕಾಮಗಾರಿಯ ಸ್ಥಿತಿಯು ಇದೇ ರೀತಿಯಾಗಿದ್ದು, ಹಾಕಿದ ಡಾಂಬರೂ ಕಿತ್ತು ಹೋಗುತ್ತಿದೆ. ಕಾಮಗಾರಿಯನ್ನು ಪರೀಕ್ಷಿಸಲು ಬರುವ ಅಧಿಕಾರಿಗಳು ಸಹ ಗುತ್ತಿಗೆದಾರರೊಂದಿಗೆ ಶಾಮೀಲಾಗಿ ಕಾಟಾಚಾರಕ್ಕೆ ಪರೀಕ್ಷೆ ಮಾಡಿ ಕಾಮಗಾರಿಗೆ ಅಧಿಕಾರಿಗಳು ಸೈ ಎನ್ನುತ್ತಿದ್ದಾರೆ ಎಂದು ಕಲ್ಯಾಣ ಕರ್ನಾಟಕ ಸೇನೆ ಜಿಲ್ಲಾಧ್ಯಕ್ಷ ಭೀಮಾಶಂಕರ ಕಟ್ಟಿಮನಿ ಆರೋಪಿಸಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವರು ರಸ್ತೆಗಳ ಅಭಿವೃದ್ಧಿಗೆ ಅನುದಾನ ಒದಗಿಸುತ್ತಿದ್ದಾರೆ. ಆದರೆ ಗುತ್ತಿಗೆದಾರರು ಬೇಜವಾಬ್ದಾರಿಯಿಂದ ರಸ್ತೆ ಗಳು ಕಳಪೆ ಕಾಮಗಾರಿಯಿಂದ ಹದಗೆಟ್ಟು ಹೋಗಿವೆ. ಕೈಗೊಂಡ ಯೋಜನೆ ಹಣ ದುರ್ಬಳಕೆಯಾಗಿದ್ದು ಕ್ರಮ ಕೈಗೊಳ್ಳಬೇಕು. ಹದಗೆಟ್ಟು ಹೋಗಿದ ರಸ್ತೆಗಳನ್ನು ಮೇಲಾಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ಮಾಡಿ ಸೂಕ್ತ ಡಾಂಬರೀಕರಣ ನಡೆಸುವಂತೆ ಸೂಚಿಸಬೇಕು ಅಂದಾಗ ಮಾತ್ರ ಇದು ಸಾರ್ವಜನಿಕರಿಗೆ ಅನುಕೂಲವಾಗಲಿದೆ.

ರಸ್ತೆಗೆ ಹಾಕಿದ ಮರಳು ಕಳಪೆವಾಗಿದ್ದು, ಇನ್ನೊಂದೆಡೆ

ರಸ್ತೆ ಡಾಂಬರೂ ಕಿತ್ತು ಹೋಗಿರುವುದು.

> ರಸ್ತೆ ಕಾಮಗಾರಿ ಕೈಗೊಂಡ ಗುತ್ತಿಗೆದಾರರ ತಾಲೂಕಿನ ಗ್ರಾಮೀಣ ಭಾಗದಲ್ಲಿ ವಿವಿಧ ಇಲಾಖೆಯಡಿಯಲ್ಲಿ ಕೋಟ್ಯಂತರ ರೂಪಾಯಿ ವೆಚ್ಚದಲ್ಲಿ ಕಾಮಗಾರಿ ಮಾಡಿದ್ದು ಪ್ರತಿಯೊಂದು ಕಾಮಗಾರಿಯು ಸಹ ಮುಗಿದ ತಿಂಗಳಲ್ಲೆ ಹಳ್ಳ ಹಿಡಿದಿವೆ. ಆದರೂ ಸಹ ಅಧಿಕಾರಿಗಳು ಕ್ರಮ ಜರುಗಿಸುವ ಕೆಲಸ ಮಾಡುತ್ತಿಲ್ಲಾ. ಒಂದು ವೇಳೆ ಕಳಪೆ ಕಾಮಗಾರಿ ಮುಂದುವರೆದರೆ ಲ್ಯಾಂಡರ್ಮಿ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಲಾಗುವುದು.
> -ಶಾಂತಪ್ಪ ಸಾಲಿಮನಿ ಹಾರಣಗೇರ

ಸಂಪೂರ್ಣ ಕಾಮಗಾರಿಯೇ ಮುಗಿದಿಲ್ಲ ಹಾಕಿದ ಡಾಂಬಲ್ ಕಿತ್ತು ಬರುತ್ತಿದೆ. ಈ ಬಗ್ಗೆ ಅಧಿಕಾರಿಗಳ ಗಮನಕ್ಕಿದ್ದರೂ ಸಹ ಕೈಕಟ್ಟಿ ಕುಳಿತಿದ್ದಾರೆ.

# ತೋಟಗಾರಿಕಾ ಕಾರ್ಯಾಗಾರ

**ಬೀದರ:** ಜಿಲ್ಲೆಯ ರೈತರು ತೋಟಗಾರಿಕೆ ಬೆಳೆಗಳ ಬಗ್ಗೆ ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಪರಿಹಾರ ಒದಗಿಸುವ ನಿಟ್ಟಿನಲ್ಲಿ ಸಮಗ್ರ ಮಾಹಿತಿ ಪಡೆದು ರೈತರಿಗೆ ಸೂಕ್ತವಾದ ಸಲಹೆ ಸೂಚನೆ ಒದಗಿಸಿಸುವ ನಿಟ್ಟಿನಲ್ಲಿ ರೈತರಿಗೆ ನೆರವಾದ ಬೇಕು ಎಂದು ಬೀದರ ತೋಟಗಾರಿಕೆ ಮಹಾವಿದ್ಯಾಲಯ ಡೀನ್ ಡಾ.ಎಸ್.ವಿ.ಪಾಟೀಲ್ ಹೇಳಿದರು. ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬಾಗಲಕೋಟೆ ತೋಟಗಾರಿಕೆ ವಿಸ್ತರಣಾ ಶಿಕ್ಷಣ ಘಟಕ. ತೋಟಗಾರಿಕೆ ಮಹಾವಿದ್ಯಾಲಯ ಬೀದರ ಮತ್ತು ತೋಟಗಾರಿಕೆ ಇಲಾಖೆ ಬೀದರ ಸಹಯೋಗದೊಂದಿಗೆ ಆಯೋಜಿ ಸಿದ ಮೂರನೆ ತ್ರೈಮಾಸಿಕ ತೋಟಗಾರಿಕೆ ಕಾರ್ಯಾಗಾರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರೈತರು ಒಂದೇ ಬೆಳೆಯ ಮೇಲೆ ಅವಲಂಬಿತರಾಗಿರದೆ ಬೆಳೆಗಳನ್ನು ಬೆಳೆಯುವ ಮೂಲಕ ಉತ್ತಮ ಲಾಭವನ್ನು ಕಂಡುಕೊಳ್ಳಬಹುದು. ರೈತರು ಮಾವಿನ ಬೆಳೆಯಲ್ಲಿ ಎದುರಿಸುತ್ತಿರುವ ಕೀಟಗಳ ಬಾಧೆಯ ಬಗ್ಗೆ ಚರ್ಚಿಸುತ್ತಾ ಕೀಟ ನಿರ್ವಹಣೆ ಬಗ್ಗೆ ಮಾಹಿತಿ ರೈತರಿಗೆ ಒದಗಿಸುವಂತೆ ಸಹಾಯಕ ತೋಟಗಾರಿಕೆ ಅಧಿಕಾರಿಗಳಿಗೆ ಸೂಚಿಸಿದರು. ಈ ವೇಳೆ ಬೀದರ ತೋಟಗಾರಿಕೆ ಇಲಾಖೆಯ ಉಪನಿರ್ದೇಶಕ ವಿಶ್ವನಾಥ ಝಿಳ್ಳೆ, ಬೀದರ ತೋಟಗಾರಿಕೆ ಇಲಾಖೆಯ ಹಿರಿಯ ಸಹಾಯಕ ಸುನೀಲ ಗಂಗಶ್ರೀ, ಡಾ.ವಿ.ಪಿ.ಸಿಂಗ್, ಡಾ.ವಿಜಯಮಹಾಂಏಶ, ಡಾ.ಕಡ್ಲಿ ವಿರೇಶ, ಸಂಪನ್ಮೂಲ ವ್ಯಕ್ತಿ ಡಾ.ಪ್ರಶಾಂತ, ಡಾ.ಅಬ್ದುಲ್ ಕರೀಮ್ ಎಂ., ಡಾ.ಅಂಬ್ರೇಷ್, ಡಾ.ವಿ.ಪಿ.ಸಿಂಗ್ ಉಪಸ್ಥಿತರಿದ್ದರು.

ವಿಶ್ವವಾಣಿ
ವಿಶ್ವಾಸವೇ ವಿಶ್ವ

## ಕುವೈತ್‌ನಲ್ಲಿ ಮೋದಿ ಹವಾ

ಕುವೈತ್ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಮಹಾಭಾರತ ಮತ್ತು ರಾಮಾಯಣ ಕೃತಿಗಳನ್ನು ಅರೇಬಿಕ್ ಭಾಷೆಗೆ ರೂಪಾಂತರಿಸಿದ ಅನುವಾದಕರನ್ನು ಶನಿವಾರ ಭೇಟಿ ಮಾಡಿದರು. ಅರೇಬಿಕ್ ಕೃತಿಗಳಿಗೆ ತಮ್ಮ ಹಸ್ತಾಕ್ಷರ ಹಾಕಿ ಮೋದಿ ಸಂತಸ ವ್ಯಕ್ತಪಡಿಸಿದರು.

### ಪುಟ ತೆರೆದಂತೆ...

ಜಪಾನಿನ ಭೂಕಂಪವೂ, ಆಫ್ರಿಕಾದ ಹಕ್ಕಿಜಗಳವೂ, ವಿದ್ಯುಚ್ಛಕ್ತಿ ಪೂರೈಕೆಯೂ
ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್
ಸಂ.ಪುಟ | 6

ತಬಲಾ ಇರುವವರೆಗೂ ಝಾಕಿರ್ ಅಮರ
ವಿದ್ಯಮಾನ
ವಿನಾಯಕ ವೆಂ.ಭಟ್ಟ ಅಂಬ್ಲಿಹೊಂಡ
ಸಂ.ಗಮ | 7

### ಮಾತಂದ್ರೆ ಮಾತು

ಕನ್ನಡ ನಾಡಿನ ನುಡಿ ಪರಂಪರೆ, ಶ್ರೀಮಂತ ಸಾಹಿತ್ಯ, ಇತಿಹಾಸ, ಸಂಸ್ಕೃತಿಯನ್ನು ಸಂಭ್ರಮಿಸುವ ವೇದಿಕೆಯಾಗಬೇಕಿದ್ದ ಅಖಿಲ ಭಾರತ ಸಾಹಿತ್ಯ ಸಮ್ಮೇಳನವನ್ನು ರಾಜಕೀಯ ವೇದಿಕೆ ಮಾಡಿರುವ ಸಿಎಂ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ ತಾಯಿ ಕನ್ನಡಾಂಬೆಗೆ, ಕನ್ನಡಿಗರ ತಾಯ್ನುಡಿಗೆ ಘೋರ ಅಪಮಾನ ಎಸಗಿದೆ.

**ಆರ್. ಅಶೋಕ್**
ಪ್ರತಿಪಕ್ಷ ನಾಯಕ

### ದಾರಿದೀಪೋಕ್ತಿ

ಪ್ರತಿಯೊಬ್ಬ ಗುರುವೂ ಒಂದು ಕಾಲದಲ್ಲಿ ವಿದ್ಯಾರ್ಥಿಯಾಗಿದ್ದ. ಪ್ರತಿ ವಿಜಯಿಯೂ ಒಮ್ಮೆ ಸೋಲಿನ ಸರದಾರನಾಗಿದ್ದ. ಪ್ರತಿ ಪರಿಣತನೂ ಶುರುವಿನಲ್ಲಿ ಏನೂ ಗೊತ್ತಿಲ್ಲದವನಾಗಿದ್ದ. ಆದ್ದರಿಂದ ಯಾರು ಈಗ ಏನೇ ಆಗಿರಲಿ, ಅವರನ್ನು ನಿಕೃಷ್ಟವಾಗಿ ನೋಡಬಾರದು.

### ವಕ್ರತುಂಡೋಕ್ತಿ

ಕೆಲವರ ದಾಂಪತ್ಯ ಕೊಲೆಯಲ್ಲಿ ಅಂತ್ಯವಾಗುತ್ತದೆ. ಕಾರಣ ಅವರಿಗೆ ವಿಚ್ಛೇದನದಲ್ಲಿ ಅವರಿಗೆ ನಂಬಿಕೆ ಇರುವುದಿಲ್ಲ.

ಬಿಜೆಪಿ ಕಚೇರಿಯಲ್ಲಿ ಸಿ.ಟಿ.ರವಿಗೆ ಭವ್ಯ ಸ್ವಾಗತ | ಬೆಳಗಾವಿ ಪ್ರಕರಣ ನ್ಯಾಯಾಂಗ ತನಿಖೆಗೆ ರವಿ ಆಗ್ರಹ
ಉನ್ನತಮಟ್ಟದ ತನಿಖೆಗೆ ಮನವಿ ಸಲ್ಲಿಸಿದ ಮಹಿಳಾ ಆಯೋಗ | ಮುಗಿಯದ ಆರೋಪ-ಪ್ರತ್ಯಾರೋಪ

# ಈಗ ಲೆಕ್ಕ ಚುಕ್ತಾ ಸವಾಲು!

**ಬೆಂಗಳೂರು:** ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹಾಗೂ ಪರಿಷತ್ ಸದಸ್ಯ ಸಿ.ಟಿ. ರವಿ ನಡುವಣ ಜಟಾಪಟಿ ಇದೀಗ ಬಿಜೆಪಿ ವರ್ಸಸ್ ಕಾಂಗ್ರೆಸ್ ಆಗಿ ಬದಲಾಗಿದ್ದು, ಶನಿವಾರ ಇಡೀ ದಿನ 'ಲೆಕ್ಕ ಚುಕ್ತಾ' ಮಾತುಗಳೇ ಬಹುದೊಡ್ಡ ಪ್ರಮಾಣದಲ್ಲಿ ಚರ್ಚೆಗೆ ಗ್ರಾಸವಾಗಿದೆ.

ಹೈಕೋರ್ಟ್ ಮಧ್ಯಂತರ ಆದೇಶದಂತೆ ಸಿ.ಟಿ. ರವಿ ಅವರನ್ನು ಪೊಲೀಸರು ದಾವಣಗೆರೆಯಲ್ಲಿಯೇ ಬಿಡುಗಡೆಗೊಳಿಸಿದ ಬಳಿಕ ಇಡೀ ಪ್ರಕರಣ ರಾಜಕೀಯ ತಿರುವು ಪಡೆದಿದ್ದು, ಸವಾಲು-ಪ್ರತಿಸವಾಲು ಹಾಕುವುದರಲ್ಲಿ ನಾಯಕರು ನಿರತರಾಗಿದ್ದಾರೆ. ಈ ನಡುವೆ ಇಡೀ ಪ್ರಕರಣವನ್ನು ಉನ್ನತ ಮಟ್ಟದ ತನಿಖೆ ನಡೆಸಬೇಕು ಎಂದು ಮಹಿಳಾ ಆಯೋಗ ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರಿಗೆ ಮನವಿ ಸಲ್ಲಿಸಿದೆ. ಅಶ್ಲೀಲ ಪದ ಬಳಕೆಗೆ ಸಂಬಂಧಿಸಿದಂತೆ ಉನ್ನತ ತನಿಖೆಗೆ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮೀ ಚೌಧರಿ ಆಗ್ರಹಿಸಿದ್ದರೆ, ಇನ್ನೊಂದೆಡೆ ಇಡೀ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ಒಪ್ಪಿಸಬೇಕು ಎಂದು ಸಿ.ಟಿ. ರವಿ ಆಗ್ರಹಿಸಿದ್ದಾರೆ.

ಈ ಪ್ರಕರಣದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ನಡೆದುಕೊಂಡಿರುವ ಹಾಗೂ ಅವರಿಗೆ ಸಹಾಯ ಮಾಡಿರುವ ಎಲ್ಲರ ಲೆಕ್ಕ ಚುಕ್ತಾ ಮಾಡುವ ಹೇಳಿಕೆಗೆ ಡಿಸಿಎಂ ಡಿ.ಕೆ.ಶಿವಕುಮಾರ್, ಗೃಹ ಸಚಿವ ಡಾ.ಜಿ. ಪರಮೇಶ್ವರ ಆಕ್ಷೇಪವ್ಯಕ್ತಪಡಿಸಿದ್ದಾರೆ.

**ನ್ಯಾಯಾಂಗ ತನಿಖೆಗೆ ಸಿ.ಟಿ.ರವಿ ಆಗ್ರಹ:** ಬಿಜೆಪಿ ಕಚೇರಿಯಲ್ಲಿ ಸುದೀರ್ಘ ಸುದ್ದಿಗೋಷ್ಠಿ ನಡೆಸಿದ ಮೇಲ್ಮನೆ ಸದಸ್ಯ ಸಿ.ಟಿ.ರವಿ, ನನಗೆ ಈಗಲೂ ಪ್ರಾಣಬೆದರಿಕೆ ಕರೆ ಬರುತ್ತಿದೆ. ಈ ಪ್ರಕರಣದಲ್ಲಿ ಕೆಲ ಪ್ರಭಾವಿಗಳು ಶಾಮೀಲಾಗಿರುವ ಸಾಧ್ಯತೆಯಿರುವುದರಿಂದ ರಾಜ್ಯ ಸರಕಾರ ಕೂಡಲೇ ತಮ್ಮ ಪ್ರಕರಣದ ಬಗ್ಗೆ ನ್ಯಾಯಾಂಗ ತನಿಖೆ ನಡೆಸಬೇಕೆಂದು ಆಗ್ರಹಿಸಿದರು. ಪ್ರಕರಣ ನಡೆದ ನಂತರ ಕೆಲವು ಅನಾಮಧೇಯ ವ್ಯಕ್ತಿಗಳು ಕರೆಮಾಡಿ ಪ್ರಾಣ ಬೆದರಿಕೆಯೊಡ್ಡುತ್ತಿದ್ದಾರೆ. ನನ್ನ ಜೀವಕ್ಕೆ ತೊಂದರೆಯಾದರೆ ಅದಕ್ಕೆ ರಾಜ್ಯ ಸರಕಾರವೇ ನೇರ ಹೊಣೆ. ಕರೆ ಮಾಡುತ್ತಿರುವವರ ದೂರವಾಣಿ ಕರೆಗಳನ್ನು ಪರಿಶೀಲಿಸಬೇಕು. ಇದು ಪೊಲೀಸರಿಂದ ನಿಷ್ಪಕ್ಷಪಾತ ತನಿಖೆಯಾಗಲು ಸಾಧ್ಯವಿಲ್ಲ. ಹೀಗಾಗಿ ನ್ಯಾಯಾಂಗ ತನಿಖೆಗೆ ವಹಿಸಬೇಕೆಂದು ಆಗ್ರಹಿಸಿದರು.

**ಮೊಬೈಲ್ ಕದ್ದಾಲಿಕೆ:** ಈಗಲೂ ನನ್ನ ಮೊಬೈಲ್ ಟ್ಯಾಪಿಂಗ್ ಮಾಡಲಾಗುತ್ತಿದೆ. ಯಾರು ಯಾವ ಕಾರಣಕ್ಕಾಗಿ ಮಾಡುತ್ತಿದ್ದಾರೋ ಗೊತ್ತಿಲ್ಲ. ಘಟನೆ ನಡೆದ ನಂತರ ಪೊಲೀಸರು ಕೆಲವರ ನಿರ್ದೇಶನದಂತೆ ಕೆಲಸ ಮಾಡಿದ್ದಾರೆ. ಅವರಿಗೆ ಪ್ರತಿ 10-15 ನಿಮಿಷಕ್ಕೊಮ್ಮೆ ದೂರವಾಣಿ ಕರೆಗಳು ಬರುತ್ತಿದ್ದವು. ನನ್ನ ಮೊಬೈಲ್ ಲೊಕೇಷನ್ ಎಲ್ಲವೂ ಇದೆ. ಆ ಸಂದರ್ಭದಲ್ಲಿನನ್ನೊಂದಿಗಿದ್ದ ಪೊಲೀಸ್ ಅಧಿಕಾರಿಗಳ ಸಿಡಿಆರ್ ದಾಖಲಾಗಿರುತ್ತದೆ. ನಿಷ್ಪಕ್ಷಪಾತ ವಾಗಿ ತನಿಖೆ ನಡೆಯಲಿ ಎಂದು ಮನವಿ ಮಾಡಿದರು.

ನಾನು ತಪ್ಪು ಮಾಡಿದ್ದರೆ ಕಾನೂನಿನ ಪ್ರಕಾರ ಶಿಕ್ಷೆಯಾಗಲಿ. ನಾನು ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಟ್ಟಿರುವ ವ್ಯಕ್ತಿ. ನಾನು ತಪ್ಪು ಮಾಡಿದ್ದರೆ ನನ್ನ ಮೇಲೆ ಸಭಾಪತಿ ಕ್ರಮ ತೆಗೆದುಕೊಳ್ಳಲಿ. ಇದರಲ್ಲಿ ಯಾವುದೇ ಅಭ್ಯಂತರವಿಲ್ಲ ಎಂದು ಸ್ಪಷ್ಟಪಡಿಸಿದರು. ಪರಿಷತ್‌ನಲ್ಲಿ ಕಾನೂನು ಕ್ರಮ ಜರುಗಿಸಲು ಸಭಾಪತಿಗಳಿಗೆ ಅವಕಾಶವಿದೆ. ಆದರೆ ಹಲ್ಲೆ ಮಾಡಲು ಸದಸ್ಯರಿಗೆ ಅವಕಾಶವಿಲ್ಲ. ನನ್ನ ಧ್ವನಿಯನ್ನು ಎಫ್‌ಎಸ್‌ಎಲ್‌ಗೆ ಕಳುಹಿಸಿಕೊಡಲಿ. ಅಲ್ಲಿ ಧ್ವನಿಮುದ್ರಣ , ಫೋನ್ ದಾಖಲಾತಿ, ಸ್ಟೆನೋ ಎಲ್ಲವೂ ಇರುತ್ತದೆ. ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಅವರಿಗೆ ನಾನು ಆಕ್ಷೇಪಾರ್ಹ ಪದ ಬಳಸಿದ್ದಕ್ಕೆ ದಾಖಲೆಗಳಿಲ್ಲ ಎಂದು ಸಭಾಪತಿಯವರೇ ರೂಲಿಂಗ್ ಕೊಟ್ಟಿದ್ದಾರೆ ಎಂದು ಸಿ.ಟಿ. ರವಿ ಸ್ಪಷ್ಟಪಡಿಸಿದರು.

**ಮುಂದುವರಿದ ಪ್ರತಿಭಟನೆ:** ಈ ನಡುವೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಪರ-ವಿರೋಧ ಪ್ರತಿಭಟನೆಗಳು ಮುಂದುವರಿದಿವೆ. ಬೆಳಗಾವಿಯಲ್ಲಿಯೇ ಕಾಂಗ್ರೆಸ್ ಕಾರ್ಯಕರ್ತರು ಸಿ.ಟಿ. ರವಿ ಧೋರಣೆ ಖಂಡಿಸಿ ಪ್ರತಿಭಟನೆ ನಡೆಸಿದ್ದರೆ, ಬಿಜೆಪಿಗರು ರವಿಯನ್ನು ಬೆಂಬಲಿಸಿ ಪ್ರತಿಭಟನೆ ನಡೆಸಿದ್ದಾರೆ.

### ನಾನು ತಪ್ಪು ಮಾಡಿದ್ದರೆ ಶಿಕ್ಷೆಯಾಗಲಿ: ಸಿ.ಟಿ. ರವಿ

- ನನಗೆ ಈಗಲೂ ಕೊಲೆ ಬೆದರಿಕೆ ಕರೆಗಳು ಬರುತ್ತಿವೆ; ಏನಾದರೂ ಆದರೆ ರಾಜ್ಯ ಸರಕಾರವೇ ಹೊಣೆ.
- ನನ್ನ ಫೋನ್ ಟ್ಯಾಪ್ ಮಾಡಲಾಗಿದ್ದು, ನನ್ನ ಲೊಕೇಷನ್ ಟ್ರ್ಯಾಕ್ ಮಾಡಲಾಗುತ್ತಿದೆ.
- ನಾನು ತಪ್ಪು ಮಾಡಿದ್ದರೆ ಕ್ರಮವಾಗಲಿ; ನನಗೆ ಪ್ರಜಾಪ್ರಭುತ್ವ ವ್ಯವಸ್ಥೆ ಮೇಲೆ ನಂಬಿಕೆಯಿದೆ.
- ಸದನದ ಒಳಗೆಯೇ ಲಕ್ಷ್ಮೀ ಹೆಬ್ಬಾಳ್ಕರ್ ಮತ್ತು ಡಿ.ಕೆ.ಶಿವಕುಮಾರ್ ನನಗೆ ಪ್ರಾಣ ಬೆದರಿಕೆ ಒಡ್ಡಿದ್ದರು.

ಪೊಲೀಸ್ ಠಾಣೆಯಲ್ಲಿದ್ದಾಗ ಸೀಬೆಹಣ್ಣು ತರಿಸಿಕೊಂಡು ತಿಂದೆ. ಅಲ್ಲಿಂದ ಆಸ್ಪತ್ರೆಗೆ ಕರೆದೊಯ್ದರು. ಬಿಪಿ ಜಾಸ್ತಿ ಇತ್ತು. ಸ್ಕ್ಯಾನಿಂಗ್, ಎಕ್ಸ್‌ರೇ ಮಾಡಿಸಿದರು.ಬಳಿಕ ಎಲ್ಲ ಪ್ರಕ್ರಿಯೆಯನ್ನು ನಿಗೂಢವಾಗಿ ಏಕೆ ಮಾಡಿದರೂ ಗೊತ್ತಿಲ್ಲ. ಕಬ್ಬಿನ ಗದ್ದೆಯಲ್ಲಿ, ಕಲ್ಲಿನ ಕ್ವಾರಿಯಲ್ಲಿ ಯಾರನ್ನೋ ಕರೆಸಿ ಸಾಯಿಸುವ, ಗುಂಪಿನಿಂದ ಹೊಡೆಯುವ ಹುನ್ನಾರವಿತ್ತೇ ಎನ್ನುವ ಅನುಮಾನವಿದೆ.
**- ಸಿ.ಟಿ. ರವಿ,** ವಿಧಾನಪರಿಷತ್ ಸದಸ್ಯ

ಡಿ.ಕೆ.ಶಿವಕುಮಾರ್ ಲೆಕ್ಕ ಚುಕ್ತಾ ಮಾಡುತ್ತೇನೆಂದು ಸಿ.ಟಿ. ರವಿ ಹೇಳಿದ್ದಾರೆ. ಈ ರೀತಿಯ ಮಾತುಗಳನ್ನು ತುಂಬಾ ಕೇಳಿದ್ದೇನೆ. ಎಲ್ಲರಿಗೂ ಅವರವರದೇ ಆದ ಸಾಮರ್ಥ್ಯದಲ್ಲಿ ಲೆಕ್ಕ ಚುಕ್ತಾ ಮಾಡಿಕೊಳ್ಳಲು ಸಾಧ್ಯವಿದೆ. ಈ ಪ್ರಕರಣದಲ್ಲಿ ಏನೇ ಆಗಿದ್ದರೂ, ಅದಕ್ಕೆ ಪೊಲೀಸರೇ ಹೊಣೆ. ನನಗೂ, ಅದಕ್ಕೂ ಸಂಬಂಧವಿಲ್ಲ.
**- ಡಿ.ಕೆ.ಶಿವಕುಮಾರ್,** ಉಪಮುಖ್ಯಮಂತ್ರಿ

ಪ್ರಕರಣದಲ್ಲಿ ಬೇರೆ ರೀತಿಯ ಮಾಹಿತಿಗಳನ್ನು ಕೇಳುವ ಸಂದರ್ಭದಲ್ಲಿ ಸರಕಾರದ ಪರವಾದ ವಾದ ಕೇಳದೆ ತೀರ್ಪು ಪ್ರಕಟಿಸಲಾಗಿದೆ. ಈ ಪ್ರಕರಣ ನ್ಯಾಯಾಲಯದಲ್ಲಿದೆ. ಆದ್ದರಿಂದ ಸತ್ಯಾಸತ್ಯತೆಗಳ ಬಗ್ಗೆ ತಾವು ಹೇಳಿಕೆ ನೀಡಲು ಬಯಸುವುದಿಲ್ಲ. ಈ ಪ್ರಕರಣ ಯಾರ ವ್ಯಾಪ್ತಿಗೆ ಬರಲಿದೆ ಎನ್ನುವ ಚರ್ಚೆಗಳಿವೆ. ಕಾನೂನಾತ್ಮಕವಾಗಿ ಪರಿಶೀಲಿಸಿ ಕ್ರಮವಹಿಸಲಾಗುವುದು.
**- ಡಾ.ಜಿ. ಪರಮೇಶ್ವರ್,** ಗೃಹ ಸಚಿವ

ಸಂವಾದದಲ್ಲಿ ಅಧ್ಯಕ್ಷರ ಖಡಕ್ ನುಡಿ

# ಮಾತೃಭಾಷೆ ಪ್ರಜ್ಞೆ ಮುಖ್ಯ: ಗೊರುಚ

**ಮಂಡ್ಯ:** ಮಾತು-ಮಂಥನ ಸಂವಾದದಲ್ಲಿ ಪಾಲ್ಗೊಂಡ ಸಮ್ಮೇಳನಾಧ್ಯಕ್ಷ ಗೊ.ರು. ಚನ್ನಬಸಪ್ಪ , ಈ ದೇಶದಲ್ಲಿ ತ್ರಿಭಾಷಾ ಸೂತ್ರ ಹೇರುವುದನ್ನು ನಾನು ಖಂಡಿಸುತ್ತೇನೆ. ಮನುಷ್ಯ ಆಸಕ್ತಿಯಿಂದ ಎಷ್ಟು ಭಾಷೆಗಳನ್ನು ಬೇಕಾದರೂ ಕಲಿಯಲಿ. ಆದರೆ ಮಾತೃಭಾಷೆ ಮಕ್ಕಳ ಪ್ರಾಥಮಿಕ ಸಂವಹನ ವಾಗಬೇಕು. ಕನ್ನಡ ಉಳಿಯಬೇಕಾದರೆ ಮಾತೃ ಭಾಷೆ ಪ್ರಜ್ಞೆ ಮುಖ್ಯ ಎಂದು ಪ್ರತಿಪಾದಿಸಿದರು. ಸಾಹಿತ್ಯ ಸಮ್ಮೇಳನದ ಎರಡನೆಯ ದಿನವಾದ ಶನಿವಾರ' ಸಮ್ಮೇಳನಾಧ್ಯಕ್ಷರೊಂದಿಗೆ ಸಂವಾದ' ಗೋಷ್ಠಿಯಲ್ಲಿ ವಿವಿಧ ಪ್ರಶ್ನೆಗಳಿಗೆ ಉತ್ತರಿಸಿದ ಗೊ.ರು.ಚ., ಮಾತೃಭಾಷೆಯ ಬಗ್ಗೆ ನಿರ್ಲಕ್ಷ್ಯ ಸಲ್ಲದೆಂದು ಪ್ರತಿಪಾದಿಸಿರು.

ಬಹುಭಾಷಾ ಸಂಸ್ಕೃತಿಯ ಬಗ್ಗೆ ಕೇಳಿದ ಪ್ರಶ್ನೆಗೆ, ಭಾರತ ಬಹು ಸಂಸ್ಕೃತಿ, ಬಹು ಭಾಷೆ ಮತ್ತು ಬಹು ಪದ್ಧತಿಗಳ ದೇಶ. ಇದೆಲ್ಲವನ್ನೂ ಉಳಿಸುವುದು ಈ ತಲೆಮಾರಿನ ಯುವಕರ ಕರ್ತವ್ಯವಾಗಿದೆ. ಈ ದೇಶದ ಸತ್ವ ಮತ್ತು ಸೊಗಡು ಹಾಳಾಗಲಿಕ್ಕೆ ಬಿಡಬಾರದು ಎಂದರು.

**ರಾಜಕೀಯ ಅಸ್ಪೃಶ್ಯ ಅಲ್ಲ:** ಸಾಹಿತ್ಯ ಸಮ್ಮೇಳನದಲ್ಲಿ ರಾಜಕೀಯದಲ್ಲಿ ಸಾಹಿತ್ಯ ಎಂಬ ಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್, ಸಾಹಿತಿ ಗಳು ರಾಜಕಾರಣವನ್ನು ಅಸ್ಪೃಶ್ಯತೆಯಿಂದ ನೋಡುತ್ತಿರುವುದು ದುರ್ದೈವ. ಸಾಹಿತ್ಯ ಕೃಷಿ ಮಾಡುವವರು ರಾಜಕಾರಣಿಗಳನ್ನು ಬಹಳ ದೂರವಿಡಲು ನೋಡುತ್ತಾರೆ. ರಾಜಕಾರಣಿಗಳ ಕೃತಿಗಳನ್ನು ಸಾಹಿತ್ಯಾರ್ಥದಲ್ಲಿ ಪರಿಗಣಿಸುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ರಾಜಕಾರಣಿಗಳ ಸಾಹಿತ್ಯ ರಚನೆ ಅವರ ಪಾತ್ರಗಳನ್ನು ಒಳಗೊಂಡಿರುತ್ತದೆ. ಇದು ಸಾಹಿತ್ಯಕ್ಕೆ ಸಂಬಂಧಿಸಿದ್ದಲ್ಲ ಎಂಬುದು ದುರದೃಷ್ಟಕರ. ಎಲ್ಲಾ ಸಾಹಿತ್ಯವೂ ಪ್ರಾಮಾಣಿಕವಾಗಿ ಬರದ ಕಾಲಘಟ್ಟವೂ ಇದೆ. ಪ್ರಜಾಪ್ರಭುತ್ವದ ಬಂದ ಮೇಲೆ ಎಲ್ಲ ರೀತಿಯ ಮಗ್ಗಲುಗಳನ್ನು ಸಾಹಿತ್ಯದ ಮೂಲಕ ಕಲಿಯಬಹುದು. ರಾಜಕಾರಣಿ, ಸಾಹಿತಿ ಪ್ರತ್ಯೇಕಿ ಸುವ ವ್ಯವಸ್ಥೆ ಹೋಗಬೇಕು ಎಂದರು.

ಸಂವಾದ ಗೋಷ್ಠಿಯಲ್ಲಿ ಗೊ.ರು.ಚ.

### ವಿಶ್ವವಾಣಿ ಮಳಿಗೆಯಲ್ಲಿ ವಿಶ್ವೇಶ್ವರ ಭಟ್

ಸಾಹಿತ್ಯ ಸಮ್ಮೇಳನದ ಪುಸ್ತಕ ಮಳಿಗೆಗಳಲ್ಲಿ 'ವಿಶ್ವವಾಣಿ' ಪುಸ್ತಕ ಮಳಿಗೆ ವಿಶೇಷವಾಗಿ ಗಮನ ಸೆಳೆಯಿತು. ಶನಿವಾರ ಸಂಜೆ ವಿಶ್ವವಾಣಿ ಸಂಪಾದಕ, ಹಿರಿಯ ಪತ್ರಕರ್ತ ವಿಶ್ವೇಶ್ವರ ಭಟ್ ಪುಸ್ತಕ ಮಳಿಗೆಗಳಿಗೆ ಭೇಟಿ ನೀಡಿ, ಓದುಗರ ಜೊತೆಗೆ ಚಿಟ್ ಚಾಟ್ , ಸಂವಾದ ನಡೆಸಿದರು. ಈ ಸಂದರ್ಭದಲ್ಲಿ ಅವರು ತಮ್ಮ ಹೊಸ ಪುಸ್ತಕಗಳಾದ 'ಸಂಪಾದಕರ ಸದ್ಯಶೋಧನೆ' ಕೃತಿಯ ನೂತನ ಆವೃತ್ತಿಯನ್ನು ಓದುಗರಿಗೆ ನೀಡಿದರು. ಅಲ್ಲದೆ, ಓದುಗರು ಖರೀದಿಸಿದ ತಮ್ಮ ಕೃತಿಗಳಿಗೆ ಹಸ್ತಾಕ್ಷರ ಹಾಕಿ ಕೊಟ್ಟರು. ಅವರೊಂದಿಗೆ ಸೆಲ್ಫಿ ಹಾಗೂ ಹಸ್ತಾಕ್ಷರಕ್ಕಾಗಿ ಅಭಿಮಾನಿಗಳು, ಓದುಗರು ವಿಶ್ವವಾಣಿ ಸ್ಟಾಲ್‌ನಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಸೇರಿದ್ದರು.

## ವಿಶ್ವಸಂಸ್ಥೆ: ಇಂಟರ್ನಲ್ ಜಸ್ಟೀಸ್ ಸಮಿತಿಗೆ ನ್ಯಾ.ಮದನ್ ಲೋಕೂರ್

**ವಾಷಿಂಗ್ಟನ್:** ವಿಶ್ವಸಂಸ್ಥೆಯ ಆಂತರಿಕ ನ್ಯಾಯ ಮಂಡಳಿಯ ಮುಖ್ಯಸ್ಥರಾಗಿ ಭಾರತದ ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಮದನ್ ಬಿ.ಲೋಕೂರ್ ನೇಮಕಗೊಂಡಿದ್ದಾರೆ. ಲೋಕೂರ್ ಸೇವಾವಧಿ 2028ರ ನವೆಂಬರ್‌ವರೆಗೂ ಇರಲಿದೆ. ಈ ಬಗ್ಗೆ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರಸ್ ಅವರು ನ್ಯಾ.ಮದನ್ ಲೋಕೂರ್ ಅವರಿಗೆ ಪತ್ರ ಬರೆದಿದ್ದಾರೆ.

ಮಿತ್ರ ಪಕ್ಷದಿಂದ ಅವಿಶ್ವಾಸ ನಿರ್ಣಯ

# ಟ್ರುಡೊ ಸರ್ಕಾರಕ್ಕೆ ಸಂಕಷ್ಟ

**ಒಟ್ಟಾವ:** ಭಾರತದ ಜತೆ ಸದಾ ಸಂಘರ್ಷದಲ್ಲಿರುವ ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೊ ಇದೀಗ ಸಂಕಷ್ಟಕ್ಕೆ ಸಿಲುಕಿದ್ದಾರೆ. ಟ್ರೂಡೋ ನೇತೃತ್ವದ ಸರಕಾರದ ವಿರುದ್ಧ ಮುಂದಿನ ವರ್ಷ ಅವಿಶ್ವಾಸ ನಿರ್ಣಯ ಮಂಡಿಸುವುದಾಗಿ ಮಿತ್ರಪಕ್ಷ ನ್ಯೂ ಡೆಮಾಕ್ರೆಟಿಕ್ ಪಾರ್ಟಿ ಪ್ರಕಟಿಸಿದೆ.

ಎನ್‌ಡಿಪಿ ನಾಯಕ ಹಾಗೂ ಭಾರತ ಮೂಲದ ಸಂಸದ ಜಗ್‌ಮೀತ್ ಸಿಂಗ್ ಅವರು ಪ್ರಧಾನಿಗೆ ಬರೆದ ಬಹಿರಂಗ ಪತ್ರದಲ್ಲಿ ತಮ್ಮ ನಿರ್ಧಾರ ಪ್ರಕಟಿಸಿದ್ದಾರೆ. ಇದರಿಂದ ಟ್ರುಡೊ ಸರಕಾರದ ಭವಿಷ್ಯ ತೂಗುಯ್ಯಾಲೆಯಲ್ಲಿದೆ.

ಎನ್‌ಡಿಪಿ ಅವಿಶ್ವಾಸ ನಿರ್ಣಯ ಮಂಡಿಸಿದಾಗ, ಇತರ ವಿರೋಧ ಪಕ್ಷಗಳು ಬೆಂಬಲಿಸಿದರೆ ಟ್ರುಡೊ ಸರಕಾರ ಉರುಳುವುದು ಖಚಿತ. ಹಾಗೇ ನಡೆದಲ್ಲಿ ಕೆನಡಾದಲ್ಲಿ ಅವಧಿಗೆ ಮೊದಲೇ ಸಾರ್ವತ್ರಿಕ ಚುನಾವಣೆ ನಡೆಯುವ ಅನಿವಾರ್ಯ ಪರಿಸ್ಥಿತಿ ಉಂಟಾಗಲಿದೆ. ನಿಗದಿತ ವೇಳಾಪಟ್ಟಿಯಂತೆ ಸಾರ್ವತ್ರಿಕ ಚುನಾವಣೆ 2025ರ ಅಕ್ಟೋಬರ್‌ನಲ್ಲಿ ನಡೆಯಬೇಕಾಗಿದೆ.

ಲಿಬರಲ್ ಪಕ್ಷದವರು ಮತ್ತೊಂದು ಅವಧಿಗೆ ಅಧಿಕಾರದಲ್ಲಿ ಮುಂದುವರಿಯಲು ಅರ್ಹರಲ್ಲ. ಅದಕ್ಕಾಗಿಯೇ ಟ್ರೂಡೋ ಸರಕಾರವನ್ನು ಉರುಳಿಸಲು ಮುಂದಿನ ಸಂಸತ್ ಅಧಿವೇಶನದಲ್ಲಿ ನಾವು ಅವಿಶ್ವಾಸ ನಿರ್ಣಯ ಮಂಡಿಸುತ್ತೇವೆ. ಕೆನಡಾದ ಜನತೆಗೆ ಅವರ ಪರವಾಗಿ ಕೆಲಸ ಮಾಡುವ ಸರಕಾರವನ್ನು ಆಯ್ಕೆ ಮಾಡುವ ಅವಕಾಶವನ್ನು ನೀಡುತ್ತೇವೆ' ಎಂದು ಜಗ್‌ಮೀತ್ ತಿಳಿಸಿದ್ದಾರೆ. 2019ರಲ್ಲಿ ನಡೆದ ಚುನಾವಣೆಯಲ್ಲಿ ಕಿಂಗ್ ಮೇಕರ್ ಆಗಿ ಹೊರಹೊಮ್ಮಿದ ಎನ್‌ಡಿಪಿ, ಜಸ್ಟಿನ್ ಟ್ರೂಡೋ ನೇತೃತ್ವದ ಲಿಬರಲ್ ಪಕ್ಷಕ್ಕೆ ಬೆಂಬಲ ನೀಡಿ ಅಧಿಕಾರಕ್ಕೆ ಬರಲು ಸಹಕರಿಸಿತ್ತು. ಖಲಿಸ್ತಾನಿ ಉಗ್ರ ನಿಜ್ಜರ್ ಹತ್ಯೆ ಪ್ರಕರಣದಲ್ಲಿ ಭಾರತದ ಪಾತ್ರವಿದೆ ಎಂದು ಆರೋಪಿಸುವ ಮೂಲಕ ಮೋದಿ ಸರಕಾರವನ್ನು ಟ್ರುಡೋ ಎದುರು ಹಾಕಿಕೊಂಡಿದ್ದರು.

ನೆಲಮಂಗಲ ಬಳಿ ಕಾರಿನ ಮೇಲೆ ಲಾರಿ ಪಲ್ಟಿ, 6 ಜನರ ಕುಟುಂಬ ದಾರುಣ ಅಂತ್ಯ

# ಪ್ರತ್ಯೇಕ ಅಪಘಾತ: 11 ಜನರ ದುರ್ಮರಣ

**ಬೆಂಗಳೂರು:** ವಾರಾಂತ್ಯದ ಪ್ರವಾಸಕ್ಕೆಂದು ಹೊರಟಿದ್ದ ಇಡೀ ಕುಟುಂಬ ದಾರುಣ ಅಂತ್ಯ ಕಂಡಿರುವ ಘಟನೆ ನೆಲಮಂಗಲ ಬಳಿ ಶನಿವಾರ ಬೆಳಗ್ಗೆ ನಡೆದಿದೆ. ಇದೇ ವೇಳೆ, ಮಂಡ್ಯ ಜಿಲ್ಲೆಯಲ್ಲಿ ನಡೆದ ಪ್ರತ್ಯೇಕ ಅಪಘಾತದಲ್ಲಿ ಐವರು ಸಾವಿಗೀಡಾಗಿದ್ದಾರೆ.

ನೆಲಮಂಗಲದ ಬೇಗೂರು ಬಳಿಯ ತಾಳೇಕೆರೆ ಗ್ರಾಮದ ರಾಷ್ಟ್ರೀಯ ಹೆದ್ದಾರಿ 4ರಲ್ಲಿ ಭೀಕರ ಸರಣಿ ಅಪಘಾತ ಸಂಭವಿಸಿ ಒಂದೇ ಕುಟುಂಬದ 6 ಮಂದಿ ಮೃತಪಟ್ಟಿದ್ದಾರೆ. ಚಾಲಕನ ನಿಯಂತ್ರಣ ತಪ್ಪಿ ಲಾರಿ ಕಾರಿನ ಮೇಲೆ ಪಲ್ಟಿಯಾಗಿ ಕಾರಿನಲ್ಲಿದ್ದ ಇಬ್ಬರು ಮಕ್ಕಳು ಸೇರಿದಂತೆ ಆರು ಮಂದಿ ಅಪ್ಪಚ್ಚಿಯಾಗಿದ್ದಾರೆ.

ಕಾರಿನ ಮೇಲೆ ಕಂಟೇನರ್ ಬಿದ್ದಿದ್ದರಿಂದ ಕಾರಿನಲ್ಲಿದ್ದ ಚಂದ್ರ ಯಾಗಪ್ಪಗೋಳ್ (48), ಗೌರಾಬಾಯಿ (42), ದೀಕ್ಷಾ (12), ಜಾನ್ (16), ವಿಜಯಲಕ್ಷ್ಮಿ (36), ಆರ್ಯ (6)) ಸಾವನ್ನಪ್ಪಿದ್ದಾರೆ. ಚಾಲಕನ ನಿಯಂತ್ರಣ ತಪ್ಪಿ ಲಾರಿ ಕಾರಿನ ಮೇಲೆ ಪಲ್ಟಿಯಾಗಿದೆ. ಇದರಿಂದ ಕಾರಿನಲ್ಲಿದ್ದ ಇಬ್ಬರು ಮಕ್ಕಳು ಸೇರಿದಂತೆ 6 ಜನರು ಸ್ಥಳದಲ್ಲೇ ಸಾವಿಗೀಡಾಗಿದ್ದಾರೆ. ಈ ಕುಟುಂಬ 6 ತಿಂಗಳ ಹಿಂದೆಯಷ್ಟೇ ಕಾರು ಖರೀದಿಸಿತ್ತು.

ನೆಲಮಂಗಲ ಬಳಿ ಚಾಲಕನ ನಿಯಂತ್ರಣ ತಪ್ಪಿ ಕಾರಿನ ಮೇಲೆ ಉರುಳಿದ ಬೃಹತ್ ಕಂಟೇನರ್ ಆರು ಜನರನ್ನು ಬಲಿತೆಗೆದುಕೊಂಡಿದೆ.

**ಲಾರಿ, ಕಾರು ನಡುವೆ ಡಿಕ್ಕಿ: ಮೂವರ ಸಾವು**
**ಮಳವಳ್ಳಿ:** ತಾಲೂಕಿನ ನಾಗೇಗೌಡನದೊಡ್ಡಿ ಗೇಟ್ ಬಳಿ ಶನಿವಾರ ಮಧ್ಯಾಹ್ನ ಕಾರಿಗೆ ಲಾರಿ ಡಿಕ್ಕಿಯಾಗಿ ಬೆಂಗಳೂರಿನ ಮೂವರು ಎಂಜಿನಿಯರಿಂಗ್ ವಿದ್ಯಾರ್ಥಿಗಳು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಬೆಂಗಳೂರಿನ ಬಿಐಟಿ ಕಾಲೇಜಿನ ನಾಲ್ಕನೇ ಸೆಮಿಸ್ಟರ್ ನ ವಿದ್ಯಾರ್ಥಿಗಳಾದ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ಮೂಲದ ಪ್ರಣವ್(22), ಆದರ್ಶ(23) ಹಾಗೂ ಆಕರ್ಷ(22) ಸಾವನ್ನಪ್ಪಿದ್ದು, ಗಾಯಗೊಂಡ ಹೃತಿಕ್ ಮಳವಳ್ಳಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ನಾಲ್ವರು ವಿದ್ಯಾರ್ಥಿಗಳು ಬೆಂಗಳೂರಿನಿಂದ ಕಾರಿನಲ್ಲಿ ತಲಕಾಡಿಗೆ ತೆರಳುತ್ತಿದ್ದ ವೇಳೆ ಈ ದುರಂತ ಸಂಭವಿಸಿದೆ.

**ತಿರುಪತಿಗೆ ಹೊರಟಿದ್ದವರು ಅಪಘಾತಕ್ಕೆ ಬಲಿ**
**ಪಾಂಡವಪುರ:** ತಿರುಪತಿಗೆ ಶನಿವಾರ ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದ ವೇಳೆ ಲಾರಿಯೊಂದು ಹಿಂಬದಿಯಿಂದ ಡಿಕ್ಕಿ ಹೊಡೆದ ಪರಿಣಾಮ ಮಹಿಳೆ, ಯುವತಿ ಮೃತಪಟ್ಟಿದ್ದು, ಮತ್ತೊಬ್ಬ ಮಹಿಳೆ ಗಂಭೀರ ಗಾಯಗೊಂಡಿದ್ದಾರೆ. ಮಹದೇಶ್ವರಪುರ ಬಳಿ ಶ್ರೀರಂಗಪಟ್ಟಣ-ಜೇವರ್ಗಿ ಹೆದಾರಿಯಲ್ಲಿ ನಡೆದಿದೆ.

ಉದ್ಯೋಗಿಗಳ ಪಿಎಫ್ ವಂಚನೆ

# ಉತ್ತಪ್ಪ ವಿರುದ್ಧ ಬಂಧನ ವಾರಂಟ್

**ಬೆಂಗಳೂರು:** ಉದ್ಯೋಗಿಗಳ ಪಿಎಫ್ ಹಣ ವಂಚಿಸಿದ ಆರೋಪದ ಮೇಲೆ ಮಾಜಿ ಕ್ರಿಕೆಟಿಗ ರಾಬಿನ್ ಉತ್ತಪ್ಪ ವಿರುದ್ಧ ಬಂಧನ ವಾರಂಟ್ ಜಾರಿಯಾಗಿದೆ. ಪುಲಕೇಶಿ ನಗರ ಠಾಣೆ ವ್ಯಾಪ್ತಿಯ ನಿವಾಸಿಯಾಗಿರುವ ರಾಬಿನ್ ಉತ್ತಪ್ಪ ಅವರನ್ನು ಬಂಧಿಸುವಂತೆ ಭವಿಷ್ಯ ನಿಧಿ ಮಂಡಳಿಯ ಪ್ರಾದೇಶಿಕ ಆಯುಕ್ತ ಷಡಾಕ್ಷರಿ ಗೋಪಾಲ ರೆಡ್ಡಿ ಎಂಬವರು ಪೊಲೀಸರಿಗೆ ಪತ್ರ ಬರೆದಿದ್ದಾರೆ.

ರಾಬಿನ್ ಉತ್ತಪ್ಪ ಅವರು ಸೆಂಚುರೀಸ್ ಲೈಫ್‌ಸ್ಟೈಲ್ ಬ್ರ್ಯಾಂಡ್ ಪ್ರೈವೇಟ್ ಲಿಮಿಟೆಡ್ ಎಂಬ ಕಂಪನಿಯ ಸಹ ಪಾಲುದಾರರಾಗಿದ್ದಾರೆ. ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಹಲವರ ಇಪಿಎಫ್ ಹಣ ಪಾವತಿಸಿಲ್ಲ. ಸಂಬಳದಲ್ಲಿ ಇಪಿಎಫ್ ಹಣ ಕಡಿತಗೊಳಿಸಿ, ಉದ್ಯೋಗಿಗಳ ಖಾತೆಗೆ ಹಾಕದೇ ವಂಚಿಸಿರುವ ಆರೋಪ ಕೇಳಿಬಂದಿದೆ.

## ಜಿಎಸ್‌ಟಿ ಸಭೆ: ವಿಮಾ ತೆರಿಗೆ ಕಡಿತ ಇಲ್ಲ

**ದೆಹಲಿ:** ಜೀವ ಮತ್ತು ಆರೋಗ್ಯ ವಿಮೆ ಮೇಲಿನ ತೆರಿಗೆ ಕಡಿತದ ನಿರೀಕ್ಷೆ ಸುಳ್ಳಾಗಿದೆ. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ನೇತೃತ್ವದಲ್ಲಿ ಶನಿವಾರ ಇಲ್ಲಿ ನಡೆದ 55ನೇ ಜಿಎಸ್‌ಟಿ ಕೌನ್ಸಿಲ್ ಸಭೆಯಲ್ಲಿ ಈ ಬಗ್ಗೆ ಹೆಚ್ಚಿನ ಚರ್ಚೆ ಮತ್ತು ಪರಿಶೀಲನೆಯ ಜವಾಬ್ದಾರಿಯನ್ನು ಜಿಒಎಂಗೆ ಹಸ್ತಾಂತರಿಸಲಾಯಿತು.

### ಫನ್‌ತರಂಗ
- ರಘುಪತಿ ಶೃಂಗೇರಿ -

ಪಾರ್ಲಿಮೆಂಟಲ್ಲಿ ಹಲವು ಸ್ಲೋಗನ್‌ಗಳ ಬ್ಯಾಗ್ ಪ್ರದರ್ಶಿಸಿದ ಸಂಸದರು
ಸುದ್ದಿ




ದಶಕದ ಬಳಿಕ ನನಸಾದ ಕಲ್ಯಾಣ ಜನರ ಕನಸು | ಎಐಸಿಸಿ ಅಧ್ಯಕ್ಷ ಖರ್ಗೆ, ಸಚಿವರು ಭಾಗಿ

# ಕಲಬುರಗಿ ಜಯದೇವ ಆಸ್ಪತ್ರೆ ಲೋಕಾರ್ಪಣೆ ಇಂದು

**ಕಲಬುರಗಿ:** ತೊಗರಿ ಕಣಜ, ಶರಣರ ನಾಡು ಎಂದೇ ಪ್ರಸಿದ್ಧಿ ಪಡೆದಿರುವ ಕಲಬುರಗಿಯಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆಯ ಸಹಯೋಗದಲ್ಲಿ 377 ಕೋಟಿ ರು.ವೆಚ್ಚದಲ್ಲಿ ನಿರ್ಮಾಣವಾಗಿರುವ ಜಯದೇವ ಹೃದ್ರೋಗ ವಿಜ್ಞಾನ ಹಾಗೂ ಸಂಶೋಧನಾ ಸಂಸ್ಥೆಯನ್ನು ಸಿಎಂ ಸಿದ್ದರಾಮಯ್ಯನವರು ಭಾನುವಾರ ಲೋಕಾರ್ಪಣೆ ಮಾಡಲಿದ್ದಾರೆ.

ದಶಕದ ಬಳಿಕ ಕಲ್ಯಾಣ ಕರ್ನಾಟಕ ಭಾಗದ ಜನ ಬಹುದಿನಗಳ ಬೇಡಿಕೆಯಾಗಿದ್ದ ಆಸ್ಪತ್ರೆಗೆ ಇದೀಗ ಉದ್ಘಾಟನೆ ಭಾಗ್ಯ ದೊರಕಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ, ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಂದ ಜನಾರ್ಪಣೆಗೊಂಡು ಸಾರ್ವಜನಿಕರ ಸೇವೆಗೆ ಅಣಿಯಾಗಲಿದೆ. ಉದ್ಘಾಟನಾ ಕಾರ್ಯಕ್ರಮಕ್ಕೆ ಡಿಸಿಎಂ ಡಿ.ಕೆ ಶಿವಕುಮಾರ್, ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಪಾಟೀಲ್, ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ, ಕೆಕೆಆರ್‌ಡಿಬಿ ಅಧ್ಯಕ್ಷ ಡಾ.ಅಜಯ್ ಸಿಂಗ್ ಸೇರಿ ಕಲ್ಯಾಣ ಕರ್ನಾಟಕದ ಎಲ್ಲ ಸಚಿವರು ಹಾಗೂ ಶಾಸಕರು ಪಾಲ್ಗೊಳ್ಳಲಿದ್ದಾರೆ.

**ಜಯದೇವ ಆಸ್ಪತ್ರೆ ಸ್ಥಾಪನೆಗೆ ಸಿಎಂ ಮುನ್ನುಡಿ:** 2013-18ರಲ್ಲಿ ಸಿದ್ದರಾಮಯ್ಯ ನೇತೃತ್ವದ ಆಡಳಿತಾವಧಿಯಲ್ಲಿ ಜಯದೇವ ಸಂಸ್ಥೆಯ ಸ್ಥಾಪನೆಗೆ ಮುನ್ನುಡಿ ಬರೆಯಲಾಗಿತ್ತು. ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ನೆರವಿನೊಂದಿಗೆ ಸತತ ಹತ್ತು ವರ್ಷಗಳ ಪ್ರಯತ್ನ ಮತ್ತು ಪರಿಶ್ರಮದಿಂದ ಆಸ್ಪತ್ರೆ ಕಾಮಗಾರಿ ಪೂರ್ಣಗೊಂಡು ಜನರ ಸೇವೆಗೆ ಸಿದ್ಧಗೊಂಡಿದೆ. ಇದರಿಂದ ಕಲ್ಯಾಣ ಕರ್ನಾಟಕ ಭಾಗದ ಕಲಬುರಗಿ, ಕೊಪ್ಪಳ, ಬೀದರ್, ಯಾದಗಿರಿ, ಬಳ್ಳಾರಿ ಮತ್ತು ರಾಯಚೂರು ಜಿಲ್ಲೆಗಳ ಜನರಿಗೆ ಸಾಕಷ್ಟು ಅನುಕೂಲವಾಗಲಿದೆ.
→ 9

ರಾಜ್ಯದ 3ನೇ ಹೃದ್ರೋಗ ಆಸ್ಪತ್ರೆ ಆರಂಭಕ್ಕೆ ಕ್ಷಣಗಣನೆ.

| | | | | |
|---|---|---|---|---|
| 262.20 ಕೋಟಿ ರು.ವೆಚ್ಚ | 371 ಹಾಸಿಗೆ ಸಾಮರ್ಥ್ಯ | 3 ಕ್ಯಾಥ್ ಲ್ಯಾಬ್‌ಗಳು | 3 ಆಪರೇಷನ್ ಥಿಯೇಟರ್ಸ್ | • 1 ಹೈಬ್ರಿಡ್ OT • 105 ICCU ಹಾಸಿಗೆಗಳು • 120 ಸಾಮಾನ್ಯ ವಾರ್ಡ್ |

- ಅರೆ-ವಿಶೇಷ, ವಿಶೇಷ ಮತ್ತು ಡೀಲಕ್ಸ್ ವಾರ್ಡ್ ಹಾಸಿಗೆಗಳು, 12 ರಿಕವರಿ ಮತ್ತು 12 ಪೋಸ್ಟ್ ಆಪರೇಟಿವ್ ಹಾಸಿಗೆಗಳು
- ಕಾರ್ಡಿಯಾಲಜಿ, ಕಾರ್ಡಿಯೋಥೊರಾಸಿಕ್ ಸರ್ಜರಿ, ವ್ಯಾಸ್ಕುಲಾರ್ ಶಸ್ತ್ರಚಿಕಿತ್ಸೆ, ಪೀಡಿಯಾಟ್ರಿಕ್ ಕಾರ್ಡಿಯಾಲಜಿ, ರೇಡಿಯಾಲಜಿ, 128 ಸ್ಲೈಸ್ CT ಸ್ಕ್ಯಾನ್, 1.5 CT MRI, ಅಲ್ಟ್ರಾಸೋನೋಗ್ರಫಿ, ಹೈಟೆಕ್ ಪ್ಯಾಥಾಲಜಿ ಮತ್ತು ರಕ್ತಬ್ಯಾಂಕ್ ಸೇವೆ.

**ಹೈ.ಕ. ವಿಶೇಷ ಪ್ರಾತಿನಿಧ್ಯದ ಹಿನ್ನೆಲೆ**
ಹೈದರಾಬಾದ್-ಕರ್ನಾಟಕ ವಿಶೇಷ 371(ಜೆ) ಕಾಯಿದೆಯ ಪ್ರಾತಿನಿಧ್ಯ ದೊರಕಿ, ದಶಕ ಪೂರೈಸಿದ ನೆನಪಿಗಾಗಿ 371 ಹಾಸಿಗೆಗಳ ಸಾಮರ್ಥ್ಯ ಜಯದೇವ ಆಸ್ಪತ್ರೆಯನ್ನು ನಿರ್ಮಿಸಲಾಗಿದೆ. ಆಸ್ಪತ್ರೆಯು ಅತ್ಯಾಧುನಿಕ ಹಾಗೂ ಗುಣಮಟ್ಟದ ಸೌಲಭ್ಯಗಳನ್ನು ಒಳಗೊಂಡಿದೆ.

ಕರ್ನಾಟಕ ಸೇರಿ ಹಲವು ರಾಜ್ಯಗಳಲ್ಲಿ ಕುಸಿತ

# ದೇಶದಲ್ಲಿ ಹೆಚ್ಚುತ್ತಿದೆ ಅರಣ್ಯಪ್ರದೇಶ

**ದೆಹಲಿ:** ದೇಶದಲ್ಲಿ ಈ ಮೊದಲು ಶೇ.24.62ರಷ್ಟಿದ್ದ ಒಟ್ಟಾರೆ ಅರಣ್ಯ ಪ್ರದೇಶ ಮತ್ತು ಮರಗಳ ವ್ಯಾಪ್ತಿ 2023ರ ವೇಳೆಗೆ 0.55ರಷ್ಟು ಹೆಚ್ಚಳ ಕಂಡು ಶೇ.25.17ಕ್ಕೆ ಮುಟ್ಟಿದೆ ಎಂದು ಇತ್ತೀಚೆಗೆ ಪ್ರಕಟವಾದ ಇಂಡಿಯಾ ಸ್ಟೇಟ್ ಆಫ್ ಫಾರೆಸ್ಟ್ ರಿಪೋರ್ಟ್-2023(ಐಎಸ್‌ಎಫ್‌ಆರ್)ರಲ್ಲಿ ಹೇಳಲಾಗಿದೆ. ಅಚ್ಚರಿಯ ಸಂಗತಿಯೆಂದರೆ ಅರಣ್ಯ ಪ್ರದೇಶ ಕಡಿಮೆ ಇರುವ ಸಾಲಿಗೆ ಕರ್ನಾಟಕವೂ ಸೇರಿಕೊಂಡಿದೆ.

ದೇಶದ ಒಟ್ಟು ಅರಣ್ಯ ಪ್ರದೇಶ 7.15 ಲಕ್ಷ ಚದರ ಕಿ.ಮೀ.ಗಳಷ್ಟು ವಿಸ್ತಾರವಾಗಿದೆ. ದೇಶದ ಭೌಗೋಳಿಕ ಪ್ರದೇಶದ ಶೇ. 21.76 ರಷ್ಟಿದೆ. ಮರಗಳು ಭೌಗೋಳಿಕ ಪ್ರದೇಶದ ಶೇ.3.41 ರಷ್ಟರಲ್ಲಿವೆ. ಇವೆರಡನ್ನೂ ಸೇರಿಸಿದರೆ ಒಟ್ಟಾರೆ ಅರಣ್ಯ ಪ್ರದೇಶದ ವ್ಯಾಪ್ತಿ 8.27 ಲಕ್ಷ ಚದರ ಕಿ.ಮೀ.ಗಳಷ್ಟಾಗುತ್ತದೆ. ಅದಲ್ಲದೇ ಕುರುಚಲು ಅರಣ್ಯ ಪ್ರದೇಶ 43,622 ಚದರ ಕಿಮೀ (ಶೇ.1.33) ಮತ್ತು ಅರಣ್ಯೇತರ ಪ್ರದೇಶ 24.16 ಲಕ್ಷ ಚದರ ಕಿಮೀ (ಶೇ.73.50) ರಷ್ಟು ವಿಸ್ತಾರವಾಗಿದೆ. ಕೃಷಿ ಅರಣ್ಯ ಯೋಜನೆಯಡಿ ಬೆಳೆಸಿದ ಮರಗಳನ್ನೂ ಅರಣ್ಯ ವ್ಯಾಪ್ತಿಗೆ ತರಲಾಗಿದೆ.

ಅರಣ್ಯ ಮತ್ತು ಮರಗಳ ವ್ಯಾಪ್ತಿ ಛತ್ತೀಸ್‌ಗಢ, ಉತ್ತರ ಪ್ರದೇಶ, ಒಡಿಶಾ, ರಾಜಸ್ಥಾನ ಮತ್ತು ಜಾರ್ಖಂಡ್ ರಾಜ್ಯಗಳಲ್ಲಿ ಹೆಚ್ಚಾಗಿದೆ. ಆದರೆ ಮಧ್ಯಪ್ರದೇಶ, ಕರ್ನಾಟಕ, ನಾಗಾಲ್ಯಾಂಡ್, ಬಿಹಾರ ಮತ್ತು ತ್ರಿಪುರಾದಲ್ಲಿ ಅರಣ್ಯ ಮತ್ತು ಮರಗಳ ವ್ಯಾಪ್ತಿ ಬಹಳ ಕಡಿಮೆ ಇದೆ ಎಂದು ವರದಿ ತಿಳಿಸಿದೆ.

## ಸಮ್ಮೇಳನ ಸ್ವಾರಸ್ಯ

### ಸಮಾನಾಂತರ ವೇದಿಕೆಯೂ ಕಬ್ಬಿನ ಗದ್ದೆಯೂ!

ಸಮಾನಾಂತರ ವೇದಿಕೆಗಳು ಇನ್ನೊಂದು ಬಿಕ್ಕಟ್ಟಿಗೂ ಎದುರಿಸಿದವು. ಸಮಾನಾಂತರ ವೇದಿಕೆಗಳ ಪಕ್ಕದಲ್ಲೇ ಕಬ್ಬಿನ ಗದ್ದೆಗಳಿದ್ದವು. ಸಮ್ಮೇಳನದ ಶೌಚಾಲಯದ ಅವ್ಯವಸ್ಥೆಯಿಂದ ರೋಸಿಹೋದ ಜನ ಗುಂಪುಗುಂಪಾಗಿ ನಿಸರ್ಗದ ಕರೆಗೆ ಓಗೊಡಲು ಕಬ್ಬಿನ ಗದ್ದೆಗೆ ನುಗ್ಗುತ್ತಿದ್ದರು. ಹೀಗೆ ಹೋಗುವಾಗ ಸಮಾನಾಂತರ ವೇದಿಕೆಗಳ ವೇದಿಕೆ ಹಾಗೂ ಪ್ರೇಕ್ಷಕರ ಗ್ಯಾಲರಿಯ ನಡುವೆಯೇ ಅವಸರವಸರದಿಂದ ನುಗ್ಗುತ್ತಿದ್ದರು. ಸಭಾಂಗಣದ ಪಕ್ಕದಲ್ಲೇ ಬೆನ್ನು ತಿರುಗಿಸಿ ನಿಲ್ಲುತ್ತಿದ್ದರು. ಹೀಗಾಗಿ ಸಮಾನಾಂತರ ಗೋಷ್ಠಿಗಳ ಪ್ರೇಕ್ಷಕರು ಈ ಮನೋಹರ ದೃಶ್ಯಗಳಿಗೂ ಸಾಕ್ಷಿ ಆಗಬೇಕಾಯಿತು. ವೇದಿಕೆ ತೀರಾ ಕಬ್ಬಿನ ಗದ್ದೆಯ ಪಕ್ಕದಲ್ಲೇ ಇದ್ದುದರಿಂದ ಕಬ್ಬಿನ ಪರಿಮಳದ ಜೊತೆಗೆ ಇತರ ಪರಿಮಳವನ್ನೂ ಸಂಪನ್ಮೂಲ ವ್ಯಕ್ತಿಗಳು ಅನುಭವಿಸುವಂತಾಯಿತು.

### ಗೋಷ್ಠಿ ನಡುವೆ ಕೆಲವರಿಂದ ಪ್ರತಿಭಟನೆ

ಇತ್ತೀಚಿನ ದಿನಗಳಲ್ಲಿ ಹಿಂದಿ ಭಾಷೆ ಕನ್ನಡ ಮೇಲೆ ಸವಾರಿ ಮಾಡುತ್ತಿದೆ. ಪರಿಣಾಮ, ಕನ್ನಡ ಭಾಷೆಯ ಕಡೆಗಣನೆ ಹೆಚ್ಚಾಗುತ್ತಿದೆ. ಈ ಸಾಹಿತ್ಯ ಸಮ್ಮೇಳನದಲ್ಲಿ ಈ ಕುರಿತು ಖಡಕ್ ನಿರ್ಧಾರ ತಳೆಯಲೇಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು. ಈ ವೇಳೆ ಮಧ್ಯೆ ಪ್ರವೇಶಿಸಿದ ವೇದಿಕೆಯ ನಿರ್ವಹಣಾಕಾರರು ಎಲ್ಲರನ್ನೂ ಸಮಾಧಾನಗೊಳಿಸಿ ಗೋಷ್ಠಿ ಮುಂದುವರಿಯಲು ಅನುವು ಮಾಡಿಕೊಟ್ಟರು.

## ಫೋಟೋ ಗ್ಯಾಲರಿ

ಹುಬ್ಬಳ್ಳಿ ಮೂಲದ ಲೇಖಕಿ ಶೋಭಾ ಅವರು ಕನ್ನಡದ ಮೇಲಿನ ತಮ್ಮ ಅಭಿಮಾನವನ್ನು ಮಂಡ್ಯದಲ್ಲಿ ನಡೆಯುತ್ತಿರುವ ಸಾಹಿತ್ಯ ಸಮ್ಮೇಳನದಲ್ಲಿ ವ್ಯಕ್ತಪಡಿಸಿದ ಪರಿ ಹೀಗಿತ್ತು.

## ಕಂಡಿದ್ದು, ಕೇಳಿದ್ದು



ಶುಕ್ರವಾರ ಬೆಳಗ್ಗೆಯಿಂದ ಇಲ್ಲಿವರೆಗೂ ಬುಕ್ ಸ್ಟಾಲ್‌ನಲ್ಲಿದ್ದೇನೆ. ಸಾವಿರಾರು ಜನರು ನೂಕು ನುಗ್ಗಲಿನಲ್ಲಿ ಮಳಿಗೆಗಳಿಗೆ ಬಂದು ಹೋಗುತ್ತಿದ್ದಾರೆ. ಎರಡು ನಿಮಿಷ ಪುಸ್ತಕಗಳನ್ನು ನೋಡುತ್ತಾರೆ. ಸುಮ್ಮನೆ ಪುಟ ತಿರುವಿ ಹೋಗುತ್ತಿದ್ದಾರೆ. ಅವರಿಗೆ ಜಾತ್ರೆಗೆ ಬಂದ ಹಾಗೆ ಆಗಿದೆ ಅಷ್ಟೇ. ಸಾಹಿತ್ಯದ ಮೇಲಿನ ಆಸಕ್ತಿಯಿಂದ ಯಾರೂ ಪುಸ್ತಕ ಖರೀದಿ ಮಾಡುತ್ತಿಲ್ಲ. ಖರೀದಿ ಮಾಡುವವರಿಗಿಂತ ನೋಡುವವರೇ ಹೆಚ್ಚು. ತುಂಬಾ ನಿರೀಕ್ಷೆ ಇಟ್ಟುಕೊಂಡಿದ್ದೆವು. ಆದರೆ ನಿರೀಕ್ಷೆ ಹುಸಿಯಾಗಿದೆ.

**-ಮಂಜುನಾಥ್ ಕುಣಿಗಲ್**, ಲೇಖಕರು

ಸಮ್ಮೇಳನ ಬಹಳ ಅದ್ದೂರಿಯಾಗಿ ನಡೆದಿದೆ ಅದರಲ್ಲಿ ಎರಡು ಮಾತಿಲ್ಲ. ಆದರೆ, ಇಲ್ಲಿ ಚರ್ಚಿತ ವಿಚಾರ ಅನುಷ್ಠಾನಕ್ಕೆ ಬರಬೇಕು. ಈ ಹಿಂದಿನ ಸಮ್ಮೇಳನಗಳಲ್ಲಿ ತೆಗೆದುಕೊಂಡ ಬಹುತೇಕ ನಿರ್ಣಯಗಳು ಇಂದಿಗೂ ಅನುಷ್ಠಾನಕ್ಕೆ ಬಾರದಿರುವುದು ಸರಿಯಲ್ಲ. ಏಕೆಂದರೆ, ಲಕ್ಷಾಂತರ ಜನರ ಸಮ್ಮುಖದಲ್ಲಿ ಈ ನಿರ್ಣಯ ಆಗಿರಲಿದೆ. ಅಂದರೆ, ಅದು ಜನೋಪಯೋಗಿ ನಿರ್ಧಾರವೇ ಸರಿ. ಅದನ್ನು ಸರಕಾರ ಜಾರಿ ಮಾಡಬೇಕು.

**-ಪ್ರೊ.ಚಿದಾನಂದಗೌಡ**, ವಿಶ್ರಾಂತ ಕುಲಪತಿ

ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿ ಬಹಳ ಸಂತೋಷವಾಯಿತು. ಇದು ನಿಜವಾದ ಕನ್ನಡದ ಹಬ್ಬ. ಸಾವಿರಾರು ಕನ್ನಡಿಗರನ್ನು ಒಂದೇ ಜಾಗದಲ್ಲಿ ನೋಡುವ ಸೌಭಾಗ್ಯ ನನ್ನದಾಯಿತು. ಆದರೆ ಕನ್ನಡ ಮೂರು ದಿನದ ಸಮ್ಮೇಳನಕ್ಕೆ ಅಷ್ಟೇ ಸೀಮಿತವಾಗಬಾರದು. ಮುಂದಿನ ಪೀಳಿಗೆಯ ಮಕ್ಕಳಿಗೆ ಕನ್ನಡ ಮಹತ್ವದ ಬಗ್ಗೆ ತಿಳಿಸುವ ಜವಾಬ್ದಾರಿ ನಮ್ಮ ಮೇಲಿದೆ. ಇಂಗ್ಲಿಷ್ ಭಾಷೆಯ ಮೇಲಿನ ಹುಸಿ ವ್ಯಾಮೋಹ ಬಿಟ್ಟು ಕನ್ನಡ ಪುಸ್ತಕ ಓದುವ ಸಂಸ್ಕೃತಿಯನ್ನು ಎಲ್ಲರೂ ಬೆಳೆಸಿಕೊಳ್ಳಬೇಕು.

**-ಸೈಯದ್ ಇಸಾಖ್**, ಗ್ರಂಥಪಾಲಕರು

### ಮಾತು-ಮಂಥನ ಸಂವಾದದಲ್ಲಿ ಸಮ್ಮೇಳನಾಧ್ಯಕ್ಷ ಗೊರು ಚನ್ನಬಸಪ್ಪ ಅಭಿಪ್ರಾಯ

# ಕನ್ನಡ ಉಳಿಯಬೇಕಾದರೆ ಮಾತೃಭಾಷೆ ಪ್ರಜ್ಞೆ ಮುಖ್ಯ

**ಮಂಡ್ಯ:** ಈ ದೇಶದಲ್ಲಿ ತ್ರಿಭಾಷಾ ಸೂತ್ರ ಸಲ್ಲದು. ತ್ರಿಭಾಷಾ ಸೂತ್ರ ಹೇರುವುದನ್ನು ನಾನು ಖಂಡಿಸುತ್ತೇನೆ. ಮನುಷ್ಯ ಆಸಕ್ತಿಯಿಂದ ಎಷ್ಟು ಭಾಷೆಗಳನ್ನು ಬೇಕಾದರೂ ಕಲಿಯಲಿ. ಆದರೆ ಮಾತೃಭಾಷೆ ಮಕ್ಕಳ ಪ್ರಾಥಮಿಕ ಸಂವಹನವಾಗಬೇಕು. ಕನ್ನಡ ಉಳಿಯಬೇಕಾದರೆ ಮಾತೃ ಭಾಷೆ ಪ್ರಜ್ಞೆ ಮುಖ್ಯ ಎಂದು 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರಾದ ಗೊರು ಚನ್ನಬಸಪ್ಪ ಅಭಿಪ್ರಾಯಪಟ್ಟರು. ಸಮ್ಮೇಳನದ ಎರಡನೆಯ ದಿನವಾದ ಶನಿವಾರ 'ಸಮ್ಮೇಳನಾಧ್ಯಕ್ಷರೊಂದಿಗೆ ಸಂವಾದ' ಗೋಷ್ಠಿ ಯಲ್ಲಿ ಸುರೇಶ್ ಗುಪ್ತಾ ಅವರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

- **ಭಾರತದ ಸಂಸ್ಕೃತಿ ಉಳಿಸುವುದು ಯುವಕರ ಕರ್ತವ್ಯ**

ಸಂವಾದಕರಾದ ಡಾ. ಬಸವರಾಜ್ ನೆಲ್ಲೀಪುರ ಅವರು ಬಹು ಭಾಷಾ ಸಂಸ್ಕೃತಿಯ ಬಗ್ಗೆ ಸಮ್ಮೇಳನಾಧ್ಯಕ್ಷರಲ್ಲಿ ಪ್ರಶ್ನೆ ಕೇಳಿದರು. ಅವರ ಪ್ರಶ್ನೆಗೆ ಗೊರುಚ ಅವರು ಮಾತನಾಡಿ, ಭಾರತ ಬಹು ಸಂಸ್ಕೃತಿ, ಬಹು ಭಾಷೆ ಮತ್ತು ಬಹು ಪದ್ಧತಿಗಳ ದೇಶ. ಇದೆ ಲ್ಲವನ್ನೂ ಉಳಿಸು ವುದು ಈ ತಲೆಮಾರಿನ ಯುವ ಕರ ಕರ್ತವ್ಯ ವಾಗಿದೆ. ಈ ದೇಶದ ಸತ್ವ ಮತ್ತು ಸೊಗಡು ಹಾಳಾಗಲಿಕ್ಕೆ ಬಿಡಬಾರದು ಎಂದರು.

- **ಅಕಾಡೆಮಿ, ಪ್ರಾಧಿಕಾರ ಕಚೇರಿಗಳು ಆಯಾ ಜಿಲ್ಲೆಯಲ್ಲಿರಬೇಕು**

- ಪ್ರಾಧಿಕಾರ ಮತ್ತು ಇನ್ನಿತರ ನಿರ್ದೇಶನಾಲಯ ಕಚೇರಿಗಳು ಬೆಂಗಳೂರಿಗೆ ಮಾತ್ರ ಯಾಕೆ? ಎಂದು ಕೇಳಿದಾಗ, ನಾನು ಈ ವಿಷಯವನ್ನು ಸರಕಾರದ ಮುಂದೆ ಸಾಕಷ್ಟು ಬಾರಿ ಪ್ರಸ್ತಾಪಿಸಿದ್ದೇನೆ. ಅಕಾಡೆಮಿ, ಪ್ರಾಧಿಕಾರ ಕಚೇರಿಗಳು ಆಯಾ ಜಿಲ್ಲೆಯಲ್ಲಿರಬೇಕು. ಆಗ ಅನುಕೂಲವಾಗುತ್ತದೆ. ಎಲ್ಲದಕ್ಕೂ ಬೆಂಗಳೂರಿಗೆ ಬರುವುದು ತಪ್ಪುತ್ತದೆ. ಇದನ್ನು ಸರಕಾರ ಯಾವಾಗ ಜಾರಿಗೆ ತರುತ್ತದೆಯೋ ಗೊತ್ತಿಲ್ಲ ಎಂದರು.

- **ವಿಶ್ವವಿದ್ಯಾನಿಲಯಗಳಲ್ಲಿ ವಚನ ಸಾಹಿತ್ಯ ಪ್ರತ್ಯೇಕ ಪಠ್ಯವಾಗಲಿ**

ವಚನ ಸಾಹಿತ್ಯವು ಲೋಕದ ಸೋಜಿಗದ ಸಾಹಿತ್ಯ. ಅದು ಹನ್ನೆರಡನೆಯ ಶತಮಾನದ ವ್ಯವಸ್ಥೆಯ ವಿರುದ್ಧದ ಪ್ರತಿಭಟನೆ. ಅದರಲ್ಲಿ ವೈಚಾರಿಕತೆ ಇದೆ. ಮೌಲ್ಯವಿದೆ. ಈಗಾಗಲೇ ವಚನಗಳು ಪ್ರಪಂಚದ 22-23 ಭಾಷೆಗಳಿಗೆ ಅನುವಾದವಾಗಿವೆ. ಮತ್ತಷ್ಟು ಕೆಲಸವಾಗಬೇಕು. ವಿಶ್ವವಿದ್ಯಾನಿಲಯಗಳಲ್ಲಿ ವಚನ ಸಾಹಿತ್ಯ ಪ್ರತ್ಯೇಕ ಪಠ್ಯವಾಗಬೇಕು. ಪಿ ನಾಗರಾಜ್ ಅವರು ಕೇಳಿದ ವಚನ ಸಾಹಿತ್ಯದ ಕುರಿತಾದ ಪ್ರಶ್ನೆಗೆ ಗೊರುಚ ಉತ್ತರಿಸಿದರು.

ಸಂವಾದ ಗೋಷ್ಠಿಗೂ ಮುನ್ನ ಗೊರುಚ ಅವರ ಕುರಿತಾದ ಸಾಕ್ಷ್ಯ ಚಿತ್ರವನ್ನು ವೇದಿಕೆಯಲ್ಲಿ ಬಿಡುಗಡೆಗೊಳಿಸಲಾಯಿತು.

- **ಜಾನಪದ ಸಂಸ್ಕೃತಿ ಸಂರಕ್ಷಣೆ ಆಗಬೇಕು**

ಎಂ.ವೈ. ಶಿವರಾಂ ಅವರು ಜಾನಪದ ಸಂಸ್ಕೃತಿಯ ಮರು ಸ್ಥಾಪನೆ ಹೇಗೆ? ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಜಾನಪದ ಸಂಸ್ಕೃತಿ ಮರು ಸ್ಥಾಪನೆಯ ಅಗತ್ಯವಿಲ್ಲ. ಅದು ಆಗುವುದೂ ಇಲ್ಲ. ಜಾನಪದ ಸಂಸ್ಕೃತಿ ಸಂರಕ್ಷಣೆ ಆಗಬೇಕು. ಜಾನಪದ ಒಂದು ಜೀವನ ಸಂಸ್ಕೃತಿ ಎಂದು ಗೊರುಚ ಹೇಳಿದರು. ಈ ಮಧ್ಯೆ ಜಾನಪದ ಪರಿಷತ್, ಜಾನಪದ ಅಕಾಡೆಮಿ ಮತ್ತು ವಿಶ್ವವಿದ್ಯಾಲಯಗಳಿಂದ ತುರ್ತಾಗಿ ಆಗಬೇಕಾದ ಕೆಲಸಗಳ ಬಗ್ಗೆ ಪ್ರಸ್ತಾಪ ಮಾಡಿದರು.




ಕನ್ನಡ ಸಾಹಿತ್ಯ ಸಮ್ಮೇಳನದ ಎರಡನೆಯ ದಿನವಾದ ಶನಿವಾರ ಮಾತು-ಮಂಥನ ಸಂವಾದದಲ್ಲಿ ಸಮ್ಮೇಳನಾಧ್ಯಕ್ಷ ಗೊರು ಚನ್ನಬಸಪ್ಪ ಮಾತನಾಡಿದರು.

ಸಂವಾದ ಗೋಷ್ಠಿಗೂ ಮುನ್ನ ಗೊರುಚ ಅವರ ಕುರಿತಾದ ಸಾಕ್ಷ್ಯ ಚಿತ್ರವನ್ನು ವೇದಿಕೆಯಲ್ಲಿ ಬಿಡುಗಡೆಗೊಳಿಸಲಾಯಿತು.

- **ಸಮ್ಮೇಳನಾಧ್ಯಕ್ಷರೊಂದಿಗಿನ ಸಂವಾದದಲ್ಲೂ ಎಡವಟ್ಟು**

ಸಮ್ಮೇಳನಾಧ್ಯಕ್ಷರ ಜೊತೆಗಿನ ಸಂವಾದಕ್ಕೆ ಅದರದ್ದೇ ಆದ ಮಹತ್ವವಿದೆ. ಅದು ಈ ಹಿಂದಿನಿಂದಲೂ ನಡೆದುಕೊಂಡು ಬಂದ ಸಂಪ್ರದಾಯ. ಸಂವಾದದಲ್ಲಿ ಚರ್ಚೆಯಾಗುವ ವಿಷಯಗಳು ದಾಖಲಾಗುತ್ತವೆ ಕೂಡ. ಆದರೆ ಈ ಬಾರಿಯ ಸಂವಾದವನ್ನು ತೀರಾ ಅವಸರವಾಗಿ ಮುಗಿಸಿದರು. ಗೋಷ್ಠಿ ಸರಿಯಾದ ಸಮಯಕ್ಕೆ ಪ್ರಾರಂಭವಾಗದ ಕಾರಣ ಮೂರ್ನಾಲ್ಕು ಪ್ರಶ್ನೆಗಳಿಗಷ್ಟೇ ಗೊರುಚ ಉತ್ತರಿಸಿದರು. ಸಂವಾದಕರು ಕೂಡ ನೇರವಾಗಿ ಪ್ರಶ್ನೆ ಕೇಳದೆ ಉದ್ದುದ್ದ ಭಾಷಣ ಮಾಡಿದರು. ಹಾಗಾಗಿ ಸಂವಾದದಲ್ಲಿ ಭಾಗವಹಿಸಿದ್ದ ಇತರ ನಾಲ್ವರು ಸಂವಾದಕರಿಗೆ ಪ್ರಶ್ನೆ ಕೇಳುವ ಅವಕಾಶವೇ ದೊರೆಯಲಿಲ್ಲ. ಅವರಿಗೆ ಲಿಖಿತ ರೂಪದಲ್ಲಿ ಉತ್ತರ ಕೊಡಲು ರಾಜ್ಯಾಧ್ಯಕ್ಷರಾದ ಮಹೇಶ್ ಜೋಶಿ ಗೊರುಚ ಅವರಿಗೆ ಸೂಚಿಸಿದರು. ಭಾಗವಹಿಸಿದ್ದ ಸಂವಾದಕರು ಪೆಚ್ಚು ಮೋರೆಯೊಂದಿಗೆ ವೇದಿಕೆಯಿಂದ ಕೆಳಗಿಳಿದರು.

- **ಸಾವಿನ ಬಗ್ಗೆ ನನಗೆ ಚಿಂತೆಯಿಲ್ಲ**

ನಿಮ್ಮ ಆರೋಗ್ಯದ ಗುಟ್ಟೇನು? ಎಂದು ಸಂವಾದಕರೊಬ್ಬರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ನಾನು ಮಿತಾಹಾರಿ ಇದೇ ನನ್ನ ಆರೋಗ್ಯದ ಗುಟ್ಟು. ನನಗೆ ಸಾವಿನ ಬಗ್ಗೆ ಚಿಂತೆಯಿಲ್ಲ ಹಾಗಾಗಿ ಆರೋಗ್ಯವಾಗಿದ್ದೇನೆ. ಜೋತಿಷಿಯೊಬ್ಬರು ನೀವು ನೂರು ವರ್ಷ ಬದುಕುತ್ತೀರಿ ಎಂದಿದ್ದಾರೆ. ಅವರ ಮಾತನ್ನು ನಿಜ ಮಾಡಲು ದಿನಗಳನ್ನು ದೂಡುತ್ತಿದ್ದೇನೆ ಎನ್ನುತ್ತಾ ಗೊರುಚ ಮುಗುಳ್ನಕ್ಕರು. ಸಂವಾದದಲ್ಲಿ ಅನಸೂಯ, ಶಾಂತಲಾ ಧರ್ಮರಾಜ್, ಮಾರುತಿ ಶಿಡ್ಲಾಪುರ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

## ಜನಸಾಗರ, ಎಲ್ಲವೂ ಸರಾಗ

**ಮಂಡ್ಯ:** ಹರಿದು ಬಂದ ಜನಸಾಗರ, ಎಲ್ಲೆ ಕಣ್ಣಾಡಿಸಿ ದರೂ ಕನ್ನಡದ ಕಂಪು, ನಮ್ಮೂರಲ್ಲಿ ಮಸ್ತ್ ಮಸ್ತ್ ಆಯ್ತು ಎನ್ನುವ ಜವಾರಿ ಮಾತು, ಮನಸೂರೆ ಗೊಂಡ ಸಾಂಸ್ಕೃತಿಕ ಕಾರ್ಯಕ್ರಮಗಳು ಇವು ಎರಡನೇ ದಿನ ಶನಿವಾರದ ಅಕ್ಷರ ಜಾತ್ರೆಯ ಝಲಕ್‌ಗಳು. ಶ್ರೀಮಂತ ಕಲೆ, ಸಕ್ಕರೆಯ ನಾಡು ಎಂದು ಪ್ರಖ್ಯಾತಿ ಪಡೆದಿರುವ ಮಂಡ್ಯ ಜಿಲ್ಲೆಯಲ್ಲಿ ಕಳೆದ ಎರಡು ದಿನಗಳಿಂದ ಸಾಹಿತ್ಯ ಸಮ್ಮೇಳನ ಧೂಳು ಎಬ್ಬಿಸಿದೆ. ಜಾತ್ರೆಗೆ ಬಂದವರು ಭಾಷಾಭಿ ಮಾನವು ಮೆರೆಯುತ್ತಿರುವುದು ಸಾಮಾನ್ಯವಾಗಿದೆ. ನಮ್ಮೂರಲ್ಲಿ ಇತಿಹಾಸ ಬರೆದ ಈ ಅಕ್ಷರ ಜಾತ್ರೆ ಮಸ್ತ್ ಆಯ್ತು ಎಂಬ ಮಾತುಗಳನ್ನಾಡಿಕೊಳ್ಳುತ್ತಿದ್ದರು. ನೂರಾರು ಎಕರೆ ಜಮೀನಿನಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಕಾಣಿಸಿಕೊಳ್ಳುವ ಜನಸ್ತೋಮ, ಬೃಹತ್ ವೇದಿಕೆಯ ದೃಶ್ಯ ಅದ್ದೂರಿ ಜಾತ್ರೆಗೆ ಮೆರಗು ನೀಡಿದ್ದು ವಿಶೇಷ. ಸಮ್ಮೇಳನದ ಮೂರು ವೇದಿಕೆಗಳಲ್ಲಿ ಮೊದಲ ದಿನದ ಸಾಂಸ್ಕೃತಿಕ ಕಾರ್ಯ ಕ್ರಮಗಳು, ಸಮ್ಮೇಳನದ ಉದ್ಘಾಟನೆ, ಗೋಷ್ಠಿ ಗಳು ಕರ್ನಾಟಕದ ಸಾಂಸ್ಕೃತಿಕ ಬಹುತ್ವದ ನೆಲೆಗಳನ್ನು ಪ್ರತಿಬಿಂಬಿ ಸುವಂತಾಯಿತು. ಎರಡನೇ ದಿನವಾದ ಶನಿ ವಾರವೂ ಜನಸಾಗರವೇ ಹರಿದು ಬಂತು. ಸಾಹಿತ್ಯಾಭಿಮಾನಿಗಳಿಗೆ ಊಟೋಪಚಾರ ಅಚ್ಚುಕಟ್ಟಾಗಿ ನಡೆಯಿತು.

### ಕುಟುಂಬ ಸಮೇತ ಆಗಮನ

ಎರಡನೇ ದಿನ ಸಮ್ಮೇಳನಕ್ಕೆ ಕಳೆಕಟ್ಟಿಕೊಟ್ಟಿದ್ದು ವಿದ್ಯಾರ್ಥಿಗಳು. ಮಂಡ್ಯದ ಮೂಲೆಮೂಲೆಯಿಂದ ಜನ ಆಗಮಿಸಿದ್ದರು. ಮಕ್ಕಳಿಗೆ ವೀಕೆಂಡ್ ಆದ್ದರಿಂದ ಕುಟುಂಬ ಸಮೇತ ಸಮ್ಮೇಳನಕ್ಕೆ ಆಗಮಿಸಿದ್ದರು. ಬಹುತೇಕರು ಇದೇ ಮೊದಲ ಬಾರಿಗೆ ಸಮ್ಮೇಳನದಲ್ಲಿ ಭಾಗವಹಿಸಿದವರಾಗಿದ್ದರು. ಕೆಲವರು ಅತಿಥಿಗಳ ಜತೆ ನಿಂತು ಫೋಟೊ ಕ್ಲಿಕ್ಕಿಸಿಕೊಂಡು ಖುಷಿಪಟ್ಟರು.

## ಮಳೆ ತಂದ ಫಜೀತಿ

ಸಾಹಿತ್ಯ ಸಮ್ಮೇಳನದಲ್ಲಿ ಸಂಜೆ ಸುರಿದ ಮಳೆಯಿಂದಾಗಿ ನೆರೆದಿದ್ದ ಜನಸ್ತೋಮ ತೊಂದರೆ ಅನುಭವಿಸುವಂತಾಯಿತು. ಇದಲ್ಲದೆ ಪುಸ್ತಕ ಮಳಿಗೆಗಳಿಗಳ ಶಾಮೀಯಾನದಿಂದ ನೀರು ಹರಿದಿತ್ತು. ಇದರಿಂದ ಪುಸ್ತಕ ಮಳಿಗೆಗಳಲ್ಲಿ ತೊಂದರೆ ಉಂಟಾಗಿತ್ತು. ಶನಿವಾರ ಸಂಜೆ ಮಳೆಯಾದರೂ ಅಕ್ಷರ ಜಾತ್ರೆಗೆ ಜನ ಕಡಿಮೆಯಾಗಲಿಲ್ಲ. ಪ್ರಧಾನ ವೇದಿಕೆಯಲ್ಲೊ ಸ್ವರ ಸಂಜೆ ಕಾರ್ಯಕ್ರಮ ಇದ್ದರಿಂದ ವೇದಿಕೆಯ ಮುಂಭಾಗ ಜನ ಹೌಸ್‌ಫುಲ್ ಆಗಿದ್ದರು. ಜನಸಾಗರವನ್ನು ನಿಯಂತ್ರಣ ಮಾಡುವಲ್ಲಿ ಪೊಲೀಸರು ತೊಂದರೆ ಅನುಭಿಸುವಂತಾಯಿತು.

## ಉಚಿತ ಸಸ್ಯ ಕಾಣಿಕೆ

ಸಾಹಿತ್ಯ ಸಮ್ಮೇಳನದ ವಸ್ತು ಪ್ರದರ್ಶನ ಮಳಿಗೆಯೊಂದರಲ್ಲಿ 'ಸ್ವರಚಿತ ಕವನ ಓದಿ - ಉಚಿತ ಸಸ್ಯ ಕಾಣಿಕೆ ಪಡೆಯಿರಿ' ಎಂಬ ವಿನೂತನ ಕಾರ್ಯಕ್ರಮ ಸಾಹಿತ್ಯಾಸಕ್ತರ ಗಮನ ಸೆಳೆಯುತ್ತಿದೆ. ಸಾಹಿತ್ಯದ ಜತೆಗೆ ಪರಿಸರ ಸಂರಕ್ಷಣೆ ಅರಿವಿಗೆ ಒತ್ತು ನೀಡುವುದು ಉದ್ದೇಶವಾಗಿದೆ. ವಸ್ತು ಪ್ರದರ್ಶನ ಮಳಿಗೆಯ ಸಂಖ್ಯೆ 76ರಲ್ಲಿ 'ಸ್ವರಚಿತ ಕವನ ಓದಿ - ಉಚಿತ ಸಸ್ಯ ಕಾಣಿಕೆ ಪಡೆಯಿರಿ' ಎಂಬ ವಿನೂತನ ಕಾರ್ಯಕ್ರಮ ನಡೆಯುತ್ತಿದೆ. ಸಾಹಿತ್ಯಾಭಿಮಾನಿಗಳ ಪ್ರತಿಕ್ರಿಯೆಯೂ ಉತ್ತಮವಾಗಿತ್ತು. ಬೆಂಗಳೂರಿನ ಸಸ್ಯಯಜ್ಞ ತಂಡವು ಜಿಲ್ಲಾ ಯುವ ಬರಹಗಾರರ ಬಳಗದ ಸಹಯೋಗದಲ್ಲಿ ಈ ಅಭಿಯಾನ ಹಮ್ಮಿಕೊಂಡಿದೆ. ನಾಡಿನ ವಿವಿಧ ಭಾಗದಿಂದ ಬಂದಿದ್ದ ಸುಮಾರು 290 ಕವಿ-ಕವಯತ್ರಿಯರು ಸ್ವರಚಿತ ಕವನ ವಾಚಿಸಿ 'ಔಷಧೀಯ' ಸಸ್ಯಗಳನ್ನು ಕಾಣಿಕೆಯಾಗಿ ಪಡೆದ ಸಂಭ್ರಮಿಸಿದ್ದಾರೆ.

### ವಿದ್ಯುನ್ಮಾನ ಗೋಷ್ಠಿಯಲ್ಲಿ ವಿಶ್ರಾಂತ ಕುಲಪತಿ ಡಾ. ಚಿದಾನಂದ ಗೌಡ ಹಕ್ಕೊತ್ತಾಯ | ಕನ್ನಡ ಮುದುಕರ ಭಾಷೆ ಆಗುತ್ತಿದೆ: ಜಿಎನ್‌ಎಂ

# ಕನ್ನಡಕ್ಕೆ ಡಿಜಿಟಲ್ ಪ್ರಾಧಿಕಾರ ಅಗತ್ಯ

**ಹರೀಶ್ ಕೇರಾ**

**ಸಮಾನಾಂತರ ವೇದಿಕೆ 1ಮಂಡ್ಯ:** ತಂತ್ರಜ್ಞಾನ ಯುಗದಲ್ಲಿ ಕನ್ನಡ ಭಾಷೆ ಹಾಗೂ ಸಂಸ್ಕೃತಿಯನ್ನು ಉಳಿಸಿಕೊಳ್ಳಲು ಡಿಜಿಟಲ್ ಪ್ರಾಧಿಕಾರ ರೂಪಿಸಿಕೊಂಡು ಪ್ರಯತ್ನ ಮಾಡಬೇಕಾಗಿದೆ ಎಂದು ಸೃಜನಶೀಲತೆ - ವಿದ್ಯುನ್ಮಾನ ಮಾಧ್ಯಮಗಳ ಸವಾಲುಗಳು ಗೋಷ್ಠಿಯಲ್ಲಿ ಸರಕಾರವನ್ನು ಒತ್ತಾಯಿಸಲಾಯಿತು.

ಎಐ, ಸೃಜನಶೀಲತೆ ಎಲ್ಲವೂ ಮನುಷ್ಯನ ಮಿತ್ರನಾಗಬೇಕೇ ಹೊರತು ಶತ್ರು ಆಗಬಾರದು. ಮಾನವನ ಆಸ್ತಿ ಸೃಜನಶೀಲತೆ. ಅದನ್ನು ಸಮರ್ಪಕವಾಗಿ ಬಳಸಿಕೊಂಡು ತಂತ್ರಜ್ಞಾನವನ್ನು ಬಳಸಿಕೊಳ್ಳುವ, ಮನುಷ್ಯನನ್ನು ಬೆಳೆಸುವ ಕೆಲಸ ಆಗಬೇಕು. ಕಲೆ, ವಿಜ್ಞಾನ, ಶಿಕ್ಷಣ ಎಲ್ಲ ಕಡೆಯೂ ತಂತ್ರಜ್ಞಾನದ ಬೆಳವಣಿಗೆ ಸಾಕಷ್ಟಿದೆ. ತಂತ್ರಜ್ಞಾನ ಬೆಳೆದಂತೆ ಮನುಷ್ಯನ ನೈತಿಕತೆಗೂ ಧಕ್ಕೆಯಾಗುವ ಭಯ ಇದೆ. ಕನ್ನಡ ವರ್ಚುವಲ್ ಯುನಿವರ್ಸಿಟಿ ಹಾಗೂ ಡಿಜಿಟಲ್ ಪ್ರಾಧಿಕಾರ ಸ್ಥಾಪಿಸಿ ಮುಂದುವರಿಯಬೇಕು ಎಂದು ಅಧ್ಯಕ್ಷತೆ ವಹಿಸಿದ್ದ ವಿಶ್ರಾಂತ ಕುಲಪತಿ ಡಾ. ಚಿದಾನಂದ ಗೌಡ ನುಡಿದರು.

**ವಿದ್ಯುನ್ಮಾನ ಮಾಧ್ಯಮ; ಕನ್ನಡ ಪಾರಮ್ಯ ಅಗತ್ಯ:** ಇವತ್ತಿನ ಕನ್ನಡ ಮುದುಕರ ಕನ್ನಡವಾಗುತ್ತಿದೆ. ಕನ್ನಡ ಮನೆಮನಗಳಿಂದ ಮರೆಯಾಗುತ್ತಿದೆ. ಮಕ್ಕಳು ಕನ್ನಡವನ್ನು ಬಳಸುತ್ತಿಲ್ಲ. ಹೀಗಾಗಿ ವಿದ್ಯುನ್ಮಾನ ಮಾಧ್ಯಮದಲ್ಲಿ ಕನ್ನಡದ ಪಾರಮ್ಯವನ್ನು ಸಾಧಿಸುವುದು ಅತ್ಯಗತ್ಯವಾಗಿದೆ ಎಂದು ಗೋಷ್ಠಿಯ ಆಶಯ ಭಾಷಣ ಮಾಡಿದ ಹಿರಿಯ ಪತ್ರಕರ್ತ ಜಿ.ಎನ್ ಮೋಹನ್ ನುಡಿದರು.

ನಾವು ಕಂಪ್ಯೂಟರ್‌ನಲ್ಲಿ ಎಷ್ಟು ಕನ್ನಡ ಪದಗಳನ್ನು ಬಳಸುತ್ತಿದ್ದೇವೆ, ಅದಕ್ಕೆ ಸರಿಯಾಗಿ ಕನ್ನಡ ಕಲಿಸಿದ್ದೇವೆಯೇ ಎಂದು ನೋಡಬೇಕಿದೆ. ಮುಂದಿನ ಎಲೆಕ್ಟ್ರಾನಿಕ್ ಯುಗದಲ್ಲಿ ಕನ್ನಡ ಉಳಿಯಬೇಕು. ಕನ್ನಡ ತಂತ್ರಾಂಶ ರೂಪಿಸಬೇಕು. ಹಂಪಿ ವಿಶ್ವ ವಿದ್ಯಾಲಯರೂಪಿಸಿದ ಕುವೆಂಪು ತಂತ್ರಾಂಶದ ಕತೆ ಏನಾಯಿತೋ ಗೊತ್ತಿಲ್ಲ. ಸರಕಾರಕ್ಕೆ ಕನ್ನಡ ತಂತ್ರಾಂಶದ ಕಿವಿಯೇ ಇಲ್ಲ. ಇಂಟರ್ನೆಟ್ ಅನ್ನು ಮಾತ್ರ ಉಪಯೋಗಕ್ಕೆ ತಕ್ಕಷ್ಟು ಬಳಸುತ್ತಿದೆ. ಇದನ್ನೆಲ್ಲ ಸರಿಯಾಗಿ ನಿರ್ವಹಿಸಲು ಡಿಜಿಟಲ್ ಕನ್ನಡ ಪ್ರಾಧಿಕಾರ ಬೇಕು ಎಂದು ಅವರು ಒತ್ತಾಯಿಸಿದರು.

ವಿದ್ಯುನ್ಮಾನ ಗೋಷ್ಠಿಯಲ್ಲಿ ವಿಶ್ರಾಂತ ಕುಲಪತಿ ಡಾ. ಚಿದಾನಂದ ಗೌಡ ಮಾತನಾಡಿದರು.

ಕೃತಕ ಬುದ್ಧಿಮತ್ತೆ ಸದ್ಯದಲ್ಲೇ ಮನುಷ್ಯನ ಸ್ವಾತಂತ್ರ್ಯವನ್ನು ಕಸಿದುಕೊಳ್ಳಲಿದೆ. ನಾವು ಸ್ವತಂತ್ರ ಎಂದು ತಿಳಿದಿದ್ದೇವೆ. ಆದರೆ ಎಐ ಆಲ್ಗಾರಿದಂ ನಮ್ಮನ್ನು ಸತತವಾಗಿ ಗಮನಿಸಿ ನಮ್ಮ ವರ್ತನೆಗಳನ್ನು ನಿಯಂತ್ರಿಸುತ್ತಿರುತ್ತದೆ. ಎಐಯಿಂದ ನಾವು ಸೃಷ್ಟಿ ಮಾಡುವ ಕಂಟೆಂಟ್ ಮತ್ತೆ ಅದೇ ವ್ಯವಸ್ಥೆಯನ್ನು ಇಂಟರ್ನೆಟ್ ಮೂಲಕ ಸೇರಿಕೊಂಡು ಅದೇ ಗಾಳಿಯನ್ನು ಮತ್ತೆ ಮತ್ತೆ ಉಸಿರಾಡುವ ಇಕೋ ಚೇಂಬರ್‌ಗಳಾಗಿ ನಾವು ಬದಲಾಗಲಿದ್ದೇವೆ.

**-ವೈ.ಎನ್ ಮಧು**, ಸಾಹಿತಿ

- ತಂತ್ರಜ್ಞಾನ ಮಾನವನ ಮಿತ್ರನಾಗಬೇಕು; ಸೃಜನಶೀಲತೆ ಸಮರ್ಪಕ ಬಳಕೆಗೆ ಆಗ್ರಹ
- ತಂತ್ರಜ್ಞಾನ ಬೆಳೆದಂತೆ ಮಾನವನ ನೈತಿಕತೆಗೂ ಧಕ್ಕೆಯಾಗುವ ಭೀತಿ
- ಭವಿಷ್ಯದಲ್ಲಿ ಕೃತಕ ತಂತ್ರಜ್ಞಾನದಿಂದ ಅಪಾಯ ಖಚಿತ: ತಜ್ಞರ ಎಚ್ಚರಿಕೆ
- ಸಾಮಾಜಿಕ ಜಾಲತಾಣ, ಇತರ ಮಾಧ್ಯಮಗಳಲ್ಲಿ ಕನ್ನಡ ಬಳಕೆಗೆ ಒತ್ತಾಯ
- ವಿದ್ಯುನ್ಮಾನ ಮಾಧ್ಯಮದಲ್ಲೂ ಕನ್ನಡ ಪಾರಮ್ಯ ಅತ್ಯಗತ್ಯ, ಕನ್ನಡ ತಂತ್ರಾಂಶ ರೂಪಿಸಲು ಮನವಿ

**ಸಾಮಾಜಿಕ ಜಾಲತಾಣದಲ್ಲಿ ಎಲ್ಲವೂ ಲಭ್ಯ:** ಕನ್ನಡ ಸಾಹಿತ್ಯ ಮತ್ತು ಸಾಮಾಜಿಕ ಜಾಲತಾಣ ವಿಷಯದ ಬಗ್ಗೆ ಐಟಿ ತಜ್ಞ ಓಂಶಿವಪ್ರಕಾಶ್ ಮಾತನಾಡಿ, ಸಾಮಾಜಿಕ ಜಾಲತಾಣ ಎಂದರೆ ಊರಲ್ಲಿನ ಅರಳಿಕಟ್ಟೆಯಂತೆ. ಇಲ್ಲಿ ಎಲ್ಲ ವಿಷಯಗಳಿಗೂ ಸ್ಥಾನವಿದೆ. ಆದರೆ ನಮ್ಮ ಕನ್ನಡ ಸಾಹಿತ್ಯಕ್ಕೆ ಸರಕಾರ ಅಲ್ಲದೆ, ಜನಸಾಮಾನ್ಯರು ಏನೆಲ್ಲಾ ಮಾಡುತ್ತಿದ್ದೇವೆ ಎಂದು ನಾವು ನಮ್ಮನ್ನು ಕೇಳಿಕೊಳ್ಳಬೇಕು. ಸಮುದಾಯ ಸಾಮಾಜಿಕ ಜಾಲತಾಣಗಳಿಂದ ಇಂಟರ್‌ನೆಟ್ ಸಾಕಷ್ಟು ಕೊಡುಗೆ ಪಡೆದಿದೆ. ವಿಕಿಪೀಡಿಯ 300ಕ್ಕೂ ಹೆಚ್ಚು ಭಾಷೆಯಲ್ಲಿ ಇದೆ. ಕನ್ನಡದಲ್ಲೂ ಇದರಲ್ಲಿ ಸಾಕಷ್ಟು ಮಾಹಿತಿ ಇದೆ. ಇದು ಸಾಧ್ಯವಾದುದು ಸೋಶಿಯಲ್ ಮೀಡಿಯಾಗಳಿಂದ. ವಚನ ಸಾಹಿತ್ಯ, ದಾಸ ಸಾಹಿತ್ಯ ಮುಂತಾದವು ಡಿಜಿಟಲೀಕರಣಗೊಂಡು ಇಂದು ಬೆರಳ ತುದಿಯಲ್ಲಿ ಲಭ್ಯವಿವೆ ಎಂದು ಅವರು ನುಡಿದರು.

### ಎಲ್ಲ ಮಾಧ್ಯಮಗಳಲ್ಲಿ ಕನ್ನಡ ಬಳಕೆಯಾಗಲಿ

ತಂತ್ರಜ್ಞಾನ ಯುಗದಲ್ಲಿ ಕನ್ನಡದ ಅನುಸಂಧಾನ ವಿಚಾರದಲ್ಲಿ ಮಾತನಾಡಿದ ಶಂಕರ್ ಸಿಹಿಮೊಗ್ಗೆ, ಎಲ್ಲಾ ಸಾಮಾಜಿಕ ಜಾಲತಾಣಗಳಲ್ಲಿ, ವೈದ್ಯಕೀಯ, ಇಂಜಿನಿಯರಿಂಗ್ ಕ್ಷೇತ್ರದಲ್ಲಿ ಕನ್ನಡವನ್ನು ಹೆಚ್ಚು ಬಳಸಬೇಕು ಹಾಗೂ ತಂದೆ - ತಾಯಂದಿರು ಮಕ್ಕಳ ಜೊತೆಗೆ ಹೆಚ್ಚು ಮಾತೃಭಾಷೆ ಕನ್ನಡವನ್ನು ಬಳಸಬೇಕು. ಹಾಗಾದರೆ ಮಾತ್ರ ಕನ್ನಡ ಆಧುನಿಕ ಯುಗದಲ್ಲಿ ಉಳಿಯಲು ಸಾಧ್ಯ ಎಂದರು.

ಕನ್ನಡ ಸಾಹಿತ್ಯ ಸಮ್ಮೇಳನದ ಅಂಗಳದಲ್ಲಿ ಕವನ ಹೇಳಿದವರಿಗೆ ಉಚಿತವಾಗಿ ಗಿಡಗಳನ್ನೂ ನೀಡಲಾಗುತ್ತಿದೆ.

ಲೇಖಕ ರಾಜು ಅಡಕಳ್ಳಿ ಅವರಿಂದ ನಿರ್ದೇಶಕ ರಾಮ್ ವೈದ್ಯ ಅವರು ಹೊಸಮುಖ ಪುಸ್ತಕ ಸ್ವೀಕರಿಸಿದರು.

ಸಮ್ಮೇಳನದಲ್ಲಿ ಹಾಲುಮತ ಸಮುದಾಯದ ವ್ಯಕ್ತಿಯೊಬ್ಬರು ತಯಾರಿಸಿದ ಪದಾರ್ಥಗಳನ್ನು ಮಾರಾಟ ಮಾಡಿದರು.

ಮಂಡ್ಯ ಸಮ್ಮೇಳನದಲ್ಲಿ ಆಕರ್ಷಣೆಯಾಗಿ ಮಂಡ್ಯದ ಬೆಲ್ಲದ ಪರಿಷೆ ಕಂಡುಬಂತು.

ಮಂಡ್ಯದಲ್ಲಿ ನಡೆಯುತ್ತಿರುವ ಸಾಹಿತ್ಯ ಸಮ್ಮೇಳನದ ಸ್ವಚ್ಛತೆಯ ಹೊಣೆ ಹೊತ್ತ ಬಂಧುಗಳ ಕಾಯಕ ನಿರಂತರವಾಗಿ ಸಾಗಿದೆ.

## ಸಮ್ಮೇಳನ ಸ್ವಾರಸ್ಯ

### ಯುವಕರಿಗೆ ಮೀಸಲಿದ್ದ ಗೋಷ್ಠಿಯಲ್ಲಿ ವಯೋವೃದ್ಧರು

ಸನಾಂತರ ವೇದಿಕೆಯಲ್ಲಿ ಯುವ ಜನತೆ ಹಾಗೂ ಸಬಲೀಕರಣ ವಿಷಯ ಮಂಡನೆಯಲ್ಲಿ ಯುವಕರು ಇರಲಿಲ್ಲ. ವಯೋವೃದ್ಧರೆ ಸಭಾಂಗಣದಲ್ಲಿ ಹೆಚ್ಚಿದ್ದರು. ಸಾಮಾನ್ಯವಾಗಿ ಗೋಷ್ಠಿಗಳು ಸಮಾಜಕ್ಕೆ ಪೂರಕವಾಗಿ ನಡೆಯುವಂತಹದಾಗಿದ್ದು, ವಿಶೇಷವಾಗಿ ಯುವಜನತೆಗಾಗಿ ಶನಿವಾರ ಸಂಜೆ ವಿಶೇಷಗೋಷ್ಠಿ ಏರ್ಪಡಿಸಲಾಗಿತ್ತು. ಆದರೆ ಯುವಕರಿಲ್ಲದ ಸಭಾಂಗಣದಲ್ಲಿ ವಯೋವೃದ್ಧರು ಕಂಡು ಬಂದರು. ಇದನ್ನು ಗಮನಿಸಿದ ಚಿಂತಕ ಡಾ.ಸುಧಾಕರ್ ಹೊಸಹಳ್ಳಿ ಅವರು ಯುವಕರು ಇರಬೇಕಾಗದ ಗೋಷ್ಠಿಯಲ್ಲಿ ವಯೋವೃದ್ಧರೇ ಹೆಚ್ಚಾಗಿದ್ದಾರೆ ಎಂದು ಅಸಮಾಧಾನ ಹೊರಹಾಕಿದರು.

### ಸೆಲ್ಫಿ ಕ್ರೇಜಿಗೆ ನರಹಳ್ಳಿ ವೈಲೆಂಟ್

ಪ್ರಧಾನ ವೇದಿಕೆಯಲ್ಲಿ ಗೋಷ್ಠಿಗಳು ನಡೆಯುತ್ತಿದ್ದ ಸಂದರ್ಭದಲ್ಲಿ ಗಣ್ಯರ ಬಳಿ ಕೆಲವರು ವೇದಿಕೆ ಮೇಲೆ ಸೆಲ್ಫಿ ತೆಗೆದುಕೊಳ್ಳುತ್ತಿದ್ದರಿಂದ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು ಅಸಮಾಧಾನ ವ್ಯಕ್ತಪಡಿಸಿದರು. ಯಾವುದೇ ಗೋಷ್ಠಿ ನಡೆಯಬೇಕಾದರೆ ಸಾವಧಾನವಾಗಿ ಕೇಳಿಸಿಕೊಳ್ಳಬೇಕು. ವೇದಿಕೆ ಪಾವಿತ್ರ್ಯತೆ ಕಾಪಾಡಬೇಕು. ಅದು ಬಿಟ್ಟು ಸೆಲ್ಫಿ ಫೋಟೊ ವೇದಿಕೆ ಕ್ಲಿಕ್ಕಿಸಿಕೊಳ್ಳುವುದು ಸರಿಯಾದ ಕ್ರಮವಲ್ಲ ಎಂದು ಕಿಡಿಕಾರಿದರು.

### ಸಾಹಿತ್ಯದಲ್ಲಿ ರಾಜಕೀಯ

ಸಾಹಿತ್ಯದಲ್ಲಿ ರಾಜಕೀಯ, ರಾಜಕೀಯದಲ್ಲಿ ಸಾಹಿತ್ಯ ಗೋಷ್ಠಿಗೆ ನಿರೀಕ್ಷಿಸಿದಂತೆ ಸಿ.ಟಿ ರವಿ ಹಾಜರಾಗಲಿಲ್ಲ. ಎಚ್.ಕೆ ಪಾಟೀಲ ಅವರು ಅರ್ಧ ಗಂಟೆ ತಡವಾಗಿ ಗೋಷ್ಠಿಗೆ ಹಾಜರಾದರು. ಆಗ ಮಾತನಾಡುತ್ತಿದ್ದವರ ಮಾತನ್ನು ನಿಲ್ಲಿಸಿ ಎಚ್.ಕೆ.ಪಾಟೀಲರಿಗೆ ಸ್ವಾಗತ ಕೋರಲಾಯಿತು. ನಂತರ ಭಾಷಣಕಾರರು ಭಾಷಣ ಮುಂದುವರಿಸಿದರು. ಇದೂ ಕೂಡ ಸಾಹಿತ್ಯದಲ್ಲಿ ರಾಜಕೀಯದ ಉದಾಹರಣೆಯಾಗಿ ನಿಂತಿತು. ಎರಡನೇ ದಿನ ಶಾಲಾ ಮಕ್ಕಳು ಬಹುಸಂಖ್ಯೆಯಲ್ಲಿ ಕಂಡುಬಂದರು. ಮಂಡ್ಯ ಹಾಗೂ ಮದ್ದೂರಿನ ಹಲವು ಶಾಲಾ ಮಕ್ಕಳನ್ನು ಕರೆತರಲಾಗಿತ್ತು. ಪ್ರಧಾನ ಗೋಷ್ಠಿಯ ವೇದಿಕೆಯ ಗೋಷ್ಠಿಗಳಿಗೆ ಇವರನ್ನು ಒತ್ತಾಯಪೂರ್ವಕವಾಗಿ ಕೂರಿಸಲಾಗಿತ್ತು. ಮಕ್ಕಳು ಆಕಳಿಸಿ ನಿದ್ದೆಹೋದರು ಅಥವಾ ಅಲ್ಲಲ್ಲೇ ಹರಟೆ ಹೊಡೆದರು. ನಂತರ ಇವರನ್ನು ಕರೆದುಕೊಂಡು ಶಿಕ್ಷಕರು ಪುಸ್ತಕದ ಸ್ಟಾಲ್‌ಗಳಿಗೆ ಲಗ್ಗೆಯಿಟ್ಟರು. ಪುಸ್ತಕಗಳನ್ನು ಕಂಡು ಖುಷಿಪಟ್ಟರಾದರೂ ಅವುಗಳನ್ನು ಕೊಂಡುಕೊಳ್ಳಲು ಅವರ ಬಳಿ ಹಣವಿರಲಿಲ್ಲ.

## ಫೋಟೋ ಗ್ಯಾಲರಿ



ಪುಸ್ತಕ ಮಳಿಗೆ ಸಿ ಬ್ಲಾಕ್‌ನ ಆರಂಭದಲ್ಲಿ ಇಡಲಾಗಿದ್ದ ಅಣ್ಣಾವ್ರ ಚಿತ್ರಗಳ ಕಾರ್ಟೂನ್‌ಗಳು ಗಮನ ಸೆಳೆದವು. ಮಂಡ್ಯದ ನರಸಿಂಹಾಚಾರ್ ಎಂಬ ಚಿತ್ರಕಲಾ ಶಿಕ್ಷಕರು ಡಾ.ರಾಜ ಕುಮಾರ ಅವರ ನೂರಾರು ಚಲನಚಿತ್ರಗಳ ಪೋಸ್ಟರ್ ಗಳನ್ನು ಚಿತ್ರಿಸಿ ಪ್ರದರ್ಶಿಸಿದರು. ಇವು ಚಿತ್ರರಸಿಕರ ಮತ್ತು ಅಣ್ಣಾವ್ರ ಅಭಿಮಾನಿಗಳ ಕಣ್ಣಿಗೆ ಹಬ್ಬ ಎನಿಸಿದವು.

## ಕಂಡಿದ್ದು, ಕೇಳಿದ್ದು

ಅವ್ಯವಸ್ಥೆಗಳು ಇವೆ. ಇಲ್ಲ ಅಂತಿಲ್ಲ. ಊಟ ಚೆನ್ನಾಗಿದೆ. ಆದರೆ ಅದನ್ನು ಗೋಷ್ಠಿಯ ಸಂಪನ್ಮೂಲ ವ್ಯಕ್ತಿಗಳಿಗೆ ಒದಗಿಸುವ ವ್ಯವಸ್ಥೆ ಸರಿಯಾಗಿಲ್ಲ. ಶುಕ್ರವಾರ ಊಟಕ್ಕಾಗಿ ನಾನು ಪರದಾಡಿದೆ. ನನಗೆ ಎಲ್ಲೋ ಚನ್ನಪಟ್ಟಣದಲ್ಲಿ, ಒಂದು ದಿನದ ಮಟ್ಟಿಗೆ ರೂಮ್ ಒದಗಿಸಿದ್ದಾರೆ. ಆದರೆ ಇಂಥ ಅವ್ಯವಸ್ಥೆಗಳ ನಡುವೆಯೂ ಕನ್ನಡದ ಹಬ್ಬ, ಇಲ್ಲಿನ ಪುಸ್ತಕದ ಮಾರಾಟ ನೋಡಲು ಖುಷಿಯಾಗುತ್ತದೆ.

– ವಸುಧೇಂದ್ರ, ಕಾದಂಬರಿಕಾರ

## ವಿಶ್ವವಾಣಿ ಮಳಿಗೆಯಲ್ಲಿ ವಿಶ್ವೇಶ್ವರ ಭಟ್ ಸೆಲ್ಫಿ, ಆಟೋಗ್ರಾಫ್‌ಗೆ ಮುಗಿಬಿದ್ದ ಪುಸ್ತಕ ಪ್ರೇಮಿಗಳು



ಸಾಹಿತ್ಯ ಸಮ್ಮೇಳನದ ಪುಸ್ತಕ ಮಳಿಗೆಗಳಲ್ಲಿ 'ವಿಶ್ವವಾಣಿ' ಪುಸ್ತಕ ಮಳಿಗೆ ವಿಶೇಷವಾಗಿ ಗಮನ ಸೆಳೆಯಿತು. ಶನಿವಾರ ಸಂಜೆ ವಿಶ್ವವಾಣಿ ಸಂಪಾದಕ, ಹಿರಿಯ ಪತ್ರಕರ್ತ ವಿಶ್ವೇಶ್ವರ ಭಟ್ ಪುಸ್ತಕ ಮಳಿಗೆಗಳಿಗೆ ಭೇಟಿ ನೀಡಿದ ವೇಳೆ ಅವರೊಂದಿಗೆ ಸೆಲ್ಫಿ ಹಾಗೂ ಹಸ್ತಾಕ್ಷರಕ್ಕಾಗಿ ಅಭಿಮಾನಿಗಳು ಮುಗಿಬಿದ್ದರು. ಸಮ್ಮೇಳನದಲ್ಲಿ ವಿಶ್ವವಾಣಿ ಪುಸ್ತಕ ಪ್ರಕಾಶನದ ಎರಡು ಪುಸ್ತಕ ಮಳಿಗೆಗಳಿವೆ. ಬಿ ಬ್ಲಾಕ್‌ನ 29 ಹಾಗೂ ಸಿ ಬ್ಲಾಕ್‌ನ 159 ಸಂಖ್ಯೆಯ ಮಳಿಗೆಗಳಲ್ಲಿ ಪುಸ್ತಕಗಳು ಲಭ್ಯವಿವೆ.

ರಾಜಕೀಯದಲ್ಲಿ ಸಾಹಿತ್ಯ ಗೋಷ್ಠಿ ಸಾಹಿತ್ಯ ಕೃಷಿಯಿಂದ ರಾಜಕಾರಣಿಗಳನ್ನು ದೂರವಿಡುವುದು ದುರ್ದೈವ, ರಾಜಕಾರಣಿ–ಸಾಹಿತ್ಯ ಪ್ರತ್ಯೇಕಿಸುವುದು ಸರಿಯಲ್ಲ: ಪ್ರವಾಸೋದ್ಯಮ ಸಚಿವ ಎಚ್.ಕೆ.ಪಾಟೀಲ್

# ಸಾಹಿತಿಗಳಿಗೆ ರಾಜಕಾರಣ ಅಸ್ಪೃಶ್ಯ: ಪಾಟೀಲ್ ಬೇಸರ

**ಮಂಡ್ಯ: (ನಾಲ್ವಡಿ ಒಡೆಯರ್ ವೇದಿಕೆ):** ಸಾಹಿತಿಗಳು ರಾಜಕಾರಣವನ್ನು ಅಸ್ಪೃಶ್ಯತೆಯಿಂದ ನೋಡುತ್ತಿರುವುದು ದುರ್ದೈವ. ಸಾಹಿತ್ಯ ಕೃಷಿ ಮಾಡುವವರು ರಾಜಕಾರಣಿಗಳನ್ನು ಬಹಳ ದೂರವಿಡಲು ನೋಡುತ್ತಾರೆ. ರಾಜಕಾರಣಿಗಳ ಕೃತಿಗಳನ್ನು ಸಾಹಿತ್ಯಾರ್ಥದಲ್ಲಿ ಪರಿಗಣಿಸುತ್ತಿಲ್ಲ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್ ಬೇಸರ ವ್ಯಕ್ತಪಡಿಸಿದ್ದಾರೆ.

ರಾಜಕೀಯದಲ್ಲಿ ಸಾಹಿತ್ಯ ಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜಕಾರಣಿಗಳ ಸಾಹಿತ್ಯ ರಚನೆ ಅವರ ಪಾತ್ರಗಳನ್ನು ಒಳಗೊಂಡಿರುತ್ತದೆ. ಇದು ಸಾಹಿತ್ಯಕ್ಕೆ ಸಂಬಂಧಿಸಿದ್ದಲ್ಲ ಎಂಬುದು ದುರದೃಷ್ಟಕರ. ಎಲ್ಲಾ ಸಾಹಿತ್ಯವೂ ಪ್ರಾಮಾಣಿಕವಾಗಿ ಬರದ ಕಾಲಘಟ್ಟವೂ ಇದೆ. ಪ್ರಜಾಪ್ರಭುತ್ವದ ಬಂದ ಮೇಲೆ ಎಲ್ಲ ರೀತಿಯ ಮಗ್ಗಲುಗಳನ್ನು ಸಾಹಿತ್ಯದ ಮೂಲಕ ಕಲಿಯಬಹುದು. ರಾಜಕಾರಣಿ, ಸಾಹಿತಿ ಪ್ರತ್ಯೇಕಿಸುವ ವ್ಯವಸ್ಥೆ ಹೋಗಬೇಕು. ರಾಜಕೀಯ ಹಾಲಿನಲ್ಲಿ ತುಪ್ಪ ಇದ್ದಹಾಗೆ. ನಮ್ಮ ಬದುಕಿನಲ್ಲಿ ರಕ್ತರಹಿತ ಸಂಘರ್ಷ ಇರಬೇಕಾದರೆ ರಾಜಕಾರಣ ಇರಬೇಕು. ಸಾಹಿತ್ಯ ರಾಜಕಾರಣ ಪರಿಗಣಿಸಿ ನಿತ್ಯ ಬದುಕಿಗೆ ನಮ್ಮ ಸಂವಿಧಾನ ಅಸ್ತ್ರ. ಸಂವಿಧಾನವನ್ನು ಸಾಹಿತ್ಯ, ಧರ್ಮ ಎಂದು ತಿಳಿದು ಬದುಕಬೇಕು ಎಂದು ಸಚಿವ ಪಾಟೀಲ್ ಸಲಹೆ ಮಾಡಿದರು.

**ರಾಜಕಾರಣ ಅನಿಷ್ಟವಲ್ಲ:** ರಾಜಕೀಯ ವಿಶ್ಲೇಷಕ ರವೀಂದ್ರ ರೇಷ್ಮೆ ಮಾತನಾಡಿ, ನಾವು ರಕ್ತಪಾತ ಸಹಿತ ಯುದ್ಧ, ರಾಜಕೀಯ ನೋಡುತ್ತಿದ್ದೇವೆ. ಕ್ರಿಯಾಶೀಲತೆ ಹಸಗೂ ಚಿಂತನಾಶೀಲತೆ ಸಾಹಿತ್ಯಗಳಲ್ಲಿ ಎರಡು ಲಕ್ಷಣಗಳು. ರಾಜಕಾರಣ ಒಂದು ಅನಿಷ್ಟ ಎಂದು ಮಾತನಾಡುವುದು ಸಹಜವಾಗಿದೆ. ಮಹಾತ್ಮ ಗಾಂಧೀಜಿ, ನೆಹರೂ ಬರವಣಿಗೆಯಲ್ಲಿ ಬದುಕು ಸಾಕ್ಷಾತ್ಕಾರಗೊಳಿಸುವ ವಿಚಾರ ಕಾಣಬಹುದು. ಸಾಹಿತಿಗಳು ರಾಜಕಾರಣ ಕುರಿತು ಪುಸ್ತಕಗಳು ಹೆಚ್ಚಾಗಿ ಬರೆಯುತ್ತಿಲ್ಲ ಎಂದು ಹೇಳಿದರು.

**ರಾಜಕಾರಣ–ಸಾಹಿತ್ಯ ಎರಡೂ ಒಂದೇ**

ರಾಜಕೀಯ ಚಿಂತಕ ಬಿ.ಎಲ್.ಶಂಕರ್ ಮಾತನಾಡಿ, ರಾಜಕಾರಣ ಮತ್ತು ಸಾಹಿತ್ಯ ಒಂದೇ. ಕರ್ನಾಟಕದ ಇತಿಹಾಸದಲ್ಲಿನ ಚಳವಳಿಗಳು ಹಾಗೂ ಸಾರ್ವಜನಿಕ ಬದುಕು ನೀತಿ–ನಿರೂಪಣೆ ಮಾಡಲು ಅನೇಕ ಸಾಹಿತ್ಯ ಪುಸ್ತಕಗಳು ನೆರವಾಗಿದೆ. ಅನೇಕ ಕವಿಗಳು ತಮ್ಮ ಕವಿತೆಗಳಲ್ಲಿ ರಾಜಕೀಯ ವಿಷಯಗಳನ್ನು ಪರಿಚಯಿಸಿದ್ದಾರೆ. ಮಹಿಳೆಯರು ಹಕ್ಕುಗಳಿಗಾಗಿ ಕವಯಿತ್ರಿಗಳು ಸಾಹಿತ್ಯ ರೂಪಿಸಿದ್ದಾರೆ. ರಾಷ್ಟ್ರದಲ್ಲಿ ನೀತಿ–ನಿರೂಪಣೆಗೆ ಸಾಕಷ್ಟು ಸಾಹಿತಿಗಳು ಶ್ರಮಿಸಿದ್ದಾರೆ ಎಂದು ತಿಳಿಸಿದರು.

**ರಾಜಕೀಯ–ಸಾಹಿತ್ಯ ಹಾಲು–ಜೇನಿನಂತೆ:** ಮಾಜಿ ಶಾಸಕ ಅನ್ನದಾನಿ ತಮ್ಮ ಭಾಷಣದಲ್ಲಿ, ರಾಜಕೀಯ ಹಾಗೂ ಸಾಹಿತ್ಯ ಹಾಲು ಜೇನಿನಂತೆ. ಎರಡೂ ಬೇರೆ ಬೇರೆಯಾದರೆ ಬದುಕು ದುಸ್ತರ. ರಾಜಕೀಯ ಹೊರತು ಪಡಿಸಿ ನಾವೇನೂ ಮಾಡಲು ಸಾಧ್ಯವಿಲ್ಲ. 10ನೇ ಶತಮಾನದಲ್ಲಿ ಪ್ರಾರಂಭಗೊಂಡ ಸಾಹಿತ್ಯ ಇಂದಿಗೂ ಯಶಸ್ವಿಯಾಗಿ ನಡೆದುಕೊಂಡು ಬಂದಿದೆ. ಧರ್ಮ, ಸಾಮಾಜಿಕ ಹಾಗೂ ರಾಜಕೀಯ ನೆಲೆಗಟ್ಟು ಮೀರಿಸುವ ಶಕ್ತಿ ಸಾಹಿತ್ಯಕ್ಕಿದೆ. ಜಾನಪದ ಹಾಗೂ ಶಿಷ್ಟ ಸಾಹಿತ್ಯ ಎರಡು ಸಾಹಿತ್ಯಗಳಿವೆ. ಜಾನಪದ ಸಾಹಿತ್ಯಕ್ಕೆ ಬರವಣಿಗೆ ಇರಲಿಲ್ಲ. ರಾಜ್ಯದಲ್ಲಿ ಹಲವಾರು ಪ್ರಶಸ್ತಿ ಗಳನ್ನು ಘೋಷಣೆ ಮಾಡಲಾಗುತ್ತದೆ. ರಾಜಕೀಯ ಹೊರತುಪಡಿಸಿ ಪ್ರಶಸ್ತಿ ಘೋಷಣೆ ಸಾಧ್ಯವಿಲ್ಲ. ಸಾಹಿತ್ಯಕ್ಕೆ ಓಟಿನ ಮುಲಾಜಿಲ್ಲ. ಸತ್ಯವನ್ನು ನಿರ್ಭಯವಾಗಿ ಹೇಳಲು ಸಾಹಿತ್ಯಕ್ಕೆ ಮಾತ್ರ ಸಾಧ್ಯ ಎಂದು ಪ್ರತಿಪಾದಿಸಿದರು.

ರಾಜಕೀಯದಲ್ಲಿ ಸಾಹಿತ್ಯ ಗೋಷ್ಠಿಯಲ್ಲಿ ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ್ ಮಾತನಾಡಿದರು.

- ಸಾಹಿತ್ಯ–ಪತ್ರಿಕಾ ಲೋಕ ಜನರ ಸೇವಕರಾಗಿ ಕೆಲಸ ಮಾಡುತ್ತಿಲ್ಲ: ಎಚ್.ಕೆ.ಪಾಟೀಲ್
- ಗಾಂಧೀಜಿ–ನೆಹರೂ ಬರಹಗಳಲ್ಲಿ ಬದುಕು ಸಾಕ್ಷಾತ್ಕಾರಗೊಳಿಸುವ ವಿಚಾರ ಇದೆ: ರವೀಂದ್ರ ರೇಷ್ಮೆ
- ಕರ್ನಾಟಕದ ಚಳವಳಿ, ನೀತಿ–ನಿರೂಪಣೆಯಲ್ಲಿ ಸಾಹಿತ್ಯ ಪ್ರಮುಖ ಪಾತ್ರ: ಬಿ.ಎಲ್. ಶಂಕರ್
- ಸತ್ಯವನ್ನು ನಿರ್ಭಯವಾಗಿ ಹೇಳುವ ಧೈರ್ಯ ಸಾಹಿತ್ಯಕ್ಕಿದೆ: ಮಾಜಿ ಶಾಸಕ ಅನ್ನದಾನಿ

ಸಾಹಿತ್ಯ ದೋಣಿ, ನೀರು ರಾಜಕೀಯ ವಿದ್ದಂತೆ. ರಾಜಕೀಯ ಎಂಬ ನೀರಿನ ಮೇಲೆ ದೋಣಿ ಎಂಬ ಸಾಹಿತ್ಯ ಸಾಗುವ ಅನಿವಾರ್ಯವಿದೆ. ರಾಜಕೀಯ ನೀರಿನ ಮೇಲೆ ಸಾಹಿತ್ಯವೆಂಬ ದೋಣಿ ತೇಲಿ ಗುರಿಮುಟ್ಟಲಿ.

–ನಾಡೋಜ ಮಹೇಶ್ ಜೋಶಿ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ

ಸಾಹಿತ್ಯ ಸಮ್ಮೇಳನ ನಡೆಯಲು ರಾಜಕಾರಣ ಕಾರಣ. ಸರಕಾರ ದುಡ್ಡು ಕೊಡದಿದ್ದರೆ ಸಮ್ಮೇಳನ ನಡೆಯಲು ಹೇಗೆ ಸಾಧ್ಯ. ರಾಜಕೀಯ ಮಾಡದಿದ್ದರೆ ಸುಲಭವಾಗಿ ಸಾಹಿತ್ಯ ಬೆಳೆಯಲು ಸಾಧ್ಯವಿಲ್ಲ.

–ಅನ್ನದಾನಿ, ಮಾಜಿ ಶಾಸಕ

### ಉತ್ತಮ ಸಾಹಿತ್ಯ ರಾಜಕಾರಣಕ್ಕೆ ದಿಕ್ಸೂಚಿ

ಪತ್ರಿಕಾ ಕ್ಷೇತ್ರ ಹಾಗೂ ಸಾಹಿತ್ಯ ಲೋಕ ಮೂಲಕರ್ತವ್ಯ ಮರೆತಿದೆ. ಜನರ ಸೇವಕರಾಗಿ ಕೆಲಸ ಮಾಡುತ್ತಿಲ್ಲ. ಮಾಲೀಕರಾಗಿ ವಿರೋಧ ಪಕ್ಷದ ನಾಯಕನಂತಿರಬೇಕು. ಸಂದರ್ಭಗಳನ್ನು ಟೀಕೆ, ವಿರೋಧ ಮಾಡುತ್ತಿವೆ. ಸಾಹಿತ್ಯ ಕ್ಷೇತ್ರದ ಎಲ್ಲರ ಮನಸ್ಥಿತಿ ಬದಲಾಗಬೇಕಿದೆ. ಸಾಹಿತ್ಯಕ್ಷೇತ್ರಕ್ಕೆ ನೀಡಿರುವ ಕೊಡುಗೆ ಸ್ವೀಕಾರ ಮಾಡಬೇಕು. ವಿಧಾನಸಭೆಯಲ್ಲಿ ಆಗುವ ಭಾಷೆಗಳ ಸಂಕೋಲೆ ಸಾಹಿತ್ಯದ ಮೂಲಕ ಹೊರತರಬೇಕು. ರಾಜಕಾರಣ ಬಹಳಷ್ಟು ಹದಗೆಡುತ್ತಿರುವುದು ಸಾರ್ವಜನಿಕರು ಅಳಲಾಗಿದೆ. ತಪ್ಪುಗಳನ್ನು ಬರಹದ ಮೂಲಕ ಪ್ರಚುರಪಡಿಸಬಹುದು. ಸಾಹಿತ್ಯದ ಮೂಲಕ ರಾಜಕಾರಣ ಬದಲಾಯಿಸಬಹುದು. ರಾಜಕಾರಣಕ್ಕೆ ಮಾರ್ಗದರ್ಶನ ಮಾಡುವ ಸಾಹಿತ್ಯ ಬೇಕಿದೆ. ಗಾಂಧೀಜಿ ಬರವಣಿಗೆಯಿಂದ ಸಮಾಜ ಬದಲಾವಣೆಗೆ ಸಾಹಿತ್ಯ ನೀಡಿದ್ದಾರೆ. ಸಾಹಿತಿಗಳನ್ನು ನಾವು ದೂರವಿಡುವ ಪ್ರಶ್ನೆ ಇಲ್ಲ. ಉತ್ತಮ ಸಾಹಿತ್ಯ ರಾಜಕಾರಣಕ್ಕೆ ದಿಕ್ಸೂಚಿ ಎಂದು ಸಚಿವ ಎಚ್.ಕೆ.ಪಾಟೀಲ್ ಅವರು ತಿಳಿಸಿದರು.

ಹಿರಿಯ ಮಕ್ಕಳ ಸಾಹಿತಿ ಟಿ. ಎಸ್ ನಾಗರಾಜ ಶೆಟ್ಟಿ ಅಭಿಮತ

## ಮಕ್ಕಳ ಸಾಹಿತ್ಯದಿಂದ ದೇಶದ ಉನ್ನತಿ ಸಾಧ್ಯ

**(ಭಾಗವತ ಕವಿ ಪುತಿ ನರಸಿಂಹಾಚಾರ್ ಮತ್ತು ಪ್ರೇಮಕವಿ ಕೆಎಸ್ ನರಸಿಂಹಸ್ವಾಮಿ ಸಮಾನಾಂತರ ವೇದಿಕೆ–2)**

ಮಂಡ್ಯ: ಭವಿಷ್ಯದಲ್ಲಿ ದೇಶದಲ್ಲಿ ಶಾಂತಿ ನೆಲೆಸಬೇಕು ಮತ್ತು ಎಲ್ಲರೂ ಸೌಹಾರ್ದತೆಯಿಂದ ಇರಬೇಕು ಎಂದರೆ ವಿಪುಲವಾಗಿ ಮಕ್ಕಳ ಸಾಹಿತ್ಯ ರಚನೆಗಳಾಗಬೇಕು. ಮಕ್ಕಳ ಸಾಹಿತ್ಯದಿಂದ ಮಾತ್ರ ದೇಶದ ಉನ್ನತಿ ಸಾಧ್ಯ ಎಂದು ಹಿರಿಯ ಮಕ್ಕಳ ಸಾಹಿತಿ ಟಿ. ಎಸ್ ನಾಗರಾಜ ಶೆಟ್ಟಿ ಅಭಿಪ್ರಾಯ ಪಟ್ಟಿದ್ದಾರೆ.

ಕನ್ನಡ ಸಾಹಿತ್ಯ ಸಮ್ಮೇಳನ ಎರಡನೇ ದಿನ 'ಮಕ್ಕಳ ವ್ಯಕ್ತಿತ್ವ ರೂಪಿಸುವಲ್ಲಿ ಸಾಹಿತ್ಯದ ಪಾತ್ರ' ಗೋಷ್ಠಿಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಮುಂದಿನ ಜನತೆ ನೆಮ್ಮದಿಯಿಂದ ಇರಬೇಕು ಎಂದರೆ ಮಕ್ಕಳ ಸಾಹಿತ್ಯ ಕೃತಿಗಳು ಹೊರಬರಬೇಕು ಎಂದು ಯೂನಿಸೆಫ್ ಹೇಳಿದೆ. ಜಗತ್ತಿಗೆ ನಿಜವಾದ ಶಾಂತಿ ಸಿಗುವುದು ಮಕ್ಕಳ ಸಾಹಿತ್ಯದಿಂದ ಮಾತ್ರ ಎಂದು ಮಹಾತ್ಮ ಗಾಂಧೀಜಿ ಹೇಳಿದ್ದರು ಎಂದು ನುಡಿದರು.

**ಬಾಲಾಪರಾಧ ಹೆಚ್ಚಳ:** ಮಕ್ಕಳೆಂದರೆ ಕಪಟ, ವಂಚನೆ ಅರಿಯದವರು ಎಂಬ ಮಾತಿದೆ. ಆದರೆ ಇತ್ತೀಚೆಗೆ ಬಾಲಾಪರಾಧಿಗಳ ಸಂಖ್ಯೆ ಹೆಚ್ಚಾಗುತ್ತಿದೆ. ಕರ್ನಾಟಕ ದಲ್ಲಿ 9,277 ಬಾಲಾಪರಾಧಿಗಳಿದ್ದಾರೆ. ಅವರೆಲ್ಲರು ಕೊಲೆ, ದರೋಡೆ, ಅತ್ಯಾಚಾರಗಳಲ್ಲಿ ತೊಡಗಿದ್ದಾರೆ. ಇದು ಎಚ್ಚರಿಕೆಯ ಗಂಟೆ. ಮಕ್ಕಳನ್ನು ಒಳಿತಿನೆಡೆಗೆ ತರುವ ಪ್ರಯತ್ನ ಮಕ್ಕಳ ಸಾಹಿತಿಗಳಿಂದ ಆಗಬೇಕು. ಪ್ರೀತಿ ಮತ್ತು ಮಾನವೀಯತೆಯನ್ನು ಅವರಲ್ಲಿ ಬಿತ್ತಬೇಕು ಎಂದು ಹೇಳಿದರು.

**ಮಕ್ಕಳ ಭಾವಕೋಶಕ್ಕೆ ಲಗ್ಗೆ ಹಾಕಬೇಕು:** ಗೋಷ್ಠಿಯಲ್ಲಿ ಉಪಸ್ಥಿತಿಯಿದ್ದ ಡಾ. ಬಸು ಬೇವಿನಗಿಡದ 'ಮಕ್ಕಳ ಸಾಹಿತ್ಯದಲ್ಲಿ ಹೊಸ ಮೌಲ್ಯಗಳು' ವಿಷಯದ ಬಗ್ಗೆ ಮಾತನಾಡಿ, ಎಳೆಯರನ್ನು ಸಾಹಿತ್ಯ ಸಾಗರದಲ್ಲಿ ಒಡ್ಡಬೇಕು. ಮಕ್ಕಳಿಗಾಗಿ ಸಾಹಿತ್ಯ ರಚಿಸುವವರಿಗೆ ಮಗುವಿನ ಮನಸ್ಸಿರಬೇಕು. ಸಂವೇದನೆ ಇರಬೇಕು. ಮಕ್ಕಳ ಸಾಹಿತ್ಯ ರಚನೆ ಎಂದರೆ ಸರಳವಲ್ಲ. ಮಕ್ಕಳ ಸಾಹಿತಿಗಳು ಮಕ್ಕಳ ಭಾವಕೋಶಕ್ಕೆ ಲಗ್ಗೆ ಇಡಬೇಕು. ಮಕ್ಕಳ ಸಾಹಿತ್ಯವನ್ನು ಮಕ್ಕಳೇ ಓದಬೇಕು ಅಂತಿಲ್ಲ. ದೊಡ್ಡವರು ಓದಿ ಮಕ್ಕಳಿಗೆ ಅವರ ಅನಿಸಿಕೆ ತಿಳಿಸಬಹುದು ಎಂದೂ ಡಾ.ಬಸು ತಿಳಿಸಿದರು.

### ಮಕ್ಕಳ ಸೃಜನಶೀಲತೆಗೆ ಪೋಷಕರೇ ಅಡ್ಡಿ

ಇಂದಿನ ಪೋಷಕರು ಮಕ್ಕಳ ಸೃಜನಶೀಲತೆಗೆ ಅಡ್ಡಿಯಾಗುತ್ತಿದ್ದಾರೆ. ಚಿತ್ರ ಬರೆದರೆ ಚಿತ್ರ ಬರೆಯುವುದರಿಂದ ಅಂಕ ಸಿಗುವುದಿಲ್ಲ ಎನ್ನುತ್ತಾರೆ. ನಮಗೆ ಅರ್ಥವಾಗದ ಪ್ರಪಂಚವನ್ನು ಅವರು ತೆರೆದಿಟ್ಟಿರುತ್ತಾರೆ ಎಂಬುದನ್ನು ಪೋಷಕರು ಯೋಚಿಸುವುದಿಲ್ಲ ಎಂದು ಬಾಗೂರು ಮಾರ್ಕಂಡೇಯ ಅಭಿಪ್ರಾಯಪಟ್ಟರು.

## ಇಂದು ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳ ವಿವರ

### ಇಂದಿನ ಕಾರ್ಯಕ್ರಮ

**ಮಂಡ್ಯ:** 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಸಾಂಸ್ಕೃತಿಕ ಸಮಿತಿ ವತಿಯಿಂದ ಡಾ ಬಿ.ಆರ್. ಅಂಬೇಡ್ಕರ್ ಭವನ ವೇದಿಕೆ ಹಾಗೂ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರ ವೇದಿಕೆ ಕಲಾತಂಡಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಇಂದು ನಡೆಯಲಿದೆ.

ಮಧ್ಯಾಹ್ನ 1 ರಿಂದ 1.10 ರವರೆಗೆ ಮಂಡ್ಯ ಪುಟ್ಟಮಂಚಮ್ಮ ಮಾರೇಹಳ್ಳಿ ಮತ್ತು ಸಿದ್ದಮ್ಮ ತಂಡದಿಂದ ತತ್ವಪದ, 1.15 ರಿಂದ 1.25 ರವರೆಗೆ ಸೂಗನಹಳ್ಳಿ ಅಂಚೆ, ಹೆಮ್ಮಿಗೆ ಗ್ರಾಮದ ಎಚ್.ಎಂ.ಶಿವಮಹಾದೇವ ತಂಡದಿಂದ ಜನಪದ ನೃತ್ಯ, 1.30 ರಿಂದ 1.40 ರವರೆಗೆ ಉತ್ತರ ಕನ್ನಡ ಡಾ.ಕೃಷ್ಣಮೂರ್ತಿ ಭಟ್ ಅವರಿಂದ ದಾಶವಾಣಿ, 1.45 ರಿಂದ 1.55 ರವರೆಗೆ ತುಮಕೂರು ಸಿದ್ದಲಿಂಗಯ್ಯ ಹಿರೇಮಠ್ ಅವರಿಂದ ಸಂಗೀತ ಕಾರ್ಯಕ್ರಮ, 2 ರಿಂದ 2.10 ರವರೆಗೆ ಮೈಸೂರು ಕಾರ್ತಿಕ್ ಎಚ್.ಎಂ. ಅವರಿಂದ ಭರತನಾಟ್ಯ, 2.15 ರಿಂದ 2.25 ರವರೆಗೆ ಬೆಳಗಾವಿ ಜಿಲ್ಲೆಯ ಕೆ.ಸೌಭಾಗ್ಯ ಲಕ್ಷ್ಮೀ ವಿ ಅವರಿಂದ ಭರತನಾಟ್ಯ, 2..30 ರಿಂದ 2.40 ರವರೆಗೆ, ಹಾವೇರಿ ಬಸವರಾಜ ಕೋಳೂರಾ ಶ್ರೀಗಂಗಾಪರಮೇಶ್ವರಿ ಡೊಳ್ಳಿನ ಸಂಘದ ವತಿಯಿಂದ ಜನಪದ ನೃತ್ಯ, 2.45 ರಿಂದ 2.55 ರವರೆಗೆ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ರೆಮಾನಾ ಪಿರೇನಾ ಅವರಿಂದ ನೃತ್ಯ ಪ್ರದರ್ಶನ ನಡೆಯಲಿದೆ.

**ಜೋಗಿ ಪದ, ರಂಗಗೀತೆ:** ಮಧ್ಯಾಹ್ನ 3 ರಿಂದ 3.10ರವರೆಗೆ ಶಿವಮೊಗ್ಗ ಜಿಲ್ಲೆ ಸಾಗರ ತಾಲೂಕು ಹೊಸೂರು ಗುಡ್ಡಪ್ಪ ಜೋಗಿ ಮತ್ತು ತಂಡದಿಂದ ಜೋಗಿಪದ, 3.15 ರಿಂದ 3.25 ರವರೆಬಗೆ ಬೆಂಗಳೂರು ಸ್ನೇಹ ಕಲಾತಂಡದಿಂದ ರಂಗ ಗೀತೆ, 3.30 ರಿಂದ 3.40 ರವರೆಗೆ ಕೊಪ್ಪಳ ಜಿಲ್ಲೆಯ ಕೇಶಪ್ಪ ಶಿಳ್ಳೆಕ್ಯಾತ ಅವರಿಂದ ತೊಗಲು ಗೊಂಬೆಯಾಟ, 3.45 ರಿಂದ 3.55 ರವರೆಗೆ ವಿಜಯನಗರ ಜಿಲ್ಲೆ ಹೊಸಪೇಟೆ ಪಾಂಡುರಅಗ ಸಂಗೀತ ಪಾಠ ಶಾಲೆಯ ಜಿ.ಮಾರಿತಿ ರಾವ್ ಅವರಿಂದ ಶಾಸ್ತ್ರೀಯ ಸಂಗೀತ ಕನ್ನಡ ಗೀತ ಗಾಯನ, ಸಂಜೆ 4 ರಿಂದ 4.10 ರವರೆಗೆ ಬೆಂಗಳೂರು ನಾಟ್ಯಾಂಕುರ ಪರ್ಫಾಮಿಂಗ್ ಆರ್ಟ್ಸ್ ಟ್ರಸ್ಟ್ ನ ಅಧ್ಯಕ್ಷರಾದ ಗುರು ಬಿ.ನಾಗೇಶ್ ಅವರಿಂದ ನೃತ್ಯ ರೂಪಕ, 4.15 ರಿಂದ 4.25 ರವರೆಗೆ ಧಾರವಾಡ ವಿಜಯಲಕ್ಷ್ಮ ಪೂಜೇರಾ ಅವರಿಂದ ಸಂಗೀತ, 4.30 ರಿಂದ 4.40 ರವರೆಗೆ ಮೈಸೂರು ಬೋಗಾಧಿಯ ಮನು ವಿದ್ಯಾ ಕಲ್ಚರಲ್ ಫೌಂಡೇಶನ್ ವತಿಯಿಂದ ನೃತ್ಯ ರೂಪಕ, 4.45 ರಿಂದ 4.55 ರವರೆಗೆ ಮೈಸೂರು ವಿ.ವಿ.ಮೊಹಲ್ಲಾ ಕಲಾ ಸಾಂಸ್ಕೃತಿಕ ವೇದಿಕೆಯ ಶಶಾಂಕ್ ಡಿ,ಎಸ್. ಅವರಿಂದ ಸಂಗೀತ ಕಾರ್ಯಕ್ರಮ, 5.10 ರಿಂದ 5.10 ರವರೆಗೆ ಧಾರವಾಡ ಜಿಲ್ಲೆ ಹುಬ್ಬಳ್ಳಿಯ ಈಶ್ವರಪ್ಪ ಅವರಿಂದ ಸುಗಮ ಸಂಗೀತ ನಡೆಯಲಿದೆ.

**ಕೋಲಾಟ, ಸಂಗೀತ ಗಾಯನ :** ಸಂಜೆ 5.15 ರಿಂದ 5.25 ರವರೆಗೆ ಹಾವೇರಿಯ ಸೌರಭ ಜನಪದ ಕಲಾ ವೇದಿಕೆಯ ಡಾ.ಕೆ.ಸಿ.ನಾಗರಜ್ಜಿ ಅವರಿಂದ ಜನಪದ ಸಂಗೀತ, 5.30 ರಿಂದ 5.40ರವರೆಗೆ ಮಂಡ್ಯ ಕಾವೇರಿ ನಗರದ ಸ್ಪಂದನ. ಬಿ ಅವರಿಂದ ಏಕಪಾತ್ರ ಅಭಿನಯ, 5.45 ರಿಂದ 5.55 ರವರೆಗೆ ಕೊಪ್ಪಳ ಜಿಲ್ಲಾ ನಾಗರಿಕ ವೇದಿಕೆ ವತಿಯಿಂದ ಜನಪದ ನೃತ್ಯ ನಡೆಯಲಿದೆ.

### ಮೂಡಲಪಾಯ ಯಕ್ಷಗಾನ

ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರ ವೇದಿಕೆ ಕಲಾತಂಡಗಳಿಂದ ಬೆಳಗ್ಗೆ 11 ರಿಂದ 12 ರವರೆಗೆ ಪಾಂಡವಪುರ ತಾಲೂಕು ದೊಡ್ಡಬ್ಯಾಡರಹಳ್ಳಿ ಚಿಣ್ಣರ ಯಕ್ಷಗಾನ ಮಂಡಳಿ ವತಿಯಿಂದ ಮೂಡಲಪಾಯ ಯಕ್ಷಗಾನ, 12 ರಿಂದ 1 ರವರೆಗೆ ಬೆಂಗಳೂರು ಒಹಿಲೇಶ್ ರಂಗಕಹಳೆ ಅವರಿಂದ ಬೊಮ್ಮನಹಳ್ಳಿ ಕಿಂದರ ಜೋಗಿ ನೃತ್ಯರೂಪಕ, 1 ರಿಂದ 2 ರವರೆಗೆ ಮಂಡ್ಯ ಜಿಲ್ಲೆಯ ಸೂನಗನಹಳ್ಳಿ ಚಿಣ್ಣರ ಯಕ್ಷಗಾನ ಮಂಡಳಿ ವತಿಯಿಂದ ಮೂಡಲಪಾಯ ಯಕ್ಷಗಾನ, 2 ರಿಂದ 3.30 ರವರೆಗೆ ಮೈಸೂರು ಯಕ್ಷರಂಗ ತಿಪ್ಪಣ್ಣಡಿ ಅವರಿಂದ ಏಳು ಸಮುದ್ರದಾಚೆ ನಾಟಕ, 3.30 ರಿಂದ 4.30 ರವರೆಗೆ ಧಾರವಾಡ ಹುಬ್ಬಳ್ಳಿಯ ಡಾ. ಯಶವಂತ ಸರ್ದೇಶಪಾಂಡೆ ಅವರಿಂದ ಆಲ್ ದಿ ಬೆಸ್ಟ್ ನಗೆ ನಾಟಕ, 4.30 ರಿಂದ ಮಂಡ್ಯ ಹೆಚ್ ಎನ್ ಅಂಕರಾಜು ಅವರಿಂದ ಶ್ರೀ ಕೃಷ್ಣ ಸಂಧಾನ ಪೌರಾಣಿಕ ನಾಟಕ ನಡೆಯಲಿದೆ.

ನೆಲ–ಜಲ ಸಾಕ್ಷರತೆ: ಅವಲೋಕನ ಕುರಿತು ಗೋಷ್ಠಿ | ನೀರಾವರಿ ತಜ್ಞ ಕ್ಯಾಪ್ಟನ್ ರಾಜಾರಾವ್ ಸಲಹೆ

# ಸರಕಾರ ರಾಜ್ಯ ಜಲ ಆಯೋಗ ರಚಿಸಲಿ

**ಮಂಡ್ಯ: (ನಾಲ್ವಡಿ ಕೃಷ್ಣರಾಜ ಒಡೆಯರ್ ವೇದಿಕೆ)**

ನೀರಿನ ಸಮಸ್ಯೆಗಳ ಇತ್ಯರ್ಥ ಹಾಗೂ ಸದ್ಬಳಕೆ ಮಾಡಿಕೊಳ್ಳಲು ರಾಜ್ಯ ಸರಕಾರ ನೀರಾವರಿ ತಜ್ಞರನ್ನು ಒಳಗೊಂಡ ಜಲ ಆಯೋಗ ರಚಿಸಿ, ನಿರ್ದಿಷ್ಟ ಕಾಲಮಿತಿಯೊಳಗೆ ವರದಿ ಪಡೆಯುವ ಮೂಲಕ ಯೋಜನೆಗಳನ್ನು ರೂಪಿಸಲಿ ಎಂದು ನೀರಾವರಿ ತಜ್ಞ ಕ್ಯಾಪ್ಟನ್ ರಾಜಾರಾವ್ ಸಲಹೆ ಮಾಡಿದ್ದಾರೆ.

ಮಂಡ್ಯದಲ್ಲಿ ನಡೆಯುತ್ತಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ನೆಲ–ಜಲ ಸಾಕ್ಷರತೆ: ಅವಲೋಕನ ಕುರಿತು ಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಂದೆ ಅಸ್ತಿತ್ವಕ್ಕೆ ಬರಲಿರುವ ಕಾವೇರಿ ನದಿ ನೀರು ನಿರ್ವಹಣಾ ಮಂಡಳಿ ಮತ್ತು ನಿಯಂತ್ರಣಾ ಸಮಿತಿಯ ಸೂಚನೆಗಳನ್ನು ಪಾಲಿಸದಿದ್ದಲ್ಲಿ ರಾಜ್ಯ ತನ್ನ ಜಲಾಶಯಗಳ ಮೇಲಿನ ಹಕ್ಕು ಕಳೆದುಕೊಳ್ಳಬೇಕಾಗುತ್ತದೆ. ಹಾಗಾಗಿ, ನೀರಿನ ಮಿತಬಳಕೆ ಹಾಗೂ ಸುಧಾರಿತ ಕೃಷಿ ಪದ್ಧತಿಗೆ ಒತ್ತು ನೀಡುವುದೇ ಸೂಕ್ತ. ತಳಮಟ್ಟದಿಂದ ನೀರಿನಮಟ್ಟ ಹೆಚ್ಚಳಕ್ಕೆ ಆದ್ಯತೆ ನೀಡಬೇಕು. ನೀರಿನ ಮೂಲಗಳನ್ನು ಸಂಗ್ರಹಿಸುವ ವಿಧಾನ ಅಳವಡಿಸಿಕೊಳ್ಳಬೇಕು ಎಂದು ಸೂಚಿಸಿದರು.

**ನೀರಿನ ಗುಣಮಟ್ಟ ಕುಸಿತ: ಅವಲೋಕನ ಅಗತ್ಯ:** ಪ್ರಾಧ್ಯಾಪಕ ಡಾ. ಎಂ.ಎನ್.ತಿಮ್ಮೇಗೌಡ ಮಾತನಾಡಿ, ಕರ್ನಾಟಕ ಕೃಷಿ ಪ್ರಧಾನ ರಾಜ್ಯ. ಕೃಷ್ಣಾ ಮತ್ತು ಕಾವೇರಿ ನದಿಮೂಲಗಳಿಂದ ಹೆಚ್ಚು ನೀರಾವರಿ ಪ್ರದೇಶಗಳನ್ನು ಒಳಹೊಂಡಿದೆ. ಕಾವೇರಿ ಅಚ್ಚುಕಟ್ಟು ಪ್ರದೇಶದಲ್ಲಿ ಏಳು ಜಿಲ್ಲೆಗಳಿವೆ. ಸಣ್ಣ ನೀರಾವರಿ ವ್ಯಾಪ್ತಿಯಲ್ಲಿ 1600 ಕೆರೆಗಳಿವೆ. 47 ಟಿಎಂಸಿ ನೀರು ಸಂಗ್ರಹಣೆ ಸಾಧ್ಯ.ಈಗ ಕೆರೆಗಳು ದುಸ್ಥಿತಿಗೆ ತಲುಪಿವೆ. ಕೆರೆಯ ಹೂಳು, ಕಸದರಾಶಿ, ನೀರಿನ ಸಂಗ್ರಹಣಾ ಸಾಮರ್ಥ್ಯ, ಕೆರೆಗಳ ನೀರಿನ ಗುಣಮಟ್ಟ ಕುಸಿತಗಳ ಬಗ್ಗೆ ಅವಲೋಕನ ಮಾಡಿಕೊಳ್ಳಬೇಕು. ಮಂಡ್ಯದಲ್ಲಿ 40–50 ರಷ್ಟು ಕೆರೆಗಳು ಊಳಿನಿಂದ ಆವೃತ್ತಗೊಂಡಿದೆ. ನಮ್ಮ ಕೃಷಿ ಮತ್ತು ಜೀವಸಂಕುಲಕ್ಕೆ ಆಧಾರ ಕೆರೆಗಳು. ಹವಾಮಾನ ಬದಲಾವಣೆಯಿಂದ ಮಳೆಯಲ್ಲಿ ಹೆಚ್ಚುವರಿ ನೀರು ಬಂದರೂ ಬೇಸಿಗೆಯಲ್ಲಿ ನೀರು ಅಭಾವ ಉಂಟಾಗುತ್ತಿದೆ. ಹಿಂದಿನ ಕಾಲಘಟ್ಟದಲ್ಲಿ ಗ್ರಾಮಕ್ಕೊಂದು ಕೆರೆ ನಿರ್ಮಿಸಲಾಗಿತ್ತು. ಆಧುನಿಕತೆಯ ಭರಾಟೆಯಲ್ಲಿ ಕೆರೆಗಳು ಅವಸಾನದತ್ತ ಸಾಗುತ್ತಿವೆ ಎಂದರು.

ಮನುಷ್ಯ ಜೀವಂತವಾಗಿರಲು ಉಸಿರಾಡಬೇಕು, ಚಲಿಸಬೇಕು, ಉತ್ಪಾದಿಸಬೇಕು. ಇದಕ್ಕೆಲ್ಲಾ ಮೂಲ ಮಣ್ಣು. ಜಗತ್ತೇ ನಿಂತಿರುವುದು ಮಣ್ಣಿನ ಮೇಲೆ. ಮಣ್ಣು ಬರಡಾದರೆ ಕಣ್ಣು ಕುರುಡು. ನಾವು ಆರೋಗ್ಯವಂತರಾಗಿ ಇರಲು ಆರೋಗ್ಯಕರ ಆಹಾರ ತಿನ್ನಬೇಕು. ಮಣ್ಣಿನ ಫಲವತ್ತತೆ ಕಾಪಾಡಿಕೊಳ್ಳಬೇಕು.

–ಡಾ.ಎ.ಬಿ.ಪಾಟೀಲ್, ಲೇಖಕ

### ಕೃಷ್ಣಾ ನದಿಯ ವ್ಯಥೆ ಕೇಳುವವರಿಲ್ಲ!

ಆಲಮಟ್ಟಿ ಅಣೆಕಟ್ಟಿನ ಎತ್ತರವನ್ನು 524.56 ಅಡಿಗೆ ಎತ್ತರಿಸಿ ಅಲ್ಲಿ ಸುಮಾರು 130 ಟಿಎಂಸಿ ಅಡಿ ನೀರನ್ನು ಸಂಗ್ರಹಿಸಲು ಅನುಮತಿ ದೊರೆತಿದ್ದರೂ 20 ಹಳ್ಳಿಗಳ ಸ್ಥಳಾಂತರ, ಭೂಸ್ವಾಧೀನ ಇತ್ಯಾದಿಗಳ ಕಾರಣದಿಂದ ಈವರೆಗೂ ನೀರನ್ನು ಸಂಗ್ರಹಿಸಲಾಗಿಲ್ಲ. ಕೃಷ್ಣಾ ಅಣೆಕಟ್ಟು 524 ಅಡಿ ಎತ್ತರಕ್ಕೆ 14 ವರ್ಷಗಳಿಂದ ಅಧಿವೇಶನಗಳಲ್ಲಿ ಹೇಳುತ್ತಲೇ ಬಂದಿದ್ದಾರೆ. ರಾಜ್ಯದ 19ಕ್ಕಿಂತ ಅಧಿಕ ಜಿಲ್ಲೆಗಳ ಜೀವನಾಡಿಯಾದ ಕೃಷ್ಣೆಯ ಸಮಸ್ಯೆಯನ್ನು ಬಗೆಹರಿಸಲು ಅದೆಂಥ ಹೋರಾಟ ಅಗತ್ಯ ಎಂಬುದನ್ನು ಜನಪ್ರತಿನಿಧಿಗಳಾದಿಯಾಗಿ ಕರ್ನಾಟಕದ 6.5 ಕೋಟಿ ಜನರು ಚಿಂತಿಸುವ ಕಾಲ ಸನ್ನಿಹಿತವಾಗಿದೆ ಎಂದು ಡಾ.ಕೃಷ್ಣ ಕೊಲ್ಹಾರ ಕುಲಕರ್ಣಿ ಅಭಿಪ್ರಾಯಪಟ್ಟರು.

ಸಮಾನಾಂತರ ವೇದಿಕೆಯಲ್ಲಿ ಸಾಹಿತ್ಯ ಪಾತ್ರಗಳ ಮುಖಾಮುಖಿ ಗೋಷ್ಠಿ

## ರಾಮ, ಕೃಷ್ಣ, ದ್ರೌಪದಿ: ಪುರಾಣದ ಪಾತ್ರಗಳ ಮರುಶೋಧ

**ಮಂಡ್ಯ:** ಪುರಾಣದ ಪಾತ್ರಗಳನ್ನು ಪ್ರತ್ಯೇಕವಾಗಿ ನೋಡುವ ಗುಣ ಇತ್ತೀಚೆಗೆ ನಮ್ಮಲ್ಲಿ ರೂಢಿಯಾಗಿದೆ. ಅವುಗಳನ್ನು ಹಾಗೇ ನೋಡಬೇಕಿಲ್ಲ. ಪುರಾಣಗಳನ್ನು ಸಮಗ್ರವಾಗಿ ನಮ್ಮಲ್ಲಿ ಮೊದಲು ಗಮನಿಸಲಾಗುತ್ತಿತ್ತು. ಪಾತ್ರಗಳನ್ನು ಪ್ರತ್ಯೇಕಿಸುವ ಗುಣದಿಂದಾಗಿ ಸಮಗ್ರತೆಯ ಅವಗಣನೆ ಆಗುವ ಸಂಭವವಿದೆ ಎಂದು ವಿದ್ವಾಂಸ ಪಾದೇಕಲ್ಲು ವಿಷ್ಣು ಭಟ್ಟ ನುಡಿದರು. ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಎರಡನೇ ದಿನವಾದ ಶನಿವಾರ ನಡೆದ ಸಾಹಿತ್ಯ ಪಾತ್ರಗಳ ಮುಖಾಮುಖಿ ಗೋಷ್ಠಿಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

**ರಾಮನ ಪಾತ್ರಗಳು ವಿಭಿನ್ನ:** ನಾಗಚಂದ್ರನ ರಾಮಚಂದ್ರ ಚರಿತ ಪುರಾಣದ ರಾಮ ಹಾಗೂ ಕುವೆಂಪು ಅವರು ಶ್ರೀ ರಾಮಾಯಣ ದರ್ಶನಂನಲ್ಲಿ ಕಂಡ ರಾಮ ಇಬ್ಬರೂ ವಾಲ್ಮೀಕಿಯ ರಾಮನಿಗಿಂತ ಭಿನ್ನವಾದವರು. ಒಬ್ಬ ಆಧುನಿಕಪೂರ್ವ ರಾಮನನ್ನು ಹಾಗೂ ಇನ್ನೊಬ್ಬರು ಆಧುನಿಕ ರಾಮನನ್ನು ಚಿತ್ರಿಸಿದರು. ನಾಗಚಂದ್ರನಲ್ಲಿ ರಾಮ ಪೂರ್ಣ ಅಹಿಂಸಾವಾದಿಯಾಗಿದ್ದಾನೆ. ನಾಗಚಂದ್ರನ ಕಾವ್ಯದಲ್ಲಿ ಶುದ್ಧ ಲೌಕಿಕದ ಗುಣ ಇದೆ. ಮನುಷ್ಯ ತನ್ನ ಔನ್ನತ್ಯವನ್ನು ತಾನೇ ಸಾಧಿಸಬೇಕು ಎಂಬ ತಾತ್ವಿಕತೆ ಆತನಲ್ಲಿದೆ. ರಾಮನನ್ನು ಇಲ್ಲಿ ಉದಾತ್ತೀಕರಿಸಲಾಗಿದೆ. ಆತನು ಲೌಕಿಕವನ್ನು ತ್ಯಜಿಸಿದ ರಾಮ. ಹೀಗಾಗಿ ಆತನಿಂದ ಮಾಡಲಾಗದ ಹಿಂಸೆಯ ಕೃತ್ಯಗಳನ್ನು ಲಕ್ಷ್ಮಣನಿಂದ ಮಾಡಿಸಲಾಗಿದೆ ಎಂದು ನಾಗಚಂದ್ರನ ಶ್ರೀರಾಮ–ಕುವೆಂಪು ಶ್ರೀರಾಮ ಕುರಿತು ಮಾತನಾಡಿದ ವಿಮರ್ಶಕ ಬಸವರಾಜ ಕಲ್ಗುಡಿ ನುಡಿದರು.

**ಕುವೆಂಪು ಕಾವ್ಯದಲ್ಲಿ ಜೈನ ತತ್ವ:** ಕುವೆಂಪು ಅವರಲ್ಲಿ ರಾಮ ಆಗುವ ಪ್ರಕ್ರಿಯೆಯಲ್ಲಿ ತೊಡಗಿದವನು. ಒಬ್ಬ ವ್ಯಕ್ತಿಯ ಮಾಗುವಿಕೆಯ ಹಲವು ಜೀವಗಳ ಸಹಾಯವೂ ಅಗತ್ಯ ಎಂಬ ಜೈನತತ್ವವೂ ಕುವೆಂಪು ಅವರ ಕಾವ್ಯದಲ್ಲಿ ಅಡಗಿದೆ. ಮಾನವ ಮುಕ್ತನಾಗಲು ಅತೀತದ ಪ್ರಜ್ಞೆಯನ್ನು ತ್ವರಿತಗೊಳಿಸಬೇಕಾಗಿದೆ ಎಂಬ ಮಹರ್ಷಿ ಅರವಿಂದರ ಜೀವನ ದರ್ಶನವೂ ಕುವೆಂಪು ಅವರಲ್ಲಿದೆ.

### ದ್ರೌಪದಿಯಷ್ಟು ನೋವುಂಡವರು ಯಾರೂ ಇಲ್ಲ

ಪುರಾಣ ಪಾತ್ರಗಳಲ್ಲಿ ದ್ರೌಪದಿಯಷ್ಟು ನೋವುಂಡವರು, ಅವಮಾನ ಅನುಭವಿಸಿದವರು ಇನ್ಯಾರೂ ಇಲ್ಲ. ಶಿಷ್ಟ ಕಾವ್ಯಗಳಲ್ಲಿ ದ್ರೌಪದಿ ಭೀಮನ ಗಂಡುತನವನ್ನು ಚುಚ್ಚಿ ಎಚ್ಚರಿಸಿ ಕಲಿತನ ವನ್ನು ಕಾಣಿಸುವವಳಾಗಿದ್ದಾಳೆ. ಜಾನಪದ ಕಾವ್ಯಗಳಲ್ಲಿ ಶಿಷ್ಟ ಕಾವ್ಯಗಳಿಗಿಂತಲೂ ಗಟ್ಟಿಗಿತ್ತಿಯಾದ ದ್ರೌಪದಿಯನ್ನು ನಾವು ಕಾಣುತ್ತೇವೆ ಎಂದು ಶಿಷ್ಟ ಕೃತಿಗಳ ದ್ರೌಪದಿ– ಜನಪದರ ದ್ರೌಪದಿ ಕುರಿತು ಮಾತನಾಡಿದ ಡಾ.ಎಂ ಸುಮಿತ್ರಾ ನುಡಿದರು.

# ಜಪಾನಿನ ಭೂಕಂಪವೂ, ಆಫ್ರಿಕಾದ ಹಕ್ಕಿಜಗಳವೂ, ವಿದ್ಯುಚ್ಛಕ್ತಿ ಪೂರೈಕೆಯೂ

ಇದೇ ಅಂತರಂಗ ಸುದ್ದಿ

ವಿಶ್ವೇಶ್ವರ ಭಟ್
vbhat@me.com

‘ಜಪಾನಿನಲ್ಲಿ ಭೂಕಂಪ ಸಂಭವಿಸಿ ಮೂರು ದಿನ ಜನಜೀವನ ಅಸ್ತವ್ಯಸ್ತವಾದರೂ, ವಿದ್ಯುಚ್ಛಕ್ತಿ ಪೂರೈಕೆಗೆ ಸ್ವಲ್ಪವೂ ವ್ಯತ್ಯಯವಾಗುವುದಿಲ್ಲ. ಆಫ್ರಿಕಾದಲ್ಲಿ ಕರೆಂಟ್ ಕಂಬದ ಮೇಲೆ ಎರಡು ಹಕ್ಕಿಗಳು ಕಚ್ಚಾಡಿಕೊಂಡರೂ ಸಾಕು, ಒಂದು ವಾರ ಕರೆಂಟ್ ಇರೋಲ್ಲ’.

ಈ ಮಾತನ್ನು ಬೇರೆ ಯಾರಾದರೂ ಹೇಳಿದ್ದರೆ ತಮಾಷೆಯ ಮಾತೆಂದು ನಕ್ಕು ಸುಮ್ಮನಾಗಬಹುದಿತ್ತು. ಆದರೆ ಈ ಮಾತು ಬಂದಿದ್ದು ಜಿಂಬಾಬ್ವೆ ಕ್ರಾಂತಿಕಾರಿ ನಾಯಕ ಮತ್ತು ಆ ದೇಶದ ಪ್ರಧಾನಿ ರಾಬರ್ಟ್ ಮುಗಾಬೆ ಬಾಯಿಯಿಂದ.

ಜಪಾನಿನಲ್ಲಿ ಪ್ರತಿ ಐದು ನಿಮಿಷಕ್ಕೊಮ್ಮೆ ಭೂಮಿ ಅದುರಿದ ಅಥವಾ ಸಣ್ಣಗೆ ಕಂಪಿಸಿದ ಅನುಭವವಾಗುತ್ತದೆ. ಕೆಲವು ಸಲ ಭೂಕಂಪವಾಗಿದ್ದು ಅಲ್ಲಿನ ಜನರಿಗೆ ಗೊತ್ತೇ ಆಗುವುದಿಲ್ಲ. ಅಷ್ಟರಮಟ್ಟಿಗೆ ಅವರು ಭೂಕಂಪಕ್ಕೆ ಹೊಂದಿಕೊಂಡಿದ್ದಾರೆ. ಇಡೀ ವಿಶ್ವದಲ್ಲಿ ಅನುಭವಕ್ಕೆ ಬರುವ ಭೂಕಂಪಗಳ ಪೈಕಿ ಶೇ.20ರಷ್ಟು ಜಪಾನಿನಲ್ಲಿ ಸಂಭವಿಸುತ್ತದೆ. ಹಿಂದಿನ ವರ್ಷ ಒಂದೇ ದಿನ ಹತ್ತಕ್ಕಿಂತ ಹೆಚ್ಚು ಸಲ ಭೂಮಿ ಕಂಪಿಸಿತ್ತು.

‘ಭೂಕಂಪದಿಂದ ಜನ ಸಾಯುವುದಿಲ್ಲ. ಆದರೆ ಭೂಕಂಪದಿಂದ ಕಟ್ಟಡಗಳು ಉರುಳಿ ಜನ ಸಾಯುತ್ತಾರೆ’ (Earthquakes don't kill people- buildings do) ಎಂಬುದು ಹಳೆಯ ಉಕ್ತಿ. ಭೂಕಂಪ ಸಂಭವಿಸಿದರೆ ಜನರಿಗೆ ಗಾಯಗಳಾಗುವುದಿಲ್ಲ ಮತ್ತು ಯಾರೂ ಸಾಯುವುದಿಲ್ಲ. ಆದರೆ ಗಟ್ಟಿಮುಟ್ಟಾಗಿ ಕಟ್ಟದ ಕಟ್ಟಡಗಳು ಉರುಳಿ ಅದರಡಿ ಬಿದ್ದು, ಸಿಕ್ಕಿ ಹಾಕಿಕೊಂಡು ಜನ ಸಾಯುತ್ತಾರೆ. ಜಗತ್ತಿನಲ್ಲಿ ಪ್ರತಿ ವರ್ಷ ಭೂಕಂಪ ಸಂಬಂಧಿ ಘಟನೆಯಲ್ಲಿ ಸುಮಾರು 20 ಸಾವಿರ ಮಂದಿ ಸಾಯುತ್ತಾರೆ.

‘‘ನಾನು ಅಮೆರಿಕದಲ್ಲಿದ್ದಷ್ಟು ದಿನ ರಾತ್ರಿ ಬೆತ್ತಲೆಯಾಗಿ ಮಲಗುತ್ತಿದ್ದೆ. ಜಪಾನಿಗೆ ಬಂದ ನಂತರ ಬಟ್ಟೆ ಧರಿಸಿ ಮಲಗುವುದನ್ನು ರೂಢಿಸಿಕೊಂಡೆ. ರಾತ್ರಿ ಯಾವ ಕ್ಷಣದಲ್ಲಾದರೂ ಭೂಕಂಪ ಸಂಭವಿಸಿದರೆ, ತಕ್ಷಣ ಬಟ್ಟೆ ಧರಿಸಿ ಮನೆಯಾಚೆ ಓಡುವುದು ತಡವಾಗಬಹುದೆಂದು ನನ್ನ ಶೈಲಿಯನ್ನು ಬದಲಿಸಿಕೊಂಡೆ’’ ಎಂಬ ಜಪಾನಿನ ಉದ್ಯಮಿಯೊಬ್ಬರ ಮಾತು ಭೂಕಂಪಕ್ಕೆ ಅಲ್ಲಿನ ಜನ ಯಾವ ರೀತಿ ಸನ್ನದ್ಧರಾಗಿರುತ್ತಾರೆ ಎಂಬುದರ ದ್ಯೋತಕ.

ಜಪಾನ್‌ನಲ್ಲಿ ಭೂಕಂಪ ಸಂಭವಿಸಿದಾಗ ಜನರಿಗೆ ಮೊಬೈಲ್ ಆಪ್‌ಗಳ ಮೂಲಕ ತಕ್ಷಣದ ಎಚ್ಚರಿಕೆ ಸಂದೇಶಗಳು ಬರುತ್ತವೆ. ಇದನ್ನು ಭೂಕಂಪ ಮುನ್ನೆಚ್ಚರಿಕೆ ವ್ಯವಸ್ಥೆ (Earthquake Early Warning System) ಎಂದೂ ಕರೆಯಲಾಗುತ್ತದೆ. ಈ ವ್ಯವಸ್ಥೆ ಅತ್ಯಂತ ಸುಧಾರಿತ ಮತ್ತು ಪ್ರಪಂಚದ ಮೊಟ್ಟಮೊದಲ ತುರ್ತು ಎಚ್ಚರಿಕೆ ವ್ಯವಸ್ಥೆಗಳಲ್ಲೊಂದು.

ಭೂಕಂಪ ಮುನ್ನೆಚ್ಚರಿಕೆ ವ್ಯವಸ್ಥೆ ಹೇಗೆ ಕೆಲಸ ಮಾಡುತ್ತದೆ?

ಜಪಾನ್‌ನಲ್ಲಿ ಭೂಕಂಪ ತೀವ್ರತೆಯನ್ನು ಅಳೆಯುವ ಹಲವು ಸೆನ್ಸರ್‌ಗಳನ್ನು ನೆಲದಡಿ ಅಳವಡಿಸಲಾಗಿದೆ. ಈ ಸೆನ್ಸರ್‌ಗಳು ಭೂಕಂಪದ ಕೇಂದ್ರಬಿಂದು (Epicenter) ಮತ್ತು ಪ್ಲೇಟ್‌ಗಳ (ಭೂಪದರ)ಚಲನೆಯ ತೀವ್ರತೆಯನ್ನು ತಕ್ಷಣವೇ ಗುರುತಿಸುತ್ತವೆ. ಭೂಕಂಪದ ಪ್ರಾಥಮಿಕ ಅಲೆಗಳು (Primary Waves) ಮತ್ತು ತೀವ್ರ ಸ್ವರೂಪದ ಅಲೆಗಳು (Secondary Waves) ನೆಲದ ಮೂಲಕ ಚಲಿಸುತ್ತವೆ. ಸೆನ್ಸರ್‌ಗಳು ಈ ಅಲೆಗಳನ್ನು ತಕ್ಷಣ ಗುರುತಿಸಿ, ಎಲ್ಲ ಪ್ರಾಂತಗಳಿಗೆ ಮುನ್ನೆಚ್ಚರಿಕೆ ಸಂದೇಶವನ್ನು ಕಳುಹಿಸುತ್ತವೆ. ಇದರಿಂದ ಭೂಕಂಪದ ಕೇಂದ್ರ ಬಿಂದುವಿನಿಂದ ದೂರ ಇರುವ ಪ್ರದೇಶಗಳಿಗೆ ಕೆಲವು ಸೆಕೆಂಡುಗಳ ಮುನ್ನವೇ ಎಚ್ಚರಿಕೆ ಸಂದೇಶಗಳನ್ನು ನೀಡಬಹುದು.

ಭೂಕಂಪದಿಂದ ಭೂಮಿ ಸಣ್ಣಗೆ ಕಂಪಿಸಿದರೂ, ಸೆನ್ಸರ್ ಅದನ್ನು ಗ್ರಹಿಸಿ ಆ ಮಾಹಿತಿಯನ್ನು ಮೊಬೈಲ್‌ಗಳ ಮೂಲಕ ತುರ್ತು ಸಂದೇಶವಾಗಿ ಕಳಿಸುತ್ತದೆ. ಭೂಕಂಪ ಸಂದೇಶಗಳನ್ನು ಕಳುಹಿಸುವ ಮೊಬೈಲ್ ಆ್ಯಪ್‌ಗಳನ್ನು ಸಾಮಾನ್ಯವಾಗಿ ಎಲ್ಲರೂ ಡೌನ್‌ಲೋಡ್ ಮಾಡಿಕೊಳ್ಳುತ್ತಾರೆ. ಉದಾಹರಣೆಗೆ, ಯಾಹೂ ಜಪಾನ್ ಡಿಸಾಸ್ಟರ್ ಆ್ಯಪ್, ಎನ್‌ಎಚ್‌ಕೆ ವರ್ಲ್ಡ್ ಜಪಾನ್ ಆ್ಯಪ್, ಲೈನ್ ಡಿಸಾಸ್ಟರ್ ನೋಟಿಫಿಕೇಶನ್ ಆ್ಯಪ್, ಜಪಾನ್ ಮೀಟಿಯರೊಲಾಜಿಕಲ್ ಏಜೆನ್ಸಿ ಆ್ಯಪ್ ಇತ್ಯಾದಿ. ಇವು ತಕ್ಷಣ ಭೂಕಂಪ ಎಚ್ಚರಿಕೆ ಸಂದೇಶಗಳನ್ನು ರವಾನಿಸುತ್ತವೆ. ಮೊಬೈಲ್ ನೋಟಿಫಿಕೇಶನ್ ಬರುತ್ತಿರುವಂತೆ ಜನ ಜಾಗೃತರಾಗಲು ಅನುಕೂಲವಾಗುತ್ತದೆ. ಟಿವಿ ಮತ್ತು ರೇಡಿಯೋಗಳಲ್ಲಿ ಕೂಡ ತಕ್ಷಣದ ಎಚ್ಚರಿಕೆ ಘೋಷಣೆಗಳನ್ನು ಪ್ರಸಾರ ಮಾಡಲಾಗುತ್ತದೆ.

ಈ ಮಾಹಿತಿಯು ಭೂಕಂಪದ ತೀವ್ರತೆಯ ಪ್ರಮಾಣ (Magnitude) ಮತ್ತು ಇದರ ಶಕ್ತಿ, ಭೂಕಂಪದ ಕೇಂದ್ರಬಿಂದು (Epicenter) ಮತ್ತು ಸಂಭವಿಸುವ ಅಂದಾಜು ಸಮಯ, ಜನರು ತಕ್ಷಣವೇ ಸುರಕ್ಷಿತ ಸ್ಥಳಗಳಿಗೆ ಹೋಗುವ ಸೂಚನೆ, ಭೂಕಂಪದಿಂದ ಸಮುದ್ರದ ಅಲೆಗಳ ಮಟ್ಟ ಏರಿಕೆಯಾಗುವ ಎಚ್ಚರಿಕೆಯನ್ನು ಒಳಗೊಂಡಿರುತ್ತವೆ. ಈ ಸಂದೇಶಗಳು ಭೂಕಂಪ ಸಂಭವಿಸಿದ ನಂತರ ಅಲ್ಲ, ಅದಕ್ಕೂ ಮುನ್ನವೇ ಬರುವುದು ಗಮನಾರ್ಹ. ಇದು ಜನರಿಗೆ ಸುರಕ್ಷಿತ ಸ್ಥಳಗಳಿಗೆ ಹೋಗಲು ಕೆಲವು ಸೆಕೆಂಡುಗಳ ಕಾಲಾವಕಾಶವನ್ನು ನೀಡುತ್ತದೆ. ಈ ಸಂದೇಶಗಳು ಫ್ಯಾಕ್ಟರಿಗಳಲ್ಲಿ ಯಂತ್ರಗಳನ್ನು ತಕ್ಷಣ ಸ್ಥಗಿತಗೊಳಿಸಲು ಅಥವಾ ಶಿಂಕನ್ಸೆನ್ (Bullet Train) ಸೇರಿದಂತೆ ರೈಲುಗಳನ್ನು ತಕ್ಷಣ ತಡೆಯಲು ಸಹಾಯ ಮಾಡುತ್ತವೆ. ಇದು ಜನರು ಪ್ರಾಣ ಉಳಿಸಿಕೊಳ್ಳಲು, ಬೇರೆಯವರಿಗೆ ನೆರವಾಗಲು ಸಹಾಯಕ.

ಜನರು ಈ ಎಚ್ಚರಿಕೆ ಸಂದೇಶಗಳನ್ನು ಹೇಗೆ ಬಳಸುತ್ತಾರೆ? ಮೊಬೈಲುಗಳಿಗೆ ಭೂಕಂಪ ಎಚ್ಚರಿಕೆ ಸಂದೇಶ ಬರುತ್ತಿದ್ದಂತೆ, ಕಟ್ಟಡದ ಸುರಕ್ಷಿತ ಅಥವಾ ಬಯಲು ಪ್ರದೇಶಗಳ ಕಡೆ ಓಡುತ್ತಾರೆ ಅಥವಾ ಅಡಗುತ್ತಾರೆ. ಗ್ಯಾಸ್ ಪೈಪುಗಳನ್ನು ತಕ್ಷಣ ಸ್ಥಗಿತಗೊಳಿಸುತ್ತಾರೆ, ಬಿಸಿನೀರು, ತೈಲ ಅಥವಾ ವಿದ್ಯುತ್ ಉಪಕರಣಗಳನ್ನು ಹಠಾತ್ ಶಟ್‌ಡೌನ್ ಮಾಡುತ್ತಾರೆ. ತಮ್ಮನ್ನಷ್ಟೇ ಅಲ್ಲ, ಕುಟುಂಬದ ಸದಸ್ಯರನ್ನು ಸಂಪರ್ಕಿಸಲು ಮತ್ತು ಸಂರಕ್ಷಿಸಲು ಈ ಮಾಹಿತಿ ಅತ್ಯಂತ ನಿರ್ಣಾಯಕ.

ಜಪಾನಿನಲ್ಲಿ ಮನೆ, ಅಪಾರ್ಟ್‌ಮೆಂಟ್ ಅಥವಾ ಆಫೀಸ್‌ನಲ್ಲಿ ಒಂದು ನಿರ್ದಿಷ್ಟ ಪ್ರದೇಶವನ್ನು ಭೂಕಂಪ ತುರ್ತು ಪ್ರದೇಶ ಎಂದು ಗುರುತಿಸುತ್ತಾರೆ. ಭೂಕಂಪದ ಸಂದೇಶ ಬರುತ್ತಿದ್ದಂತೆ ಎಲ್ಲರೂ ಕಟ್ಟಡಗಳಿಂದ ಕನಿಷ್ಠ ಇನ್ನೂರು ಮೀಟರ್ ದೂರವಿರುವ ಆ ಬಯಲು ಪ್ರದೇಶದಲ್ಲಿ ಬಂದು ಸೇರುತ್ತಾರೆ.

ಜಪಾನ್‌ನಂಥ ಭೂಕಂಪಪ್ರಾಬಲ್ಯ ಪ್ರದೇಶಗಳಲ್ಲಿ ಈ ಮುನ್ನೆಚ್ಚರಿಕೆ ವ್ಯವಸ್ಥೆಗಳು ಅನೇಕ ಜೀವಗಳನ್ನು ಉಳಿಸಲು ಬಹಳ ಮುಖ್ಯವಾಗಿವೆ. ಜನರ ಸುರಕ್ಷತೆ ಮತ್ತು ಹಿತಕ್ಕಾಗಿ ಅಲ್ಲಿನ ಸರಕಾರ, ತಂತ್ರಜ್ಞಾನದ ನೆರವಿನೊಂದಿಗೆ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತದೆ. ಅಂಥ ಸಂದರ್ಭದಲ್ಲಿ ಯಾವುದೇ ಗಲಿಬಿಲಿ, ಗೊಂದಲಕ್ಕೆ ಆಸ್ಪದವಿರದ ರೀತಿಯಲ್ಲಿ ಜನರೂ ವರ್ತಿಸುತ್ತಾರೆ.

## ಜಪಾನ್ ಎಂಬ ವೃದ್ಧರ ದೇಶ

‘ವೃದ್ಧರು ದೇಶಕ್ಕೆ ಹೊರೆಯಲ್ಲ, ಅವರ ಅನುಭವವನ್ನು ಉಪಯೋಗಿಸಿಕೊಳ್ಳದ ದೇಶ ಬಡವಾಗುತ್ತದೆ’ ಎಂಬುದನ್ನು ಜಗತ್ತಿಗೆ ಸಾರಿದ ದೇಶವೆಂದರೆ ಜಪಾನ್. ಜಗತ್ತಿನಲ್ಲಿ ಅತಿ ಹೆಚ್ಚು ವೃದ್ಧರನ್ನು ಹೊಂದಿರುವ ದೇಶ ಎಂಬ ಅಗ್ಗಳಿಕೆಗೆ ಪಾತ್ರವಾಗಿರುವ ಜಪಾನ್, ವೃದ್ಧರನ್ನುಮತ್ತಷ್ಟು ಗೌರವದಿಂದ ನೋಡಿಕೊಳ್ಳುವ ಜವಾಬ್ದಾರಿ ತನ್ನ ಮೇಲಿದೆ ಎಂದು ಭಾವಿಸಿದೆ. ಇತ್ತೀಚೆಗೆ ಈ ನಿಟ್ಟಿನಲ್ಲಿ ಜಪಾನ್ ಸರಕಾರ ಒಂದು ಸುತ್ತೋಲೆ ಹೊರಡಿಸಿದ್ದು, 75 ವರ್ಷ ದಾಟಿದವರನ್ನು ‘ದೇಶದ ಸಂಪತ್ತು’ ಎಂದು ಭಾವಿಸಬೇಕೆಂದು ಅದು ಹೇಳಿದೆ. ಇದು ವೃದ್ಧರೆಡೆಗಿನ ಭಾವನೆಯನ್ನೇ ಬದಲಿಸಲು ಸಹಾಯಕವಾಗಿದೆ. ಜಪಾನ್ ದೇಶದಲ್ಲಿ ಮನುಷ್ಯನ ಜೀವಿತ ಅವಧಿ ಜಾಸ್ತಿಯಾಗಿದೆ. ಹೀಗಾಗಿ ವರ್ಷದಿಂದ ವರ್ಷಕ್ಕೆ ವೃದ್ಧರ ಪಟ್ಟಿಗೆ ಹೆಚ್ಚಿನ ಜನ ಸೇರ್ಪಡೆಯಾಗುತ್ತಿದ್ದಾರೆ. ಆದರೆ ಅವರು ಸಮಾಜಕ್ಕೆ ಹೊರೆ ಎಂಬ ಭಾವನೆ ಬರಬಾರದು ಮತ್ತು ವೃದ್ಧರ ಅನುಭವವನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಹೊಸ ಹೊಸ ಯೋಜನೆಗಳನ್ನು ಚಿಂತಿಸಲಾಗುತ್ತಿದೆ.

ಈ ಕಾರಣದಿಂದ 75 ವರ್ಷದೊಳಗಿನವರನ್ನು ‘ಪೂರ್ವ ವೃದ್ಧ’ರು (Pre-Old) ಎಂದು ಕರೆಯಲಾಗುತ್ತಿದೆ. ನಿವೃತ್ತಿ ವಯಸ್ಸನ್ನು 65ಕ್ಕೆ ಏರಿಸಲಾಗಿದೆ. 65 ದಾಟಿದವರು ಸಶಕ್ತರಾಗಿದ್ದರೆ, ಅವರ ಸಾಮರ್ಥ್ಯಕ್ಕೆ ಅನುಗುಣವಾದ ಕೆಲಸ ಮಾಡಲು ಅನುವುಮಾಡಿಕೊಡಲಾಗುತ್ತದೆ. ವ್ಯಕ್ತಿಯ ಜೀವಿತ ಅವಧಿ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿರುವುದರಿಂದ, ವೃದ್ಧರ ಸಂಖ್ಯೆಯೂ ಅದಕ್ಕನುಗುಣವಾಗಿ ಏರುವುದು ಸಹಜ. ಆದರೆ ವೃದ್ಧರು ಸಮಾಜಕ್ಕೆ ಅನಪೇಕ್ಷಿತರೆನಿಸಿಕೊಳ್ಳಬಾರದು. ಈ ಕಾರಣದಿಂದ ಅವರ ಅನುಭವವನ್ನು ರಾಷ್ಟ್ರೀಯ ಉತ್ಪಾದನೆಯಲ್ಲಿ ಬಳಸಿಕೊಳ್ಳಬೇಕು ಎಂಬುದು ಅಲ್ಲಿನವರ ಚಿಂತನೆಯಾಗಿದೆ.

ಬಹುತೇಕ ದೇಶಗಳು ವೃದ್ಧರನ್ನು ಅನುತ್ಪಾದಕರೆಂಬಂತೆ ನೋಡುತ್ತವೆ. ಅವರನ್ನು ರಚನಾತ್ಮಕವಾಗಿ ತೊಡಗಿಸಿಕೊಳ್ಳುವ ಯಾವ ಕಾರ್ಯಕ್ರಮವನ್ನೂ ರೂಪಿಸುವುದಿಲ್ಲ. ಆದರೆ ಈ ವಿಷಯದಲ್ಲಿ ಜಪಾನ್ ಇಡೀ ಜಗತ್ತಿಗೆ ಮಾದರಿಯಾಗಿದೆ. ವಯಸ್ಸಾದವರನ್ನುವೃದ್ಧಾಶ್ರಮಕ್ಕೆ ಸೇರಿಸುವುದು ಯಾವ ದೇಶಕ್ಕೂ ಭೂಷಣವಲ್ಲ ಎಂಬುದು ಜಪಾನಿಯರ ಚಿಂತನೆ. ಜಪಾನಿನ ಜನಸಂಖ್ಯೆಯ ಶೇ.30ರಷ್ಟು ಮಂದಿ 65 ಅಥವಾ ಅದಕ್ಕಿಂತ ಹೆಚ್ಚಿನ ವಯಸ್ಸಿನವರು. ಯುರೋಪಿನಲ್ಲಿ ಈ ಪ್ರಮಾಣ ಶೇ.21 ರಷ್ಟಿದ್ದರೆ, ಅಮೆರಿಕದಲ್ಲಿ ಶೇ.17ರಷ್ಟಿದೆ.

ಜಪಾನಿನಲ್ಲಿ ಜನನ ಪ್ರಮಾಣ ಕಡಿಮೆಯಾಗಿರುವುದು, ಜೀವಿತ ಅವಧಿ ಜಾಸ್ತಿಯಾಗಿರುವುದು ವೃದ್ಧರ ಸಂಖ್ಯೆ ಜಾಸ್ತಿಯಾಗಲು ಕಾರಣ. ಇತ್ತೀಚಿನ ದಿನಗಳಲ್ಲಿ ಜಪಾನಿಯರಲ್ಲಿ ವೃದ್ಧರ ಬಗ್ಗೆ ಇದ್ದ ಭಾವನೆಗಳು ನಿಧಾನವಾಗಿ ಬದಲಾಗುತ್ತಿವೆ. ವೃದ್ಧರು ಸಹ ಅನ್ಯ ಕಾರಣಗಳಿಂದ ಸಶಕ್ತರು ಮತ್ತು ಅವರ ಅನುಭವಗಳು ವ್ಯರ್ಥವಾಗಬಾರದು ಎಂಬುದು ಅವರ ಕಾಳಜಿ. ಆದರೆ ಅನೇಕ ದೇಶಗಳು ವೃದ್ಧರ ಬಗ್ಗೆ ಇನ್ನೂ ಹಳೆಯ ಅಭಿಪ್ರಾಯಕ್ಕೆ ಜೋತು ಬಿದ್ದಿವೆ. ವೃದ್ಧರೆಂದರೆ ‘ಹಿರಿಯ ಯುವಕರು’, ‘ಅನುಭವಗಳಿಂದ ಸಮೃದ್ಧರಾದವರು’, ‘ಅನುಭವದಲ್ಲಿ ಸರಿಸಾಟಿ ಇಲ್ಲದವರು’ ಎಂಬ ಅಭಿಪ್ರಾಯವನ್ನು ಮೂಡಿಸಲು ಜಪಾನ್ ಶ್ರಮಿಸುತ್ತಿದೆ. ಚಿಕ್ಕ ಮಕ್ಕಳಿಗೆ ಶಾಲಾ ಪಠ್ಯಪುಸ್ತಕಗಳಲ್ಲಿ ವೃದ್ಧರ ಬಗ್ಗೆ ಗೌರವ ಮೂಡಿಸುವ ಪಾಠಗಳನ್ನು ಸೇರಿಸಿದೆ. ಸಾರ್ವಜನಿಕ ಸ್ಥಳಗಳಲ್ಲಿ ವೃದ್ಧರಿಗೆ ಆದ್ಯತೆ ನೀಡುವ ನಿಯಮಗಳನ್ನು ಸಹ ಜಾರಿಗೆ ತಂದಿದೆ. ಜಪಾನಿನಲ್ಲಿ ವೃದ್ಧರಾಗಿರುವುದು ಅಭಿಮಾನದ ಸಂಗತಿ.

## ಪ್ರತಿಮೆಗಳ ದೇಶ

ಜಪಾನಿನ ಯಾವುದೇ ನಗರದಲ್ಲಿ ಓಡಾಡುವಾಗ ಸ್ಮಾರಕ, ಪ್ರತಿಮೆ, ಪುತ್ಥಳಿಗಳನ್ನು ನೋಡದೇ ಇರಲು ಸಾಧ್ಯವಿಲ್ಲ. ಇದಕ್ಕೆ ಬೌದ್ಧ ಧರ್ಮದ ಪ್ರಭಾವವೂ ಕಾರಣ. ಚೀನಾದಿಂದ ಕೊರಿಯಾ ಮೂಲಕ ಬಂದ ಬೌದ್ಧ ಧರ್ಮ ಜಪಾನಿನಲ್ಲಿ ಬಲವಾಗಿ ಬೇರುಬಿಟ್ಟಿದೆ. ಆ ದೇಶದ ರಾಜರು ಬುದ್ಧನ ಪ್ರತಿಮೆಗಳನ್ನು ಎಲ್ಲೆಡೆ ಸ್ಥಾಪಿಸಿದರು. ಇದು ಸ್ಥಳೀಯ ಶಿಂಟೋ ಕಲೆಯ ಮೇಲೂ ಅಗಾಧ ಪ್ರಭಾವವನ್ನು ಬೀರಿತು. ಹೀಗಾಗಿ ಶಿಂಟೋ ದೇವಾಲಯಗಳಲ್ಲೂ ಬುದ್ಧನ ಕಲ್ಲಿನ ಪ್ರತಿಮೆಗಳನ್ನು ಹೆಚ್ಚಾಗಿ ಕಾಣಬಹುದು. ರಸ್ತೆಯ ಪಕ್ಕದಲ್ಲಿ, ಉದ್ಯಾನದಲ್ಲಿ, ಕಾಡಿನಲ್ಲಿ, ಮನೆಗಳಲ್ಲಿ ಸಣ್ಣ-ಪುಟ್ಟ ಪ್ರತಿಮೆಗಳನ್ನು ಕಾಣಬಹುದು. ಇವು ಕೇವಲ ಅಲಂಕಾರಿಕವಷ್ಟೇ ಅಲ್ಲ. ಪ್ರತಿಮೆಗಳಲ್ಲಿ ಜಪಾನಿಯರ ನಂಬಿಕೆ ಭಿನ್ನವಾಗಿದೆ.

ಜಪಾನಿನಲ್ಲಿ ಭೂಕಂಪ ಮತ್ತು ನೈಸರ್ಗಿಕ ದುರಂತಗಳು ಆಗಾಗ ಸಂಭವಿಸುತ್ತಿರುತ್ತವೆ. ಪುಸ್ತಕ, ಕಟ್ಟಡ ಮತ್ತು ಮನುಷ್ಯರನ್ನು ಘಾಸಿಗೊಳಿಸಬಹುದು, ಧ್ವಂಸಗೊಳಿಸಬಹುದು. ಆದರೆ ಪ್ರತಿಮೆಗಳನ್ನು ಸುಲಭವಾಗಿ ನಾಶಪಡಿಸಲು ಸಾಧ್ಯವಿಲ್ಲ, ಅದರಲ್ಲೂ ಕಲ್ಲಿನ ಪ್ರತಿಮೆಗಳಿಗೆ ಘಾಸಿಯಾದರೂ, ಸಂಪೂರ್ಣವಾಗಿ ಧ್ವಂಸಗೊಳಿಸುವುದು ಕಷ್ಟವೇ. ನೈಸರ್ಗಿಕ ಪ್ರಕೋಪಗಳಿಂದ ಮೇಲಿಂದ ಮೇಲೆ ತೊಂದರೆಗೊಳಗಾಗುವ ದೇಶದಲ್ಲಿ ಯಶಸ್ಸು, ಸಾಧನೆ, ಮೌಲ್ಯ, ಸಿದ್ಧಾಂತಗಳನ್ನು ಪ್ರತಿಮೆಗಳ (Statues) ಮೂಲಕ ಸಂರಕ್ಷಿಸುವುದು ಬಹಳ ಮುಖ್ಯ. ಇದು ಆ ದೇಶದಲ್ಲಿ ಪ್ರತಿಮೆಗಳ ಸ್ಥಾಪನೆಗೆ ಕಾರಣವಾಗಿದೆ.

1498ರಲ್ಲಿ ಜಪಾನಿನ ಟೋಕಿಯೋಕ್ಕೆ ಸನಿಹದ ಕಮಕೂರ ನಗರ ಸುನಾಮಿಗೆ ತುತ್ತಾಗಿ ಮಟ್ಟಸವಾಗಿ ಹೋಯಿತು. ಆ ದುರಂತದಲ್ಲಿ ಸಾವಿರಾರು ಜನ ಸತ್ತುಹೋದರು. ಮುದ್ರಿತ ಅಕ್ಷರ, ಪುಸ್ತಕಗಳೆಲ್ಲ ಕೊಚ್ಚಿಹೋದವು. ಆ ನಗರದಲ್ಲಿರುವ ಕಲ್ಲಿನ ಬುದ್ಧನ ವಿಗ್ರಹಗಳ ಹೊರತಾಗಿ ಉಳಿದುವೆಲ್ಲ ತೇಲಿಹೋದವು. ಬುದ್ಧನ ವಿಗ್ರಹ ನೆಲಕ್ಕುರುಳಿತ್ತು. ಪ್ರತಿಮೆ ಅಲ್ಲಲ್ಲಿ ಜಖಂಗೊಂಡಿತ್ತು. ಅದನ್ನು ನಿಪುಣ ಶಿಲ್ಪಿಗಳು ದುರಸ್ತಿಗೊಳಿಸಿದರು. ಆ ಭೀಕರ ಸುನಾಮಿ ಹೊಡೆತದಲ್ಲಿ ಬುದ್ಧನ ವಿಗ್ರಹ ತೇಲಿಹೋಗದೇ, ಧ್ವಂಸವಾಗದೇ ಉಳಿಯಿತು.

ಪ್ರಾಕೃತಿಕ ದುರಂತಗಳು ಆಗಾಗ ಸಂಭವಿಸುವ ಜಪಾನಿನಂಥ ದೇಶದಲ್ಲಿ ಸಾಮೂಹಿಕ ನೆನಪುಗಳನ್ನು ಕಾಪಾಡಿಕೊಳ್ಳುವುದು ಸಹ ಅಷ್ಟೇ ಮುಖ್ಯ. ಹೀಗಾಗಿ ಕಲ್ಲಿನ ವಿಗ್ರಹ ಅಥವಾ ಪ್ರತಿಮೆಗಳನ್ನು ಸ್ಥಾಪಿಸಿ ನೆನಪುಗಳನ್ನು ಚಿರಸ್ಥಾಯಿಯಾಗಿರಿಸುವ ಸಂಪ್ರದಾಯ ನಡೆದುಕೊಂಡು ಬಂದಿದೆ.

## ಭೂಕಂಪವೂ ಹಾಸ್ಯಕ್ಕೆ ಪ್ರೇರಣೆ

ಜಪಾನಿಯರು ಮೌನ ಹಾಸ್ಯಪ್ರಿಯರು. ಹೊರಗಿಂದ ನೋಡಿದರೆ ಹೆಚ್ಚು ನಗಲಿಕ್ಕಿಲ್ಲ ಎಂದು ಅನಿಸಿದರೂ, ಶುದ್ಧ ಹಾಸ್ಯವನ್ನು ಎಂಜಾಯ್ ಮಾಡಬಲ್ಲರು. ಭೂಕಂಪದಂಥ ಗಂಭೀರ ಮತ್ತು ಭಯಾನಕ ವಿಷಯದ ಬಗ್ಗೆ ಸಹ ವಕ್ರತುಂಡೋಕ್ತಿ ಚಟಾಕಿ ಹರಿಸಿ ಚೋದ್ಯ ಮಾಡಬಲ್ಲರು. ಜಪಾನಿನಲ್ಲಿ ದಿನದಲ್ಲಿ ಮೂರ್ನಾಲ್ಕು ಕಡೆಗಳಲ್ಲಿ ಭೂಮಿ ನಡುಗುವುದರಿಂದ, ಭೂಕಂಪವೂ ಹಾಸ್ಯದ ವಿಷಯವಾಗಿರುವುದು ವಿಪರ್ಯಾಸವೇ ಸರಿ.

ಒಮ್ಮೆ ಜಪಾನಿನ ಖ್ಯಾತ ಬರಹಗಾರ ಹರುಕಿ ಮುರಾಕಮಿ, ‘‘ಜಪಾನ್‌ನಲ್ಲಿ ಭೂಮಿ ಅಲ್ಲಾಡಲಾರಂಭಿಸಿದರೆ, ನಾನು ನನ್ನ ಟೇಬಲ್ ಮೇಲೆ ಕುಳಿತುಕೊಳ್ಳುತ್ತೇನೆ. ಯಾಕೆಂದರೆ ಅದೂ ಅಲ್ಲಾಡ್ತಿರೋದ್ರಿಂದ, ನರ್ವಸ್‌ನೆಸ್ ಸ್ವಲ್ಪ ಕಡಿಮೆ ಆಗುತ್ತೆ!’’ ಎಂದು ಹೇಳಿದ್ದರು. ‘‘ಭೂಕಂಪದ ಎಚ್ಚರಿಕೆಯು ತಕ್ಷಣವೇ ಬರುತ್ತೆ, ಆದರೆ ನಾವು ಎಚ್ಚರವಾಗೋಕೆ ಇನ್ನೂ 10 ನಿಮಿಷ ಬೇಕಾಗುತ್ತೆ’’ ಎಂದು ಅವರು ಹೇಳಿದ್ದು ಹಾಸ್ಯವಷ್ಟೇ ಅಲ್ಲ, ಕಟುವಾಸ್ತವವೂ ಹೌದು.

‘‘ಜಪಾನ್‌ನಲ್ಲಿ ಭೂಕಂಪ ಸಂಭವಿಸುವುದು ಸಾಮಾನ್ಯ, ಆದ್ದರಿಂದ ನಾನು ಮನೆಯಲ್ಲಿ ‘ಡಾನ್ಸ್ ಫ್ಲೋರ್’ ಮಾಡಿಕೊಂಡಿದ್ದೇನೆ. ಅಲ್ಲಾಡೋದು ಕೇವಲ ಭೂಮಿಯೊಂದೇ ಅಲ್ಲ!’’ ಎಂದು ಜಪಾನಿನ ಖ್ಯಾತ ಡಾನ್ಸರ್ ಹೇಳಿದ್ದು ಸಹ ವಿಚಿತ್ರವಾದರೂ ಸತ್ಯ.

‘‘ಜಪಾನ್‌ನಲ್ಲಿ, ಭೂಕಂಪ ಮತ್ತು ಇಂಟರ್ನೆಟ್ ಸಿಗುವುದಿಲ್ಲ ಎಂಬುದು ಒಂದೇ ರೀತಿಯ ತುರ್ತು ಪರಿಸ್ಥಿತಿಯನ್ನುಂಟು ಮಾಡುತ್ತದೆ’’ ಎನ್ನು ಪಿಕೋ ಇಯೆರ್ ಬರೆದಿದ್ದರು.

ಜಪಾನಿನ ಭೂಕಂಪದ ಬಗ್ಗೆ ಇನ್ನೊಂದು ಮಾತಿದೆ- ‘‘ನಾನು ಭೂಕಂಪದಲ್ಲಿ ಯಾರನ್ನು ಕಳೆದುಕೊಂಡಿದ್ದೀನಿ ಅಂತ ಆಲೋಚನೆ ಮಾಡ್ತಾ ಇರುವಷ್ಟರೊಳಗೆ, ಮತ್ತೊಮ್ಮೆ ಭೂಕಂಪ ಸಂಭವಿಸಿರುತ್ತದೆ’’.

‘‘ಜಪಾನಿನಲ್ಲಿ ಥ್ರಿಲ್ಲರ್, ಹಾರರ್, ಸಸ್ಪೆನ್ಸ್ ಮತ್ತು ಕಾಮಿಡಿ ಈ ನಾಲ್ಕರ ಅನುಭವ ಆಗಬೇಕು ಅಂದ್ರೆ, ಭೂಕಂಪವೊಂದೇ ಸಾಕು’’ ಎಂಬ ಮಾತಿದೆ.

ಟೋಕಿಯೋದ ಆಕಿಯಬಾರ ಪ್ರದೇಶದಲ್ಲಿ ಒಂದೆಡೆ ಮೊಬೈಲ್ ಅಂಗಡಿಯಲ್ಲಿ ಬರೆದ ಒಂದು ಸ್ಲೋಗನ್ ಹೀಗಿತ್ತು- ‘‘ಜಪಾನಿನ ಮನೆಗಳು ಮಾತ್ರ ಅಲ್ಲ, ಜನರ ಮೊಬೈಲ್‌ಗೂ ಕಂಪನ ಪ್ರೂಫ್ ಕೇಸ್ ಇದೆ!’’ (In Japan, even people's phones have earthquake-proof cases, not just the houses!). ‘‘ಜಪಾನಿನಲ್ಲಿ ಬಾರ್‌ನಲ್ಲಿ ಸ್ನೇಹಿತರನ್ನು ಭೇಟಿ ಮಾಡುವುದೆಂದರೆ ಅದು ನೆಲ ನಡುಗುವ ಅನುಭವವೇ’’ (In Japan, meeting friends at Bar always includes a ground-shaking experience!) ಎಂದು ಹೇಳುವುದುಂಟು.

ಜಪಾನಿಯರ ಜೀವನ ತತ್ವವೊಂದಿದೆ. ಅಲ್ಲೂ ಅವರು ಭೂಕಂಪವನ್ನು ಹಾಸ್ಯ ಮಾಡುತ್ತಾರೆ. ‘‘ನೀನೇ ಜಂಪ್ ಮಾಡಬೇಕಿಲ್ಲ, ನಿನಗಾಗಿ ನೆಲವೇ ಜಂಪ್ ಮಾಡುತ್ತದೆ’’ ಎಂದು ಭೂಕಂಪವನ್ನು ಛೇಡಿಸುತ್ತಾರೆ.

ಜಪಾನಿಯರು ಭೂಕಂಪಕ್ಕೆ ಹೇಗೆ ಹೊಂದಿಕೊಂಡಿದ್ದಾರೆಂದರೆ ಅದನ್ನು ನೋಡಿ ಹಾಸ್ಯ ಮಾಡುವಷ್ಟು. ಬಡತನ ಇರುವ ದೇಶಗಳು ತಮ್ಮ ಹಸಿವನ್ನು ನೋಡಿ ಹಾಸ್ಯ ಮಾಡಿಕೊಳ್ಳುವಂತೆ, ಜಪಾನಿಯರು ಭೂಕಂಪ ನೋಡಿ ನಗುವುದನ್ನು ರೂಢಿಸಿಕೊಂಡಿದ್ದಾರೆ.

# ಬಳ್ಳಿಯೇಕೆ ಮರವನ್ನು ಅಪ್ರದಕ್ಷಿಣಾಕಾರವಾಗಿ ಸುತ್ತುತ್ತದೆ?

**ಸಾಮಾನ್ಯವಾಗಿ ಬಳ್ಳಿ ಮರವನ್ನು ತಬ್ಬಿಕೊಳ್ಳುವುದು, ಮರದ ಸುತ್ತ ಹಬ್ಬುವುದು, ಆಸರೆ ಪಡೆಯುವುದು ಅಂದಾಗೆಲ್ಲ ಹೆಣ್ಣು-ಗಂಡಿನ ಚಿತ್ರಣವೇ ಕಣ್ಮುಂದೆ ಬರುವುದು. ಅದರಲ್ಲೂ ಸಂಸ್ಕೃತ ಕವಿಗಳಿಗೆ ಕನ್ನಡ ಕವಿಗಳಿಗಿಂತಲೂ ಹೆಚ್ಚು ಅನುಕೂಲ, ಭಾಷೆಯಿಂದಾಗಿಯೇ. ಕನ್ನಡದಲ್ಲಿ ಮರವೂ ನಪುಂಸಕ ಲಿಂಗ, ಬಳ್ಳಿಯೂ ನಪುಂಸಕ ಲಿಂಗ. ‘ತರುವೂ ಲತೆಯೂ ಸೇರಿದ ಕಥೆಯೂ, ತನುವ ಬಳಸಿ ತೋಳಿನುಂಗುರ’ ಎಂದು ಹಾಡಬಹುದಾದರೂ ನಪುಂಸಕ ಲಿಂಗದಲ್ಲಿ ಚಿತ್ರಣ ಅಷ್ಟೊಂದು ಪರಿಣಾಮಕಾರಿ ಆಗುವುದಿಲ್ಲ.**

ತಿಳಿರು ತೋರಣ

ಶ್ರೀವತ್ಸ ಜೋಶಿ
srivathsajoshi@yahoo.com

‘ಅನರ್ಘ್ಯಮಪಿ ಮಾಣಿಕ್ಯಂ ಹೇಮಾಶ್ರಯಮಪೇಕ್ಷತೇ। ಅನಾಶ್ರಯಾ ನ ಶೋಭಂತೇ ಪಂಡಿತಾ ವನಿತಾ ಲತಾಃ॥’ ಅಂತೊಂದು ಸುಭಾಷಿತವಿದೆ. ಇದರ ಮೊದಲ ಸಾಲು ಚಾಣಕ್ಯ ನೀತಿಯಲ್ಲೂ ಬರುತ್ತದೆ. ಭಾವಾರ್ಥ ಹೀಗಿದೆ: ಎಷ್ಟೇ ಅಮೂಲ್ಯವಾಗಿದ್ದರೂ ಮಾಣಿಕ್ಯಕ್ಕೆ ಹೆಚ್ಚಿನ ಶೋಭೆ ಬರುವುದು ಅದನ್ನು ಬಂಗಾರದೊಡನೆ ಜೋಡಿಸಿ ಆಭರಣ ಮಾಡಿದಾಗಲೇ. ಅಂದರೆ ಮಾಣಿಕ್ಯಕ್ಕೆ ಚಿನ್ನದ ಆಶ್ರಯ ಬೇಕು. ಅದೇ ರೀತಿಯಲ್ಲಿ ವಿದ್ವಾಂಸರಿಗೂ, ಹೆಣ್ಣಿಗೂ ಮತ್ತು ಬಳ್ಳಿಗೂ, ಇನ್ನೊಬ್ಬರ ಆಶ್ರಯ ಅಗತ್ಯ. ವಿದ್ವಾಂಸರಿಗೆ ರಾಜಾಶ್ರಯ, ಹೆಣ್ಣಿಗೆ ಗಂಡಿನ ಆಶ್ರಯ, ಬಳ್ಳಿಗೆ ಮರದ ಆಶ್ರಯ- ಇವು ಲೋಕರೂಢಿ. ಅಪವಾದ ಇರುವುದಿಲ್ಲವೆಂದಲ್ಲ. ಈಗಿನ ಕಾಲದಲ್ಲಿ ಮಹಿಳೆ ಯಾರ ಹಂಗೂ ಇಲ್ಲದೇ ಸರ್ವಸ್ವತಂತ್ರಳಾಗಿ ಬದುಕಬಲ್ಲಳು ಎಂದು ಮಹಿಳಾವಾದಿಗಳು ಮೇಜು ಗುದ್ದುವುದು ಬೇಕಿಲ್ಲ, ಇಲ್ಲಿ ವಿಷಯ ಬಳ್ಳಿಯದು. ಅದನ್ನಷ್ಟೇ ಹಿಡಿದುಕೊಂಡು ಈ ವಿಚಾರಲಹರಿಯನ್ನು ವಿಸ್ತರಿಸೋಣ.

ಬಳ್ಳಿಯ ಬಳುಕು ಮತ್ತು ಬೆಡಗುಗಳಿಂದ ಬೆರಗಾಗದ ಕವಿಗಳಿರಲಿಕ್ಕಿಲ್ಲ ಪ್ರಪಂಚದ ಯಾವ ಭಾಷೆಯಲ್ಲೂ. ಬಳ್ಳಿಯು ಮರವನ್ನು ಆಶ್ರಯಿಸುವುದು, ಆಲಿಂಗಿಸುವುದು, ಆವರಿಸಿಕೊಳ್ಳುವುದು ಕವಿಗಳಿಗೆ ಸೃಷ್ಟಿಯ ಸುಂದರ ರೂಪಕವಾಗಿ ಕಾಣುವುದರಲ್ಲಿ ಆಶ್ಚರ್ಯವೇನಿಲ್ಲ. ‘ಅಂದು ನೀ ನನ್ನ ಅಪ್ಪಿಕೊಂಡಾಗ ಪ್ರಿಯೆ, ಮರದ ಸುತ್ತ ಲತೆ। ಭಯವಾಗುತ್ತದೆ ಇಂದು ನೋಡಿದರೆ ನಿನ್ನ ಸುತ್ತಳತೆ!’ ಎಂಬ ಡುಂಡಿರಾಜರ ಹಾಸ್ಯಚುಟುಕ ಸಹ ಅಷ್ಟೊಂದು ವರ್ಲ್ಡ್‌ಫೇಮಸ್ ಆಗುವುದಕ್ಕೆ ಮರ-ಬಳ್ಳಿ ರೂಪಕವೇ ಕಾರಣ. ಅದೇರೀತಿ ಪದವಿನೋದ ಬೆರೆಸಿದ ಇನ್ನೊಂದು, ಟಿಪಿಕಲ್ ಡುಂಡಿರಾಜ್ ಛಾಪು: ‘ಹುಲುಸಾಗಿ ಬೆಳೆದಿದೆ ಕರಿಮೆಣಸಿನ ಬಳ್ಳಿ ಅಡಿಕೆ ಮರಕ್ಕೆ ಹಬ್ಬಿ। ಮೆಣಸಿನ ಬಳ್ಳಿ ಮಡದಿ, ಅಡಿಕೆ ಮರ Hubby!’ ಹಾಸ್ಯರಸದಲ್ಲಷ್ಟೇ ಅಲ್ಲ, ಬಳ್ಳಿಯ ಹಬ್ಬು-ತಬ್ಬುವಿಕೆಗಳು ಕರುಣರಸದಲ್ಲೂ ಕಾಣಿಸಬಲ್ಲವು. ಹೆಣ್ಣು-ಗಂಡು ಅಂತಲೇ ಆಗಬೇಕೆಂದಿಲ್ಲ, ತಂದೆ-ಮಗನ ಸಂಬಂಧಕ್ಕೂ ಹೊಂದಬಲ್ಲವು. ‘ಬಡವರ ಬಂಧು’ ಚಿತ್ರದ ‘ನಿನ್ನ ಕಂಗಳ ಬಿಸಿಯ ಹನಿಗಳು ನೂರು ಕಥೆಯ ಹೇಳಿವೆ..’ ಗೀತೆಯಲ್ಲಿ ‘ಬಳ್ಳಿಯಂತೆ ತಬ್ಬಿ ನಿನ್ನ ಆಸರೆಯಲಿ ಬೆಳೆದೆನು... ನನ್ನ ತಾಯಿಯ ಪಾದದಾಣೆ ಬೇರೆ ಏನನು ಅರಿಯೆನು ನೀನೇ ನನ್ನ ದೇವನು...’ ಚರಣವನ್ನು ನೀವು ನೆನಪಿಸಿಕೊಳ್ಳಬೇಕು. ತೆರೆಯ ಮೇಲೆ ಸಂಪತ್ ಮತ್ತು ಡಾ.ರಾಜ್ ಅಭಿನಯಕ್ಕೆ, ಆರ್ದ್ರತೆಯಲ್ಲಿ ಅದ್ದಿದ ಅಣ್ಣಾವ್ರ ಗಾಯನಕ್ಕೆ ನಿಮ್ಮ ಕಣ್ಣುಗಳು ಮಂಜಾಗಬೇಕು.

ಆದರೂ ಸಾಮಾನ್ಯವಾಗಿ ಬಳ್ಳಿ ಮರವನ್ನು ತಬ್ಬಿಕೊಳ್ಳುವುದು, ಮರದ ಸುತ್ತ ಹಬ್ಬುವುದು, ಮರದ ಆಸರೆ ಪಡೆಯುವುದು... ಅಂದಾಗೆಲ್ಲ ಹೆಣ್ಣು-ಗಂಡಿನ ಚಿತ್ರಣವೇ ಕಣ್ಮುಂದೆ ಬರುವುದು. ಅದರಲ್ಲೂ ಸಂಸ್ಕೃತ ಕವಿಗಳಿಗೆ ಕನ್ನಡ ಕವಿಗಳಿಗಿಂತಲೂ ಹೆಚ್ಚು ಅನುಕೂಲ, ಭಾಷೆಯಿಂದಾಗಿಯೇ. ಕನ್ನಡದಲ್ಲಿ ಮರವೂ ನಪುಂಸಕ ಲಿಂಗ, ಬಳ್ಳಿಯೂ ನಪುಂಸಕ ಲಿಂಗ. ‘ತರುವೂ ಲತೆಯೂ ಸೇರಿದ ಕಥೆಯೂ... ತನುವ ಬಳಸಿ ತೋಳಿನುಂಗುರ...’ ಎಂದು ಹಾಡಬಹುದಾದರೂ ನಪುಂಸಕ ಲಿಂಗದಲ್ಲಿ ಚಿತ್ರಣ ಅಷ್ಟೊಂದು ಪರಿಣಾಮಕಾರಿ ಆಗುವುದಿಲ್ಲ. ಸಂಸ್ಕೃತದಲ್ಲಾದರೆ ಹಾಗಲ್ಲ. ತರು, ವೃಕ್ಷ, ದ್ರುಮ, ಪಾದಪ, ಶಾಖಿನ್ ಮುಂತಾಗಿ ಮರ ಎಂಬರ್ಥದ ಪದಗಳೆಲ್ಲ ಪುಲ್ಲಿಂಗ. ಲತಾ, ವಲ್ಲೀ, ವ್ರತತಿ, ಗುಲ್ಮಿನೀ ಮುಂತಾಗಿ ಬಳ್ಳಿ ಎಂಬರ್ಥದ ಪದಗಳೆಲ್ಲ ಸ್ತ್ರೀಲಿಂಗ. ಹಾಗಿರುವಾಗ ವ್ಯಾಸ-ಭಾಸ-ಕಾಳಿದಾಸ ಆದಿಯಾಗಿ ಸಂಸ್ಕೃತದ ಕವಿವರೇಣ್ಯರು ಬಳ್ಳಿಯನ್ನು ಪ್ರಿಯತಮೆಯೆಂದೂ ಮರವನ್ನು ಪ್ರಿಯಕರನೆಂದೂ ಬಣ್ಣಿಸದಿರುತ್ತಾರೆಯೇ? ಒಂದು ಸ್ಯಾಂಪಲ್ ನೋಡಿ, ಕಾಳಿದಾಸನ ಅಭಿಜ್ಞಾನ ಶಾಕುಂತಲಮ್ ನಾಟಕದಿಂದ: ‘ಕ್ಷಾಮಕ್ಷಾಮಕಪೋಲಮಾನನಮುರಃ ಕಾಠಿನ್ಯಮುಕ್ತಸ್ತನಂ। ಮಧ್ಯಃ ಕ್ಲಾನ್ತತರಃ ಪ್ರಕಾಮವಿನತಾವಂಸೌ ಛವಿಃ ಪಾಣ್ಡುರಾ। ಶೋಚ್ಯಾ ಚ ಪ್ರಿಯದರ್ಶನಾ ಚ ಮದನಕ್ಲಿಷ್ಟೇಯಮಾಲಕ್ಷ್ಯತೇ। ಪತ್ರಾಣಾಮಿವ ಶೋಷಣೇನ ಮರುತಾ ಸ್ಪೃಷ್ಟಾ ಲತಾ ಮಾಧವೀ॥’ ಇವು ದುಷ್ಯಂತನ ಮಾತುಗಳು. ಉದ್ಯಾನದಲ್ಲಿ ಸಖಿಯರೊಡನಿದ್ದ ಶಕುಂತಲೆಯನ್ನು ಕಂಡು ಸ್ವಗತ. ‘‘ಇವಳ ಕೆನ್ನೆಗಳು ಕೃಶವಾಗಿವೆ. ವಕ್ಷಸ್ಥಳವು ಸ್ತನಗಳ ಬಿಗಿತ ಕಳಕೊಂಡಿದೆ. ನಡುವು ಬಡವಾಗಿದೆ. ಬಾಹುಗಳೂ ವಿಪರೀತ ಕುಸಿದಿವೆ. ಮೈಯ ಕಾಂತಿಯೂ ಮಸುಕಾಗಿದೆ. ಪ್ರೇಮಜ್ವರದಿಂದ ಬಾಧಿತಳಾಗಿ ಒಮ್ಮೆ ಮುದ್ದಾಗಿಯೂ ಒಮ್ಮೆ ಮರುಗುವಂತೆಯೂ ಕಾಣುತ್ತಿದ್ದಾಳೆ, ಗಾಳಿ ಸೋಕಿದಾಗ ಎಲೆಗಳೆಲ್ಲ ಪತರಗುಟ್ಟುವ ಮಾಧವೀ ಬಳ್ಳಿಯಂತೆ!’’ ಶಕುಂತಲೆ ಹಾಗೇಕೆ ಕಷ್ಟಪಡಬೇಕು, ವೃಕ್ಷದಂತಿರುವ ತನ್ನನ್ನು ತಬ್ಬಿಕೊಂಡು ಆಸರೆ ಪಡೆಯಬಾರದೇ ಎಂದು ದುಷ್ಯಂತನಿಗೆ ಆಸೆ.

ಮಾಧವಿ, ಅತಿಮುಕ್ತಾ, ಮಾಲತಿ, ಪ್ರಿಯಂಗು ಇತ್ಯಾದಿ ಬಳ್ಳಿಗಳ ಹೆಸರುಗಳು. ವಸಂತ ಋತುವಿನಲ್ಲಿ ಮಾವಿನಮರಕ್ಕೆ ಸುತ್ತಿಕೊಂಡರೆ ಬಂತಿದೋ ಶೃಂಗಾರಮಾಸ! ಅಶ್ವಘೋಷನ ‘ಸೌಂದರಾನಂದ’ ಕೃತಿಯಲ್ಲೂ ಇಂಥದೊಂದು ವರ್ಣನೆ ಬರುತ್ತದಂತೆ. ನಾಯಕ ನಂದ ತನ್ನ ಪತ್ನಿ ಸುಂದರಿಯನ್ನು ತೊರೆದು ಬುದ್ಧನಲ್ಲಿ ವಿದ್ಯೆಗೆಂದು ಹೋಗುತ್ತಾನೆ. ವಸಂತ ಋತುವಿನ ಆಗಮನ ಆತನನ್ನು ಸಂಕಲ್ಪದಿಂದ ವಿಚಲಿತನನ್ನಾಗಿಸುತ್ತದೆ. ಪ್ರಕೃತಿಯಲ್ಲಿ ಎಲ್ಲೆಲ್ಲಿ ನೋಡಿದರೂ ಹೆಂಡತಿಯೇ ನೆನಪಾಗುತ್ತಾಳೆ. ಬೆಳ್ಳಗಿನ ಹೂವು ಆಕೆಯ ಮುಖವನ್ನು ನೆನಪಿಸುತ್ತದೆ. ಕೋಗಿಲೆಯ ಕಪ್ಪು ಬಣ್ಣ ಆಕೆಯ ಕಪ್ಪು ಕೇಶರಾಶಿಯನ್ನು ನೆನಪಿಸುತ್ತದೆ. ಮಾವಿನ ಮರಕ್ಕೆ ಸುತ್ತಿಕೊಂಡ ಅತಿಮುಕ್ತಾ ಬಳ್ಳಿಯನ್ನು ನೋಡಿದಾಗಂತೂ ಅಳುವೇ ಬರುತ್ತದೆ. ‘ನನ್ನ ಸುಂದರಿಯು ಈರೀತಿ ನನ್ನನ್ನು ಯಾವಾಗ ತಬ್ಬಿಕೊಳ್ಳುವಳೋ...’ ಎಂದು ಹಾತೊರೆಯುತ್ತಾನೆ. ವೃಂದಾವನದಲ್ಲಿ ರಾಧಾ-ಕೃಷ್ಣರ ಕಣ್ಣಾಮುಚ್ಚಾಲೆ ಹುಸಿಮುನಿಸು ಪ್ರೀತಿಪರಾಕಾಷ್ಠೆಗಳನ್ನು ಬಣ್ಣಿಸುವಾಗಲೂ ಹೋಲಿಕೆಗೆ ಕವಿಗಳ ಮೊದಲ ಪ್ರಾಶಸ್ತ್ಯ ತರು-ಲತೆಗಳಿಗೇ. ವೃಂದಾವನದ ಉದ್ಯಾನದಲ್ಲಿರುವ ಬಳ್ಳಿಗಳೆಲ್ಲ ತಮ್ಮಲ್ಲಿ ಅರಳಿರುವ ಪುಷ್ಪಗಳೆಂಬ ನಗುವಿನಿಂದ, ಮೊಗ್ಗುಗಳೆಂಬ ಕುಚದ್ವಯದಿಂದ, ಚಿಗುರೆಲೆಗಳೆಂಬ ತುಟಿಗಳಿಂದ ಕೃಷ್ಣನನ್ನು ಸಂಪ್ರೀತಗೊಳಿಸುತ್ತವಂತೆ, ರಾಧೆಯ ಹಾಗೆಯೇ ತಮ್ಮನ್ನು ಪ್ರತಿಬಿಂಬಿಸುತ್ತ. ಹಾಗಿರುತ್ತದೆ- ‘ಸುಮ ಸುಂದರ ತರುಲತೆಗಳ ವೃಂದಾವನಲೀಲೆ... ಸುಪ್ರಬೋಧ ಚಂದ್ರೋದಯ ರಾಗಾರುಣ ಜ್ವಾಲೆ!’ ಖುಷಿಯಿಂದ ಹುಚ್ಚೆದ್ದು ಸ್ವತಃ ಕೃಷ್ಣನೂ ‘ಬಲ್‌ಖಾತೀ ಬೇಲೇಂ ಮಸ್ತೀ ಮೇ ಖೇಲೇಂ... ಪೇಡೋಂಸೇ ಮಿಲ್ ಕೇ ಗಲೇ... ಹೇ ನೀಲೇ ಗಗನ್ ಕೇ ತಲೇ ಧರ್ತೀ ಕಾ ಪ್ಯಾರ್ ಪಲೇ...’ ಎಂದು ಹಿಂದೀ ಹಾಡು ಹಾಡುತ್ತ ನಲಿದಾಡಿಯಾನು!

ಕವಿಕಲ್ಪನೆ ಕಾಣುವ ಚೆಲುವಿನ ಜಾಲವು... ಭಾಷಾತೀತವಾದುದು. ಆದರೆ ಕಾವ್ಯಲೋಕವನ್ನು ಒಮ್ಮೆ ಅಲ್ಲಿಗೇ ಬಿಟ್ಟು ಈಗ ವಿಜ್ಞಾನಲೋಕವನ್ನು, ಅದರಲ್ಲೂ ಸಸ್ಯಶಾಸ್ತ್ರವನ್ನು ಪ್ರವೇಶಿಸೋಣ. ಆರ್ಟ್ಸ್ ವಿಭಾಗದ ಲಿಟರೇಚರ್ ಕ್ಲಾಸ್‌ನಿಂದ ಎದ್ದು ಬಂದು ಸೈನ್ಸ್ ವಿಭಾಗದಲ್ಲಿ ಬಾಟನಿ ಕ್ಲಾಸಿಗೆ ಎಂಟ್ರಿ ಅಂದ್ಕೊಳ್ಳಿ. ಬಳ್ಳಿಯು ಮರವನ್ನು ತಬ್ಬಿಕೊಳ್ಳುತ್ತದೆ, ಸುತ್ತುವರಿಯುತ್ತದೆ ಅಂತೆಲ್ಲ ಸಾಹಿತ್ಯಲೋಕವು ಕಲರ್‌ಫುಲ್ ಆಗಿ ಚಿತ್ರಿಸಿರುವುದೇನೋ ಹೌದು, ಆದರೆ ಬಳ್ಳಿಯು ಮರವನ್ನು ಪ್ರದಕ್ಷಿಣಾಕಾರ ಸುತ್ತುತ್ತದೆಯೇ ಅಪ್ರದಕ್ಷಿಣಾಕಾರವಾಗಿಯೇ ಎಂಬ ವಿವರಣೆ ಯಾವ ಸಾಹಿತ್ಯದಲ್ಲೂ ಇದ್ದಂತಿಲ್ಲ. ಅದೇನಿದ್ದರೂ ವಿಜ್ಞಾನದ ಕೆಲಸ. ಪ್ರಪಂಚದ ಅಷ್ಟೂ ಬಳ್ಳಿ ಪ್ರಭೇದಗಳ ಪೈಕಿ ಶೇ.90ರಷ್ಟು ಬಳ್ಳಿಗಳು ಮರವನ್ನು(ಅಥವಾ ಯಾವುದೇ ಆಧಾರಸ್ತಂಭವನ್ನು) ಅಪ್ರದಕ್ಷಿಣಾಕಾರವಾಗಿ ಸುತ್ತುತ್ತವೆ ಎಂಬ ಸಂಗತಿ ನಿಮಗೆ

ಗೊತ್ತಿತ್ತೇ? ನನಗೆ ಗೊತ್ತಿದೆಯೆಂದು ನಾನಿಲ್ಲಿ ಪೋಸು ಕೊಡಲಿಕ್ಕೆ ಖಂಡಿತ ಹೋಗಲಾರೆ. ಏಕೆಂದರೆ ಈ ಒಂದು ಸ್ವಾರಸ್ಯಕರ ಕೌತುಕವು ನನಗೂ ಮೊನ್ನೆಯಷ್ಟೇ ಗೊತ್ತಾದದ್ದು. ಊರಲ್ಲಿರುವ ನನ್ನ ಅಣ್ಣ ವಾಟ್ಸ್ಯಾಪ್‌ನಲ್ಲಿ ಒಂದು ಬಳ್ಳಿಯ ಚಿತ್ರ ಕಳುಹಿಸಿ ‘‘ನಾನು ಗಮನಿಸಿದಂತೆ ಬಳ್ಳಿಗಳ ಸ್ವಾಭಾವಿಕ ಬೆಳವಣಿಗೆಗೆ ಅವಕಾಶವಿದ್ದರೆ ಅವು ಆಧಾರಸ್ತಂಭಕ್ಕೆ ಅಪ್ರದಕ್ಷಿಣಾಕಾರವಾಗಿಯೇ ಸುತ್ತುತ್ತವೆ. ಏಕೆ ಎಂದು ನನಗೂ ಗೊತ್ತಿಲ್ಲ, ಅಥವಾ ಎಲ್ಲ ಬಳ್ಳಿಗಳೂ ಹಾಗೆಯೇ ಇರುತ್ತವೆಯೇ ಎಂಬುದೂ ಗೊತ್ತಿಲ್ಲ. ನೀನು ಸ್ವಲ್ಪ ಸಂಶೋಧನೆ ಮಾಡಿ ‘ತಿಳಿರುತೋರಣ’ದಲ್ಲೊಂದು ಲೇಖನ ಬರೆದರೆ ಚೆನ್ನಾಗಿರುತ್ತದೆ. ಈ ವಿಚಾರದ ಮೇಲೆ ಬೆಳಕು ಚೆಲ್ಲಿದರೆ ಇನ್ನಷ್ಟು ಜನರಿಗೆ ತಿಳಿದುಕೊಳ್ಳುವುದಕ್ಕಾಗುತ್ತದೆ’’ ಎಂದು ಕರೆ ಮಾಡಿ ಹೇಳಿದಾಗಲೇ. ಆಮೇಲೆ ಸಸ್ಯಶಾಸ್ತ್ರ ವಿಷಯದ ಕೆಲವು ಅಧಿಕೃತ ಜಾಲತಾಣಗಳನ್ನು ಮಥಿಸಿದಾಗ, ವಿಜ್ಞಾನಪತ್ರಿಕೆಗಳ ಪುಟಗಳನ್ನು ತಿರುವಿದಾಗ, ಬಹುತೇಕ ಬಳ್ಳಿಗಳೆಲ್ಲ ಅಪ್ರದಕ್ಷಿಣಾಕಾರವಾಗಿಯೇ ಸುತ್ತುತ್ತವೆ ಎಂಬ ವಿಚಾರ ತಿಳಿದುಬಂತು.

ಲಂಡನ್‌ನಿಂದ ಪ್ರಕಟವಾಗುವ ‘ನ್ಯೂ ಸೈಂಟಿಸ್ಟ್’ ವಿಜ್ಞಾನ ಪತ್ರಿಕೆಯ ಜಾಲತಾಣದಲ್ಲಿ ಸ್ಪಷ್ಟವಾದ ಮಾಹಿತಿ ಇದೆ. ‘‘ನಮ್ಮ ಹೂತೋಟದಲ್ಲಿರುವ ಮಾರ್ನಿಂಗ್ ಗ್ಲೋರಿ ಬಳ್ಳಿಯು ಸ್ತಂಭಕ್ಕೆ ಪ್ರದಕ್ಷಿಣಾಕಾರ ಸುತ್ತುವುದೆಂದು ಗಮನಿಸಿದೆ. ತುಸು ವಿಚಿತ್ರವೆನಿಸಿತು. ಬೇರೆ ಎಲ್ಲ ಬಳ್ಳಿಗಳೂ ಹೀಗೆಯೇ ಸುತ್ತುತ್ತವೆಯೇ? ಹೌದಾದರೆ ಏಕೆ?’’ ಎಂದು ಓದುಗರೊಬ್ಬರು ಪ್ರಶ್ನೆ ಕೇಳಿದ್ದಕ್ಕೆ ಉತ್ತರ ರೂಪದಲ್ಲಿ ಈ ಮಾಹಿತಿ ಇದೆ. ‘‘Morning glory, Honeysuckle ರೀತಿಯ ಕೆಲವು ಬಳ್ಳಿಗಳು ಮಾತ್ರ ಪ್ರದಕ್ಷಿಣಾಕಾರ ಸುತ್ತುತ್ತವೆ. ಆದರೆ Bindweed, Convolvulus ಮುಂತಾದ ಹಲವು ಪ್ರಭೇದಗಳು ಅಪ್ರದಕ್ಷಿಣಾಕಾರವಾಗಿಯೇ ಸುತ್ತುತ್ತವೆ. ಇಲ್ಲಿ ಪ್ರದಕ್ಷಿಣ-ಅಪ್ರದಕ್ಷಿಣ ಎನ್ನುತ್ತಿರುವುದು ಸೂರ್ಯನನ್ನು ದಿಟ್ಟಿಸುವ ಬಳ್ಳಿಯ ಕೆಳಭಾಗದಿಂದ ನೋಡಿದರೆ ಹೇಗೆ ಕಾಣುತ್ತದೆಯೋ ಆ ರೀತಿ. ನಮ್ಮ ದೃಷ್ಟಿಪಾತಳಿಗೂ ಹಾಗೆಯೇ ಕಾಣುವುದು. ಬಳ್ಳಿಯು ಮೇಲೇರುವುದು ಸೂರ್ಯನ ಬೆಳಕಿಗಾಗಿ ಹೌದಾದರೂ ಚಲನೆಯ ದಿಕ್ಕನ್ನು ನಿರ್ಧರಿಸುವುದು ಬಳ್ಳಿಗೆ ಸಾಪೇಕ್ಷವಾಗಿ ಸೂರ್ಯನ ಸ್ಥಾನ ಅಲ್ಲ. ಆದ್ದರಿಂದ, ಭೂಮಿಯ ಉತ್ತರ ಗೋಲಾರ್ಧದಲ್ಲಿ ಅಪ್ರದಕ್ಷಿಣಾಕಾರ ಸುತ್ತುವ ಬಳ್ಳಿಗಳು ದಕ್ಷಿಣ ಗೋಲಾರ್ಧದಲ್ಲಿ ಪ್ರದಕ್ಷಿಣಾಕಾರವಾಗಿ ಸುತ್ತುತ್ತವೆನ್ನುವುದು ನಿಜವಲ್ಲ, ಅಲ್ಲಿಯೂ ಅವು ಅಪ್ರದಕ್ಷಿಣಾಕಾರವಾಗಿಯೇ ಸುತ್ತುತ್ತವೆ. ಉತ್ತರ-ದಕ್ಷಿಣ ಗೋಲಾರ್ಧಗಳಲ್ಲಿ ಗಾಳಿ ವಿರುದ್ಧ ದಿಕ್ಕಿನಲ್ಲಿ ಚಲಿಸುವುದನ್ನು ವಿವರಿಸುವ ಕೋರಿಯೊಲಿಸ್ ಎಫೆಕ್ಟ್‌ಗೂ ಬಳ್ಳಿಗಳ ಚಲನೆಗೂ ಸಂಬಂಧವಿಲ್ಲ. ಇದೇನಿದ್ದರೂ ಬಳ್ಳಿ ಯಾವ ಪ್ರಭೇದಕ್ಕೆ ಸೇರಿದೆ ಮತ್ತು ಅದರ ವಂಶವಾಹಿ ಹೇಗಿದೆ ಎನ್ನುವುದನ್ನಷ್ಟೇ ಅವಲಂಬಿಸಿದೆ. ಜಪಾನ್‌ನ ಸಸ್ಯಶಾಸ್ತ್ರಜ್ಞ ತಕಾಶಿ ಹಾಶಿಮೊಟೊ 2002ರಲ್ಲಿ ಒಂದು ನಿರ್ದಿಷ್ಟ ಪ್ರಭೇದದ ಬಳ್ಳಿಯನ್ನು ಹುಟ್ಟಿನಿಂದ ಪೂರ್ಣ ಬೆಳವಣಿಗೆಯ ತನಕ ಅಧ್ಯಯನ ನಡೆಸಿ ವಂಶವಾಹಿ ರೂಪಾಂತರ (mutation) ಹಂತದಲ್ಲಿ ಬಳ್ಳಿಯ ಸುತ್ತುವಿಕೆ ಪ್ರದಕ್ಷಿಣವೋ ಅಪ್ರದಕ್ಷಿಣವೋ ಅಂತ ನಿರ್ಧಾರವಾಗುತ್ತದೆ ಎಂದು ಸಾಬೀತುಪಡಿಸಿದ್ದಾರೆ. ಸಹಜ ಬೆಳವಣಿಗೆಗೆ ಅನುಕೂಲವಿದ್ದರೆ ಬಳ್ಳಿ ಆ ಆರಂಭಿಕ ದಿಸೆಯಲ್ಲೇ ಸುತ್ತುವಿಕೆ ಮುಂದುವರಿಸುತ್ತದೆ. ಏನಾದರೂ ಅಡೆತಡೆಗಳು ಬಂದರೆ ದಿಸೆಯನ್ನು ಬದಲಾಯಿಸಲೂ ಬಹುದು ಅಥವಾ ಅಂಥ ಅಡೆತಡೆಯು ಕೆಲವೊಮ್ಮೆ ಬಳ್ಳಿಗೆ ಮಾರಣಾಂತಿಕವೂ ಆಗಬಹುದು’’.

ಇನ್ನೊಂದು ಕುತೂಹಲಕಾರಿ ಅಂಶವೆಂದರೆ ಯಾವುದೇ ಬಳ್ಳಿ ಯಾದರೂ ನೇರವಾಗಿ ಹಬ್ಬದೆ ಸುರುಳಿ ಸುತ್ತಿಯೇ ಬೆಳೆಯುವುದೇಕೆ? ಇದಕ್ಕೆ ಕಾರಣ ಮರಕ್ಕೆ ಅಥವಾ ಯಾವುದೇ ಆಧಾರ ಸ್ತಂಭಕ್ಕೆ ತಾಗಿಕೊಂಡಿರುವ ಬಳ್ಳಿಯ ಭಾಗದ ಜೀವಕೋಶಗಳಿಗಿಂತ, ಹೊರಭಾಗದ (ಮರಕ್ಕೆ ತಾಗಿಕೊಂಡಿರದ) ಜೀವಕೋಶಗಳು ಹೆಚ್ಚು ವೇಗವಾಗಿ ಬೆಳೆಯುವುದು. ಈ ಅಸಮತೋಲಿತ ಬೆಳವಣಿಗೆಯು ಬಳ್ಳಿ ಮರವನ್ನು ಸುತ್ತುವಂತೆ ಮಾಡುತ್ತದೆ. ಒಟ್ಟಾರೆಯಾಗಿ ಶೇ.90ರಷ್ಟು ಬಳ್ಳಿ ಪ್ರಭೇದಗಳು ಅಪ್ರದಕ್ಷಿಣಾಕಾರ ಸುತ್ತುವವೇ ಇರುವುದು. ಎಲ್ಲೋ ಕೆಲವೊಂದು ಮಾತ್ರ ಪ್ರದಕ್ಷಿಣಾಕಾರ ಸುತ್ತುವವೂ ಕಂಡುಬರುತ್ತದೆ. Bengal clock vine ಎಂಬ ಹೆಸರಿನ ಹೂಬಳ್ಳಿ ಅಂಥದೊಂದು. ಅದರ ಹೆಸರೇ ಸೂಚಿಸುವಂತೆ, ಗಡಿಯಾರದ ಮುಳ್ಳುಗಳಂತೆ ಪ್ರದಕ್ಷಿಣಾಕಾರದಲ್ಲಿ ಸುತ್ತುತ್ತದೆ. Thunbergia Grandiflora ಎಂಬ ಸಸ್ಯಶಾಸ್ತ್ರೀಯ ಹೆಸರುಳ್ಳ ಈ ಬಳ್ಳಿಯಲ್ಲಿ ನಸುನೇರಳೆ ಬಣ್ಣದ ದೊಡ್ಡ ಗಾತ್ರದ ಹೂವು ಅರಳುತ್ತವೆ. ಚೈನಾ, ನೇಪಾಳ, ಮ್ಯಾನ್ಮಾರ್, ಬಾಂಗ್ಲಾ ಮತ್ತು ಭಾರತ ದೇಶಗಳಲ್ಲಿ ವಿಪುಲವಾಗಿ ಇದು ಕಾಣಿಸಿಕೊಳ್ಳುತ್ತದೆ. ಮೈಸೂರು ನಗರದ ಸೌಂದರ್ಯವರ್ಧನೆಯಲ್ಲಿ ಈ ಬಳ್ಳಿಯ ಪಾತ್ರವೂ ಇದೆಯೆಂದು ‘ಸ್ಟಾರ್ ಆಫ್ ಮೈಸೂರು’ ಇಂಗ್ಲಿಷ್ ಪತ್ರಿಕೆಯಲ್ಲಿ ಪ್ರಕಟವಾದ ಒಂದು ಲೇಖನ ತಿಳಿಸುತ್ತಿದೆ.

ಬಳ್ಳಿಯ ಸುತ್ತುವಿಕೆ ಪ್ರದಕ್ಷಿಣ-ಅಪ್ರದಕ್ಷಿಣ ಅರ್ಥ ಮಾಡಿಕೊಳ್ಳುವುದು ಕಷ್ಟವಾದರೆ, ಭೌತಶಾಸ್ತ್ರದಲ್ಲಿ ವಿದ್ಯುತ್ಕಾಂತೀಯ ಕ್ಷೇತ್ರದಲ್ಲಿ ಬಳಕೆಯಾಗುವ ‘ಬಲಗೈ ಹೆಬ್ಬೆರಳ ನಿಯಮ’ ರೀತಿಯಿಂದಲೂ ಅರ್ಥೈಸುವುದಕ್ಕಾಗುತ್ತದೆ. ಬಲಗೈಯ ಹೆಬ್ಬೆರಳನ್ನು ಮೇಲಕ್ಕೆತ್ತಿ ಉಳಿದ ನಾಲ್ಕೂ ಬೆರಳುಗಳನ್ನು ಒಳಗೆ ಮಡಚಿಕೊಂಡರೆ, ಹೆಬ್ಬೆರಳು ವಿದ್ಯುತ್ ಹರಿಯುವ ದಿಕ್ಕನ್ನೂ, ಮಡಚಿರುವ ನಾಲ್ಕು ಬೆರಳುಗಳು ವಿದ್ಯುತ್‌ವಾಹಕದ ಸುತ್ತ ಉಂಟಾಗುವ ಕಾಂತಕ್ಷೇತ್ರದ ದಿಕ್ಕನ್ನೂ ಸೂಚಿಸುತ್ತವೆ- ಎಂಬುದೇ ಆ ನಿಯಮ. ಈ ಭಂಗಿಯಲ್ಲಿ ನಾಲ್ಕೂ ಬೆರಳುಗಳು ಅಪ್ರದಕ್ಷಿಣಾಕಾರದಲ್ಲೇ ಮಡಚಿರುತ್ತವೆ ತಾನೆ? ಅದೇ ರೀತಿ ಯಾವುದೇ ಬಳ್ಳಿಯ ಸೂರ್ಯನತ್ತ ಮೇಲೇರುವಾಗ ಅದರ ಸುತ್ತುವಿಕೆಯೂ ಅಪ್ರದಕ್ಷಿಣಾಕಾರವಾಗಿಯೇ ಇರುತ್ತದೆ. ಆಫ್‌ಕೋರ್ಸ್, ಯಾವುದೇ ಬಳ್ಳಿ ಎಂದರೆ ತಪ್ಪಾಗುತ್ತದೆ. ಮಾಮೂಲಿಯಾದ, ಸಾಮಾನ್ಯವಾದ, ಶೇ.90 ಬಳ್ಳಿಗಳಿಗೆ ಈ ನಿಯಮ ಸರಿಹೊಂದುತ್ತದೆ. ಅವುಗಳನ್ನೆಲ್ಲ ‘ವಿದ್ಯುಲ್ಲತಾ’ ಎಂದು ಕರೆಯಲಿಕ್ಕಡ್ಡಿಯಿಲ್ಲ, ಉಳಿದ ಶೇ.10 ಬಳ್ಳಿಗಳ ವಿಚಾರದಲ್ಲಿ ಉಲ್ಟಾ ಅಷ್ಟೇ. ಸಮುದ್ರದಲ್ಲಿಸಿಗುವ ಶಂಖ ಮತ್ತಿತರ ಚಿಪ್ಪುಗಳ ಸುರುಳಿ ರಚನೆಯಂತೆಯೇ ಇದು ಕೂಡ. ಸಾಮಾನ್ಯವಾಗಿ ನಮ್ಮ ಮನೆಗಳಲ್ಲಿ ಊದಲಿಕ್ಕೆ ಬಳಕೆಯಾಗುವ ಶಂಖ ‘ಎಡಮುರಿ’ ಆಗಿರುತ್ತದೆ. ಅಪರೂಪಕ್ಕೆ ಒಮ್ಮೊಮ್ಮೆ ‘ಬಲಮುರಿ’ ಶಂಖ ಸಿಗುತ್ತದೆ. ದೇವರಿಗೆ ಅಭಿಷೇಕ ಮಾಡಲಿಕ್ಕೆ ಬಲಮುರಿ ಶಂಖ ಒಳ್ಳೆಯದು ಎನ್ನುತ್ತಾರೆ. ಹಾಗೆಯೇ, ಸೊಂಡಿಲನ್ನು ಎಡಗಡೆಗೆ ತಿರುಗಿಸಿದ ‘ಎಡಮುರಿ’ ಗಣೇಶನೇ ಹೆಚ್ಚಾಗಿ ಕಂಡುಬರುವುದು. ಅಪರೂಪಕ್ಕೆ ಕೆಲವೆಡೆ ‘ಬಲಮುರಿ’ ಗಣೇಶ ದೇವಸ್ಥಾನಗಳು ಇರುತ್ತವೆ.

ಬೇರೆಲ್ಲ ಏಕೆ, ಮನುಷ್ಯರಲ್ಲೇ ಈ ತೆರನಾದ ಭಿನ್ನತೆ ಇಲ್ಲವೇ? ಸಾಮಾನ್ಯವಾಗಿ ಎಲ್ಲರೂ ಬಲಗೈ ಪ್ರಧಾನವಾಗುಳ್ಳವರು. ಕೆಲವರು ಮಾತ್ರ ಎಡಚರು ಇರುತ್ತಾರೆ. ಇಲ್ಲೂ ಬಳ್ಳಿಗಳಂತೆಯೇ ಅನುಪಾತ. ಪ್ರಪಂಚದ ಒಟ್ಟು ಜನಸಂಖ್ಯೆಯ ಸುಮಾರು ಶೇ.90 ರಷ್ಟು ಜನ ಬಲಗೈಯವರು. ಉಳಿದವರು ಎಡಚರು. ಅಮೆರಿಕದ ಇದುವರೆಗಿನ 46 ಮಂದಿ ರಾಷ್ಟ್ರಾಧ್ಯಕ್ಷರ ಪೈಕಿ ಒಟ್ಟು ಎಂಟು ಮಂದಿ ಎಡಚರು: ಜೇಮ್ಸ್ ಗ್ಯಾರ್‌ಫೀಲ್ಡ್, ಹೆನ್ರಿ ಟ್ರೂಮನ್, ಹರ್ಬರ್ಟ್ ಹೂವರ್, ಜೆರಾಲ್ಡ್ ಫೋರ್ಡ್, ರೊನಾಲ್ಡ್ ರೇಗನ್, ಜಾರ್ಜ್ ಎಚ್.ಡಬ್ಲ್ಯು. ಬುಷ್, ಬಿಲ್ ಕ್ಲಿಂಟನ್ ಮತ್ತು ಬರಾಕ್ ಒಬಾಮ. ಇವರ ಪಟ್ಟಿಗೆ ಸೇರಿಸಬಹುದಾದ ಇನ್ನಿಬ್ಬರೆಂದರೆ ಥಾಮಸ್ ಜೆಫರ್ಸನ್ ಮತ್ತು ವುಡ್ರೋ ವಿಲ್ಸನ್. ಇವರಿಬ್ಬರು ಬಲಗೈಯವರಾಗಿದ್ದರೂ ಯಾವುದೋ ಕಾರಣದಿಂದ ಬಲಗೈಗೆ ಶಾಶ್ವತ ಪೆಟ್ಟಾದ ಮೇಲೆ ಎಡಗೈಯಿಂದ ಬರೆಯಬಲ್ಲವರಾಗಿದ್ದರಂತೆ. ಅದಕ್ಕಿಂತಲೂ ಸ್ವಾರಸ್ಯವೆಂದರೆ ಜೇಮ್ಸ್ ಗ್ಯಾರ್‌ಫೀಲ್ಡ್‌ರ ಸಾಮರ್ಥ್ಯ. ಆತ ಎರಡೂ ಕೈಗಳಿಂದ ಬರೆಯಬಲ್ಲವರಾಗಿದ್ದರು, ಅದೂ ಒಂದು ಕೈಯಿಂದ ಲ್ಯಾಟಿನ್ ಭಾಷೆಯಲ್ಲಿ ಮತ್ತು ಇನ್ನೊಂದು ಕೈಯಿಂದ ಗ್ರೀಕ್ ಭಾಷೆಯಲ್ಲಿ! ಬಳ್ಳಿಗಳ ಲೋಕದಲ್ಲಿ ಮುಳ್ಳುಸೌತೆಯ ಬಳ್ಳಿಯೂ ಹಾಗೆಯೇ ಅಂತೆ. ಅದು ಪ್ರದಕ್ಷಿಣಾಕಾರವೂ ಸುತ್ತಬಲ್ಲದು, ಅಪ್ರದಕ್ಷಿಣಾಕಾರವಾಗಿಯೂ ಸುತ್ತಬಲ್ಲದು. ‘ಉರ್ವಾರುಕಮಿವ ಬಂಧನಾತ್ ಮೃತ್ಯೋರ್ಮುಕ್ಷೀಯ ಮಾಮೃತಾತ್’ ಎಂದು ಮೃತ್ಯುಂಜಯ ಮಹಾಮಂತ್ರದಲ್ಲಿ ಮುಳ್ಳುಸೌತೆ ಬಳ್ಳಿ ಇರುವುದಕ್ಕೂ ಈ ರೀತಿಯ ಸವ್ಯಸಾಚಿತನಕ್ಕೂ ಸಂಬಂಧವಿರಲಿಕ್ಕಿಲ್ಲವೆನ್ನಿ.

ಸರಿ, ಬಳ್ಳಿಯ ಸುತ್ತುವಿಕೆ ನೆಪದಲ್ಲಿ ಇಷ್ಟೆಲ್ಲ ಸುತ್ತಾಡಿದೆವು. ಕೊನೆಗೊಂದು ಜಾಣ್ಮೆಲೆಕ್ಕದ ರೂಪದಲ್ಲಿ ಗಣಿತವನ್ನೂ ಎದುರುಗೊಳ್ಳದಿದ್ದರೆ ಹೇಗೆ? ಇಲ್ಲಿದೆ ನೋಡಿ ಬಳ್ಳಿಗಳ ಸುತ್ತುವಿಕೆಯ ಸುತ್ತವೇ ಹೆಣೆದ ಒಂದು ಲೆಕ್ಕ. ಮಾಧವಿ ಮತ್ತು ಮಾಲತಿ ಎಂಬ ಎರಡು ಬಳ್ಳಿಗಳು ಒಂದು ಮರದ ಉದ್ದನೆಯ ಕಾಂಡವನ್ನು ಸುತ್ತುತ್ತಿವೆ (‘ಪಟ್ಟಣಕ್ಕೆ ಬಂದ ಪತ್ನಿಯರು’ ಸಿನಿಮಾದಲ್ಲಿದ್ದಂತೆ ಮರಕ್ಕೆ ಇಬ್ಬರು ಹೆಂಡತಿಯರೇ? ಗಂಗೆ-ಗೌರಿಯರನ್ನು ನಿಭಾಯಿಸಬೇಕಾದ ಶಿವನಂತೆ ಆ ಮರದ ಪಾಡೇ? ಅಂತೆಲ್ಲ ಯೋಚನೆಗಿಳಿಯಬೇಡಿ). ಮಾಧವಿಯು ಮರಕ್ಕೆ ಅಪ್ರದಕ್ಷಿಣಾಕಾರವಾಗಿಯೂ, ಮಾಲತಿಯು ಪ್ರದಕ್ಷಿಣಾಕಾರದಲ್ಲೂ ಸುತ್ತುತ್ತಿವೆ. ಮರದ ಬುಡದಲ್ಲಿ ಎರಡೂ ಬಳ್ಳಿಗಳೂ ಒಟ್ಟಿಗೇ ಬೆಳವಣಿಗೆ ಆರಂಭಿಸಿದ್ದಾದರೂ ಮರದ ಮೊದಲ ರೆಂಬೆ ಮೂಡುವಲ್ಲಿವರೆಗಿನ ಸ್ತಂಭದಂಥ ಕಾಂಡವನ್ನು ಮಾಧವಿ ಐದು ಸಲ ಸುತ್ತಿದ್ದರೆ ಮಾಲತಿ ಮೂರು ಸುತ್ತುಗಳನ್ನು ಪೂರ್ಣಗೊಳಿಸಿದೆ. ನೀವೀಗ ಉತ್ತರಿಸಬೇಕಾದ್ದು: ಮಾಧವಿ ಮತ್ತು ಮಾಲತಿ, ಮರದ ಬುಡದ ಬಿಂದು ಮತ್ತು ರೆಂಬೆ ಮೂಡುವಲ್ಲಿಯ ಬಿಂದುಗಳನ್ನು ಹೊರತುಪಡಿಸಿ ಎಷ್ಟು ಸಲ ಪರಸ್ಪರ ಮುಖಾಮುಖಿಯಾಗುತ್ತಾವೆ?

# ತಬಲಾ ಇರುವವರೆಗೂ ಝಾಕಿರ್ ಅಮರ



ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
vveditoped@gmail.com

ಸುಮಾರು 25 ವರ್ಷಗಳ ಹಿಂದೆ ಬೆಂಗಳೂರಿನ ಅರಮನೆ ಮೈದಾನದಲ್ಲಿ ಪಂಡಿತ್ ಹರಿಪ್ರಸಾದ್ ಚೌರಾಸಿಯಾ ಅವರ ಸಂಗೀತ ಕಾರ್ಯಕ್ರಮ ಏರ್ಪಾಡಾಗಿತ್ತು. ಅವರ ಜತೆಗೆ ಉಸ್ತಾದ್ ಝಾಕಿರ್ ಹುಸೇನ್ ವೇದಿಕೆಗೆ ಬಂದರು, ಪ್ರೇಕ್ಷಕರಿಂದ ಚಪ್ಪಾಳೆಗಳ ಸುರಿಮಳೆಯಾಯಿತು. ಕಾರ್ಯಕ್ರಮ ಶುರುವಾಗಿ ಝಾಕಿರ್ ತಮ್ಮ ಕೈಚಳಕದ ಸಣ್ಣ ಝಲಕ್ ತೋರಿಸಿದ್ದೇ ತಡ, ಪ್ರೇಕ್ಷಕರಿಂದ ಮೆಚ್ಚುಗೆ ಚಪ್ಪಾಳೆಯ ಜತೆಗೆ ಶಿಳ್ಳೆಯೂ ಸೇರಿಕೊಂಡಿತ್ತು. ಕೂಡಲೇ ತಬಲಾ ವಾದನ ನಿಲ್ಲಿಸಿದ ಝಾಕಿರ್ ಮೈಕ್ ಎತ್ತಿಕೊಂಡು, ಸರಸ್ವತಿಯ ಕುರಿತಾದ 'ಯಾಕುಂದೇಂದು ತುಷಾರ ಹಾರ ಧವಲಾ' ಎಂಬ ಶ್ಲೋಕವನ್ನು ಶುದ್ಧವಾಗಿ ಹೇಳುತ್ತಾ, ''ನೋಡೀ, ನಾವು ಕಲಾವಿದರು. ಇಲ್ಲಿ ತಾಯಿ ಸರಸ್ವತಿಯ ಪೂಜೆಯಲ್ಲಿ ತೊಡಗಿದ್ದೇವೆ. ಈ ಭಕ್ತಿ ಸಮರ್ಪಣೆಯ ಭಾಗೀದಾರರಾದ ನೀವು ಶಿಳ್ಳೆ ಹೊಡೆಯುವುದು ಅಶಿಸ್ತಾಗುತ್ತದೆ, ನಮ್ಮ ಪೂಜೆಗೆ ಅಡ್ಡಿಯಾಗುತ್ತದೆ. ದಯವಿಟ್ಟು ಹಾಗೆ ಮಾಡಬೇಡಿ'' ಎಂದು ಕೈಮುಗಿದು, ಕಛೇರಿಯ ಕುರಿತಾದ ತಮ್ಮ ಭಾವನೆಯೇನು ಎಂಬುದನ್ನು ಸೌಜನ್ಯದಿಂದ ಮನವರಿಕೆ ಮಾಡಿಕೊಟ್ಟರು. ತರುವಾಯದಲ್ಲಿ ಚಪ್ಪಾಳೆಯ ಸದ್ದಷ್ಟೇ ಕೇಳಿಸಿತೇ ವಿನಾ, ಶಿಳ್ಳೆಯಲ್ಲ...

ತಮ್ಮ ಕಲೆಯನ್ನು 'ಆದರಿಸುವ' ಕಲಾವಿದರು ಬಹಳ ವಿದ್ದಾರೆ; ಆದರೆ ತಮ್ಮ ಕಲಾಪ್ರಸ್ತುತಿಯನ್ನು ಪೂಜೆಯಂತೆ 'ಆರಾಧಿಸುವ' ಉಸ್ತಾದ್ ಝಾಕಿರ್ ಹುಸೇನ್‌ರಂಥವರು ವಿರಳಾತಿವಿರಳ. ರಾಜಕಾರಣದಲ್ಲಿ ವಾಜಪೇಯಿ, ಕನ್ನಡ ಸಿನಿಮಾರಂಗದಲ್ಲಿ ಡಾ.ರಾಜ್‌ಕುಮಾರ್, ಕ್ರಿಕೆಟ್‌ನಲ್ಲಿ ಸಚಿನ್ ತೆಂಡೂಲ್ಕರ್ ಹೇಗೋ, ಭಾರತೀಯ ಉತ್ತರಾದಿ ಸಂಗೀತ ಕ್ಷೇತ್ರದಲ್ಲಿ ಝಾಕಿರ್ ಹಾಗೆ. ಅವರು ಈ ಕ್ಷೇತ್ರದಲ್ಲಿ ಕಲಾವಂತಿಕೆಯ ಜತೆಗೆ ಸಂಭಾವಿತತನಕ್ಕೆ ಹೆಸರಾದವರು, ಎಲ್ಲ ಜನರಿಂದ ಪ್ರೀತಿಸಲ್ಪಟ್ಟವರು ಎಂಬುದು ನಿರ್ವಿವಾದ. ಸೌಜನ್ಯ-ವಿನಯವಂತಿಕೆಗಳ ಪ್ರತಿರೂಪವಾದ ಝಾಕಿರ್, ಸಂಗೀತವನ್ನು ಬಿಟ್ಟರೆ ಬೇರಾವುದನ್ನೂ ತಿಳಿಯದ ಮುಗ್ಧ. ಸಾಧನೆಯ ಉತ್ತುಂಗಕ್ಕೇರಿದ್ದರೂ ಸದಾ ಹೊಸದನ್ನು ಕಲಿಯುವ ಹಸಿವಿದ್ದ ಶ್ರೇಷ್ಠ ಕಲಾವಿದ ಅವರು.

ಗಾಯಕರಿಗೆ ಅಥವಾ ಹಾರ್ಮೋನಿಯಂ, ಸಾರಂಗಿಯಂಥ ಶ್ರುತಿಪ್ರಧಾನ ವಾದ್ಯಗಳನ್ನು ನುಡಿಸುವ ಕಲಾವಿದರಿಗೆ ಢೋಲಕ್, ಮೃದಂಗ, ತಬಲಾಗಳಂಥ ತಾಳವಾದ್ಯಗಳನ್ನು ನುಡಿಸುವವರು ಸಾಥ್ ನೀಡುವಾಗ ಅವರಿಗೆ ಸಮಾನವಾಗಿ ಕೂರದೆ ಪಕ್ಕದಲ್ಲಿ ಕುಳಿತು ನುಡಿಸುತ್ತಿದ್ದುದು, ಇವರನ್ನು 'ಸಾಥೀದಾರರು' ಎಂದಷ್ಟೇ ಕರೆಯುತ್ತಿದ್ದುದು ವಾಡಿಕೆಯಾಗಿತ್ತು. ಅಂಥ ಕಾಲದಲ್ಲಿ, ಗಾಯನ-ವಾದನಗಳಿಗೆ ರಾಗದ ಆಧಾರವಿದ್ದಂತೆ ತಬಲಾ ವಾದನಕ್ಕೂ ಅದರದ್ದೇ ಆದ ಶಾಸ್ತ್ರವಿದೆ ಎಂಬುದನ್ನು ತಮ್ಮ 'ಸೋಲೋ' ಕಾರ್ಯಕ್ರಮಗಳ ಮೂಲಕ ತೋರಿಸಿ, ಅದನ್ನು ವೇದಿಕೆಯ ಮಧ್ಯಭಾಗಕ್ಕೆ ತಂದು ಗೌರವ ತಂದುಕೊಟ್ಟವರಲ್ಲಿ ಝಾಕಿರ್ ಮೊದಲಿಗರಲ್ಲದಿದ್ದರೂ ಪ್ರಮುಖರು ಎನ್ನಬಹುದು. ಇವರ ಕಾಲದವರೆಗೆ ತಬಲಾ ಕಛೇರಿಗಳು ಸ್ವತಂತ್ರವಾಗಿ ನಡೆಯುತ್ತಿದ್ದುದು ಕಡಿಮೆಯೇ; ಗಾಯಕರಿಗೆ/ವಾದಕರಿಗೆ 'ಸಾಥ್' ನೀಡುವುದಷ್ಟೇ ಇವರ ಕೆಲಸವಾಗಿತ್ತು. ಪ್ರಧಾನ ಕಲಾವಿದರು ಅವಕಾಶ ಕೊಟ್ಟರಷ್ಟೇ ತಾಳವಾದ್ಯಗಾರರು ತಮ್ಮ ಕೈಚಳಕ ತೋರಿಸಬೇಕಾಗುತ್ತಿತ್ತು; ಇಲ್ಲದಿದ್ದರೆ ಕಾರ್ಯಕ್ರಮದುದ್ದಕ್ಕೂ ಶುದ್ಧವಾಗಿ ಒಂದು 'ಠೇಕಾ' ಹಿಡಿದು ಕೂರಬೇಕಾಗುತ್ತಿತ್ತು. ಇದರ ನಡುವೆಯೇ, ಸಿಕ್ಕ ಅವಕಾಶಗಳನ್ನು ಬಳಸಿಕೊಳ್ಳುತ್ತಾ ತಮ್ಮ ಛಾಪು ಮೂಡಿಸಿದವರು ಝಾಕಿರ್. ಚರ್ಮವಾದ್ಯಗಳನ್ನು 'ಬಾರಿಸುವುದು/ಬಡಿಯುವುದು' ಎಂದೇ ಕರೆಯುವುದು ವಾಡಿಕೆ; ಆದರೆ ಅವನ್ನೂ 'ನುಡಿಸಬಹುದು' ಎಂದು ತೋರಿಸಿಕೊಟ್ಟವರು ಝಾಕಿರ್.

ಪಂಡಿತ ಭೀಮಸೇನ್ ಜೋಶಿಯವರಿಂದ ಹಿಡಿದು ಬಹುತೇಕ ಖ್ಯಾತನಾಮ ಗಾಯಕರಿಗೆ ಝಾಕಿರ್ ತಬಲಾ ಸಾಥ್ ನೀಡಿದ್ದಾರಾದರೂ, ಕೊಳಲು, ಸಂತೂರ್, ಸಿತಾರ್, ಸರೋದ್ ವಾದಕರ ಜತೆಗೂಡಿದ್ದೇ ಹೆಚ್ಚು; ವಾದ್ಯಸಂಗೀತದಲ್ಲಿ ತಮ್ಮ ವಿದ್ಯೆಯ ಪ್ರಸ್ತುತಿಗೆ ಅವಕಾಶ ಜಾಸ್ತಿ ಎಂಬುದೇ ಇದಕ್ಕೆ ಕಾರಣ. ತಾಳವಾದ್ಯಗಳ 'ಸಾಥ್' ಇಲ್ಲದೆ ವಾದ್ಯ ಸಂಗೀತವೊಂದರಿಂದಲೇ ಪ್ರೇಕ್ಷಕರನ್ನು ರಂಜಿಸುವುದು ಕಷ್ಟವೂ ಹೌದು. ಹಾಗಾಗಿ, ಶಿವಕುಮಾರ್ ಶರ್ಮಾ, ರವಿಶಂಕರ್, ಹರಿಪ್ರಸಾದ್ ಚೌರಾಸಿಯಾ, ಅಮ್ಜದ್ ಅಲಿಖಾನ್ ಮುಂತಾದವರು ದೇಶ-ವಿದೇಶಗಳಲ್ಲಿನ ಕಾರ್ಯಕ್ರಮಗಳಿಗೆ ಒಪ್ಪಿಕೊಳ್ಳುವಾಗ ಝಾಕಿರ್ ಅವರ ಲಭ್ಯತೆಯನ್ನು ಮೊದಲು ಖಾತ್ರಿಪಡಿಸಿಕೊಳ್ಳುತ್ತಿದ್ದರಂತೆ. ಅವರಿದ್ದರೆ ಕಾರ್ಯಕ್ರಮ ಯಶಸ್ವಿ, ಶ್ರೋತೃಗಳಿಗೆ ಭರಪೂರ ಮನರಂಜನೆ ಗ್ಯಾರಂಟಿ ಎಂಬುದೇ ಇದರ ಹಿಂದಿನ ಉದ್ದೇಶವಾಗಿರುತ್ತಿತ್ತು.

ನವಜಾತ ಶಿಶುವಿನ ಕಿವಿಯಲ್ಲಿ, ತಂದೆಯಾದವನು ಮೊದಲು ದೇವರ ಪ್ರಾರ್ಥನೆಯನ್ನು ಗುನುಗುವುದು ಝಾಕಿರ್ ಅವರ ಮನೆತನದಲ್ಲಿ ಸಂಪ್ರದಾಯವಾಗಿತ್ತಂತೆ. ಆದರೆ ಪ್ರಸಿದ್ಧ ತಬಲಾ ವಾದಕರಾಗಿದ್ದ ಅವರ ತಂದೆ ಅಲ್ಲಾ ರಖಾ ಅವರು ತಬಲಾದ 'ಬೋಲ್' ಒಂದನ್ನು ಮಗು ಝಾಕಿರ್‌ನ ಕಿವಿಯಲ್ಲಿ ಗುನುಗಿದ್ದರಂತೆ! ''ದೇವರ ಪ್ರಾರ್ಥನೆ ಹೇಳುವುದು ಬಿಟ್ಟು ಇದೇನು ನಿಮ್ಮ ಹುಡುಗಾಟ?'' ಎಂದು ಪತ್ನಿ ತಕರಾರು ತೆಗೆದಾಗ, ''ನೋಡು, ನನಗೆ ತಬಲಾವೇ ದೇವರು, ಅದರ ಅಂಗವಾದ 'ಬೋಲ್'ಗಳೇ ಮಂತ್ರ. ಹಾಗಾಗಿ ಮಗುವಿಗೆ ಅದನ್ನೇ ಉಪದೇಶಿಸಿದೆ'' ಎಂದಿದ್ದರಂತೆ ಅಲ್ಲಾ ರಖಾ!

''ತಾಳವಾದ್ಯಗಳು ಆದಿಯಲ್ಲಿ ಶಿವನ ಡಮರುವಿನಿಂದ ಹೊಮ್ಮಿದ ಶಬ್ದಗಳಾಗಿದ್ದು, ವಿದ್ಯಾಧಿದೇವತೆ ಗಣಪತಿಯು ಆ ನಾದಗಳನ್ನು ವ್ಯವಸ್ಥಿತಗೊಳಿಸಿ ದಾಖಲಿಸಿದ್ದಾನೆ; ಮೊದಲು ಢೋಲಕ್‌ಗೆ, ನಂತರದಲ್ಲಿ ತಬಲಾಕ್ಕೂ ಅದೇ ಪರಂಪರೆಯನ್ನು ಬಳಸಲಾಯಿತು'' ಎಂಬುದು ಅಲ್ಲಾ ರಖಾ ಮತ್ತು ಝಾಕಿರ್ ಹುಸೇನರ ನಂಬಿಕೆಯಾಗಿತ್ತು. ಮುಸ್ಲಿಮರಾಗಿಯೂ ಈ ವಿಷಯವನ್ನವರು ಅನೇಕ ಸಲ ಬಹಿರಂಗವಾಗಿ ಹೇಳಿದ್ದಿದೆ. ತಾಳವಾದ್ಯಗಳ ಪ್ರವರ್ತಕರಾದ ಸದಾಶಿವ-ಗಣೇಶರೆಂದರೆ ಅವರಿಗೆ ಎಲ್ಲಿಲ್ಲದ ಭಕ್ತಿಯಿತ್ತು.

ಝಾಕಿರ್ ಹುಸೇನರಿಗೆ ತಂದೆಯೇ ಗುರು, ತಮ್ಮಂದಿರೇ ಶಿಷ್ಯರುಗಳು. ತಬಲಾವಾದನ ಕಲೆ ಅವರಿಗೆ ರಕ್ತಗತವಾಗಿ ಬಂದಿತ್ತು. ಝಾಕಿರ್ ಕಲೆಯೊಂದಿಗೇ ಹುಟ್ಟಿದವರು, ಇಂಥವರನ್ನೇ 'ಅಭಿಜಾತ ಕಲಾವಿದರು' ಎನ್ನುವುದು. 7ನೇ ವಯಸ್ಸಿಗೆ ಮೊದಲ 'ಸೋಲೋ' ಕಾರ್ಯಕ್ರಮ, 12ನೇ ವಯಸ್ಸಿಗೆ ಮೊದಲ ಪೂರ್ಣಪ್ರಮಾಣದ ತಿರುಗಾಟ ಅವರ ಹೆಗ್ಗಳಿಕೆ. ಮುಂದಿನದ್ದೆಲ್ಲಾ ಇತಿಹಾಸ! ಅವರು ಕಾರ್ಯಕ್ರಮ ನೀಡದ ದೇಶವೇ ಇಲ್ಲವೇನೋ! ನಮ್ಮಲ್ಲೂ, ಉಡುಪಿ, ಶಿರಸಿಯಂಥ ಸಣ್ಣ ಊರಿನಲ್ಲೂ ಅವರು ಕಾರ್ಯಕ್ರಮ ನೀಡಿದ್ದಿದೆ. ಅಂತಾರಾಷ್ಟ್ರೀಯ ಮಟ್ಟದ ತಬಲಾ ವಾದಕರಾಗಿದ್ದ ಅವರು ಉದಯೋನ್ಮುಖ ಕಲಾವಿದರಿಗೂ ಸಾಥ್ ನೀಡಿದ್ದುಂಟು, ಅಹಂಕಾರ ಎಂಬುದು ಎಂದೂ ಅಡ್ಡಬರಲೇ ಇಲ್ಲ.

''ನಾದವಿದ್ಯೆಯ ಕಲಿಕೆಯಲ್ಲಿ ಗುರುವಾದವನು ಸ್ವತಃ ಹೆಚ್ಚಿನದಾದ ಏನನ್ನೂ ಕಲಿಸುವುದಿಲ್ಲ; ಶಿಷ್ಯನಾದವನು ತನಗಿರುವ ಆಸಕ್ತಿಯ ಮೂಲಕ ಗುರುವನ್ನು ಅದಕ್ಕೆ ಪ್ರೇರೇಪಿಸಬೇಕು, ಆಗ ಮಾತ್ರವೇ ನಿಜವಾದ ಕಲಿಕೆ ಸಾಧ್ಯ'' ಎಂಬುದು ಝಾಕಿರ್‌ರ ಅಭಿಪ್ರಾಯವಾಗಿತ್ತು. ಅವರು ಕೂಡ ಬೇರೆ ಬೇರೆ ವಿಧಾನಗಳಿಂದ ತಂದೆಯ ಗಮನವನ್ನು ತಮ್ಮತ್ತ ಸೆಳೆಯುವ ಮೂಲಕ ಹೆಚ್ಚಿನದನ್ನು ಕಲಿತಿದ್ದಂತೆ. ತಂದೆಯ ಕಟ್ಟುನಿಟ್ಟಿನ ನಿಗರಾನಿಯಲ್ಲಿ ಬೆಳಗ್ಗೆ 3 ಗಂಟೆಗೆ ಎದ್ದು ಅವರು ರಿಯಾಜ್ ಮಾಡಬೇಕಾಗುತ್ತಿತ್ತಂತೆ. ರಿಯಾಜ್ ವೇಳೆ ತೂಕಡಿಸಿದರೆ ಮುಖಕ್ಕೆ ತಣ್ಣೀರು ಬೀಳುತ್ತಿತ್ತಂತೆ. ''ಕಲಿಕೆಯ ವಿಷಯದಲ್ಲಿ ನನಗೆ ಸ್ವಂತ ಮಗನೂ ಉಳಿದ ಶಿಷ್ಯರಂತೆಯೇ, ಕಲಿಕೆಯ ದೃಷ್ಟಿಯಿಂದ ಹಾಗೆ ಶಿಕ್ಷಿಸುವುದು ಅಗತ್ಯವಾಗಿತ್ತು; ಆದರೆ ಆಮೇಲೆ ನೋವಾಗುತ್ತಿತ್ತು'' ಎನ್ನುತ್ತಿದ್ದರು ಅಲ್ಲಾ ರಖಾ.

ಹಾಗೆ ನೋಡಿದರೆ, ಝಾಕಿರ್‌ರಿಗೆ ಕ್ರಿಕೆಟಿಗನಾಗಬೇಕೆಂಬ ಆಸೆಯಿತ್ತಂತೆ. ಶಾಲಾ ತಂಡದಲ್ಲಿ ಅವರು ವಿಕೆಟ್ ಕೀಪರ್ ಆಗಿದ್ದರಂತೆ. ಆದರೆ ಒಮ್ಮೆ ಬೆರಳುಮೂಳೆ ಮುರಿದಿದ್ದರಿಂದ ಅಪ್ಪನಿಂದ ಏಟು ತಂದು, ಕ್ರಿಕೆಟ್‌ನಿಂದ ಶಾಶ್ವತವಾಗಿ ದೂರವಾಗಬೇಕಾಯಿತಂತೆ. ಒಂದೊಮ್ಮೆ ಅವರು ಕ್ರಿಕೆಟ್‌ನಲ್ಲೇ ಮುಂದುವರಿದಿದ್ದರೆ, ನಮಗೆ 'ತಬಲಾ ಮಾಂತ್ರಿಕ' ಸಿಗುತ್ತಿರಲಿಲ್ಲವೇನೋ!

ಒಬ್ಬ ಗಾಯಕನ ಅಥವಾ ವಾದಕನ ಸಂಗೀತ ಕೇಳುಗರ ಹೃದಯವನ್ನು ತಲುಪಬೇಕೆಂದರೆ ಪರಸ್ಪರರ ನಡುವೆ ಉತ್ತಮವಾದ ಮತ್ತು ನಿರಂತರವಾದ ಸಂಬಂಧವಿರಬೇಕಾಗುತ್ತದೆ ಎನ್ನುತ್ತಿದ್ದರು ಝಾಕಿರ್. ಅವರು ಕಾರ್ಯಕ್ರಮ ಪೂರ್ತಿ, ಒಂದಲ್ಲಾ ಒಂದು ವಿಧದಿಂದ ಪ್ರೇಕ್ಷಕರೊಂದಿಗೆ ಸಂವಹನವನ್ನು ಹೊಂದಿಯೇ ಇರುತ್ತಿದ್ದರು. ಅವರ ಕಾರ್ಯಕ್ರಮಗಳು ಜನರ ಹೃದಯ ಮಟ್ಟಲು ಮುಖ್ಯವಾಗಿ ಇದೇ ಕಾರಣವಿರಬಹುದು. ಒಮ್ಮೆ ಅಮೆರಿಕದ ಲಾಸ್ ಏಂಜಲೀಸ್‌ನಲ್ಲಿ ಕಾರ್ಯಕ್ರಮದ ಮಧ್ಯೆ ವಿದ್ಯುತ್ ಕೈಕೊಟ್ಟಿತು, ಆದರೆ ಝಾಕಿರ್ ಮಾತ್ರ ತಮ್ಮ ವಾದನವನ್ನು ನಿಲ್ಲಿಸಲಿಲ್ಲ. ಸಭಾಭವನದಲ್ಲಿ ಮರಳಿ ಬೆಳಕು ತುಂಬಿ, ಮುಂದಿರುವ ಮೈಕಿಗೆ ವಿದ್ಯುತ್ ಪ್ರವಹಿಸುವವರೆಗೂ ಕೇಳುಗರನ್ನು ತಮ್ಮ ಮಾಂತ್ರಿಕಶಕ್ತಿಯಿಂದ ಹಿಡಿದಿಟ್ಟುಕೊಂಡು ಮೆಚ್ಚುಗೆಗೆ ಪಾತ್ರರಾಗಿದ್ದರು ಝಾಕಿರ್.

ಭಾರತದಲ್ಲಿ ಸಂಗೀತಕ್ಕಾಗಿ ಕೊಡಮಾಡುವ ಎಲ್ಲ ಪ್ರಶಸ್ತಿಗಳೂ ಅವರಿಗೆ ಸಂದಿರಲಿಕ್ಕೆ ಸಾಕು. ಮೂರೂ 'ಪದ್ಮ ಪ್ರಶಸ್ತಿ'ಗಳನ್ನು ಗಳಿಸಿದ ಕೆಲವೇ ಕಲಾವಿದರಲ್ಲಿ ಝಾಕಿರ್ ಕೂಡ ಒಬ್ಬರು. ಇನ್ನು 5 'ಗ್ರ್ಯಾಮಿ' ಸೇರಿದಂತೆ ಅನೇಕ ಪ್ರತಿಷ್ಠಿತ ಅಂತಾರಾಷ್ಟ್ರೀಯ ಪ್ರಶಸ್ತಿಗಳು ಇವರಿಗೆ ಸಂದಿವೆ. ಈ ವರ್ಷದ ಫೆಬ್ರವರಿಯಲ್ಲಿ ನಡೆದ 66ನೇ ವಾರ್ಷಿಕ ಗ್ರ್ಯಾಮಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪಡೆದ 3 ಪ್ರಶಸ್ತಿಗಳು ಸೇರಿದಂತೆ ಒಟ್ಟು 5 ಗ್ರ್ಯಾಮಿ ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿರುವ ಝಾಕಿರ್, ಈ ಸಾಧನೆ ಮಾಡಿದ ಮೊದಲ ಭಾರತೀಯ ಸಂಗೀತಗಾರ ಎಂಬ ಹೆಗ್ಗಳಿಕೆಗೂ ಪಾತ್ರರಾಗಿದ್ದಾರೆ. ದಕ್ಕಿದ ಪ್ರಶಸ್ತಿಗಳಿಂದಾಗಿ ತಮ್ಮ ಗೌರವ ಹೆಚ್ಚಿಸಿಕೊಳ್ಳುವ ಕಲಾವಿದರು ಒಂದು ತೆರನಾದರೆ, ಪ್ರಶಸ್ತಿ ಪಡೆಯುವ ಮೂಲಕ ಅದರ ಗೌರವವನ್ನೇ ಹೆಚ್ಚಿಸುವವರು ಇನ್ನೊಂದು ವಿಧದವರು. ಝಾಕಿರ್ ಈ ಎರಡನೇ ಬಗೆಗೆ ಸೇರುತ್ತಾರೆ ಎಂದರೆ ಅತಿಶಯೋಕ್ತಿಯಲ್ಲ.

''ಕಲಾವಿದರಿಗೆ ಕೊನೆಯಿದೆ, ಆದರೆ ಅವರು ಬೆಳೆಸಿದ ಕಲೆಗೆ ಕೊನೆಯಿರುವುದಿಲ್ಲ. ಅದು ನಿರಂತರವಾಗಿ ಪ್ರವಹಿಸುವ ನದಿಯಿದ್ದಂತೆ, ಕಾಲಕಾಲಕ್ಕೆ ಬಂದ ಕಲಾವಿದರುಗಳಿಂದ ಮಾರ್ಪಾಡು ಹೊಂದುತ್ತಾ ಕಲೆ ಬೆಳೆಯುತ್ತಲೇ ಸಾಗುತ್ತದೆ. ಹಾಗಾಗಿ ಕಲಾವಿದರೊಬ್ಬರು ಸತ್ತಾಗ ನೋವಾಗುವುದು ಸಹಜವಾದರೂ, ಕಲೆ ಅವರೊಂದಿಗೆ ಸಾಯುವುದಿಲ್ಲ ಎಂಬುದನ್ನು ಮನವರಿಕೆ ಮಾಡಿಕೊಳ್ಳುವುದು ಸರಿಯಾದ ದಾರಿ'' ಎಂದು ಝಾಕಿರ್ ಹುಸೇನರೇ ಒಮ್ಮೆ ಹೇಳಿದ್ದರು. ''ಇಂದಿನ ಯುವ ಕಲಾವಿದರುಗಳು ಬಹಳ ಪ್ರೌಢಿಮೆ ಸಾಧಿಸುತ್ತಿದ್ದಾರೆ, ಅವರು ತಬಲಾ ನುಡಿಸುತ್ತಿರುವುದನ್ನು ನೋಡುವಾಗ ನಿಜಕ್ಕೂ ಅಚ್ಚರಿಯಾಗುತ್ತದೆ. ಶಾಸ್ತ್ರೀಯ ಸಂಗೀತಕ್ಕೆ ಭಾರತದಲ್ಲಿ ಉಜ್ವಲವಾದ ಭವಿಷ್ಯವಿದೆ'' ಎನ್ನುವ ಭರವಸೆಯನ್ನೂ ಝಾಕಿರ್ ಇತ್ತೀಚೆಗೆ ವ್ಯಕ್ತಪಡಿಸಿದ್ದರು. ಅದೇನೇ ಇರಲಿ, The Tabla will never sound the same again ಎಂಬ ಖ್ಯಾತ ಗಾಯಕ ಶಂಕರ್ ಮಹಾದೇವನ್ ಅವರ ಮಾತು ಸತ್ಯ. ನಮ್ಮೆಲ್ಲರ ಪ್ರೀತಿಯ ಉಸ್ತಾದ್ ಝಾಕಿರ್ ಹುಸೇನ್ ಅವರು ಇಂದು ನಮ್ಮ ನಡುವೆ ಇಲ್ಲದಿರಬಹುದು, ಆದರೆ ತಬಲಾ ಎನ್ನುವ ವಾದ್ಯವನ್ನು ಸಂಗೀತದಲ್ಲಿ ಎಲ್ಲಿಯವರೆಗೆ ಬಳಸಲಾಗುತ್ತದೋ ಅಲ್ಲಿಯವರೆಗೆ ಅವರು ಇದ್ದೇ ಇರುತ್ತಾರೆ.

''ಯದ್ಯದ್ವಿಭೂತಿಮತ್ ಸತ್ವಂ ಶ್ರೀಮದೂರ್ಜಿತಮೇವ ವಾ । ತತ್ತದೇವಾವ ಗಚ್ಛತ್ವಂ ಮಮ ತೇಜೋಂಶ ಸಂಭವಂ'' ಎಂಬ ಗೀತೋಕ್ತಿಯಿದೆ. ''ಯಾರಲ್ಲಿ ಅತ್ಯಂತ ಹೆಚ್ಚಿನ ಪ್ರತಿಭಾ ಸಂಪನ್ನತೆ ಎದ್ದು ಕಾಣುತ್ತದೆಯೋ, ಅವರು ನನ್ನ ತೇಜಸ್ಸಿನ ಅಂಶವನ್ನು ಹೊತ್ತು ಬಂದಿರುತ್ತಾರೆ'' ಎನ್ನುವುದು ಈ ಮಾತಿನ ಅರ್ಥವಾಗಿದೆ. ಝಾಕಿರ್ ಅವರಂಥ ಕಲಾವಿದರು ಭಗವಂತನ ತೇಜಸ್ಸಿನ ಭಾಗವಾಗಿ ಆವಿರ್ಭವಿಸಿ, ಲೋಕರಂಜನೆ ಮಾಡಿ, ಸಾಮಾನ್ಯರ ದೈನಂದಿನ ಜೀವನವನ್ನು ತಮ್ಮ ಕಲಾತ್ಮಕತೆಯಿಂದ ಸಹನೀಯಗೊಳಿಸಿದ ಅಥವಾ ದಿವ್ಯವಾಗಿಸಿದ ಕಾರಣದಿಂದಲೇ ಇರಬೇಕು ಅವರನ್ನು 'ದೈವೀ ಪುರುಷ' ಅಂತ ಕರೆಯುತ್ತಿದ್ದುದು.

ಝಾಕಿರ್ ಅವರು ಒಮ್ಮೆ, ''ಶಾಗಿರ್ದ್ ಬನ್‌ಕೆ ಆಯಾಥಾ, ಶಾಗಿರ್ದ್ ಬನ್‌ಕೆ ಹೀ ಜಾವೂಂಗಾ'' ಅಂತ ಹೇಳಿದ್ದರು. ಶಿಷ್ಯನಾಗಿ ಬಂದಿದ್ದೆ, ಏನೋ ಸ್ವಲ್ಪ ಸಾಧನೆಯಾಗಿರಬಹುದು. ಆದರೆ ಕಲಿಯುವುದು ಇನ್ನೂ ಬಹಳವಿದೆ, ಹಾಗಾಗಿ ಶಿಷ್ಯನಾಗಿಯೇ ತೆರಳುತ್ತೇನೆ ಎನ್ನುವ ವಿನೀತ ಭಾವದಿಂದಲೇ ಉಸ್ತಾದ್ ಝಾಕಿರ್ ಹುಸೇನ್ ಹೊರಟುಬಿಟ್ಟರು.

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

# ಸ್ನೇಹ ಅತಿಮಧುರ, ಸ್ನೇಹ ಅದು ಅಮರ...

ರಸದೌತಣ
ಯಗಟಿ ರಘು ನಾಡಿಗ್
naadigru@gmail.com

''ಗೆಳೆತನದ ಸುವಿಶಾಲ ಆಲದಡಿ ಪಸರಿಸಿಹ ತಣ್ಣೆಳಲ ತಂಪಿನಲಿ ತಂಗಿರುವೆನು, ಜೀವನದ ನಂತ ದುರ್ಭರ ಬವಣೆ ನೋವುಗಳ ಕಾವುಗಳ ಮೌನದಲಿ ನುಂಗಿರುವೆನು, ಗೆಳೆತನವೆ ಇಹಲೋಕಕಿರುವ ಅಮೃತ, ಅದನುಳಿದರೇನಿಹುದು ಜೀವನ್ಮೃತ'' ಎಂದಿದ್ದಾರೆ ಕವಿ ಚೆನ್ನವೀರ ಕಣವಿಯವರು. ಗೆಳೆತನಕ್ಕಿರುವ ಮಹತ್ವ, ಅದರ ಸವಿರುಚಿಯನ್ನು ಇದಕ್ಕಿಂತ ಪರಿಣಾಮಕಾರಿಯಾಗಿ ಬಣ್ಣಿಸಲು ಸಾಧ್ಯವಿಲ್ಲವೇನೋ...

ಗೆಳೆತನ ಎಂದಾಕ್ಷಣ ನೆನಪಿಗೆ ಬರುವಂಥದ್ದು, ಮಹಾಭಾರತದಲ್ಲಿ ದುರ್ಯೋಧನ ಮತ್ತು ಕರ್ಣರ ನಡುವೆ ರೂಪುಗೊಂಡಿದ್ದ ಅಸೀಮ ಬಾಂಧವ್ಯ. ಕೌರವರು ಮತ್ತು ಪಾಂಡವರ ಶಸ್ತ್ರವಿದ್ಯಾ ಪ್ರದರ್ಶನ ನಡೆಯುವಾಗ ಅಪರಿಚಿತನಾಗಿ-ಅಭ್ಯಾಗತನಾಗಿ ಅಖಾಡಕ್ಕೆ ಆಗಮಿಸುವ ಕರ್ಣ, ಅದುವರೆಗೂ ಸರ್ವರ ಮೆಚ್ಚುಗೆಗೆ ಪಾತ್ರನಾಗಿದ್ದ ಅರ್ಜುನನನ್ನು ತಾನು ಎದುರಿಸುವುದಾಗಿ ಸವಾಲೆಸೆಯುತ್ತಾನೆ. ಆದರೆ ಕೃಪಾಚಾರ್ಯರು, ''ಸೂತಪುತ್ರ ಕರ್ಣನನ್ನು ಅರ್ಜುನನಿಗೆ ಸರಿಸಮನಾಗಿ ಪರಿಗಣಿಸಲಾಗದು'' ಎಂದು ವಿರೋಧಿಸುತ್ತಾರೆ. ಅಷ್ಟು ಹೊತ್ತಿಗಾಗಲೇ ಭೀಮನಿಂದ ಸೋಲುಂಡು ಕೊತಕೊತ ಕುದಿಯುತ್ತಿದ್ದ ದುರ್ಯೋಧನ ಈ ವಿರೋಧದ ಮಾತು ಕೇಳುತ್ತಿದ್ದಂತೆಯೇ ಎದ್ದು ಬಂದು ಕರ್ಣನ ಪರ ನಿಂತು, ಸ್ಥಳದಲ್ಲೇ ಅವನನ್ನು ಅಂಗರಾಜ್ಯದ ಅಧಿಪತಿಯಾಗಿ ಘೋಷಿಸುತ್ತಾನೆ. ದುರ್ಯೋಧನನ ಮೇಲೆ ಕರ್ಣನಿಗೆ ಗೌರವಾದರಗಳು ಮೂಡುವುದಕ್ಕೆ ಈ ಘಟನೆ ಕಾರಣವಾಗುತ್ತದೆ. ಕ್ರಮೇಣ ಅವರಿಬ್ಬರ ನಡುವೆ 'ರಾಜಪದವಿ'ಯನ್ನೂ ಮೀರಿದ ಸ್ನೇಹ ಬೆಳೆಯುತ್ತದೆ.

ದಿನಗಳೆದಂತೆ ಈ ನಂಟು ಅದೆಷ್ಟು ಗಟ್ಟಿಯಾಗುತ್ತದೆಯೆಂದರೆ, ಪತ್ನಿ ಭಾನುಮತಿಯೊಂದಿಗೆ ದುರ್ಯೋಧನ ಅಂತಃಪುರದಲ್ಲಿರುವಾಗಲೂ ಅಲ್ಲಿಗೆ ಧಾರಾಳವಾಗಿ ಪ್ರವೇಶಿಸುವಷ್ಟರ ಮಟ್ಟಿಗಿನ ಸ್ವಾತಂತ್ರ್ಯ ಕರ್ಣನಿಗೆ ಸಿಗುತ್ತದೆ. ಇದಕ್ಕೆ ಕಾರಣ, ಕರ್ಣನ ಮೇಲೆ, ಅವನ ಗೆಳೆತನದ ಮೇಲೆ ದುರ್ಯೋಧನನಿಗಿದ್ದ ಅಚಲ ನಂಬಿಕೆ ಮತ್ತು ಭಾನುಮತಿಗೆ ಕರ್ಣನ ಮೇಲಿದ್ದ ಅಚಲ ವಿಶ್ವಾಸ. ಹೀಗಾಗಿ ಈ ಮೂವರೂ ನಿಜಾರ್ಥದ ಗೆಳೆಯರೇ ಆಗಿಬಿಡುತ್ತಾರೆ. ಪರಸ್ಪರರ ಸಂಗತಿಗಳನ್ನು ಯಾವುದೇ ಹಿಂಜರಿಕೆಯಿಲ್ಲದೆ ಹಂಚಿಕೊಳ್ಳುವಷ್ಟರ ಮಟ್ಟಿಗಿನ ನಂಬಿಕೆ-ವಿಶ್ವಾಸ ಅವರ ನಡುವೆ ಕೆನೆಗಟ್ಟುತ್ತದೆ, ಸದರ ಮೂಡುತ್ತದೆ.

ಒಮ್ಮೆ ಕರ್ಣನು ದುರ್ಯೋಧನನ ಅಂತಃಪುರಕ್ಕೆ ಬಂದಾಗ ಭಾನುಮತಿ ಒಬ್ಬಳೇ ಇರುತ್ತಾಳೆ. ಸಾಕಷ್ಟು ಹೊತ್ತು ನಿರೀಕ್ಷಿಸಿದರೂ ದುರ್ಯೋಧನನ ಸುಳಿವಿಲ್ಲ. ಆತ ಬರುವವರೆಗೆ ಪಗಡೆಯನ್ನಾದರೂ ಆಡೋಣ ಎಂದು ಕರ್ಣ-ಭಾನುಮತಿ ನಿರ್ಧರಿಸುತ್ತಾರೆ. ಆಟ ಕಾವೇರುತ್ತಿದ್ದಂತೆ ಭಾನುಮತಿಗೆ ತಾನು ಸೋಲುವುದು ನಿಶ್ಚಿತ ಎಂದೆನಿಸಿ, ಅರ್ಧದಲ್ಲೇ ಆಟವನ್ನು ಕೈಬಿಟ್ಟು ಮೇಲೇಳುತ್ತಾಳೆ. ಆದರೆ ಮತ್ತೆ ಆಟಕ್ಕೆ ಕೂರಿಸಿಕೊಳ್ಳುವ 'ಬಲವಂತದ ಯತ್ನವಾಗಿ' ಕರ್ಣ ಅವಳನ್ನು ಎಳೆದಾಗ, ಆ ಕೊಸರಾಟದಲ್ಲಿ ಆಕೆಯ ಸೊಂಟದಲ್ಲಿದ್ದ ಮುತ್ತಿನ ಡಾಬು ನೆಲಕ್ಕೆ ಅಪ್ಪಳಿಸಿ ಅದರ ಮುತ್ತುಗಳೆಲ್ಲಾ ಚೆಲ್ಲಾಪಿಲ್ಲಿಯಾಗಿ ಚೆಲ್ಲಾಡುತ್ತವೆ. ಅದೇ ಸಮಯಕ್ಕೆ ದುರ್ಯೋಧನ ಅಲ್ಲಿಗೆ ಬಂದುಬಿಡುತ್ತಾನೆ...!

ಅಂತಃಪುರದಲ್ಲಿ ಅರೆಕ್ಷಣ ಮೌನಸಾಮ್ರಾಜ್ಯ. ಮೂವರಲ್ಲೂ ಮಾತಿಲ್ಲ ಕಥೆಯಿಲ್ಲ. ನೆಲದ ಮೇಲೆ ಚೆಲ್ಲಾಡಿರುವುದು ಮುತ್ತಿನ ಮಣಿಗಳು, ಅವು ಅಡಕವಾಗಿದ್ದು ಡಾಬಿನಲ್ಲಿ, ಆ ಡಾಬು ಬಿಗಿದುಕೊಂಡಿದ್ದು ಭಾನುಮತಿಯ ಸೊಂಟದಲ್ಲಿ, ಅದು ಕಿತ್ತು ಆಚೆ ಬಂದಿದ್ದು ಕರ್ಣ-ಭಾನುಮತಿಯರ ನಡುವಿನ ಕೊಸರಾಟದಲ್ಲಿ.... ಈ ವೇಳೆ ಅವರಿಬ್ಬರಲ್ಲಿ ಅದ್ಯಾವ ಭಾವ ಗಿರಕಿ ಹೊಡೆಯುತ್ತಿದ್ದಿರಬಹುದು ಒಮ್ಮೆ ಕಲ್ಪಿಸಿಕೊಳ್ಳಿ! ''ನನ್ನನ್ನು, ನನ್ನ ಸ್ನೇಹವನ್ನು ಅಪಾರವಾಗಿ ನಂಬಿದ್ದ ದುರ್ಯೋಧನ ಈ ಘಟನೆಯಿಂದಾಗಿ ನನ್ನನ್ನು ತಪ್ಪಾಗಿ ತಿಳಿದುಕೊಂಡನೇ? ಇದರಿಂದಾಗಿ ನಮ್ಮಿಬ್ಬರ ನಡುವಿನ ಸ್ನೇಹ ಸಮಾಪ್ತಿಯಾಗುವುದೇ?'' ಎಂಬ ಕಸಿವಿಸಿ ಕರ್ಣನಲ್ಲಿ ಕೆನೆಗಟ್ಟಿದ್ದರೆ, ''ಗಂಡನಿಲ್ಲದ ವೇಳೆ ಪರಪುರುಷನೊಂದಿಗೆ 'ಪಗಡೆಯಾಟ'ಕ್ಕೆ ಕೂತಿದ್ದೂ ಅಲ್ಲದೆ, ಸೊಂಟದ ಡಾಬು



ಕಳಚುವಷ್ಟರ ಮಟ್ಟಿಗಿನ 'ಕೊಸರಾಟ'ಕ್ಕೆ ಒಡ್ಡಿಕೊಂಡಳಲ್ಲಾ... ಎಂದು ಪತಿಯು ತನ್ನ ಚಾರಿತ್ರ್ಯವನ್ನು ಶಂಕಿಸಬಹುದೇ'' ಎಂಬ ತಲ್ಲಣ ಭಾನುಮತಿಯಲ್ಲಿ ಹರಳುಗಟ್ಟಿರುತ್ತದೆ. ಆದರೆ ದುರ್ಯೋಧನ ಇಂಥ ಯಾವ ಭಾವಕ್ಕೂ ಆಸ್ಪದ ಕೊಡದೆ, ಆ ಬೆಳವಣಿಗೆಗೆ ತಲೆಯನ್ನೇ ಕೆಡಿಸಿಕೊಳ್ಳದೆ, ''ಕೆಳಗೆ ಬಿದ್ದ ಮುತ್ತುಗಳನ್ನು ಆರಿಸಿಕೊಡಲೇ ಅಥವಾ ಪೋಣಿಸಿಕೊಡಲೇ?'' ಎಂದು ಕೇಳಿ ಸಂದರ್ಭವನ್ನು ತಿಳಿಯಾಗಿಸುತ್ತಾನೆ. ಇದು ಪತ್ನಿ ಭಾನುಮತಿ ಮತ್ತು ಮಿತ್ರ ಕರ್ಣನಲ್ಲಿ ದುರ್ಯೋಧನ ಇಟ್ಟಿದ್ದ ನಂಬಿಕೆ-ವಿಶ್ವಾಸಗಳ ತಾಕತ್ತು, ಹಕೀಕತ್ತು! ಬೇರೊಬ್ಬ ಆಗಿದ್ದಿದ್ದರೆ, ಕರ್ಣ ಮತ್ತು ಭಾನುಮತಿ ತಲ್ಲಣಿಸಿ ಕಲ್ಪಿಸಿಕೊಂಡಂತೆಯೇ ಆಗಿಬಿಡುತ್ತಿತ್ತೇನೋ?! ಆದರೆ ಈ ಘಟನೆಗೆ ಸಾಕ್ಷಿಯಾಗಿದ್ದವನು ಕೌರವ. ಆತ 'ಛಲದೊಳ್ ದುರ್ಯೋಧನ'' ಆಗಿದ್ದರ ಜತೆಗೆ, ನಂಬಿಕೆ-ವಿಶ್ವಾಸದ ತಳಹದಿಯಿದ್ದ 'ಸ್ನೇಹಸೌಧ'ದ ನಿರ್ಮಾತೃವೂ ಆಗಿದ್ದ. ಹೀಗಾಗಿ ದುರ್ಯೋಧನ ಲವಲೇಶವೂ ಶಂಕಿಸಲಿಲ್ಲ. ಈ ವೈಶಿಷ್ಟ್ಯದಿಂದಾಗಿಯೇ ಅವನ ಮೇಲಿನ ಕರ್ಣನ ಗೌರವ ಮತ್ತಷ್ಟು ಹೆಚ್ಚಾಯಿತು, ಗೆಳೆತನದ ನಂಟು ಗಟ್ಟಿಯಾಗುತ್ತಲೇ ಹೋಯಿತು. ಕುರುಕ್ಷೇತ್ರದ ರಕ್ತರಂಜಿತ ಕೆಸರಲ್ಲಿ ಕರ್ಣನ ರಥದ ಚಕ್ರವು ಹೂತುಹೋಗಿ, ಆತ ಅಸಹಾಯಕನಾಗಿ ಸೋತು-ಸತ್ತು, ದುರ್ಯೋಧನನ ಪಾಳಯದ ಸೋಲು ಖಾತ್ರಿಯಾಗುವವರೆಗೂ ಅವರಿಬ್ಬರ ನಡುವಿನ ಈ ನಂಟು ಗಟ್ಟಿಯಾಗೇ ಇತ್ತು...

ಸ್ನೇಹದ ನಂಟು ಏನೆಲ್ಲಾ ಅದ್ಭುತ ಕಥನಗಳಿಗೆ 'ಮುನ್ನುಡಿ' ಬರೆಯಬಲ್ಲದು ಎಂಬುದನ್ನು ಹೇಳಲಿಕ್ಕೆ ಈ ಸುದೀರ್ಘ ಪೀಠಿಕೆ ನೀಡಬೇಕಾಯಿತು. ಸ್ನೇಹದ ಮಹತ್ವವನ್ನು ಸಾರುವ ಪ್ರಸಂಗಗಳು ಸಾಕಷ್ಟಿವೆ. ಶ್ರೀಕೃಷ್ಣ ಮತ್ತು ಕುಚೇಲ, ಭೋಜರಾಜ ಮತ್ತು ಕವಿರತ್ನ ಕಾಳಿದಾಸ ಇವರುಗಳ ನಡುವೆ ಅರಳಿ ಹೂವಾಗಿ, ಸಾಮಾಜಿಕ ಶ್ರೇಣೀಕರಣವನ್ನೂ, ಸಿರಿತನ-ಬಡತನವನ್ನೂ ಮೀರಿ ಬೆಳೆದ ಗೆಳೆತನ ಇದಕ್ಕೆ ಮತ್ತೆರಡು ಉದಾಹರಣೆ.

***

ಇತ್ತೀಚಿನ ದಶಕಗಳಲ್ಲಿನ ಇಂಥ ಒಂದಷ್ಟು ನಿದರ್ಶನಗಳನ್ನು ಪರಿಗಣಿಸಿದರೆ, 'ಅಣ್ಣಾವ್ರು' ಎಂದೇ ಅಭಿಮಾನದಿಂದ ಕರೆಯಲ್ಪಡುವ ಖ್ಯಾತ ಕಲಾವಿದ ಡಾ.ರಾಜ್‌ಕುಮಾರ್ ಮತ್ತು ಚಲನಚಿತ್ರ ಸಾಹಿತಿ ಚಿ.ಉದಯಶಂಕರ್ ನಡುವಿನ ಸುದೀರ್ಘ ಸ್ನೇಹ ನೆನಪಾಗುತ್ತದೆ. ಅದರಲ್ಲೂ, 'ಅಣ್ಣಾವ್ರ' ಸಂಸ್ಥೆಯು ಚಲನಚಿತ್ರ ನಿರ್ಮಾಣದಲ್ಲಿ ಸಕ್ರಿಯವಾದ ಮೇಲಂತೂ, ಗೀತರಚನೆ ಮಾತ್ರವಲ್ಲದೆ ಕಥೆ-ಚಿತ್ರಕಥೆ-ಸಂಭಾಷಣೆ ವಿಭಾಗಗಳಿಗೂ ಸಂಸ್ಥೆಗೆ ಉದಯಶಂಕರ್ ಅನಿವಾರ್ಯವಾಗಿಬಿಟ್ಟರು. ಇದಕ್ಕೆ ಉದಯಶಂಕರರ ಜನ್ಮಜಾತ ಪ್ರತಿಭೆ ಒಂದು ಕಾರಣವಾದರೆ, ಸ್ನೇಹದ ಹಣೆಪಟ್ಟಿಯಡಿ 'ಅಣ್ಣಾವ್ರು' ಅವರ ಮೇಲಿಟ್ಟಿದ್ದ ನಂಬಿಕೆ ಮತ್ತೊಂದು ಕಾರಣವಾಗಿತ್ತು. ಚಿತ್ರನಿರ್ಮಾಣ ಸಂಬಂಧವಾಗಿ ಬೇರೆ ಯಾರೋ ಹೇಳಿದಾಗ ಇಷ್ಟವಾಗದಿದ್ದ ಕಥೆಯು, ಉದಯಶಂಕರ್ ಹೇಳಿದಾಕ್ಷಣ ಅಣ್ಣಾವ್ರಿಗೆ ಮತ್ತು ಪಾರ್ವತಮ್ಮನವರಿಗೆ ಇಷ್ಟವಾಗಿಬಿಡುತ್ತಿತ್ತಂತೆ. ಇದಕ್ಕೆ ಕಾರಣ, ಕಥೆ ಹೇಳುವಾಗ ಅಣ್ಣಾವ್ರ ಚಹರೆ, ದೇಹಭಾಷೆ ಮತ್ತು ಭಾವಾಭಿವ್ಯಕ್ತಿಯ ತಾಕತ್ತನ್ನು ಗಮನದಲ್ಲಿರಿಸಿಕೊಂಡು ಉದಯಶಂಕರ್ ಅವರು ಅದಕ್ಕೆ ತುಂಬುತ್ತಿದ್ದ ರಂಜನೀಯ ಅಂಶಗಳು ಮತ್ತು ಪ್ರೇಕ್ಷಕರನ್ನು ಎರಡೂವರೆ ಗಂಟೆ ಹಿಡಿದಿಟ್ಟುಕೊಳ್ಳಲು ಅನುವಾಗುವಂತೆ ಕಥಾನಿರೂಪಣೆಗೆ ಅವರು ನೀಡುತ್ತಿದ್ದ 'ಟ್ವಿಸ್ಟ್'ಗಳು. ಹೀಗಾಗಿ, ಒಂದು ಘಟ್ಟದಲ್ಲಿ ಸಂಸ್ಥೆಯಿಂದ ನಿರಾಕರಿಸಲ್ಪಟ್ಟ ಕಥೆಯೂ ಉದಯಶಂಕರರ 'ತಾಂತ್ರಿಕ' ಮತ್ತು 'ಮಾಂತ್ರಿಕ' ಸ್ಪರ್ಶದಿಂದಾಗಿ ಸ್ವೀಕೃತವಾಗಿಬಿಡುತ್ತಿತ್ತು. ಇದು ಚಿತ್ರಕಥೆ-ಸಂಭಾಷಣೆಗಳ ರಚನೆಯನ್ನೂ, ಕಲಾವಿದರ ಅಭಿನಯದ ಭಾಗವನ್ನೂ ಸಲೀಸುಮಾಡಿಬಿಡುತ್ತಿತ್ತು. 'ಆಕಸ್ಮಿಕ'ದಂಥ ಕೈಬೆರಳೆಣಿಕೆಯ ಚಿತ್ರಗಳಲ್ಲಿ ಅನಿವಾರ್ಯ ಕಾರಣಗಳಿಂದಾಗಿ ಹಂಸಲೇಖಾರ ಪ್ರವೇಶವಾಗಿದ್ದು ಬಿಟ್ಟರೆ, ಸಂಸ್ಥೆ ನಿರ್ಮಿಸಿದ ಅಣ್ಣಾವ್ರ ಅಭಿನಯದ ಬಹುತೇಕ ಚಿತ್ರಗಳಲ್ಲಿದ್ದುದು ಉದಯಶಂಕರರ ಕೈವಾಡವೇ. ಅಷ್ಟರಮಟ್ಟಿಗೆ ಅವರು 'ದೊಡ್ಮನೆ'ಗೆ ಅನಿವಾರ್ಯವಾಗಿಬಿಟ್ಟಿದ್ದರು. ಆದರೆ, All good things must come to an end ಎಂಬ ಮಾತಿನಂತೆ 'ಉದಯ'ಶಂಕರ್ 'ಅಸ್ತಂಗತ'ರಾದಾಗ ಅಣ್ಣಾವ್ರ ಚಿತ್ರಸಂಸ್ಥೆ ಕಂಗಾಲಾಗಿದ್ದುಂಟು. ಕಾರಣ, ರಾಜಣ್ಣನ ಅಭಿನಯದ 'ಒಡಹುಟ್ಟಿದವರು' ಚಿತ್ರದ 'ಸ್ಕ್ರಿಪ್ಟ್' ಅನ್ನು ಉದಯಶಂಕರರು ಕಟ್ಟಿಕೊಟ್ಟಿದ್ದು ಹೌದಾದರೂ, ಮಿಕ್ಕ ಕೆಲ ಕಾರ್ಯಗಳು ಅಪೂರ್ಣವಾಗಿದ್ದವು. ಚಿತ್ರಕ್ಕೆ ಒಂದು ಹಾಡನ್ನೇನೋ ಅವರು ಬರೆದಿಟ್ಟಿದ್ದರು; ಆದರೆ ಮಿಕ್ಕ ಹಾಡುಗಳಿಗಾಗಿ ಸಂಸ್ಥೆಯು ವಿಜಯನಾರಸಿಂಹ, ಗೀತಪ್ರಿಯ, ಶ್ರೀರಂಗ, ಎಂ.ಎನ್.ವ್ಯಾಸರಾವ್ ಮತ್ತು ಹಂಸಲೇಖಾರನ್ನು ನೆಚ್ಚಬೇಕಾಗಿ ಬಂತು. ಈ ಮಿಕ್ಕವರು ಪ್ರತಿಭಾವಂತರಲ್ಲ ಅಂತಲ್ಲ; ಆದರೆ ಅದುವರೆಗೂ ವಿವಿಧ ನೆಲೆಯಲ್ಲಿ ಉದಯಶಂಕರರನ್ನೇ ನೆಚ್ಚಿದ್ದ ಅಣ್ಣಾವ್ರ ಚಿತ್ರಸಂಸ್ಥೆಗೆ ಅವರ ಅಗಲಿಕೆ ದುಬಾರಿಯಾಗಿ ಪರಿಣಮಿಸಿದ್ದಂತೂ ನಿಜ.

ಹಿಂದಿ ಚಿತ್ರರಂಗದ 'ಷೋಮ್ಯಾನ್' ರಾಜ್ ಕಪೂರ್ ಮತ್ತು ಹಿನ್ನೆಲೆ ಗಾಯಕ ಮುಖೇಶ್ ನಡುವೆಯಿದ್ದದ್ದೂ ವ್ಯವಹಾರವನ್ನೂ ಮೀರಿದ ನಂಟೇ. ರಾಜ್ ಕಪೂರರ ಹಾಡಿನ ಅಭಿನಯಕ್ಕೆ ಮುಖೇಶರ ಗಾಯನವಿಲ್ಲದಿದ್ದರೆ ಆ ಪ್ರಸ್ತುತಿ ಅಪೂರ್ಣ ಎಂದು ಅಭಿಮಾನಿಗಳು ಮತ್ತು ಚಿತ್ರೋದ್ಯಮಿಗಳು ಪರಿಭಾವಿಸುವಷ್ಟರ ಮಟ್ಟಿಗೆ ಅವರಿಬ್ಬರ ಬಾಂಧವ್ಯ ಅನನ್ಯವಾಗಿತ್ತು. ಆದರೆ ಮುಖೇಶ್ ತೀರಿಕೊಂಡಾಗ, ''ನನ್ನ ದನಿಯನ್ನೇ ಕಳೆದುಕೊಂಡುಬಿಟ್ಟೆ'' ಎಂದು ರಾಜ್ ಕಪೂರ್ ಪ್ರಲಾಪಿಸಿದ್ದುಂಟು. ಮಾತ್ರವಲ್ಲ, ಯಾವತ್ತಿಗೂ ರಾಜ್ ಕಪೂರರ ಆಯ್ಕೆಯ/ಮೆಚ್ಚಿನ ಸಂಗೀತ ನಿರ್ದೇಶಕರೆನಿಸಿಕೊಂಡಿದ್ದು 'ಶಂಕರ್-ಜೈಕಿಶನ್'; 'ಬರ್ಸಾತ್'ನಿಂದ ಮೊದಲ್ಗೊಂಡು 'ಕಲ್ ಆಜ್ ಔರ್ ಕಲ್'ವರೆಗಿನ ಸ್ವಂತ ನಿರ್ಮಾಣದ 10 ಚಿತ್ರಗಳು ಸೇರಿದಂತೆ, ಒಟ್ಟು 20 ಚಿತ್ರಗಳಲ್ಲಿ 'ಶಂಕರ್-ಜೈಕಿಶನ್' ಜೋಡಿಯನ್ನು ಸಂಗೀತ ನಿರ್ದೇಶನಕ್ಕೆ ರಾಜ್ ಕಪೂರ್ ಬಳಸಿಕೊಂಡರು. ಈ ಪೈಕಿ ಜೈಕಿಶನ್‌ರ ಮರಣದ ನಂತರವಷ್ಟೇ ಅವರು ವಿಭಿನ್ನ ಆಯ್ಕೆಗಳೆಡೆಗೆ ಹೊರಳಿದ್ದು!

'ಸಾಕ್ಷಾತ್ಕಾರ', 'ಕಪ್ಪು ಬಿಳುಪು', 'ಕರುಳಿನ ಕರೆ', 'ಕಾಲೇಜುರಂಗ', 'ಎಡಕಲ್ಲು ಗುಡ್ಡದ ಮೇಲೆ', 'ಧರ್ಮಸೆರೆ', 'ರಂಗನಾಯಕಿ' ಚಿತ್ರಗಳನ್ನು ಹೊರತುಪಡಿಸಿದರೆ ಪುಟ್ಟಣ್ಣ ಕಣಗಾಲರ ಮಿಕ್ಕೆಲ್ಲ ಚಿತ್ರಗಳಿಗೆ ಸಂಗೀತ ನೀಡಿದವರು ವಿಜಯಭಾಸ್ಕರ್. ಇವರಿಬ್ಬರ ನಡುವೆ ಹಾಸುಹೊಕ್ಕಾಗಿದ್ದ ಗೆಳೆತನ, ಚಿತ್ರಕೃಷಿಗೆ ಸಂಬಂಧಿಸಿ ಪರಸ್ಪರರ ಗ್ರಹಿಕೆಯ 'ವೇವ್‌ಲೆಂಥ್' ಸರಿಹೊಂದುತ್ತಿದ್ದುದು ಇದಕ್ಕೆ ಕಾರಣ. ಇದು ದೊರೆ-ಭಗವಾನ್ ನಿರ್ದೇಶಕ ಜೋಡಿಗೂ ಅನ್ವಯಿಸುವ ಮಾತು. 'ದೊರೆ-ಭಗವಾನ್' ಎಂದರೆ ಒಬ್ಬರೇ ವ್ಯಕ್ತಿ ಎಂದು ಸಾಕಷ್ಟು ಮಂದಿ ಭಾವಿಸಿದ್ದರ ಮಟ್ಟಿಗಿನ ನಂಟು ಹಾಗೂ 'ಅಂಡರ್‌ಸ್ಟ್ಯಾಂಡಿಂಗ್' ಈ ಜೋಡಿಯದ್ದು. ಬರೋಬ್ಬರಿ 27 ಚಿತ್ರಗಳನ್ನು ನಿರ್ದೇಶಿಸಿದ ಹಾಗೂ ಬಹುತೇಕ ಚಿತ್ರಗಳಿಗೆ ರಾಜನ್-ನಾಗೇಂದ್ರ ಜೋಡಿಯನ್ನೇ ಸಂಗೀತ ನಿರ್ದೇಶಕರಾಗಿ ಬಳಸಿಕೊಂಡ ಹೆಗ್ಗಳಿಕೆ ಇವರದ್ದು. ಈ ಚಿತ್ರಗಳ ಪೈಕಿ ಹೆಚ್ಚಿನವು ಸೂಪರ್‌ಹಿಟ್! ಆದರೆ ಮಧ್ಯೆ ಒಮ್ಮೆ, ಕಾರಣಾಂತರಗಳಿಂದ ಭಗವಾನ್ ಅವರು ಈ ನಂಟನ್ನು ಕಳಚಿಕೊಂಡು ಅನಂತ್‌ನಾಗ್-ಮಾಲಾಶ್ರೀ ಅಭಿನಯದ 'ಮಾಂಗಲ್ಯ ಬಂಧನ' ಚಿತ್ರವನ್ನೂ, ದೊರೆಯವರು ಮರಣಿಸಿದ ನಂತರ ಅನಂತ್‌ನಾಗ್ ಅಭಿನಯದ 'ಅಪೂರ್ವ ಗೊಂಬೆ' ಚಿತ್ರವನ್ನೂ ಒಬ್ಬಂಟಿಯಾಗೇ ನಿರ್ದೇಶಿಸಿದರು; ಆದರೆ 'ದೊರೆ-ಭಗವಾನ್' ಟ್ರೇಡ್‌ಮಾರ್ಕ್ ಅನ್ನು, ಅವರ ಗೆಳೆತನವನ್ನು ಒಪ್ಪಿದ್ದ-ಅಪ್ಪಿದ್ದ ಚಿತ್ರರಸಿಕರು ಈ 'ಒಂಟಿ ಪ್ರಸ್ತುತಿ'ಯನ್ನು ಅದೇಕೋ ಮೆಚ್ಚಲಿಲ್ಲ ಎಂಬುದು ಕಾಕತಾಳೀಯವೂ ಇರಬಹುದು!

ಒಟ್ಟಿನಲ್ಲಿ, 'ಸ್ನೇಹ ಅತಿಮಧುರ, ಸ್ನೇಹ ಅದು ಅಮರ!

# ಯುಐ ಮಲ್ಟಿಮೀಡಿಯಾ ಅಲ್ಲ, ಬರೀ ಎಸ್‌ಎಂಎಸ್

ತುಂಟರಗಾಳಿ
ಹರಿ ಪರಾಕ್
vveditoped@gmail.com

## ಸಿನಿಗನ್ನಡ

ಸಾಮಾನ್ಯವಾಗಿ ಉಪೇಂದ್ರ ನಿರ್ದೇಶನದ ಚಿತ್ರ ಅಂದ್ರೆ, ಅಲ್ಲಿ ತಲೆಗೆ ಹುಳ ಬಿಡೋ ಕೆಲಸ ಆಗಿರುತ್ತೆ. ಆದರೆ ಇಲ್ಲಿ ಮನುಷ್ಯನ ತಲೆ ಒಳಗಿರೋ ವಿಷಯದ ಬಗ್ಗೆ ಉಪೇಂದ್ರ ಮಾತಾಡಿದ್ದಾರೆ. ಅದರ ಬಗ್ಗೆ ಯೋಚನೆ ಮಾಡಿ ಅಂತ 'ಪ್ರವೋಕ್' ಮಾಡಿ ಜನರನ್ನು 'ಅವೇಕ್' ಮಾಡಲು ಯತ್ನಿಸಿದ್ದಾರೆ. ಅದು ಫುಡ್ ಫಾರ್ ಥಾಟ್. ಹುಳ ಅನ್ನೋದು ಫುಡ್ ಅಲ್ಲವಲ್ಲ. ಹಾಗಾಗಿ ಇದನ್ನು ತಲೆಗೆ ಹುಳ ಬಿಡೋ ಕೆಲಸ ಅನ್ನೋಕಾಗಲ್ಲ. ಸಾಮಾನ್ಯವಾಗಿ ಸಿನಿಮಾ ಮೇಕರ್ಸ್ ಒಂದು ಸಿನಿಮಾ ಮಾಡಿ ಅದರಲ್ಲಿ ಒಂದು ಮೆಸೇಜ್ ಇಟ್ಟಿರ್ತಾರೆ. ಆದರೆ ಇಲ್ಲಿ ಮೆಸೇಜೇ ಸಿನಿಮಾ ಆಗಿದೆ. ಇದರಲ್ಲಿ ಹೆಚ್ಚು ಮನರಂಜನೆ ಇಲ್ಲದಿರೋದ್ರಿಂದ ಇದು ಮಲ್ಟಿಮೀಡಿಯಾ ಮೆಸೇಜ್ ಆಗದೆ ಕೇವಲ ಪ್ಲೈನ್ ಎಸ್‌ಎಂಎಸ್ ಮೆಸೇಜ್ ಆಗಿದೆ ಅನ್ನಿಸಿದ್ರೆ ತಪ್ಪಿಲ್ಲ. ಒಂದು ಲೆಕ್ಕದಲ್ಲಿದು ಉಪೇಂದ್ರ ಅವರ ಇದುವರೆಗಿನ ಅತಿ ಸ್ಟ್ರೇಟ್ ಚಿತ್ರ. ಇದರಲ್ಲಿ ಅರ್ಥವಾಗುವಂಥದ್ದು, ಆಗದಿರುವಂಥದ್ದು ಅನ್ನೋ ಕೆಟಗರಿನೇ ಇಲ್ಲ. ಯಾಕಂದ್ರೆ ಇಲ್ಲಿ ಮನರಂಜನೆಗೆ ಬ್ಯಾಕ್ ಸೀಟ್. ಹಾಗಾಗಿ ಪ್ರೇಕ್ಷಕನೂ ಸೀಟಿನಂಚಿನಲ್ಲಿ ಕೂರದೆ, ಬ್ಯಾಕ್ ಸೀಟಿಗೆ ಒರಗಿಕೊಂಡೇ ನೋಡುತ್ತಾನೆ. ಸೀಟಿನಲ್ಲಿ ರಿಲ್ಯಾಕ್ಸ್ ಆಗಿ ಕೂತ ಅವನಿಗೆ ಸೀಟಿ ಹೊಡೆಯುವ ಅವಕಾಶಗಳು ಕಮ್ಮಿ. ಇದಕ್ಕೆ ಸಿನಿಮಾದ ಸಂಭಾಷಣೆಗಳೂ ಕಾಣಿಕೆ ನೀಡಿವೆ. ಉಪೇಂದ್ರರ ರೆಗ್ಯುಲರ್ ಸಿನಿಮಾ ಅಂದ್ರೆ, ಅಲ್ಲಿ ಡೈಲಾಗ್‌ಗಳ ಪ್ರವಾಹವೇ ಇರುತ್ತದೆ. ಆದರಿಲ್ಲಿ, 'ಇಂಥ ಡೈಲಾಗ್‌ಗಳು ಎಲ್ಲಿ ಸಿಕ್ತವೆ ನಿಮಗೆ, ಹೊಡೀರಿ ಚಪ್ಪಾಳೆ' ಅನ್ನಿಸುವಂಥ ಅವಕಾಶಗಳು ಕಮ್ಮಿ. ಪ್ರೇಕ್ಷಕರನ್ನೇ ಯಾರಾದ್ರೂ ಬಯ್ತಾರಾ, ಬಯ್ಯೋನು ಒಬ್ಬನೇ ಉಪೇಂದ್ರ ಅನ್ನೋ ಟ್ರೆಂಡ್ ಇಲ್ಲೂ ಇದೆ. ನೀವು ಬುದ್ಧಿವಂತರಾಗಿದ್ರೆ ಈಗಲೇ ಚಿತ್ರಮಂದಿರದಿಂದ ಗೆಟ್ ಔಟ್ ಆಗಿ ಅನ್ನೋ ಉಪೇಂದ್ರ, ಈ ಸಿನಿಮಾ ನೋಡೋರು ದಡ್ಡರು ಅಂತ ಹೇಳಿ, 'ಚಿತ್ರಮಂದಿರದಲ್ಲಿ ಇರಬೇಕಾ, ಎದ್ದು ಹೋಗ್ಬೇಕಾ' ಅಂತ ಜನ ಯೋಚಿಸುವಾಗ ಮರುಕ್ಷಣದಲ್ಲೇ, 'ಬುದ್ಧಿವಂತರು ಫೂಲ್ ಥರ ಕಾಣಬಹುದು, ದಡ್ಡರು ಬುದ್ಧಿವಂತರ ಥರ ಪೋಸ್ ಕೊಡ್ತಾರೆ' ಅಂತನೂ ಹೇಳಿ ಜಾರಿಕೊಂಡು ಜಾರಿಬಿದ್ದ ಜಾಣನ ಜಾಣತನ ತೋರಿಸಿದ್ದಾರೆ. ಒಟ್ಟಾರೆ, ನಾನು ಮತ್ತು ನನ್ನೊಳಗಿರುವ ನಾನು ಬಗ್ಗೆ ಈ ಸಿನಿಮಾದಲ್ಲಿ ಉಪೇಂದ್ರ ಮಾತಾಡಿದ್ದಾರೆ. ಆದರೆ ಪ್ರೇಕ್ಷಕರಿಗೆ ಸಿನಿಮಾ ಇಷ್ಟ ಆಗೋದು ಕಷ್ಟ. ಜತೆಗೆ ಪ್ರಜೆಗಳು ಮತ್ತು ಪ್ರಭುಗಳ ನಡುವಿನ ಕಥೆಯೂ ಇಲ್ಲಿದೆ. ಆದರೆ ಅದು 'ಪ್ರೇಕ್ಷಕ ಪ್ರಭು'ಗಳಿಗೆ ಇಷ್ಟ ಆಗೋದು ಕಷ್ಟ. ಆದರೆ, ಕೋಡ್, ಮೆಟಫರ್ ಅಂತ ಸಿನಿಮಾದಲ್ಲಿ ನಿರ್ದೇಶಕರಿಗೇ ಗೊತ್ತಿಲ್ಲದೇ ಇರೋದನ್ನೆಲ್ಲ 'ಡಿ-ಕೋಡ್' ಮಾಡ್ಕೊಂಡು ನೋಡಿ, 'ನನಗೆ ಎರಡು ಕೋಡು, ಕೊಂಬು' ಇದೆ ಅಂತ ತೋರಿಸಿಕೊಳ್ಳೋರಿಗೆ ಈ ಸಿನಿಮಾ ಖಂಡಿತಾ ಇಷ್ಟ ಆಗುತ್ತೆ.

## ಲೂಸ್ ಟಾಕ್

### ಹುಚ್ಚ ವೆಂಕಟ್

- **ವೆಂಕಟ್ ಅವ್ರೆ, ನೀವು ಎಷ್ಟೋ ವರ್ಷದ ಹಿಂದೆ ದೇವಸ್ಥಾನ ಕಟ್ಟಿಸಿದ್ರಿ. ಆದ್ರೆ ಅಲ್ಲಿಗೆ ಯಾರೂ ಬರ್ತಿಲ್ವಂತೆ?**

– ಹೌದು. ಜನ ತುಳಿದ್ರು ಅಂತ ದೇವಸ್ಥಾನ ಕಟ್ಟಿದ್ರೆ, ದೇವರೂ ತುಳಿಯೋ ಹಂಗಾಯ್ತು. ನನ್ ಮೇಲ್ ಬ್ಯಾಡ, ಅಟ್ಲೀಸ್ಟ್ ದೇವರ ಮೇಲಾದ್ರೂ ಅಭಿಮಾನ ಬೇಡ್ವಾ? ದೇವಸ್ಥಾನ ಸರಿಯಿಲ್ಲ ಅಂದ್ರೆ, 'ಅದ್ ಸರಿಯಿಲ್ಲ, ಇದ್ ಸರಿಯಿಲ್ಲ' ಅಂತ ಕುತ್ತಿಗೆ ಹಿಡ್ಕೊಂಡ್ ಕೇಳಲಿ ಅಂತ... ನನ್ನನ್ನಲ್ಲ, ದೇವರನ್ನ.

- **ಬಡವರ ಮಕ್ಕಳನ್ನ ತುಳೀಬೇಕು ಅಂತಿದ್ದಾರಾ ಜನ? ಮತ್ತೇನ್ ಮಾಡ್ತೀರಾ ಈಗ?**

– ಈಗ ನನ್ ಎಕ್ಕಡನೂ ದೇವಸ್ಥಾನದೊಳಕ್ಕೆ ಹೋಗಲ್ಲ... ಹೆಂಗಿದ್ರೂ ದೇವಸ್ಥಾನದೊಳಕ್ಕೆ ಎಕ್ಕಡ ಹಾಕ್ಕೊಂಡ್ ಹೋಗಂಗಿಲ್ವಲ್ಲ.

- **ಹೋಗ್ಲಿ, ನಿಮ್ ದೇವಸ್ಥಾನಕ್ಕೆ ಜನ ಯಾಕ್ ಬರ್ತಾಯಿಲ್ಲ?**

– ಅದೇ ಗೊತ್ತಿಲ್ಲ. ಪಕ್ಕದ ಆ ದೇವಸ್ಥಾನಕ್, ಈ ದೇವಸ್ಥಾನಕ್ ಹೋಗ್ತಿರಾ. ಹೋಗ್ಬೇಡಿ ಅನ್ನಲ್ಲ. ನನ್ ದೇವಸ್ಥಾನಕ್ಕೂ ಬನ್ನಿ. ಯಾಕ್ ಬರಲ್ಲ? ಆದ್ರೂ ದೇಗುಲದ ಕಸ ಹೊಡೆಯೋಕೆ, ನೆಲ ಒರಸೋಕೆ ಅಂತ 4 ಜನ ಬರ್ತಾರಲ್ಲ, ಅವರೇ ನನ್ನ ಅಭಿಮಾನಿ 'ದೇವರು'ಗಳು. ಅಷ್ಟ್ ಸಾಕ್.

- **ಮತ್ತೇನ್ ಮಾಡ್ತೀರಾ, ದೇವಸ್ಥಾನ ಮುಚ್ಚೋ ಯೋಚನೆ ಮಾಡ್ತಾ ಇದೀರಾ?**

– ಛೇ. ನೆವರ್. ಇವು ಬರದೇ ಇದ್ರೆ ನಾನೇನ್ ದೇವಸ್ಥಾನದ ಮುಂದೆ ಭಿಕ್ಷೆ ಬೇಡ್ತಾ ಬೀದಿಗ್ ಬರಲ್ಲ.

- **ಯಾಕೋ ಡೌಟ್ ಆಗ್ತಾ ಇದೆ, ನೀವ್ ಕಟ್ಟಿಸಿರೋ ದೇವಸ್ಥಾನ ಯಾವ ದೇವ್ರದ್ದು?**

– ಹಾ? ನನ್ ಫೇವರಿಟ್ ಹೀರೋಯಿನ್ ರಮ್ಯಾ ಅವರದ್ದು.... ನಾನ್ ಶೋಕಿಗೋಸ್ಕರನೇ ದೇವಸ್ಥಾನ ಕಟ್ಟಿರೋದು. ಏನಿವಾಗ?

(ಕಾಲ್ಪನಿಕ ಸಂದರ್ಶನ)

## ನೆಟ್ ಪಿಕ್ಸ್

ಹೆಂಗಸೊಬ್ಬಳು ಡಾಕ್ಟರ್ ಖೇಮು ಹತ್ರ ಬಂದಳು. ನೋಡಿದರೆ ಅವಳನ್ನು ಯಾರೋ ಹಿಗ್ಗಾಮುಗ್ಗ ಥಳಿಸಿದಂತೆ ಕಾಣುತ್ತಿತ್ತು. 'ಏನಾಯ್ತು?' ಅಂತ ಖೇಮು ಕೇಳಿದ್ದಕ್ಕೆ ಆಕೆ ಹೇಳಿದಳು, 'ಡಾಕ್ಟ್ರೇ ನನ್ನ ಗಂಡ ಪ್ರತಿದಿನ ಕುಡಿದು ಬಂದಾಗ ನನ್ನ ಹಿಗ್ಗಾಮುಗ್ಗ ಹೊಡೀತಾನೆ, ನನಗಂತೂ ಅವನ ಹಿಂಸೆ ತಡೆಯೋಕಾಗಲ್ಲ. ಇದಕ್ಕೆ ಏನಾದ್ರೂ ಪರಿಹಾರ ಸೂಚಿಸಿ'. ಖೇಮು ಕೊಂಚ ಯೋಚಿಸಿ ಹೇಳಿದ, 'ಒಂದ್ ಕೆಲ್ಸ ಮಾಡಿ. ಇನ್ಮೇಲೆ ನಿಮ್ ಗಂಡ ಕುಡಿದು ಮನೆಗೆ ಬಂದ ಕೂಡಲೆ ನೀವು ಒಂದು ಲೋಟ ನೀರನ್ನು ಕುಡಿಯಿರಿ. ಆದರೆ ನೀರನ್ನು ನುಂಗದೆ ಬಾಯಲ್ಲೇ ಇಟ್ಕೊಂಡಿರಿ. ಗಂಡ ಹಾಸಿಗೆ ಮೇಲೆ ಮಲಗಿ ನಿದ್ರಿಸುತ್ತಿದ್ದಾನೆ ಅಂತ ಕನ್ಫರ್ಮ್ ಆದಮೇಲೆ ನೀರನ್ನು ನುಂಗಿ'. 'ಸರಿ' ಅಂತ ಹೆಂಗಸು ಹೊರಟುಹೋದಳು. ವಾರದ ನಂತರ ಮತ್ತೆ ಬಂದ ಅವಳು, 'ಡಾಕ್ಟರೇ ಎಂಥ ಬ್ರಿಲಿಯಂಟ್ ಐಡಿಯಾ ಕೊಟ್ರಿ. ನನ್ನ ಗಂಡ ಕುಡ್ಕೊಂಡು ಮನೆಗೆ ಬಂದಾಗಲೆಲ್ಲ ಒಂದು ಲೋಟ ನೀರನ್ನು ಅವನು ಮಲಗೋವರೆಗೂ ಬಾಯಲ್ಲಿ ಇಟ್ಕೋತಿದ್ದೀನಿ. ಈಗ ಅವನು ನನ್ನ ಟಚ್ ಕೂಡ ಮಾಡ್ತಿಲ್ಲ ಗೊತ್ತಾ?' ಅಂತ ಖೇಮುವನ್ನು ಹೊಗಳಿದಳು. ಅದಕ್ಕೆ ಖೇಮು ಹೇಳಿದ 'ನೋಡಿದ್ರಾ? ನೀವು ಬಾಯಿ ಮುಚ್ಚಿಕೊಂಡಿ ರೋದ್ರಿಂದ ಎಷ್ಟು ಹೆಲ್ಪ್ ಆಗುತ್ತೆ'.

## ಲೈನ್ ಮ್ಯಾನ್

- **ಇಂಡಿಯಾ ವಿರುದ್ಧ ಯಾವಾಗ್ಲೂ ಮಿಂಚೋ ಟ್ರಾವಿಸ್ 'ಹೆಡ್' ಆಟ ನೋಡಿ ಕ್ರಿಕೆಟ್ ಮತ್ತು ಸಿನಿಮಾ ಪ್ರೇಮಿಗಳು ಹೇಳಿದ್ದು**

– ಈ 'ತಲೆ' ಉರುಳಿಸೋಕೆ ಭೈರತಿ ರಣಗಲ್ಲೇ ಬರ್ಬೇಕು ಅನ್ಸುತ್ತೆ

- **'ಯುಐ' ಸಿನಿಮಾ ನೋಡೋಕೆ ಬರೋ ಪ್ರೇಕ್ಷಕರಿಗೆ ಉಪೇಂದ್ರ ಹೇಳ್ತಾ ಇರೋ ಮಾತು**

– ಕೇಳ್ತೀರಾ ಇನ್ನೊಂದ್ಸಲ? ಡೈರೆಕ್ಷನ್ ಮಾಡಿ ಅಂತ!?

- **'ಹುಚ್ಚ' ಖ್ಯಾತಿಯ ಓಂಪ್ರಕಾಶ್, ಹುಚ್ಚ ವೆಂಕಟ್ ಜತೆ ಸಿನಿಮಾ ಮಾಡಿದ್ರೆ, ಅದರ ಹೆಸರು**

– ಹುಚ್ಚ: ಪಾರ್ಟ್ ಮೈನಸ್ ಒನ್

- **ಹುಚ್ಚ ವೆಂಕಟ್ ಸಿನಿಮಾ ನೋಡಿದವರು ಹೇಳಿದ ಮಾತು**

– ಹುಚ್ಚನ ಸಿನಿಮಾದಲ್ಲಿ ನಿದ್ದೆ ಮಾಡೋನೇ ಜಾಣ

- **ಯುಟ್ಯೂಬ್ನಲ್ಲಿ ಹುಚ್ಚ ವೆಂಕಟನ ವಿಡಿಯೋ ನೋಡುವವರ ಮಾತು**

– ಹೋದೆಯಾ ಥಿಯೇಟರ್‌ನಲ್ಲಿ ಅಂದ್ರೆ, ಬಂದೆಯಾ ಯುಟ್ಯೂಬ್ನಲ್ಲಿ

- **ಗೋಡ್ಸೆನ ದೇಶಭಕ್ತ ಅಂತಾರೆ ಕೆಲವರು**

– ಇನ್ಮೇಲೆ ಸರಕಾರಿ ಕಚೇರಿಗಳಲ್ಲಿ ಗಾಂಧೀಜಿ ಬದಲು, ಗೋಡೆ ಮೇಲೆ ಗೋಡ್ಸೆ ಫೋಟೋನೇ ಹಾಕಿದ್ರೂ ಆಶ್ಚರ್ಯ ಇಲ್ಲ.

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed @ manipal media network limited Sy no7/2,plot no CA-3/1,28 (p)&29 (p),Kapnoor,2nd stage industrial area,kapnoor village, Gulbarga-585104
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 227

## ಸಮಾಚಾರ ಸಣ್ಣದಲ್ಲ

### ಇಂದು ನಗರಕ್ಕೆ ಸಿಎಂ ಸಿದ್ದು ಆಗಮನ

**ಕಲಬುರಗಿ:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬೆಂಗಳೂರಿನಿಂದ ವಿಶೇಷ ವಿಮಾನದ ಮೂಲಕ ಡಿಸೆಂಬರ್ 22 ರಂದು ಬೆಳಗ್ಗೆ 11.40 ಗಂಟೆಗೆ ಕಲಬುರಗಿ ವಿಮಾನ ನಿಲ್ದಾಣಕ್ಕೆ ಆಗಮಿಸಲಿದ್ದಾರೆ. ಅಂದು ಮಧ್ಯಾಹ್ನ 12 ಗಂಟೆಗೆ ನಗರದ ಡಾ. ಎಸ್.ಎಂ. ಪಂಡಿತ ರಂಗಮಂದಿರದ ಎದುರಿಗಡೆಯ ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಿಂದ ಆಯೋಜಿಸಿರುವ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅನುದಾನದಲ್ಲಿ ನೂತನವಾಗಿ ನಿರ್ಮಿಸಿರುವ 371 ಹಾಸಿಗೆ ಸಾಮತ್ರ್ಯದ ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಆಸ್ಪತ್ರೆಯ ಕಲಬುರಗಿ ಶಾಖಾ ಆಸ್ಪತ್ರೆಯನ್ನು ಲೋಕಾರ್ಪಣೆ ಮಾಡುವರು. ಬಳಿಕ ಸಂಜೆ 4.20 ಗಂಟೆಗೆ ಕಲಬುರಗಿ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದ ಮೂಲಕ ಬೆಂಗಳೂರಿಗೆ ಪ್ರಯಾಣಿಸಲಿದ್ದಾರೆ.

### ಸಿ.ಟಿ.ರವಿ ಕ್ಷಮೆ ಯಾಚನೆಗೆ ಒತ್ತಾಯ

**ಜೇವರ್ಗಿ:** ಬೆಳಗಾವಿಯ ಅಧಿವೇಶನದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ವಿರುದ್ಧ ವಿಧಾನ ಪರಿಷತ್ ಬಿಜೆಪಿ ಸದಸ್ಯ ಸಿ.ಟಿ. ರವಿ ಅಸಭ್ಯ ಪದಬಳಕೆ ಮಾಡಿರುವುದನ್ನು ವೀರಶೈವ ಲಿಂಗಾಯತ ಮಹಾಸಭಾದ ವೀರಶೈವ ಲಿಂಗಾಯತ ಮಹಾಸಭಾ ಜೇವರ್ಗಿ ಮತ್ತು ಯಡ್ರಾಮಿ ಕಾರ್ಯದರ್ಶಿ ರಾವುತರಾಯ್ ಕಲ್ಲೂರ್ ಬಲವಾಗಿ ಖಂಡಿಸಿದ್ದಾರೆ. ವಿಧಾನ ಪರಿಷತ್ ಹಿರಿಯರ ಸದನ ಎಂದೇ ಗೌರವಿಸಲಾಗುತ್ತಿದೆ. ಹೀಗಿರುವಾಗ ಮೇಲ್ಮನೆ ಸದಸ್ಯರಾಗಿರುವ ಮಾಜಿ ಸಚಿವ ಸಿ.ಟಿ.ರವಿ ಮಹಿಳಾ ಸಚಿವರೊಬ್ಬರ ಕುರಿತು ಬಳಸಿರುವ ಪದ ಇಡಿ ಮಹಿಳಾ ಸಮುದಾಯಕ್ಕೆ ಅವಮಾನಿಸಿದ್ದಾರೆ. ಆದರಿಂದ, ಸಿ.ಟಿ ರವಿ ಅವರು ಕೂಡಲೇ ರಾಜ್ಯದ ಜನತೆ ಮುಂದೆ ಲಕ್ಷ್ಮಿ ಹೆಬ್ಬಾಳ್ಕರ್ ಹಾಗೂ ಮಹಿಳಾ ಸಮುದಾಯಕ್ಕೆ ಕ್ಷೇಮೆಯಾಚಿಸಬೇಕು ಎಂದು ಒತ್ತಾಯಿಸಿದ್ದಾರೆ.

### ಮಣಿಕಂಠಗೆ ನ್ಯಾಯಾಂಗ ಬಂಧನ



**ಚಿತ್ತಾಪುರ:** ಸಮಾಜದಲ್ಲಿ ಅಶಾಂತಿ ನಿರ್ಮಾಣ ಮಾಡುವುದು, ಎರಡು ವರ್ಗಗಳ ನಡುವೆ ಉದ್ದೇಶ ಪೂರ್ವಕವಾಗಿ ಸುಳ್ಳು ಸುದ್ದಿ ಹಬ್ಬಿಸುವ ಆರೋಪ ಪ್ರಕರಣದಲ್ಲಿ ಬಿಜೆಪಿ ಮುಖಂಡ ಮಣಿಕಂಠ ರಾಠೋಡ್ ಅವನ್ನು ಬಂಧಿಸಲಾಗಿದ್ದು, ಶುಕ್ರವಾರ ಪೊಲೀಸರು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಚಿತ್ತಾಪುರ ಕೋರ್ಟ್ ರಸ್ತೆ ಬಳಿ ಗುರುವಾರ ಸಾಯಂಕಾಲ ರಾಠೋಡ್ ನನ್ನು ಬಂಧಿಸಲಾಗಿದ್ದು, ನ್ಯಾಯಾಧೀಶರ ಮುಂದೆ ಹಾಜರು ಪಡಿಸಲಾಗಿತ್ತು. ಆದರೆ, ನ್ಯಾಯಾಧೀಶರ ಆದೇಶದ ಮೇರೆಗೆ ರಾತ್ರಿ ಚಿತ್ತಾಪುರ ಪೊಲೀಸ್ ಠಾಣೆಯಲ್ಲಿ ಅವರನ್ನು ಇರಿಸಿಕೊಂಡು ಶುಕ್ರವಾರ ಬೆಳಗ್ಗೆ ನ್ಯಾಯಾಲಯಕ್ಕೆ ಕರೆದುಕೊಂಡು ಬರುವಂತೆ ಸೂಚನೆ ನೀಡಿದರು. ಚಿತ್ತಾಪುರ ಸಿಪಿಐ ಚಂದ್ರಶೇಖರ ತಿಗಡಿ ಹಾಗೂ ಪಿಎಸ್ಐ ಶ್ರೀಶೈಲ್ ಅಂಬಾಟಿ ಅವರು ಮಣಿಕಂಠನನ್ನು ಬಂಧಿಸಿ, ಶುಕ್ರವಾರ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಮಾಹಿತಿ ನೀಡಿದರು.

ವಿ+
ಸೋಮವಾರ

# ಆಧುನಿಕತೆಗೆ ತಕ್ಕಂತೆ ಯುವ ಪೀಳಿಗೆ ಕೌಶಲ ಅಗತ್ಯ

## ಶರಣಬಸವ ವಿಶ್ವವಿದ್ಯಾಲಯದ ಆರನೇ ಘಟಿಕೋತ್ಸವ | ಮೂವರಿಗೆ ಗೌರವ ಡಾಕ್ಟರೇಟ್ ಪ್ರದಾನ | ಪ್ರೊ.ಸಿ.ಎಂ.ತ್ಯಾಗರಾಜ

**ವಿಶ್ವವಾಣಿ ಸುದ್ದಿಮನೆ** ಕಲಬುರಗಿ

ತಂತ್ರಜ್ಞಾನ, ಹವಾಮಾನದ ಸವಾಲುಗಳು ಮತ್ತು ಸಾಮಾಜಿಕ ಆಂದೋಲನಗಳಿಂದಾಗಿ ಬದಲಾಗುತ್ತಿರುವ ಜಗತ್ತಿನ ಸವಾಲುಗಳನ್ನು ಎದುರಿಸಲು ಯುವ ಪೀಳಿಗೆ ಬುದ್ಧಿವಂತಿಕೆ, ಕೌಶಲ ಮತ್ತು ಲೌಕಿಕ ಬುದ್ಧಿವಂತಿಕೆಯನ್ನು ಸಮಾನವಾಗಿ ಮಿಶ್ರಣ ಮಾಡಬೇಕು ಎಂದು ಬೆಳಗಾವಿಯ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ಉಪಕುಲಪತಿ ಪ್ರೊ.ಸಿ.ಎಂ.ತ್ಯಾಗರಾಜ ಹೇಳಿದರು.

ಶನಿವಾರ ಪೂಜ್ಯ ಡಾ. ಬಸವರಾಜಪ್ಪ ಅಪ್ಪ ಸ್ಮರಣಾರ್ಥ ಭವನದಲ್ಲಿ ನಡೆದ ಶರಣಬಸವ ವಿಶ್ವವಿದ್ಯಾಲಯದ ಆರನೇ ಘಟಿಕೋತ್ಸವ ಕಾರ್ಯಕ್ರಮದ ಮುಖ್ಯ ಭಾಷಣಕಾರರಾಗಿ ಮಾತನಾಡಿದರು.

ಆಲ್ಬರ್ಟ್ ಐನ್‌ಸ್ಟೈನ್ ಅವರ ಎಚ್ಚರಿಕೆಯನ್ನು ಉಲ್ಲೇಖಿಸಿ, ''ಜಗತ್ತು ಬದುಕಲು ಅಪಾಯಕಾರಿ ಸ್ಥಳವಾಗಿದೆ, ಅದು ದುಷ್ಟ ಜನರಿಂದಲ್ಲ, ಆದರೆ ಅದರ ಬಗ್ಗೆ ಏನನ್ನೂ ಮಾಡದ ಜನರಿಂದ.'' ನಿಮ್ಮ ವೃತ್ತಿಪರ ಪರಿಣಿತಿಯ ಮೂಲಕ ಮಾತ್ರವಲ್ಲದೆ ವಿಮರ್ಶಾತ್ಮಕವಾಗಿ ಯೋಚಿಸುವ, ನೈತಿಕವಾಗಿ ವರ್ತಿಸುವ ಮತ್ತು ಸಹಾನುಭೂತಿಯ ಸಾಮರ್ಥ್ಯದ ಮೂಲಕ ನಿಮ್ಮನ್ನು ಗುರುತಿಸಲು ಈ ಜಗತ್ತು ಕಾಯುತ್ತಿದೆ ಎಂದರು.

ಎಂಟನೇ ವರ್ಷಕ್ಕೆ ಕಾಲಿಡುತ್ತಿರುವ ಶರಣಬಸವ ವಿಶ್ವವಿದ್ಯಾಲಯದ ಸಾಧನೆಯನ್ನು ಶ್ಲಾಘಿಸಿದ ಅವರು, ಇದು ಅತ್ಯಂತ ಹರೆಯ ವಿಶ್ವವಿದ್ಯಾಲಯವಾಗಿದ್ದರೂ ಉನ್ನತ ಶಿಕ್ಷಣದ ಮೂಲಕ ಹಾಗೂ ಮಹಿಳಾ ಸಬಲೀಕರಣದ ಬದ್ಧತೆಯ ಮೂಲಕ ಭರವಸೆ ಮತ್ತು ಪ್ರಗತಿಯ ದಾರಿದೀಪವಾಗಿ ನಿಂತಿದೆ ಎಂದು ಹೇಳಿದರು. ವಿಶ್ವವಿದ್ಯಾಲಯವು ಸಮಾನತೆ ಮತ್ತು ಸಾಮಾಜಿಕ ನ್ಯಾಯದ ಮೌಲ್ಯಗಳನ್ನು ನಿಜವಾಗಿಯೂ ಉದಾಹರಿಸಿದೆ. ವಿಶ್ವವಿದ್ಯಾನಿಲಯದಿಂದ ಉತ್ತೀರ್ಣರಾಗುತ್ತಿರುವ ಯುವ ಪದವೀಧರರು ತಮ್ಮ ಮುಂದಿನ ಹೆಜ್ಜೆಯಲ್ಲಿ ವ್ಯಕ್ತಿಯ ಯಶಸ್ಸಿನ ನಿಜವಾದ ಅಳತೆಯೆಂದರೆ ಹೊಂದಿಕೊಳ್ಳುವ, ಸೇವೆ ಮಾಡುವ ಮತ್ತು ಜಗತ್ತನ್ನು ಕಂಡುಕೊಂಡದ್ದಕ್ಕಿಂತ ಉತ್ತಮಗೊಳಿಸುವ ಸಾಮರ್ಥ್ಯ ಎಂಬುದನ್ನು ನೆನಪಿನಲ್ಲಿಡಬೇಕು ಎಂದು ಪ್ರೊ. ತ್ಯಾಗರಾಜ ಹೇಳಿದರು.

ಶ್ರೀ ಶರಣಬಸವೇಶ್ವರ ಸಂಸ್ಥಾನದ ಎಂಟನೇ ಪೀಠಾಧಿಪತಿ ಪೂಜ್ಯ ಡಾ. ಶರಣಬಸವಪ್ಪ ಅಪ್ಪಾಜಿ, ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಮುಖ್ಯಸ್ಥರಾದ ಡಾ. ದಾಕ್ಷಾಯಿಣಿ ಅವ್ವಾಜಿ, ಸಂಸ್ಥಾನದ ಒಂಬತ್ತನೇ ಪೀಠಾಧಿಪತಿ ಪೂಜ್ಯ ಚಿರಂಜೀವಿ ದೊಡ್ಡಪ್ಪ ಅಪ್ಪಾಜಿ ಅವರು ಘಟಿಕೋತ್ಸವದ ದಿವ್ಯ ಸಾನಿಧ್ಯ ವಹಿಸಿದರು. ಶರಣಬಸವ ವಿಶ್ವವಿದ್ಯಾಲಯದ ಉಪಕುಲಪತಿ ಪ್ರೊ.ಅನಿಲಕುಮಾರ್ ಬಿಡವೆ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ವಿವಿ ಕುಲಸಚಿವ ಡಾ. ಎಸ್. ಜಿ. ಡೊಳ್ಳೆಗೌಡರ್ ವಂದಿಸಿದರು.

ಈ ಸಂದರ್ಭದಲ್ಲಿ ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಬಸವರಾಜ ದೇಶಮುಖ, ವಿವಿಯ ನಿರ್ದೇಶಕರಾದ ಪ್ರೊ. ವಿ.ಡಿ.ಮೈತ್ರಿ, ಶ್ರೀ ಎನ್.ಎಸ್.ದೇವರಕಲ್, ಕುಲಸಚಿವ (ಮೌಲ್ಯಮಾಪನ) ಡಾ. ಎಸ್.ಎಚ್.ಹೊನ್ನಳ್ಳಿ, ಡೀನ್ ಡಾ. ಲಕ್ಷ್ಮೀ ಪಾಟೀಲ ಮಾಕಾ, ಹಣಕಾಸು ಅಧಿಕಾರಿ ಪ್ರೊ. ಕಿರಣ ಮಾಕಾ ಸೇರಿದಂತೆ ಆಡಳಿತ ಮಂಡಳಿಯ ಸದಸ್ಯರು, ಅಕಾಡೆಮಿಕ್ ಕೌನ್ಸಿಲ್ ಸದಸ್ಯರು ಮತ್ತು ಎಲ್ಲಾ ವಿಭಾಗಗಳ ಡೀನ್‌ರು, ಇತರ ಪ್ರಮುಖರು ಹಾಗೂ ಗಣ್ಯರು ಘಟಿಕೋತ್ಸವದಲ್ಲಿ ಭಾಗವಹಿಸಿದರು.

ಶರಣಬಸವ ವಿವಿಯಲ್ಲಿ 6ನೇ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಮೂವರಿಗೆ ಸಾಧಕರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು.

> ಶ್ರೀ ಶರಣಬಸವೇಶ್ವರ ಸಂಸ್ಥಾನದ ಎಂಟನೇ ಪೀಠಾಧಿಪತಿ ಡಾ. ಶರಣಬಸವಪ್ಪಾ ಅಪ್ಪ ಅವರೇ ಕಾರಣ. ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಿ, ಕಲ್ಯಾಣ ಕರ್ನಾಟಕ ಭಾಗದಲ್ಲಿ ಶೈಕ್ಷಣಿಕ ಕ್ರಾಂತಿ ಮೂಡಿಸಿದ್ದಾರೆ. ಮೊಟ್ಟಮೊದಲಿಗೆ ಮಹಿಳಾ ಶಿಕ್ಷಣ ಪ್ರಾರಂಭಿಸಿ ಶಿಕ್ಷಣದ ಬಗ್ಗೆ ಜಾಗೃತಿ ಮೂಡಿಸಿದ್ದಾರೆ. ಅನ್ನದಾಸೋಹ ಹಾಗೂ ಅಕ್ಷರ ದಾಸೋಹದ ಮೂಲಕ ಸಾವಿರಾರು ವಿದ್ಯಾರ್ಥಿಗಳ ಬಾಳಿಗ ಬೆಳಕಾಗಿದ್ದಾರೆ.
>
> -ಶರಣಬಸಪ್ಪ ದರ್ಶನಾಪುರ, ಸಚಿವ

> ಶರಣಬಸವ ವಿಶ್ವವಿದ್ಯಾಲಯವು ಕಲ್ಯಾಣ ಕರ್ನಾಟಕ ಭಾಗದಲ್ಲಿ ಆರಂಭಿಸಿದ ಮೊದಲ ಖಾಸಗಿ ವಿಶ್ವವಿದ್ಯಾಲಯವಾಗಿದೆ. ಕಳೆದ ಏಳು ವರ್ಷದಲ್ಲಿ ಗುಣಮಟ್ಟದ ಶಿಕ್ಷಣ ಒದಗಿಸುವ ಮೂಲಕ ಅನೇಕ ವಿದ್ಯಾರ್ಥಿಗಳ ಬಾಳಿಗೆ ಬೆಳಕಾಗಿದೆ. ಈ ಭಾಗದಲ್ಲಿ ಶೈಕ್ಷಣಿಕ ಪ್ರಗತಿ ಸಾಗಿಸಿ, ಸಾವಿರಾರು ವಿದ್ಯಾರ್ಥಿಗಳಿಗೆ ಉದ್ಯೋಗ ಕಲ್ಪಿಸುವ ಬೃಹತ್ ಸಂಸ್ಥೆಯಾಗಿ ಬೆಳೆದು ನಿಂತಿದೆ. ರಾಜ್ಯ, ದೇಶ ಹಾಗೂ ವಿದೇಶದ ಹಲವಾರು ವಿಶ್ವವಿದ್ಯಾಲಯಗಳ ಜತೆಗೆ ಒಡಂಬಡಿಕೆ ಮಾಡಿಕೊಂಡು ಅತ್ಯುತ್ತಮ ಶಿಕ್ಷಣ ಒದಗಿಸವಲ್ಲಿ ಮುಖ್ಯ ಪಾತ್ರವಹಿಸಿದೆ.
>
> - ಪ್ರೊ.ಅನಿಲಕುಮಾರ್ ಬಿಡವೆ, ಉಪ ಕುಲಪತಿ, ಶರಣಬಸವ ವಿವಿ

### 39 ವಿದ್ಯಾರ್ಥಿಗಳಿಗೆ ಚಿನ್ನ ಪದಕ, 7 ಮಂದಿಗೆ ಪಿಎಚ್.ಡಿ ಪ್ರದಾನ

ಪದವಿ ಹಾಗೂ ಸ್ನಾತಕೋತ್ತರ ಪದವಿಯಲ್ಲಿ ಮೊದಲ ಸ್ಥಾನ ಪಡೆದ 39 ವಿದ್ಯಾರ್ಥಿಗಳಿಗೆ ಚಿನ್ನದ ಪದಕ ವಿತರಣೆ ಮಾಡಲಾಯಿತು. ಶೈಕ್ಷಣಿಕ ಸಾಧನೆಗೈದ ಒಂಬತ್ತು ವಿದ್ಯಾರ್ಥಿಗಳಿಗೆ ವಿವಿಧ ಗಣ್ಯ ವ್ಯಕ್ತಿಗಳ ಹೆಸರಲ್ಲಿ ನಗದು ಪುರಸ್ಕಾರ ನೀಡಿ ಪ್ರೋತ್ಸಾಹಿಸಲಾಯಿತು. ಜತೆಗೆ ಏಳು ವಿದ್ಯಾರ್ಥಿಗಳಿಗೆ ಪಿಎಚ್.ಡಿ ಪದವಿ ನೀಡಿ ಗೌರವಿಸಲಲಾಯಿತು. ಘಟಿಕೋತ್ಸವದಲ್ಲಿ ಒಟ್ಟು 174 ವಿದ್ಯಾರ್ಥಿಗಳು ರ್‍ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ವಿತರಣೆ ಮಾಡಲಾಯಿತು.

### ಸಾಧಕರಿಗೆ ಗೌರವ ಡಾಕ್ಟರೇಟ್ ಪ್ರದಾನ

ಶರಣಬಸವ ವಿವಿಯ ಆರನೇ ಘಟಿಕೋತ್ಸವದಲ್ಲಿ ವಿಶ್ವವಿದ್ಯಾಲಯದ ಕುಲಾಧಿಪತಿ ಪೂಜ್ಯ ಡಾ. ಶರಣಬಸವಪ್ಪ ಅಪ್ಪಾಜಿ ಅವರು, ಸೇಡಂನ ಶ್ರೀಕೊತ್ತಲ ಬಸವೇಶ್ವರ ದೇವಸ್ಥಾನದ ಪೀಠಾಧಿಪತಿ ಹಾಗೂ ಶ್ರೀ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿಯ ಅಧ್ಯಕ್ಷರಾದ ಶ್ರೀಸದಾಶಿವ ಸ್ವಾಮೀಜಿ, ಬೆಂಗಳೂರಿನ ಇಸ್ರೋದ ಯು.ಆರ್.ರಾವ್ ಸ್ಯಾಟಲೈಟ್ ಸೆಂಟರ್ ನಲ್ಲಿ ವಿಜ್ಞಾನಿ ಹಾಗೂ ಇಂಟಿಗ್ರೇಷನ್ ಮತ್ತು ಚೆಕ್ ಔಟ್ ವಲಯದ ಉಪನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿರುವ ರಾಮನಗೌಡ ವಿ.ನಾಡಗೌಡ, ಶ್ರೀ ಸಿದ್ದಲಿಂಗೇಶ್ವರ ಬುಕ್ ಹೌಸ್ ಪ್ರಕಾಶನ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಬಸವರಾಜ ಕೊನೆಕ ಅವರಿಗೆ ಗೌರವ ಡಾಕ್ಟರೇಟ್ ನೀಡಿ ಗೌರವಿಸಲಾಯಿತು.

## 371(ಜೆ) ಜಾರಿಯಿಂದ ಪ್ರದೇಶದಲ್ಲಿ ಅಭಿವೃದ್ಧಿಯ ಕ್ರಾಂತಿ

**ಕಲಬುರಗಿ:** ಸಂವಿಧಾನಕ್ಕೆ ತಿದ್ದುಪಡಿ ತಂದು ಕಲಂ 371(ಜೆ) ಕಾಯಿದೆ ಜಾರಿ ಪರಿಣಾಮ ಕಲ್ಯಾಣ ಕರ್ನಾಟಕ ಭಾಗದಲ್ಲಿ ಶೈಕ್ಷಣಿಕ ಹಾಗೂ ಆರೋಗ್ಯ ಕ್ಷೇತ್ರದಲ್ಲಿ ಗಣನೀಯವಾಗಿ ಅಭಿವೃದ್ಧಿಯ ಕ್ರಾಂತಿಯಾಗುತ್ತಿದೆ ಎಂದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮತ್ತು ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ನೂತನ ಜಯದೇವ ಆಸ್ಪತ್ರೆಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಲಂ 371 (ಜೆ) ಜಾರಿಗೆ ಬಂದ ಮೇಲೆ ಲಕ್ಷಾಂತರ ಜನ ನಿರುದ್ಯೋಗಿ ಯುವಕರಿಗೆ ಉದ್ಯೋಗ ಸಿಕ್ಕಿವೆ. ಉನ್ನತ ಶಿಕ್ಷಣ ಪಡೆಯುವವರ ಸಂಖ್ಯೆ ಹೆಚ್ಚಾಗಿದೆ. ನೇಮಕಾತಿ ಪ್ರಕ್ರಿಯೆಯಲ್ಲಿ ಕೆಲವು ಲೋಪದೋಷಗಳಿದ್ದು, ಅದನ್ನು ಸರಿಪಡಿಸುವ ಪ್ರಮಾಣಿಕ ಪ್ರಯತ್ನ ಮಾಡಲಾಗುತ್ತಿದೆ ಎಂದ ಅವರು, ಈ ಭಾಗಕ್ಕೆ ಅನ್ಯಾಯವಾಗಲು ತಾವು ಮತ್ತು ಸಚಿವ ಡಾ.ಶರಣಪ್ರಕಾಶ ಪಾಟೀಲ ಬಿಡುವುದಿಲ್ಲ ಎಂದರು.

2016ರಲ್ಲಿ ನಮ್ಮ ಸರಕಾರದ ಅವಧಿಯಲ್ಲಿಯೇ ಸ್ಥಾಪನೆಯಾದ ಜಯದೇವ ಆಸ್ಪತ್ರೆಯಲ್ಲಿ ಇದೂವರೆಗೆ ಸುಮಾರು 15 ಲಕ್ಷ ವಿವಿಧ ರೀತಿಯ ಸೇವೆ ಪಡೆದಿದ್ದು, ಹೆಮ್ಮೆಯ ವಿಷಯವಾಗಿದೆ. ಈ ಅಂಕಿ ಸಂಖ್ಯೆಗಳೇ ಪ್ರದೇಶಕ್ಕೆ ಆಸ್ಪತ್ರೆಯ ಅವಶ್ಯಕತೆ ಎಷ್ಟಿತ್ತು ಎಂಬುದನ್ನು ವಿವರಿಸುತ್ತದೆ. ನಮ್ಮ ಸರಕಾರ ಬಡವರ, ಅಭಿವೃದ್ಧಿ ಪರ ಸರಕಾರವಾಗಿದೆ. ನಾಡಿನ ಬಡ ಜನರ ಕಣ್ಣೀರೊರೆಸುವ ಸರಕಾರ ನಮ್ಮದಾಗಿದೆ ಎಂದರು.

ಸಚಿವ ಡಾ.ಶರಣ ಪ್ರಕಾಶ ಪಾಟೀಲ ಅವರ ವಿಶೇಷ ಕಾಳಜಿಯಿಂದ ಜಯದೇವ ಆಸ್ಪತ್ರೆ ಲೋಕಾರ್ಪಣೆಗೆ ಸಜ್ಜುಗೊಂಡಿದೆ. ಕಲಬುರಗಿಯನ್ನು ಕಲಬುರಗಿ ಮೆಡಿಕಲ್ ಹಬ್ ಆಗಿ ಪರಿವರ್ತಿಸುವ ನಮ್ಮ ಕಾರ್ಯ ನಿರಂತರವಾಗಿ ನಡೆಯಲಿದೆ ಎಂದ ಅವರು, ಕಲಂ 371 (ಜೆ) ಜಾರಿಗೆ ಬಂದು ಒಂದು ದಶಕಗಳು ಸಂದ ಹಿನ್ನೆಲೆಯಲ್ಲಿ ಜಯದೇವ ಆಸ್ಪತ್ರೆಯನ್ನು 371 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಪರಿವರ್ತಿಸಲಾಗಿದೆ. ಅದು ಸಿಎಂ ಅವರಿಂದ ಲೋಕಾರ್ಪಣೆಗೊಳ್ಳಲಿದೆ ಎಂದು ಸಚಿವರು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಖಾತೆ ಸಚಿವ ಡಾ.ಶರಣಪ್ರಕಾಶ ಪಾಟೀಲ, ಶಾಸಕ ಎಂ.ವೈ.ಪಾಟೀಲ, ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಜರ್ ಆಲಂ ಖಾನ್, ಡಿ.ಸಿ. ಬಿ.ಫೌಜಿಯಾ ತರನ್ನುಮ್, ಕಲಬುರಗಿ ನಗರ ಪೊಲೀಸ್ ಆಯುಕ್ತ ಡಾ.ಎಸ್.ಡಿ.ಶರಣಪ್ಪ, ಎಸ್.ಪಿ.ಅಡ್ಡೂರು ಶ್ರೀನಿವಾಸಲು, ಜಿಲ್ಲಾ ಪಂಚಾಯತ ಸಿ.ಇ.ಓ ಭಂವರ್ ಸಿಂಗ್ ಮೀನಾ, ಡಿ.ಸಿ.ಎಫ್ ಸುಮಿತ್ ಪಾಟೀಲ, ಸಹಾಯಕ ಆಯುಕ್ತೆ ಸಾಹಿತ್ಯ, ಮಹಾನಗರ ಪಾಲಿಕೆ ಪ್ರಭಾರಿ ಆಯುಕ್ತ ಅವಿನಾಶ ಶಿಂಧೆ, ಕೆ.ಕೆ.ಆರ್.ಟಿ.ಸಿ ಎಂ.ಡಿ. ಎಂ.ರಾಚಪ್ಪ, ಕಲಬುರಗಿಯ ಜಯದೇವ ಶಾಖಾ ಆಸ್ಪತ್ರೆಯ ಪ್ರಭಾರಿ ಅಧೀಕ್ಷಕ ಡಾ.ವಿರೇಶ ಪಾಟೀಲ, ಸಮನ್ವಯಾಧಿಕಾರಿ ಸಂತೋಷ್ ಇದ್ದರು.

ಪತ್ರಿಕಾಗೋಷ್ಠಿಯಲ್ಲಿ ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಿದರು.

### ಕ್ಯಾಬಿನೆಟ್ ತೀರ್ಮಾನ ಜಾರಿಗೆ ಸರಕಾರ ಬದ್ಧ

ಕಲಬುರಗಿಯಲ್ಲಿ ಕಳೆದ ಸೆ.17 ರಂದು ಜರುಗಿದ ಸಚಿವ ಸಂಪುಟ ಸಭೆಯಲ್ಲಿ ಪ್ರದೇಶಕ್ಕೆ ಸಂಬಂಧಿಸಿದ ಹಲವು ತೀರ್ಮಾನಗಳನ್ನು ತೆಗೆದುಕೊಂಡಿದ್ದು, ಅವುಗಳನ್ನು ನೂತನ ವರ್ಷಾರಂಭದಿಂದ ಹಂತ-ಹಂತವಾಗಿ ಜಾರಿಗೆ ತರಲು ಸರಕಾರ ಬದ್ಧವಾಗಿದೆ. ಜಿಲ್ಲೆಗೆ ಅನುದಾನ ತರುವಲ್ಲಿ ಶಕ್ತಿ ಮೀರಿ ಪ್ರಯತ್ನಿಸಲಾಗುವುದು ಎಂದು ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಸಚಿವ ಪ್ರಿಯಾಂಕ್ ಖರ್ಗೆ ಉತ್ತರಿಸುತ್ತಾ ಹೇಳಿದರು.

### ತೊಗರಿ ಪರಿಹಾರಕ್ಕೆ ಸಿಎಂ ಬಳಿ ನಿಯೋಗ

ಕಲಬುರಗಿ ಸೇರಿ ಅಕ್ಕಪಕ್ಕದ ಜಿಲ್ಲೆಗಳಲ್ಲಿ ಹವಾಮಾನ ವೈಪರೀತ್ಯದಿಂದ ತೊಗರಿ ಬೆಳೆ ನಾಶವಾಗಿದೆ. ಕಲಬುರಗಿ ಜಿಲ್ಲೆಯಲ್ಲಿ ವಿಚಿತ್ರ ರೋಗ ಕಂಡು ಹಿಡಿಯಲು ಈಗಾಗಲೆ ರಾಯಚೂರು ಕೃಷಿ ವಿ.ವಿ. ತಂಡ ಮತ್ತು ಕಾನ್ಪುರದ ಇಂಡಿಯನ್ ಇನ್ಸಟಿಟ್ಯೂಟ್ ಆಫ್ ಪಲ್ಸಸ್ ರಿಸರ್ಚ್ ಸಂಸ್ಥೆಯ ವಿಜ್ಞಾನಿಗಳ ತಂಡ ಪ್ರತ್ಯೇಕವಾಗಿ ಅಧ್ಯಯನ ಮಾಡಿದೆ. ಅಧ್ಯಯನದ ವರದಿ ಮತ್ತು ಬೆಳೆ ನಾಶದ ನಿಖರ ದತ್ತಾಂಶ ಲಭ್ಯವಾದ ಕೂಡಲೆ ಸಿ.ಎಂ. ಅವರಿಗೆ ಬಳಿಗೆ ಜಿಲ್ಲೆಯ ಜನಪ್ರತಿನಿಧಿಗಳ ನಿಯೋಗ ತೆಗೆದುಕೊಂಡು ಹೋಗಿ ರೈತರಿಗೆ ಪರಿಹಾರ ನೀಡಲು ಒತ್ತಾಯಿಸಲಾಗುವುದು. ಇನ್ನು, ಬೆಳೆ ವಿಮೆ ಯೋಜನೆಯಡಿ ನೊಂದಾಯಿಸಿದ ರೈತರಿಗೆ 77 ಕೋಟಿ ರು. ಮಧ್ಯಂತರ ಪರಿಹಾರ ಬಿಡುಗಡೆಗೆ ಈಗಾಗಲೆ ವಿಮಾ ಸಂಸ್ಥೆಗೆ ನಿರ್ದೇಶನ ನೀಡಲಾಗಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

## ಸರಕಾರಿ ಜಿಲ್ಲಾಸ್ಪತ್ರೆಯನ್ನು ಆರೋಗ್ಯ ಇಲಾಖೆಗೆ ಹಿಂದಿರುಗಿಸಲು ಒತ್ತಾಯ

**ಕಲಬುರಗಿ:** ಕಲಬುರಗಿ, ಬೀದರ್, ರಾಯಚೂರು ಸೇರಿದಂತೆ ರಾಜ್ಯಾದ್ಯಂತ ಸರಕಾರಿ ಮೆಡಿಕಲ್ ಕಾಲೇಜುಗಳ ಮುಷ್ಠಿಯಿಂದ ಬಡವರ ಹಿತಾಸಕ್ತಿ ಕಾಪಾಡಲು ಸರಕಾರಿ ಜಿಲ್ಲಾಸ್ಪತ್ರೆಗಳನ್ನು ಸ್ವತಂತ್ರಗೊಳಿಸಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಹಿಂದಿರುಗಿಸಬೇಕು ಎಂದು ಜಾಗೃತ ಜನ ವೇದಿಕೆ ಸಂಸ್ಥಾಪಕ ರಾಜ್ಯಾಧ್ಯಕ್ಷ ಮಹೇಶ್ ಕುಲಕರ್ಣಿ ಸಿಎಂ ಅವರನ್ನು ಒತ್ತಾಯಿಸಿದ್ದಾರೆ.

ಇಲ್ಲಿನ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಕಲಬುರಗಿ, ಬೀದರ್, ರಾಯಚೂರು ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸರಕಾರಿ ಮೆಡಿಕಲ್ ಕಾಲೇಜು ಸ್ಥಾಪನೆಯಾದ ಬೆನ್ನಲ್ಲೇ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸರ್ಕಾರಿ ಜಿಲ್ಲಾಸ್ಪತ್ರೆಗಳನ್ನು ವೈದ್ಯಕೀಯ ಶಿಕ್ಷಣ ಇಲಾಖೆ ತನ್ನ ವ್ಯಾಪ್ತಿಗೆ ಒಳಪಡಿಸಿಕೊಂಡಿದೆ. ನಿಯಮದ ಅನುಸಾರ ಕಾಲೇಜು ಸ್ಥಾಪನೆಯ ಐದನೇ ವರ್ಷದ ಬಳಿಕ ಸರಕಾರಿ ಜಿಲ್ಲಾಸ್ಪತ್ರೆಗಳನ್ನು ಮುಕ್ತಗೊಳಿಸಬೇಕು. ಆದರೆ, ಮುಕ್ತಗೊಳಿಸದ ಕಾರಣಕ್ಕಾಗಿ ಬಡವರು ಹಾಗೂ ಮಧ್ಯಮ ವರ್ಗದ ಜನರಿಗೆ ಪ್ರಾಥಮಿಕ ಹಾಗೂ ಎರಡನೇ ಹಂತದ ತುರ್ತು ಚಿಕಿತ್ಸೆಗಳು ಲಭಿಸದಂತಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು. ಜಿಲ್ಲಾಸ್ಪತ್ರೆಗಳನ್ನು ತನ್ನ ಹಿಡಿತದಲ್ಲಿ ಇಟ್ಟುಕೊಂಡಿದೆ. ಇದರ ಜೊತೆಗೆ ಆರೋಗ್ಯ ಇಲಾಖೆಯ ಜಿಲ್ಲಾಸ್ಪತ್ರೆಯ ವೈದ್ಯರು, ವೈದ್ಯಕೀಯೇತರ ಸಿಬ್ಬಂದಿಯ ವೇತನವನ್ನು ಸಹ ವೈದ್ಯಕೀಯ ಶಿಕ್ಷಣ ಇಲಾಖೆ ನೀಡುವ ಪದ್ಧತಿ ರೂಢಿಗೆ ತಂದಿರುವುದರಿಂದ ವೈದ್ಯರು ಮುಜುಗರ ಅನುಭವಿಸುವಂತಾಗಿದೆ ಎಂದು ಟೀಕಿಸಿದರು.

ವೇದಿಕೆಯ ರಾಜ್ಯ ಉಪಾಧ್ಯಕ್ಷ ಮಲ್ಲಿಕಾರ್ಜುನ ಗೌರ್ ಹಾಗೂ ರಾಜ್ಯ ಪ್ರಧಾನ ಕಾರ್ಯದರ್ಶಿ ಅಂಬಾಜಿ ಮೇಟಿ ಇದ್ದರು.

### ಕಾರ್ಪಸ್ ಫಂಡ್ ಸ್ಥಾಪಿಸಿ

ಕಲ್ಯಾಣ ಕರ್ನಾಟಕ ಭಾಗದಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆಯ ಮೆಡಿಕಲ್ ಕಾಲೇಜುಗಳ ಆಸ್ಪತ್ರೆಗಳು ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವ್ಯಾಪ್ತಿಯ ಸರ್ಕಾರಿ ಜಿಲ್ಲಾಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುವ ಬಿಪಿಎಲ್ ಕಾರ್ಡುದಾರರಿಗೆ ಸಂಪೂರ್ಣ ಉಚಿತವಾಗಿ ಚಿಕಿತ್ಸೆ-ಶಸ್ತ್ರಚಿಕಿತ್ಸೆ ಕೈಗೊಳ್ಳಲು ಅನುಕೂಲವಾಗುವಂತೆ ಜಯದೇವ ಆಸ್ಪತ್ರೆ ಮಾದರಿಯಲ್ಲಿ ತಲಾ 5 ಕೋಟಿ ರು. ಮೊತ್ತದ ಕಾರ್ಪಸ್ ಫಂಡ್ ಸ್ಥಾಪಿಸಬೇಕು. ಈ ನಿಧಿಗೆ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಹಣ ಒದಗಿಸಬೇಕು ಎಂದು ಅವರು ಆಗ್ರಹಿಸಿದರು.

## ದಲಿತ ಸಮಿತಿಯಿಂದ ನಾಳೆ ಆಳಂದ ಬಂದಗೆ ಕರೆ

### ಡಾ.ಅಂಬೇಡ್ಕರ ಅವರನ್ನು ಹೀಯಾಳಿಸಿದ ಅಮಿತ ಶಾ ವಜಾಕ್ಕೆ ಆಗ್ರಹ

**ಆಳಂದ:** ದಲಿತ ಸಮನ್ವಯ ಸಮಿತಿ ವತಿಯಿಂದ ಕೇಂದ್ರ ಗೃಹ ಸಚಿವ ಅಮಿತ ಶಾರನ್ನು ವಜಾಗೊಳಿಸಲು ಆಗ್ರಹಿಸಿ ಡಿ.23 ರಂದು ಸಂಪೂರ್ಣ ಬಂದ ಕರೆ ನೀಡಲಾಗಿದೆ ಎಂದು ಸಮಿತಿಯ ಅಧ್ಯಕ್ಷ ದಯಾನಂದ ಶೇರಿಕರ ಅವರು ತಿಳಿಸಿದರು.

ಪಟ್ಟಣದ ಬುದ್ಧ ವಿಹಾರದಲ್ಲಿ ಆಳಂದ ಬಂದ ಕರೆ ಪೂರ್ವಭಾವಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸರಕಾರ ರಚನೆ ಮಾಡುವ ವ್ಯಕ್ತಿಗಳೇ ಸಂವಿಧಾನ ಶಿಲ್ಪಿ ಡಾ. ಬಾಬಾ ಅಂಬೇಡ್ಕರ ಅವರ ಬಗ್ಗೆ ಹಗುರ ಮಾತನಾಡುವುದನ್ನು ನೋಡಿದರೆ ಇವರ ಭಾವನೆಗಳು ಎತ್ತಚಳಿಸುತ್ತಿವೆ ಎಂದು ಮೇಲನ್ನೋಟಕ್ಕೆ ಕಂಡು ಬರುತ್ತಿದೆ. ಡಿ.23 ರಂದು ಆಳಂದ ಬಂದ ಕರೆ ಕೊಡಬೇಕು ಅಥವಾ ಬೇಡ ವಿಷಯ ಕುರಿತು ಪೂರ್ವ ಭಾವಿ ಸಭೆಯಲ್ಲಿ ಎಲ್ಲಾ ಮುಖಂಡರ ಸಲಹೆ ಸೂಚನೆ ಪಡೆದು ಶಾಂತಿಯುತವಾಗಿ ಪಟ್ಟಣದ ಹೋಟೆಲ್ ಮಾಲೀಕರು, ಕಿರಾಣಿ ಅಂಗಡಿ, ಎಲ್ಲಾ ವ್ಯಾಪಾರಸ್ಥರು, ಆಟೋ ಚಾಲಕರ, ಲಾರಿ ಚಾಲಕರ ಸಂಘಟನೆಯ ಮುಖಂಡರ ಬೆಂಬಲ ಪಡೆದು ಇಡೀ ದಿವಸ ಆಳಂದ ಪಟ್ಟಣ ಸಂಪೂರ್ಣ ಬಂದ ಆಚರಿಸಲಾಗುವುದು. ಇದಕ್ಕೆ ಎಲ್ಲರ ಸಹಕಾರ ಅಗತ್ಯ, ಪೊಲೀಸ ಇಲಾಖೆ, ತಹಶೀಲ್ದಾರ, ಸಂಬಂಧ ಪಟ್ಟ ಅಧಿಕಾರಿಗಳಿಗೆ ಲಿಖಿತ ಮೂಲಕ ಬಂದ ಕರೆಗೆ ಮನವಿ ಪತ್ರ ನೀಡಲಾಗುವುದು ಎಂದರು.

ಅಂದು ತಾಲೂಕಿನ ಕಂದಾಯ ವ್ಯಾಪ್ತಿಗಳ ನಿಂಬರ್ಗಾ, ಮಾದನ ಹಿಪ್ಪರಗಾ, ನರೋಣಾ, ಖಜೂರಿ, ಆಳಂದ ಎಲ್ಲಾ ಸಮಾಜದ ಭಾಂದವರು ಹೆಚ್ಚಿನ ಸಂಖ್ಯೆಯಲ್ಲಿ ಪಟ್ಟಣಕ್ಕೆ ಆಗಮಿಸಿ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ನಮ್ಮ ಪ್ರತಿಭಟನೆ ಅಮಿತ ಶಾ ವಜಾಗೊಳಿಸಿ , ಶಾಂತಿಯುತವಾಗಿ ನಡೆಯಲಿದೆ. ಪೊಲೀಸ ಇಲಾಖೆ ಹೆಚ್ಚಿನ ನಿಗಾವಹಿಸಿ ಬಂದ ಮತ್ತು ಪ್ರತಿಭಟನೆಗೆ ಹಿನ್ನಡೆಗಾಗಿ ಯಾವುದೇ ಅಹಿತಕರ ಘಟನೆ ನಡೆದರೆ ಕೂಲಕೂಷವಾಗಿ ಪರಿಶೀಲಿಸಿ ಅಂತಹವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಹೇಳಿದ್ದಾರೆ.

ಪೂರ್ವ ಬಾವಿ ಸಭೆಯಲ್ಲಿ ಪುರಸಭೆ ಸದಸ್ಯ ಲಕ್ಷ್ಮಣ ನಡಗೇರಿ ಮತ್ತು ಆನಂದ ಗಾಯಕವಾಡ, ಮಹಾದೇವಪ್ಪ ಮೋಘಾ, ಧರ್ಮಾ ಬಂಗರಗಾ, ಬಾಬುರಾವ ಸುಳ್ಳದ, ದಿಲೀಪ ಕ್ಷೀರಸಾಗರ, ಪಪ್ಪು ತೋಳೆ, ಚಂದ್ರಕಾಂತ ಜಂಗಲೇ, ಸತೀಶ ಸೀರ, ಲಕ್ಷ್ಮಣ ನಡಗೇರಿ, ಪ್ರವೀಣ ಮೊದಲೆ, ಕಿಟ್ಟಿ ಸಾಲೇಗಾಂವ, ಬಾಬುರಾವ ಅರುಣೋದಯ, ಮಲ್ಲಿಕಾರ್ಜುನ ಬೋಳಣಿ, ಶಶಿಕಾಂತ , ಜಯಕಾಂತ ವಾಗ್ಮರೆ ಸೇರಿದಂತೆ ಎಲ್ಲಾ ದಲಿತ ಸೇನೆ ಮುಖಂಡರು ಸಭೆಯಲ್ಲಿ ಉಪಸ್ಥಿತರಿದ್ದರು.

ಪಟ್ಟಣದ ಬುದ್ಧ ವಿಹಾರದಲ್ಲಿ ಆಳಂದ ಬಂದ ಕರೆ ಪೂರ್ವಭಾವಿ ಸಭೆಯಲ್ಲಿ ದಯಾನಂದ ಶೇರಿಕರ ಮಾತನಾಡಿದರು.

## ಅಕ್ರಮ ಮದ್ಯ ಮಾರಾಟ: ನಾಲ್ವರ ಬಂಧನ

ಕಲಬುರಗಿ: ನಗರದ ನೂರಾನಿ ಮೊಹಲ್ಲಾ ಚೌಕ್ ಹತ್ತಿರದ ಮನೆಯ ಮುಂದಿನ ರಸ್ತೆಯ ಪಕ್ಕದಲ್ಲಿ ಮತ್ತು ರಾಮಜೀ ನಗರದ ಮಜೀದ್ ಹತ್ತಿರದ ಸಾರ್ವಜನಿಕ ರಸ್ತೆ ಪಕ್ಕದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡಲಾಗುತ್ತಿದೆ ಎಂಬ ಮಾಹಿತಿ ಮೇಲೆ ರೋಜಾ ಪೊಲೀಸ್ ಠಾಣೆ ಎಎಸ್ಐಗಳಾದ ಖಾಸಿಂ ಅಲಿ, ಗೌಸ್ ಪಾಶಾ ಮತ್ತು ಸಿಬ್ಬಂದಿ ದಾಳಿ ನಡೆಸಿ ನಾಲ್ವರನ್ನು ಬಂಧಿಸಿದ್ದಾರೆ. ನೂರಾನಿ ಮೊಹಲ್ಲಾ ಚೌಕ್ ಹತ್ತಿರದ ಮನೆಯ ಮುಂದಿನ ರಸ್ತೆಯಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದ ರಾಮಜೀ ನಗರದ ಶ್ರೀಧರ್ ರಾಜನಾಳ (35) ಮತ್ತು ಶರಣಪ್ಪ ಬಿಲಗುಂದಿ (34) ಎಂಬುವವರನ್ನು ಬಂಧಿಸಿ 960 ರು. ಮೌಲ್ಯದ ಮದ್ಯ ಮತ್ತು 1250 ರು.ನಗದು, ರಾಮಜೀ ನಗರದ ಮಜೀದ್ ಹತ್ತಿರದ ಸಾರ್ವಜನಿಕ ರಸ್ತೆ ಪಕ್ಕದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದ ಗಣೇಶ ನಗರ ಹೌಸಿಂಗ್ ಬೋರ್ಡ್ ಕಾಲೋನಿಯ ಮಲ್ಲಿ ಕಾರ್ಜುನ ರೇವಣಸಿದ್ದಪ್ಪ (36) ಮತ್ತು ರಾಮಜೀ ನಗರದ ಸಿದ್ದು ಹಣಮಂತಪ್ಪ ವಚ್ಚಾ (34) ಎಂಬುವವರನ್ನು ಬಂಧಿಸಿ 1 ಸಾವಿರ ರು.ಮೌಲ್ಯದ ಮದ್ಯ ಮತ್ತು 1050 ರು.ನಗದು ಜಪ್ತಿ ಮಾಡಿದ್ದಾರೆ. ಈ ಕುರಿತು ರೋಜಾ ಪೊಲೀಸ್ ಠಾಣೆಯಲ್ಲಿ ಪ್ರತ್ಯೇಕ ಪ್ರಕರಣ ದಾಖಲಾಗಿದೆ.

## ವಿವಿಧ ಯೋಗ ಸಂಸ್ಥೆಗಳಿಂದ ಅಂತಾರಾಷ್ಟ್ರೀಯ ಧ್ಯಾನ ದಿನಾಚರಣೆ

**ಕಲಬುರಗಿ:** ನಗರದ ಸಾರ್ವಜನಿಕ ಉದ್ಯಾನವನದಲ್ಲಿ ಅಂತಾರಾಷ್ಟ್ರೀಯ ಧ್ಯಾನ ದಿನಾಚರಣೆಯ ಅಂಗವಾಗಿ ಶನಿವಾರ ಜಿಲ್ಲೆಯ ವಿವಿಧ ಯೋಗ ಸಂಸ್ಥೆಗಳ ಸಂಯೋಗದಡಿಯಲ್ಲಿ ಶಾಂತಿ, ಸಮಾ ಧಾನ, ಸೌಹಾರ್ದತೆಯ ಶಕ್ತಿಯ ಜಾಗೃತಿಗಾಗಿ ಧ್ಯಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಪತಂಜಲಿ ಯೋಗ ಸಮಿತಿಯ ಭಾರತ ಸ್ವಾಭಿಮಾನದ ಜಿಲ್ಲಾಧ್ಯಕ್ಷ ಶಿವಾನಂದ ಸಾಲಿಮಠ ಧ್ಯಾನ ಮಾಡುವ ಮೂಲಕ ಚಾಲನೆ ನೀಡಿದರು. ಚಂದ್ರಕಾಂತ ಬಿರಾದಾರ, ಬ್ರಹ್ಮಕುಮಾರಿ ಕವಿತಾ ಅಕ್ಕ ಅವರು ಧ್ಯಾನದ ಕುರಿತು ವಿಶೇಷ ಉಪನ್ಯಾಸ ನೀಡಿದರು. ಪತಂಜಲಿ ಯೋಗ ಸಮಿತಿಯ ಅಧ್ಯಕ್ಷ ಹೆಚ್ ಸುಭಾಷ್ಚಂದ್ರ, ಯೋಗ ದೇಹಕ್ಕೆ ಧ್ಯಾನದ ಮಹತ್ವ ತಿಳಿಸಿಕೊಟ್ಟರು.

ಈ ಸಂದರ್ಭದಲ್ಲಿ ಶರಣಬಸಪ್ಪ ಹೀರಾ, ಸುದೀಪ್, ಪತಂಜಲಿ ಯೋಗ ಸಮಿತಿಯ ಕಲಬುರಗಿಯ ಯೋಗ ಶಿಕ್ಷಕರಾದ ಬಸವರಾಜ್ ಕಾಪಟೆ, ಕೆ.ಆರ್ ಕುಲಕರ್ಣಿ, ಚಂದ್ರಶೇಖರ್ ಗುರು ಗುಂಟಿ, ಶರಣು ಉದನೂರು, ಘನಶ್ಯಾಮ ಗುತ್ತೇ ದಾರ್, ಖೆಮ್ಸಿಂಗ್ ಪವಾರ್, ಬಸವರಾಜ ಬೆನ್ನೂರ್, ಶರಣಗೌಡ ಪಾಟೀಲ್, ಮಹಾನಂದ, ರಾಜೇಂದ್ರ ಕಿಣಗಿ, ಡಾ ಸಂಗಮೇಶ ಕೇರಿ, ತಿಪ್ಪಣ್ಣ ತುರಂಗ, ನಿಂಗ ಣ್ಣಾ ನಡುವಿಹಳ್ಳಿ, 200ಕ್ಕೂ ಹೆಚ್ಚು ಯೋಗ ಮುಖ್ಯ ಸ್ಥರು, ಯೋಗ ಶಿಕ್ಷಕರು, ಯೋಗ ಸಾಧಕರು ಹಾಗೂ ಸಾರ್ವಜನಿಕರು ಧ್ಯಾನ ಶಿಬಿರದಲ್ಲಿ ಪಾಲ್ಗೊಂಡಿದ್ದರು.

## ಪಂಚಗವ್ಯ, ಆರೋಗ್ಯ ವಿಚಾರ ಸಂಕಿರಣ ಫೆ.2ಕ್ಕೆ

**ಕಲಬುರಗಿ:** ಸೇಡಂ ತಾಲೂಕಿನ ನೀಲಹಳ್ಳಿ ಗ್ರಾಮದ ಪರಿಸರದಲ್ಲಿ ಜ.29ರಿಂದ ಫೆ.6ರ ವರೆಗೆ ನಡೆಯಲಿರುವ ಕೊತ್ತಲ ಸ್ವರ್ಣ ಜಯಂತಿ ಹಾಗೂ ಭಾರತೀಯ ಸಂಸ್ಕೃತಿ ಉತ್ಸವದ ಕಾರ್ಯಕ್ರಮದಲ್ಲಿ ಫೆ.2ರಂದು ಪಂಚಗವ್ಯ ಆಧಾರಿತ ಆರೋಗ್ಯ ಕುರಿತು ವಿಚಾರಗೋಷ್ಠಿ ಹಮ್ಮಿಕೊಳ್ಳಲಾಗಿದೆ ಎಂದು ಆಯೋಜಕ ಡಾ. ಅಲ್ಲಮಪ್ರಭು ಗುಡ್ಡ ಹೇಳಿದರು. ನಗರದ ಪತ್ರಿಕಾಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಚಾರಗೋಷ್ಠಿಯಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಖ್ಯಾತಿ ಹೊಂದಿರುವ ಪಂಚಗವ್ಯದ ಮೇಲೆ ನಾನಾ ರೀತಿಯ ಸಂಶೋಧನೆಗಳ ಪ್ರಸ್ತುತಿ ನಡೆಯಲಿದೆ. ಅಂದು ಬೆಳಗ್ಗೆ 9ರಿಂದ ವಿಶೇಷ ಉಪನ್ಯಾಸ ಆರಂಭವಾಗಲಿದೆ. ಉದ್ಘಾಟನೆ ಯನ್ನು ಕೋಲ್ಹಾಪುರದ ಶ್ರೀ ಅದೃಶ್ಯ ಕಾಡ ಸಿದ್ದೇಶ್ವರ ಸ್ವಾಮಿಗಳು ಕನೇರಿ ಮಠ ಮಾಡಲಿದ್ದಾರೆ. ಸಂಜೆ ಸಮಾರೋಪದಲ್ಲಿ ಸಂಸದ ಡಾ.ಸಿ.ಎನ್. ಮಂಜುನಾಥ ಪಾಲ್ಗೊಳ್ಳಲಿದ್ದಾರೆ. ಡಾ.ಹಿತೇಶ್ ಜಾನಿ, ಡಾ. ಡಿಪಿ ರಮೇಶ್ ಸೇರಿ ಹಲವರು ಉಪನ್ಯಾಸ ನೀಡಲಿದ್ದಾರೆ. ಆಯುರ್ವೇದದಲ್ಲಿ ಚಿಕಿತ್ಸಾ ಪದ್ಧತಿಯ ಬಗ್ಗೆ ಬಹಳಷ್ಟು ಮಾಹಿತಿ ಜನರಿಗೆ ತಿಳಿಸಬೇಕಾಗಿದೆ. ಆಯುರ್ವೇದ ಚಿಕಿತ್ಸಾ ಪದ್ಧತಿಯ ವೈದ್ಯರು ಆಮಂತ್ರಿಸುತ್ತಿದ್ದೇವೆ ಎಂದು ಹೇಳಿದರು. ಆಯುರ್ವೇದ ವೈದ್ಯರು ಮತ್ತು ವಿದ್ಯಾರ್ಥಿಗಳಿಗೆ ಪೋಸ್ಟರ್ ಸ್ಪರ್ಧೆ ಆಯೋಜಿಸಲಾಗಿದೆ. ವಿಜೇತರಿಗೆ ನಗದು ಬಹುಮಾನವಾಗಿ ಪಂಚಗವ್ಯ ಚಿಕಿತ್ಸಕ ಡಾ.ಡಿ.ಪಿ. ರಮೇಶ, ಸಂಯೋಜಕ ಶೇಷಾದ್ರಿ ಕುಲಕರ್ಣಿ, ಶ್ರೀಮಂತ ನವಲದಿ ಇದ್ದರು.

## ಹುಲಿ ಉಗುರು ಸಾಗಿಸುತ್ತಿದ್ದ ಇಬ್ಬರು ಸೆರೆ

**ಚಾಮರಾಜನಗರ:** ಹುಲಿ ಉಗುರು ಸಾಗಾಟ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಅರಣ್ಯ ಸಂಚಾರ ದಳದ ಪೊಲೀಸರು ಬಂಧಿಸಿರುವ ಘಟನೆ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲೂಕಿನಲ್ಲಿ ನಡೆದಿದೆ. ಮೈಸೂರು ಜಿಲ್ಲೆಯ ದೊಡ್ಡ ಹರವೆ ಗ್ರಾಮದ ನವೀನ್ ಕುಮಾರ್, ಹೆಚ್.ಡಿ ಕೋಟೆ ಆಲನಹಳ್ಳಿಯ ಕುಮಾರ ನಾಯಕ್ ಬಂಧಿತರು. ಬೈಕ್‌ನಲ್ಲಿ ಹುಲಿ ಉಗುರು ಸಾಗಿಸುತ್ತಿದ್ದ ಆರೋಪಿಗಳು, ಅರಣ್ಯ ಸಂಚಾರ ದಳದ ಪೊಲೀಸರ ಬಂಧಿಸಸಿದ್ದಾರೆ. ಬಂಧಿತರಿಂದ ನಾಲ್ಕು ಹುಲಿ ಉಗುರುಗಳನ್ನು ವಶಕ್ಕೆ ಪಡೆಯಲಾಗಿದೆ.

## ಇಲಿ ಪಾಷಾಣ ಸೇವಿಸಿ ಬಾಲಕಿ ಆತ್ಮಹತ್ಯೆ

**ಶಿವಮೊಗ್ಗ:** ಟಿವಿ ರಿಮೋಟ್ ಕೊಡಲಿಲ್ಲ ಎಂಬ ಕಾರಣಕ್ಕೆ ಬಾಲಕಿಯೊಬ್ಬಳು ಇಲಿ ಪಾಷಾಣ ಸೇವಿಸಿ ಆತ್ಮಹತ್ಯೆಗೆ ಶರಣಾದ ಘಟನೆ ಸೂಳೆಬೈಲಿನಲ್ಲಿ ನಡೆದಿದೆ. ಮೃತ ಬಾಲಕಿಯನ್ನು ಭದ್ರಾವತಿ ತಾಲೂಕಿನ ಕಲ್ಲಿಹಾಳ್ ಗ್ರಾಮದ ಸಹನಾ (16) ಎಂದು ಗುರುತಿಸಲಾಗಿದೆ. ಟಿವಿ ರಿಮೋಟ್‌ಗಾಗಿ ಮಕ್ಕಳ ನಡುವೆ ಗಲಾಟೆ ನಡೆದಿದೆ. ಈ ವೇಳೆ ಮೊಮ್ಮಗಳಿಗೆ ಅಜ್ಜಿ ಬೈದಿದ್ದಾರೆ. ಇದಕ್ಕಾಗಿ ಮನನೊಂದು ಬಾಲಕಿ ವಿಷ ಸೇವಿಸಿ ಆತ್ಮಹತ್ಯೆಗೆ ಶರಣಾಗಿದ್ದಾಳೆ ಎಂದು ತಿಳಿದು ಬಂದಿದೆ.

## ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ : ಬೀದರ್**

**ಸಮಸ್ಯೆಯೇನು..?**

- ಬೀದರ್ ಜಿಲ್ಲೆಯ ಹುಲಸೂರು ಸಮುದಾಯ ಆರೋಗ್ಯ ಕೇಂದ್ರದಲ್ಲಿ ಸರಿಯಾದ ಸಮಯಕ್ಕೆ ವೈದ್ಯರು ಹಾಜರಾಗದೆ ಇರುವುದು.
- **ಪರಿಹಾರ:** ಬೀದರ್ ಜಿಲ್ಲೆಯ ಹುಲಸೂರು ಸಮುದಾಯ ಆರೋಗ್ಯ ಕೇಂದ್ರಕ್ಕೆ ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಇಲ್ಲಿನ ವೈದ್ಯರು, ಸಿಬ್ಬಂದಿ ಜತೆ ಸಭೆಮಾಡಿ ರೋಗಿಗಳಿಗೆ ತೊಂದರೆ ಆಗದಂತೆ ಸೇವೆ, ಚಿಕಿತ್ಸೆ ಒದಗಿಸಲು ಸೂಚಿಸಲಾಗಿದೆ.

### ನನ್ನ ಪ್ರಾಣಕ್ಕೆ ಸಮಸ್ಯೆಯಾದರೆ ರಾಜ್ಯ ಸರಕಾರವೇ ಹೊಣೆ। ಸದನದೊಳಗೆ ಡಿ.ಕೆ ಮತ್ತು ಲಕ್ಷ್ಮೀ ಹೆಬ್ಬಾಳ್ಕರ್‌ರಿಂದ ಜೀವ ಬೆದರಿಕೆ

# ನ್ಯಾಯಾಂಗ ತನಿಖೆ ನಡೆಸಲು ಶಾಸಕ ಸಿ.ಟಿ. ರವಿ ಆಗ್ರಹ

**ಬೆಂಗಳೂರು:** ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ನಿಂದಿಸಿದ್ದೇನೆ ಎನ್ನುವ ಆರೋಪದಲ್ಲಿ ಬಂಧಿಸಿರುವುದು ಹಾಗೂ ನಂತರದಲ್ಲಿ ನಿಗೂಢವಾಗಿ ನಡೆದುಕೊಂಡಿರುವ ಪೊಲೀಸರ ನಡವಳಿಕೆ ಕುರಿತು ನ್ಯಾಯಾಂಗ ತನಿಖೆ ನಡೆಸಬೇಕು ಎಂದು ವಿಧಾನ ಪರಿಷತ್‌ನ ಬಿಜೆಪಿ ಸದಸ್ಯ ಸಿ.ಟಿ. ರವಿ ಆಗ್ರಹಿಸಿದರು.

ಬಿಜೆಪಿ ರಾಜ್ಯ ಘಟಕದ ಕಚೇರಿಯಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸದನದ ಒಳಗೆ ನಡೆದಿರುವ ಘಟನೆಗೆ ಸಂಬಂಧಿಸಿದಂತೆ ಸಭಾಪತಿಯವರ ಅನುಮತಿ ಇಲ್ಲದೇ ಪ್ರಕರಣ ದಾಖಲಿಸಿರುವುದು, ಬಂಧಿಸಿರುವುದು ಅಪರಾಧ. ಬಂಧನದ ಬಳಿಕ 15 ಗಂಟೆಗಳ ಕಾಲ ಪೊಲೀಸರು ನನ್ನನ್ನು ಸುತ್ತಾಡಿಸಿದರು, ಆ ಸಂದರ್ಭದಲ್ಲಿ ಅವರು ನಿಗೂಢವಾಗಿ ನಡೆದುಕೊಂಡರು. ಪ್ರಭಾವಿ ವ್ಯಕ್ತಿಗಳು ಪೊಲೀಸರಿಗೆ ಕರೆ ಮಾಡಿ ನಿರ್ದೇಶನ ನೀಡುತ್ತಿದ್ದರು. ನನ್ನ ಪ್ರಾಣಕ್ಕೆ ಅಪಾಯ ಉಂಟಾಗಬಹುದು ಎಂಬ ಅನುಮಾನ ಮೂಡಿತ್ತು ಎಂದರು.

ಪ್ರಕರಣದಲ್ಲಿ ಪೊಲೀಸರ ಕಾರ್ಯವೈಖರಿ ಕುರಿತು ನ್ಯಾಯಾಂಗ ತನಿಖೆ ನಡೆಸಬೇಕು. ಪೊಲೀಸರ ಮೇಲೆ ಪ್ರಭಾವ ಬೀರಿದ್ದ ವ್ಯಕ್ತಿಗಳನ್ನು ಪತ್ತೆಹಚ್ಚಿ, ಅವರ ವಿರುದ್ಧ ಕ್ರಮ ಜರುಗಿಸಬೇಕು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸರಕಾರದಿಂದ ಈ ರೀತಿಯ ವರ್ತನೆಯನ್ನು ನಾನು ನಿರೀಕ್ಷಿಸಿರಲಿಲ್ಲ. ಗೃಹ ಇಲಾಖೆ ಯಾರ ಹಿಡಿತದಲ್ಲಿದೆ ಎಂಬ ಅನುಮಾನ ಮೂಡುತ್ತಿದೆ. ಈ ಬಗ್ಗೆ ಗೃಹ ಸಚಿವ ಜಿ. ಪರಮೇಶ್ವರ ಅವರು ಉತ್ತರ ನೀಡಬೇಕು ಎಂದು ಆಗ್ರಹಿಸಿದರು.

**ಫೋನ್ ಟ್ಯಾಪಿಂಗ್ ಅನುಮಾನ:** ನನ್ನ ದೂರವಾಣಿ ಕರೆಗಳನ್ನು ಕದ್ದಾಲಿಕೆ ಮಾಡುತ್ತಿರುವ ಅನುಮಾನ ಇದೆ, ಆ ಬಗ್ಗೆಯೂ ತನಿಖೆ ನಡೆಸಬೇಕು. ಬೆಳಗಾವಿ ಲಕ್ಷ್ಮೀ ಅವರ ಊರು. ಅಲ್ಲಿಂದ ರವಿ ಬದುಕಿ ಬಂದದ್ದೇ ಅದೃಷ್ಟ ಎಂಬಂತೆ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ. ನನ್ನ ರಕ್ಷಣೆಯ ಹೊಣೆ ಸಂಪೂರ್ಣವಾಗಿ ಸರಕಾರಕ್ಕೆ ಸೇರಿದೆ. ನಮ್ಮ ಸಂಸ್ಕೃತಿಯ ಬಗ್ಗೆ ಶಿವಕುಮಾರ್ ಮಾತನಾಡಿದ್ದಾರೆ. ನಮ್ಮ ಸಂಸ್ಕೃತಿ, ಶಿವಕುಮಾರ್ ಸಂಸ್ಕೃತಿ ಎರಡೂ ಜನರಿಗೆ ಗೊತ್ತು, ಜನರೇ ನಿರ್ಧಾರ ಮಾಡುತ್ತಾರೆ ಎಂದೂ ಸಿ.ಟಿ. ರವಿ ವ್ಯಂಗ್ಯವಾಡಿದರು.

> ನನ್ನ ಮೇಲಿನ ಹಲ್ಲೆಗೆ ವಿಡಿಯೊಗಳಿವೆ. ನನ್ನ ದೂರಿನ ಎಫ್‌ಐಆರ್ ದಾಖಲಿಸಿಲ್ಲ. ಕಾನೂನು ಎಲ್ಲರಿಗೂ ಸಮಾನವಲ್ಲವೇ? ಅಂಬೇಡ್ಕರರ ಸಂವಿಧಾನವು ಎಲ್ಲರಿಗೂ ಸಮಾನ ಅವಕಾಶ ನೀಡುತ್ತದೆ. ಆದರೆ ಲಕ್ಷ್ಮಿ ಹೆಬ್ಬಾಳ್ಕರರಿಗೆ ಹೆಚ್ಚಿನ ಆದ್ಯತೆ, ಹಕ್ಕು ಕೊಟ್ಟು, ಮಾನವ ಹಕ್ಕು ಉಲ್ಲಂಘನೆ ಆಗುವಂತೆ ನಡೆದುಕೊಂಡಿದ್ದೀರಿ.
>
> – **ಸಿ.ಟಿ. ರವಿ** ವಿಧಾನಪರಿಷತ್ ಸದಸ್ಯ

### ಸಿ.ಟಿ. ರವಿ ಮಾಡಿರುವ ಪ್ರಮುಖ ಆರೋಪ

- ಮಾಧ್ಯಮ ವಾಹನಕ್ಕೆ ಪೊಲೀಸ್ ವಾಹನದಿಂದ ಗುದ್ದಿಸಿ ಬ್ಲಾಕ್ ಮಾಡಿದ್ದರು. ಹಳ್ಳ, ದಿಬ್ಬವಿರುವ ನಿಗೂಢ ದಾರಿಯಲ್ಲಿ ವಾಹನ ಒಯ್ದರು, ಕೊನೆಗೆ ಅದು ನಿಂತಿದ್ದು ಕಲ್ಲಿನ ಕ್ವಾರಿಯೊಂದರ ಬಳಿ.
- ಕೇಶವ ಪ್ರಸಾದ್ ಒತ್ತಡಪೂರ್ವಕ ಬಂದು ನಮ್ಮ ವಾಹನ ಏರಿದರು. ಆಗಾಗ ಟೆಲಿಫೋನ್ ಕರೆ ಬರುತ್ತಿತ್ತು, 20ಕ್ಕೂ ಹೆಚ್ಚು ಬಾರಿ ನನ್ನ ಫೋನ್ ಕಿತ್ತುಕೊಳ್ಳಲು ಯತ್ನಿಸಿದ್ದರು, ನನ್ನ ಕುತ್ತಿಗೆ ಹಿಡಿದು ಒತ್ತಾಯದಿಂದ ಫೋನ್ ಕಿತ್ತುಕೊಳ್ಳಲೆತ್ನಿಸಿದರು.
- ರಾಮದುರ್ಗದ ಡಿವೈಎಸ್‌ಪಿ ಚಿದಂಬರಂ, ಬೆಳಗಾವಿ ಮಾರ್ಕೆಟ್‌ನ ಎಸಿಪಿ ಗಂಗಾಧರ್, ಕಿತ್ತೂರು ಪಿಎಸ್‌ಐ ಪ್ರವೀಣ್ ನಿರ್ದೇಶನ ಬರುತ್ತಿತ್ತು.
- ವಿಧಾನಪರಿಷತ್ ಸದಸ್ಯ ಕೇಶವಪ್ರಸಾದರನ್ನು ಬಲವಂತವಾಗಿ ಎಳೆದು ಹಾಕಿ, ಮಾಧ್ಯಮಗಳನ್ನು ಬ್ಯಾರಿಕೇಡ್ ಹಾಕಿ ದೂರವಿಟ್ಟು ನನ್ನೊಬ್ಬನನ್ನೇ ಕರೆದೊಯ್ದರು.

### ಲಕ್ಷ್ಮೀ ಅವರನ್ನು ಅಕ್ಕಾ ಎಂದೇ ಕರೆಯುತ್ತೇನೆ

ಲಕ್ಷ್ಮೀ ಹೆಬ್ಬಾಳ್ಕರ್ ಅವರು ಎದುರಿಗೆ ಸಿಕ್ಕಿದಾಗಲೂ ಗೌರವಯುತವಾಗಿ ಏನಕ್ಕಾ ಚೆನ್ನಾಗಿದ್ದೀರಾ? ಏನು ಲಕ್ಷ್ಮೀಯಕ್ಕ, ಇವತ್ತು ವಿಶೇಷ ಕಳೆ ಬಂದಿದೆ ಎಂದು ಆಗಾಗ ತಮಾಷೆ ಮಾಡಿದ್ದೇನೆ. ಆರೋಪಕ್ಕೆ ಸಂಬಂಧಿಸಿ ಸಭಾಪತಿಗಳು ರೂಲಿಂಗ್ ಕೊಟ್ಟಿದ್ದಾರೆ. ಅದನ್ನು ವಿವರಿಸಲು ಹೋಗುವುದಿಲ್ಲ. ನಮ್ಮ ಮಾತುಗಳು ಅಂತರಾತ್ಮ, ಪರಮಾತ್ಮನಿಗೆ ಗೊತ್ತಾಗಿಯೇ ಗೊತ್ತಾಗುತ್ತದೆ ಎಂದು ಸಿ.ಟಿ. ರವಿ ಘಟನೆಯ ಬಗ್ಗೆ ವಿಶ್ಲೇಷಿಸಿದರು.

# ಲಾಠಿಚಾರ್ಜ್: ಧಾರವಾಡ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ

**ಧಾರವಾಡ:** ಪಂಚಮಸಾಲಿ ಹೋರಾಟದ ಮೇಲೆ ಲಾಠಿಜಾರ್ಜ್ ವಿರುದ್ಧ ಧಾರವಾಡ ಹೈಕೋರ್ಟ್ ನಲ್ಲಿ ರಿಟ್ ಅರ್ಜಿ ಸಲ್ಲಿಸಲಾಗಿದೆ ಎಂದು ಕೂಡಲಸಂಗಮ ಪೀಠದ ಜಯಮೃತ್ಯುಂಜಯ ಸ್ವಾಮೀಜಿ ಹೇಳಿದರು.

ಸುದ್ದಿಗೋಷ್ಠಿ ಯಲ್ಲಿ ಮಾತನಾಡಿದ ಸ್ವಾಮೀಜಿ, ಮೀಸಲು ಹೋರಾಟಗಾರರ ಮೇಲೆ ಲಾಠಿಪ್ರಹಾರ ಮಾಡಿದ ಘಟನೆಯಲ್ಲಿ ಹೈಕೋರ್ಟ್ ಏಕಸದಸ್ಯ ಪೀಠದಿಂದ ಸರಕಾರ, ಗೃಹ ಇಲಾಖೆ, ಪೊಲೀಸ್ ಇಲಾಖೆಗೆ ನೋಟೀಸ್ ಜಾರಿಯಾಗಿದೆ. ಪಂಚಮಸಾಲಿ ವಕೀಲರ ಪರಿಷತ್ ಸೇರಿ ನಾಲ್ವರಿಂದ ರಿಟ್ ಅರ್ಜಿ ಸಲ್ಲಿಸಲಾಗಿದೆ ಎಂದರು.

**ಗಾಯಗೊಂಡವರ ಮನೆಗಳಿಗೆ ನಾಳೆ ಭೇಟಿ:** ಲಾಠಿ ಚಾರ್ಜ್ ಬಳಿಕ ಎಫ್‌ಐಆರ್ ಆಗಿದೆ. 12 ಜನರ ಮೇಲೆ FIR ಮಾಡಿದ್ದಾರೆ. ಅದನ್ನು ರದ್ದುಪಡಿಸಬೇಕೆಂದು ಕೇಳಿದ್ದೇವೆ. ಸಿಎಂ ಕ್ಷಮೆಯಾಚಿಸುವಂತೆ ಆಗ್ರಹಿಸಿದ್ದೆವು. ಆದರೆ ಯಾವುದಕ್ಕೂ ಸಿಎಂ ಸ್ಪಂದಿಸಿಲ್ಲ. ಹೀಗಾಗಿ ಕೋರ್ಟ್‌ಗೆ ಮೊರೆ ಹೋಗಿದ್ದೇವೆ ಎಂದು ಜಯಮೃತ್ಯುಂಜಯ ಶ್ರೀಗಳು ತಿಳಿಸಿದರು.

# ಇರಿದು ಗರ್ಭಿಣಿಯ ಹತ್ಯೆ

**ಬೆಳಗಾವಿ:** ಮನೆಯಲ್ಲಿ ಯಾರೂ ಇಲ್ಲದ ವೇಳೆ ಗರ್ಭಿಣಿಯನ್ನು ಬರ್ಬರವಾಗಿ ಹತ್ಯೆ ಮಾಡಿ ದುಷ್ಕರ್ಮಿಗಳು ಪರಾರಿಯಾದ ಘಟನೆ ಅಥಣಿ ತಾಲೂಕಿನ ಚಿಕ್ಕೂಡ ಗ್ರಾಮ ದಲ್ಲಿ ಶುಕ್ರವಾರ ಮಧ್ಯಾಹ್ನ ನಡೆದಿದೆ.

ಸುವರ್ಣ ಮಾಂತಯ್ಯ ಮಠಪತಿ (35) ಮೃತ ದುರ್ದೈವಿ. ಚಿಕ್ಕೂಡ ಗ್ರಾಮದ ತಮ್ಮ ತೋಟದ ಮನೆಯಲ್ಲಿ ವಾಸವಿದ್ದ ಸುವರ್ಣಗೆ ನಾಲ್ವರು ಹೆಣ್ಣುಮಕ್ಕಳಿದ್ದರು. ಐದನೇ ಮಗುವಿನ ನಿರೀಕ್ಷೆಯಲ್ಲಿದ್ದ ಮಹಿಳೆಯನ್ನು ಅಪರಿಚಿತರು ಮನೆಯಲ್ಲೇ ಚಾಕುವಿನಿಂದ ಇರಿದು ಕೊಲೆ ಮಾಡಿ ಪರಾರಿಯಾಗಿದ್ದಾರೆ.

ಶುಕ್ರವಾರ ಬೆಳಿಗ್ಗೆ ನಾಲ್ವರು ಹೆಣ್ಣುಮಕ್ಕು ಸಮೀಪದ ಶಾಲೆಗೆ ಹೋಗಿದ್ದಾಗ ಮತ್ತು ಪತಿ ಮಾಂತಯ್ಯ ಮೇವು ತರಲು ತೋಟಕ್ಕೆ ತೆರಳಿದ್ದ ವೇಳೆ ಮನೆಯಲ್ಲಿ ಯಾರೂ ಇಲ್ಲದ ಸಂದರ್ಭದಲ್ಲಿ ದುಷ್ಕರ್ಮಿಗಳು ಗರ್ಭಿಣಿ ಮೇಲೆ ಹಲ್ಲೆ ನಡೆಸಿದ್ದಾರೆ. ಕುತ್ತಿಗೆ ಹಾಗೂ ಹೊಟ್ಟೆ ಬಾಗಕ್ಕೆ ಚಾಕುವಿನಿಂದ ಇರಿದು ಹತ್ಯೆ ಮಾಡಿದ್ದು, ನಂತರ ಬಾಗಿಲು ಹಾಕಿಕೊಂಡು ಪರಾರಿ ಆಗಿದ್ದಾರೆ.

ಪತಿ ಮಾಂತಯ್ಯ ಮನೆಗೆ ಬಂದ ಸಂದರ್ಭದಲ್ಲಿ ರಕ್ತದ ಮಡುವಿನಲ್ಲಿ ಬಿದ್ದಿದ್ದ ಸುವರ್ಣ ಅವರನ್ನು ಸ್ಥಳೀಯ ಹಾರೂಗೇರಿ ಆಸ್ಪತ್ರೆಗೆ ದಾಖಲಿಸಿದ್ದರು ಚಿಕಿತ್ಸೆ ಫಲಕಾರಿಯಾಗದೆ ಗರ್ಭಿಣಿ ಸಾವನ್ನಪ್ಪಿದ್ದಾಳೆ. ಮೃತದೇಹವನ್ನು ಬೆಳಗಾವಿ ಜಿಲ್ಲಾಸ್ಪತ್ರೆಗೆ ರವಾನಿಸಿ ಮರಣೋತ್ತರ ಪರೀಕ್ಷೆ ನಂತರ ಶನಿವಾರ ಮೃತದೇಹವನ್ನು ಕುಟುಂಬದವರಿಗೆ ಹಸ್ತಾಂತರಿಸಲಾಗಿದೆ.

> ಚಿಕ್ಕೂಡ ಗ್ರಾಮದಲ್ಲಿ ಗರ್ಭಿಣಿಯನ್ನು ಬರ್ಬರವಾಗಿ ಹತ್ಯೆ ಮಾಡಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ಕೈಗೊಳ್ಳಲಾಗಿದೆ. ಶೀಘ್ರದಲ್ಲೇ ಆರೋಪಿಯನ್ನು ಪತ್ತೆ ಹಚ್ಚುವ ಕಾರ್ಯ ಮಾಡಲಾಗುವುದು.
>
> **–ಭೀಮಾಶಂಕರ ಗುಳೆದ್** ಬೆಳಗಾವಿ ಎಸ್ಪಿ

# ಸಿ.ಟಿ. ರವಿ ಪ್ರಕರಣ ಇಲ್ಲಿಗೇ ಬಿಡಿ: ಸತೀಶ್ ಜಾರಕಿಹೊಳಿ

**ಬೆಳಗಾವಿ:** ಸದನದಲ್ಲಿ ಈ ರೀತಿಯ ಘಟನೆಗಳು ನಡೆಯುವುದು ಹೊಸದಲ್ಲ, ಇಂತಹ ವಿಷಯವನ್ನು ಮುಂದುವರಿಸುವುದಕ್ಕಿಂತ ಬಿಟ್ಟುಬಿಡುವುದು ಒಳ್ಳೆಯದು. ಈಗಾಗಲೇ ಸಿ.ಟಿ ರವಿ ಹೇಳಿಕೆ ನೀಡಿಲ್ಲ ಎಂದು ಹೇಳಿದ್ದು ಇಲ್ಲಿಗೆ ವಿಷಯ ಮುಗಿಸಿದರೆ ಒಳಿತು ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹೇಳಿದ್ದಾರೆ.

ಶನಿವಾರ ನಗರದ ಕಾಂಗ್ರೆಸ್ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿ, ಈ ಹಿಂದೆಯೂ ಸದನದಲ್ಲಿ ನಾಲಿಗೆ ಹರಿಬಿಟ್ಟ ಅನೇಕ ಘಟನೆ ಗಳು ನಡೆದಿವೆ. ಇವುಗಳನ್ನು ಮುಂದುವರಿಸುವುದು ಸರಿಯಲ್ಲ. ಕಹಿ ಘಟನೆ ನಡೆದಿದೆ, ಇದನ್ನು ಇಲ್ಲಿಗೆ ಬಿಟ್ಟು ಬಿಡಲಿ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ವಿರುದ್ಧ ಸಿ.ಟಿ ರವಿ ಅಶ್ಲೀಲ ಪದ ಬಳಕೆ ವಿಚಾರವಾಗಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಜಿಲ್ಲಾ ಪೊಲೀಸರು ತಮ್ಮ ವಿವೇಚನೆಯಿಂದ ಕೆಲಸ ಮಾಡಿದ್ದಾರೆ. ಸಿ.ಟಿ ರವಿ ಅವರನ್ನು ದುರುದ್ದೇಶದಿಂದ ರಾತ್ರಿಯಿಡೀ ಸುತ್ತಿಸಿಲ್ಲ. ಅವರು ಇದ್ದ ಠಾಣೆಗೆ ಬಿಜೆಪಿ ಕಾರ್ಯಕರ್ತರು ಹಾಗೂ ಶಾಸಕರು ಬೇಟಿ ನೀಡುತ್ತಿದ್ದ ಹಿನ್ನಲೆಯಲ್ಲಿ ಭದ್ರತೆ ದೃಷ್ಟಿಯಿಂದ ಅವರನ್ನು ಬೇರೆಡೆಗೆ ಸ್ಥಳಾಂತರಿಸಿದ್ದು ಬೇರೆ ಯಾವ ಉದ್ದೇಶ ಇಲ್ಲ ಎಂದರು.

ಬೆಳಗಾವಿ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ ಆಚರಣೆ ಪೂರ್ವಸಿದ್ಧತೆ ಕುರಿತು ಮಾತನಾಡಿ. ಗಾಂಧಿ ಭಾರತ ಕಾರ್ಯಕ್ರಮದಲ್ಲಿ ದೇಶದಾದ್ಯಂತ 400 ಮುಖಂಡರು ಭಾಗವಹಿಸಲಿದ್ದಾರೆ. ಕಾಂಗ್ರೆಸ್ ಸಂಸದರು ಶಾಸಕರು ಸೇರಿದಂತೆ ಹಲವರು ಭಾಗವಹಿಸಲಿದ್ದಾರೆ. ಈ ಕುರಿತು ಈಗಾಗಲೇ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಅಧಿವೇಶನದಲ್ಲಿ ತೆಗೆದುಕೊಳ್ಳುವ ನಿರ್ಣಯಗಳು ದೇಶದಲ್ಲಿ ಹೊಸ ಸಂದೇಶ ನೀಡಲಿದೆ ಎಂದು ಜಾರಕಿಹೊಳಿ ಹೇಳಿದರು.

# ಕಲಬುರಗಿ ಜಯದೇವ ಆಸ್ಪತ್ರೆ ಲೋಕಾರ್ಪಣೆ ಇಂದು

← ಮೊದಲಪುಟದಿಂದ

**ಹೈ.ಕ. ವಿಶೇಷ ಪ್ರಾತಿನಿಧ್ಯದ ಹಿನ್ನೆಲೆ:** ಹೈದರಾಬಾದ್-ಕರ್ನಾಟಕ ವಿಶೇಷ 371(ಜೆ) ಕಾಯಿದೆಯ ಪ್ರಾತಿನಿಧ್ಯ ದೊರಕಿ, ದಶಕ ಪೂರೈಸಿದ ನೆನಪಿಗಾಗಿ 371 ಹಾಸಿಗೆಗಳ ಸಾಮರ್ಥ್ಯ ಜಯದೇವ ಆಸ್ಪತ್ರೆಯನ್ನು ನಿರ್ಮಿಸಲಾಗಿದೆ. ಆಸ್ಪತ್ರೆಯು ಅತ್ಯಾಧುನಿಕ ಹಾಗೂ ಗುಣಮಟ್ಟದ ಸೌಲಭ್ಯಗಳನ್ನು ಒಳಗೊಂಡಿದೆ. ದಕ್ಷಿಣ ಏಷ್ಯಾದ ಅತ್ಯಂತ ಬೃಹತ್ ಹೃದ್ರೋಗ ಚಿಕಿತ್ಸಾ ಸಂಸ್ಥೆ ಎಂಬ ಕೀರ್ತಿಗೂ ಪಾತ್ರವಾಗಿದೆ. ಜಯದೇವ ಆಸ್ಪತ್ರೆ ಸ್ಥಾಪನೆಯಿಂದ ಇಲ್ಲಿನ ಜನರು ದೂರದ ಬೆಂಗಳೂರು, ಸೊಲ್ಲಾಪುರಕ್ಕೆ ಹೋಗುವುದು ತಪ್ಪಲಿದೆ.

**ಕೆಕೆಆರ್‌ಡಿಬಿ 302 ಕೋಟಿ ರು. ಅನುದಾನ:** ಜಯದೇವ ಆಸ್ಪತ್ರೆಯ ಕಟ್ಟಡಕ್ಕೆ ಯೋಜನಾ ವೆಚ್ಚ 377.17 ಕೋಟಿ ರು.ಗಳು. ಅದರಲ್ಲಿ 262.20 ಕೋಟಿ ರು. ಕಟ್ಟಡ ನಿರ್ಮಾಣಕ್ಕೆ ತಗುಲಿದೆ. ವೈದ್ಯಕೀಯ ಉಪಕರಣಗಳ ಖರೀದಿಗೆ 56 ಕೋಟಿ ರು. ವೆಚ್ಚವಾಗಿದೆ. ಕಟ್ಟಡ ನಿರ್ಮಾಣಕ್ಕೆ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಮೊದಲ ಹಂತದಲ್ಲಿ 262 ಕೋಟಿ ರು. ಅನುದಾನ ನೀಡಿದೆ. ಬಳಿಕ ಹೆಚ್ಚುವರಿಯಾಗಿ 40 ಕೋಟಿ ರು. ನೀಡುವ ಮೂಲಕ ಒಟ್ಟು 302 ಕೋಟಿ ರು.ಗಳ ಅನುದಾನ ನೀಡಿ ಕಾಮಗಾರಿ ಪೂರ್ಣಗೊಳಿಸಲು ಹೆಚ್ಚಿನ ಕೊಡುಗೆ ನೀಡಿದೆ.

> ಜಯದೇವ ಸಂಸ್ಥೆ ಟ್ರೀಟ್‌ಮೆಂಟ್ ಫಸ್ಟ್-ಪೇಮೆಂಟ್ ನೆಕ್ಸ್ಟ ಎಂಬ ಮುಖ್ಯ ಧ್ಯೇಯ ಹೊಂದಿದೆ. ಕಾಂಗ್ರೆಸ್ ಸರಕಾರದ ಅವಧಿಯಲ್ಲಿ ಹಲವಾರು ಆರೋಗ್ಯಕರ ಯೋಜನೆಗಳು ಜಿಲ್ಲೆಗೆ ಲಭಿಸಿವೆ. ಈ ಯೋಜನೆಗಳು ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಆರೋಗ್ಯ ಮೂಲಸೌಕರ್ಯವನ್ನು ಹೆಚ್ಚಿಸುವ ಸರಕಾರದ ಬದ್ಧತೆಗೆ ಸಾಕ್ಷಿಯಾಗಿವೆ. ಈಗ ಕಲಬುರಗಿಯಲ್ಲಿ ಜಯದೇವ ಹೃದ್ರೋಗ ಸಂಸ್ಥೆಯ ಬೃಹತ್ ಕಟ್ಟಡ ಲೋಕಾರ್ಪಣೆ ಸಿದ್ಧವಾಗಿದೆ. ಈ ಭಾಗದಲ್ಲಿ ಅಭಿವೃದ್ಧಿಯ ಕಲ್ಯಾಣದ ಜನರ ಕನಸು ನನಸಾಗುತ್ತಿದೆ.
>
> – **ಡಾ.ಶರಣಪ್ರಕಾಶ್ ಪಾಟೀಲ್** ವೈದ್ಯಕೀಯ ಶಿಕ್ಷಣ ಸಚಿವ

> ಸಂವಿಧಾನದ ಕಲಂ 371 (ಜೆ) ಜಾರಿಗೆ ಬಂದ ನಂತರ ಕಲ್ಯಾಣ ಕರ್ನಾಟಕ ಭಾಗದಲ್ಲಿ ಅಭಿವೃದ್ಧಿಯಾಗಿದೆ. ಕಲಬುರಗಿ ಮೆಡಿಕಲ್ ಹಬ್ ಆಗಿ ಅಭಿವೃದ್ಧಿ ಹೊಂದಿದೆ. 2016 ರಲ್ಲಿ ಜಯದೇವ ಆಸ್ಪತ್ರೆ ಸ್ಥಾಪನೆಯಾದ ನಂತರ ಈವರೆಗೆ 15 ಲಕ್ಷ ಜನರು ಆಸ್ಪತ್ರೆಯ ವಿವಿಧ ವಿಭಾಗಗಳಲ್ಲಿ ಆರೋಗ್ಯ ಸೇವೆ ಪಡೆದುಕೊಂಡಿದ್ದಾರೆ.
>
> – **ಪ್ರಿಯಾಂಕ್ ಖರ್ಗೆ** ಸಚಿವ

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯಿತಿ : ಹಾಸನ | ತಾಲ್ಲೂಕು ಪಂಚಾಯಿತಿ : ಆಲೂರು
ಗ್ರಾಮ ಪಂಚಾಯಿತಿ ಕಾರ್ಯಾಲಯ : ಪಾಳ್ಯ
Email: alurgppalya@gmail.com | Phone: 08170 210238
ಸಂ: ಗ್ರಾ.ಪಂ/ಟೆಂಡರ್/2024-2025 | ದಿನಾಂಕ: 09/12/2024

**ಟೆಂಡರ್ ಪ್ರಕಟಣೆ**

2023–24ನೇ ಸಾಲಿನ ಗಾಂಧಿ ಗ್ರಾಮ ಪುರಸ್ಕಾರ ಯೋಜನೆ ಮತ್ತು ಸ್ವಂತ ಸಂಪನ್ಮೂಲದ ಅನುದಾನದಿಂದ ಪಾಳ್ಯ ಗ್ರಾಮ ಪಂಚಾಯಿತಿಗೆ ಪೀಠೋಪಕರಣ ಸರಕು ಖರೀದಿಗೆ (4.95 ಲಕ್ಷ ರೂ.) ಮತ್ತು ಹವಾನಿಯಂತ್ರಕ ಸರಕು ಖರೀದಿ (4.80 ಲಕ್ಷ ರೂ.) ಗಳಿಗೆ ಷರತ್ತಿನ ಟೆಂಡರ್ ಮೂಲಕ ಆಸಕ್ತರಿಂದ ದರ ಆಹ್ವಾನಿಸಲಾಗಿದೆ. ಶುಲ್ಕ 500/– ರೂಗಳನ್ನು ಪಾವತಿಸಿ ಟೆಂಡರ್ ಅರ್ಜಿ ಪಡೆಯಲು ಕೊನೆಯ ದಿನಾಂಕ: 27/12/2024 ಹಾಗು ತುಂಬಿದ ಅರ್ಜಿ ಫಾರಂಗಳ ಟೆಂಡರನ್ನು ಪಾಳ್ಯ ಗ್ರಾಮ ಪಂಚಾಯಿತಿ ಕಛೇರಿಗೆ ಸಲ್ಲಿಸಲು ಕೊನೆಯ ದಿನಾಂಕ 31/12/2024 ಸಮಯ 13:00 ಗಂಟೆ ಆಗಿರುತ್ತದೆ. ಹಾಗು ಅದೇ ದಿನದ ಸಮಯ 15:00 ಗಂಟೆ ಅಥವಾ ಆ ದಿನವೇ ಪಿ.ಡಿ.ಓ ರವರು ತಿಳಿಸಲ್ಪಡುವ ದಿನಾಂಕ ಮತ್ತು ಸಮಯದಂದು ಟೆಂಡರ್ ತೆರೆಯಲಾಗುವುದು ಹಾಗು ಟೆಂಡರ್ ದಾರನು ಟೆಂಡರ್ ತೆರೆಯುವ ಸಂದರ್ಭದಲ್ಲಿ ಹಾಜರಿರಬಹುದಾಗಿದೆ ಹೆಚ್ಚಿನ ಮಾಹಿತಿ ಹಾಗೂ ಅರ್ಜಿ ಫಾರಂ ಪಡೆಯಲು ಪಾಳ್ಯ ಗ್ರಾಮ ಪಂಚಾಯಿತಿ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/–
ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಪಾಳ್ಯ ಗ್ರಾಮ ಪಂಚಾಯಿತಿ, ಆಲೂರು ತಾಲ್ಲೂಕು

**GOVERNMENT OF KARNATAKA**
**HEALTH AND FAMILY WELFARE DEPARTMENT**
**ENGINEERING WING,**
(Office of the Executive Engineer, H & F W D Engg., Division, Fort Road, Dharwad- 580 008)
Phone No:-0836 – 2955800 (E-mail: eehfwedvndwd1@gmail.com)
No: EE/H&FW Engg./Div/Dwd/Tender/Notification-DIPHL-Bgl /685/2024-25 Date: 20.12.2024

**TENDER NOTIFICATION**

The Executive Engineer, H&FWD, Engg., Division, Dharwad invites tender from contractors registered in KPWD in double cover system as per KTPP Act 1999 & Rules 2000 through KPP Portal for the following work.

| Sl. No | Name of Work | Est. amount (Rs. in lakhs) | EMD amount (Rs. in lakhs) | Class of contractor | Period of completion (including monsoon) | Category of contractor |
|---|---|---|---|---|---|---|
| 1 | Proposed Construction of District Integral Public Health Lab (DIPHL) at First Floor in existing Geriatric ward at BIMS, Belagavi | 89.15 | 1.79 | Class III & above | 9 Months | General |

**Calendar events:**
Last date for receipt of tender: **06.01.2025 up to 16.00 hrs**
Date of opening of technical bid: **07.01.2025 up to 16.30 hrs**
Date of opening of financial bid: **08.01.2025 up to 16.50 hrs**

The tender details can be downloaded from the KPP platform (www.kppp.karnataka.gov.in) Tenders shall be submitted electronically, EMD, Tender Processing Fee shall also be paid electronically. Interested contractors shall register on the KPP platform to participate in this tender.

**NOTE**:- **1)** All the rights are reserved by the under signed for postponement or cancellation of entire Tender process, rejection of bids/individual bid etc., without assigning any reason.
**2)** Henceforth, any changes in the schedule will not be published through newspapers and further changes in respect of this tender notification will be uploaded on KPP portal only.

**Sd/- Executive Engineer,**
**H&FWD Engg. Division,Dharwad.**
DIPR/Dwd/769/DeshpandePublicity/2024-25

**ನಗರಸಭೆ ಕಾರ್ಯಾಲಯ, ಸಿಂಧನೂರು**
ಸಂಖ್ಯೆ:ನಕಾಸಿಂ:ತಾಂತ್ರಿಕ:ಇ–ಟೆಂಡರ್:07:2024–25 ದಿನಾಂಕ: 19–12–2024

**ಟೆಂಡರ್ ಪ್ರಕಟಣೆ (ಕೆಪಿಪಿಪಿ ಪೋರ್ಟಲ್ ಮುಖಾಂತರ)**

ಸಿಂಧನೂರು ನಗರಸಭೆಯ ಸ್ವಚ್ಛ ಭಾರತ ಮಿಷನ್ 2.0 ಯೋಜನೆಯ ಅನುದಾನದಲ್ಲಿ (MRF) ಶೆಡ್ ನಿರ್ಮಾಣ ಕಾಮಗಾರಿಗೆ (ಇಂಡೆಂಟ ನಂ: 25868 CALL-2) ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಕೆ.ಡಬ್ಲ್ಯೂ–3 ರ ಷರತ್ತಿಗೊಳಪಟ್ಟು ಐಟಂವಾರು ಬಿಡ್ ದರಗಳನ್ನು ಅಹ್ವಾನಿಸಲಾಗಿರುತ್ತದೆ. ಮತ್ತು ಸನ್ 2023–24ನೇ ಸಾಲಿನ 15ನೇ ಹಣಕಾಸು ಅನುದಾನಲ್ಲಿ ಘನತ್ಯಾಜ್ಯ ವಿಲೇವಾರಿಗಾಗಿ ಆಟೋ ಟಿಪ್ಪರ್‌ಗಳನ್ನು ಖರೀದಿಸಲು (ಇಂಡೆಂಟ ನಂ: 4066) ಕೆ.ಜಿ–2ರ ಷರತ್ತಿಗೊಳಪಟ್ಟು ಬಿಡ್ ದರಗಳನ್ನು ಅಹ್ವಾನಿಸಲಾಗಿದ್ದು ಇಚ್ಚೆಯುಳ್ಳ ಅಧಿಕೃತ ಅರ್ಹ ತಯಾರಕರು/ಏಜೆನ್ಸಿದಾರರು/ಮಾರಾಗಾರರು ಟೆಂಡರ್‌ನಲ್ಲಿ ಭಾಗವಹಿಸಿ ತಮ್ಮ ದರಗಳನ್ನು http://kppp.karnataka.gov.in ವೆಬ್‌ಸೈಟ್‌ನಿಂದ ಡೌನಲೋಡ ಮಾಡಿಕೊಂಡು ದಿನಾಂಕ: 03–01–2025 @ 4.30 ಗಂಟೆಯೊಳಗಾಗಿ ಸಲ್ಲಿಸಬಹುದಾಗಿದೆ. ಸದರಿ ಭರ್ತಿ ಮಾಡಿ ಸಲ್ಲಿಸಲಾದ ಟೆಂಡರ್‌ಗಳ ಬಿಡ್‌ನ್ನು ದಿನಾಂಕ: 04–01–2025@ 4:45 ರ ನಂತರ ತೆರೆಯಲಾಗುವುದು. ಹೆಚ್ಚಿನ ವಿವರಗಳಿಗೆ ನಗರಸಭೆಯ ವೆಬ್‌ಸೈಟ್ www.sindhanurcity.mrc.gov.in ಮುಖಾಂತರ ಪಡೆದು ಸಲ್ಲಿಸಬಹುದು.

ಸಹಿ/–ಪೌರಾಯುಕ್ತರು
ನಗರಸಭೆ ಸಿಂಧನೂರು
DIP/RCR/613/KSMC&A/614/2024-25

**ಹೊಸಕೋಟೆ ಯೋಜನಾ ಪ್ರಾಧಿಕಾರ**
ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ – 562114,
ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ / ಫ್ಯಾಕ್ಸ್: 080–27934470/ 27935412
E-mail: hosakote.pa@gmail.com URL: www.hoskote.tpa.gov.in
ಸಂಖ್ಯೆ: ಹೊಯೋಪ್ರಾ/ಭೂಉಬ/36/2024–25 ದಿನಾಂಕ: 20–12–2024

**ಸಾರ್ವಜನಿಕ ಪ್ರಕಟಣೆ**

**ವಿಷಯ:** ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14 (ಎ) ರಡಿಯಲ್ಲಿ ಕೈಗಾರಿಕಾ ಉದ್ದೇಶಕ್ಕಾಗಿ ಭೂ ಪರಿವರ್ತನೆಯಾಗಿರುವ ಜಮೀನುಗಳನ್ನು ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುವ ಬಗ್ಗೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14 (ಎ) ರಡಿಯಲ್ಲಿ ಈ ಕೆಳಕಂಡ ಜಮೀನುಗಳನ್ನು ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ದಿನಾಂಕ: 30.01.2018 ರಂದು ಅನುಮೋದನೆಯಾದ ಮಹಾಯೋಜನೆಯಂತೆ **ಕೈಗಾರಿಕಾ ವಲಯದಲ್ಲಿ ಕಾಯ್ದಿರಿಸಿರುವ ಹಾಗೂ ಜಿಲ್ಲಾಧಿಕಾರಿಗಳಿಂದ ಕೈಗಾರಿಕೆ ಉದ್ದೇಶಕ್ಕೆ ಭೂ ಪರಿವರ್ತನೆಯಾಗಿರುವ ಜಮೀನನ್ನು ವಸತಿ ಉದ್ದೇಶಕ್ಕಾಗಿ ಭೂ ಉಪಯೋಗ ಬದಲಾವಣೆ** ಮಾಡಲು ಕೋರಿ ಈ ಪ್ರಾಧಿಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ / ಇತರರಿಗೆ / ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ತಮ್ಮ ಸಲಹೆ / ಸೂಚನೆ / ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ – 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ / ಸೂಚನೆ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಬೊಮ್ಮೇನಹಳ್ಳಿ ಗ್ರಾಮ

| ಕ್ರ. ಸಂ. | ಭೂ ಮಾಲೀಕರ ಹೆಸರು | ಸ.ನಂ. | ವಿಸ್ತೀರ್ಣ ಎ–ಗುಂ |
|---|---|---|---|
| 1 | ಶ್ರೀ ಪ್ರಕಾಶ್ ಎಸ್., ಪಾರ್ಟ್‌ನರ್, ಮೆ॥ ಗಜಾನನ ಬಿಲ್ಡರ್ಸ್ & ಡೆವಲಪರ್ಸ್ | 130 ರ ಪೈಕಿ | 09-10 |

**ಷರಾ:–** ಪ್ರಶ್ನಿತ ಜಮೀನಿನ ಸುತ್ತಮುತ್ತಲಿನ ಪರಿಸರದಲ್ಲಿ ಹೆಚ್ಚಿನ ವಸತಿ ಬೆಳವಣಿಗೆಗಳು ಬಂದಿದ್ದು / ಬರುತ್ತಿದ್ದು, "ಉದ್ದೇಶಿತ ಜಮೀನುಗಳಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಯೋಜನಾ ಬದ್ಧವಾದ ವಸತಿ ಚಟುವಟಿಕೆಯನ್ನು ಪ್ರಾರಂಭಿಸಲು ಉದ್ದೇಶಿಸಿರುವುದರಿಂದ ಸ್ಥಳೀಯ ಸಾರ್ವಜನಿಕರಿಗೆ ಅನೇಕ ಉದ್ಯೋಗಾವಕಾಶಗಳು ದೊರಕುವುದರ ಜೊತೆಗೆ ಸುತ್ತಲಿನ ಪರಿಸರದ ಪ್ರದೇಶವು ಸಹ ಯೋಜನಾಬದ್ಧವಾಗಿ ಅಭಿವೃದ್ಧಿ ಹೊಂದಲು ಸಹಕಾರಿಯಾಗುತ್ತದೆ" ಎಂಬ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತೇವೆ ಎಂದು ಅರ್ಜಿದಾರರು ತಮ್ಮ ಪ್ರಮಾಣ ಪತ್ರದ ಮುಖಾಂತರ ತಿಳಿಸಿರುತ್ತಾರೆ.

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.
ವಾಸಾಸಂಇ/ವಾ.ಪ್ರ/3902/ಅಡ್ವಟೋರ್/2024–25

ಕರ್ನಾಟಕ ಸರಕಾರ
**ಜಿಲ್ಲಾ ನಗರಾಭಿವೃದ್ಧಿ ಕೋಶ, ಉತ್ತರ ಕನ್ನಡ, ಕಾರವಾರ–581301**
**DISTRICT URBAN DEVELOPMENT CELL, D.C. OFFICE**
**UTTARA KANNADA DISTRICT, KARWAR-581301**
Ph/Fax: 08382-221170 ಇ–ಮೇಲ್: ka.uttarakannada.dudc@gmail.com
ನಂ. ಡಿಯುಡಿಸಿ:1 :ಸಿಬ್ಬಂದಿ:ವಿವ:2024–25 ದಿನಾಂಕ: 19–12–2024

**ಮರು ಟೆಂಡರ್ ಪ್ರಕಟಣೆ**

ಕರ್ನಾಟಕ ಪಾರದರ್ಶಕ ಕಾಯ್ದೆ 1999 ನಿಯಮ 2000 ರಂತೆ ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿತ ಮಾನವ ಶಕ್ತಿ ಪೂರೈಕೆ ಏಜನ್ಸಿದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಜಿಲ್ಲಾ ನಗರಾಭಿವೃದ್ಧಿ ಕೋಶ, ಉತ್ತರ ಕನ್ನಡ, ಕಾರವಾರ ಕಚೇರಿಯಲ್ಲಿ ವಸತಿ ವಿಭಾಗದಲ್ಲಿ ತಾಂತ್ರಿಕ ಕೋಶದ ಉಸ್ತುವಾರಿ ಮತ್ತು ಅದಕ್ಕೆ ಸಂಬಂಧಿಸಿದ ಕಾರ್ಯ ನಿರ್ವಹಿಸುವುದಕ್ಕೆ 4 ಹುದ್ದೆಗಳನ್ನು ಒಂದು ವರ್ಷದ ಮಟ್ಟಿಗೆ ತಾತ್ಕಾಲಿಕವಾಗಿ ಹೊರಗುತ್ತಿಗೆ ಮೇಲೆ ನೇಮಕಾತಿ ಮಾಡಿಕೊಳ್ಳಲು ನಿರ್ಧರಿಸಲಾಗಿದೆ. ಆಸಕ್ತಿ ಇರುವವರು ಕೆಪಿಪಿಪಿ ಮೂಲಕ (https://kppp.karnataka.gov.in) ತಮ್ಮ ಟೆಂಡರ್‌ನ್ನು ಈ ಕೆಳಗೆ ಕಾಣಿಸಿದ ದಿನಾಂಕದಂದು ಸಲ್ಲಿಸಬಹುದಾಗಿದೆ.
ಹೆಚ್ಚಿನ ಮಾಹಿತಿಗಾಗಿ ಕಚೇರಿ ಸಮಯದಲ್ಲಿ ಬಂದು ಮಾಹಿತಿ ಪಡೆಯಬಹುದಾಗಿದೆ. ಹಾಗೂ www.uttarakannadadudc.mrc.gov.in ವೆಬ್‌ಸೈಟ್‌ನಲ್ಲಿ ಪರಿಶೀಲಿಸಬಹುದಾಗಿದೆ.
**INDENT NO. DMA/2024-25/SE4320**
(1) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 06–01–2025 ಸಾಯಂಕಾಲ 17.00 ಗಂಟೆ (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 07–01–2025 ಸಾಯಂಕಾಲ 17.30 ಗಂಟೆ (3) ಆರ್ಥಿಕ ಬಿಡ್ ತೆರೆಯುವ ದಿನಾಂಕ: 10–01–2025 ಬೆಳಿಗ್ಗೆ 11.00 ಗಂಟೆ.

ಸಹಿ/– ಯೋಜನಾ ನಿರ್ದೇಶಕರು,
ಜಿಲ್ಲಾ ನಗರಾಭಿವೃದ್ಧಿ ಕೋಶ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಉತ್ತರ ಕನ್ನಡ, ಕಾರವಾರ
DIPR/KWR/KSMCA/647/24-25 dt.20.12.2024

**ನಗರಸಭಾ ಕಾರ್ಯಾಲಯ, ಭದ್ರಾವತಿ**
ತರೀಕೆರೆ ರಸ್ತೆ, ಭದ್ರಾವತಿ, ಶಿವಮೊಗ್ಗ ಜಿಲ್ಲೆ
Phone: 08282-266356,
Email: itstaff_ulb_bhadravathi@yahoo.com,
Web: www.bhadravathicity.mrc.gov.in
No/CMC/BDVT/WS/12 MLD/CR/03/24-25 ದಿನಾಂಕ: 19.12.2024

**–: ಟೆಂಡರ್ ಪ್ರಕಟಣೆ :– (ಇ–ಪ್ರಕ್ಯೂರ್‌ಮೆಂಟ್ ಮುಖಾಂತರ)**
**12 ಎಂ ಎಲ್ ಡಿ ಸಾಮರ್ಥ್ಯದ ಹೊಸ ತಂತ್ರಜ್ಞಾನವುಳ್ಳ (ಇಸ್ರೇಲ್ ಮಾದರಿಯ ಆಪ್ಟಿಕ್ ಫೈಬರ್ ಫಿಲ್ಟರ್ ಮಿಡಿಯಾ ನೀರು ಶುದ್ಧೀಕರಣ ಘಟಕದ ಸಂಪೂರ್ಣ ದುರಸ್ಥಿ ಪಡಿಸುವ ಬಗ್ಗೆ.**

ಭದ್ರಾವತಿ ನಗರಸಭೆಯ 12 ಎಂ ಎಲ್ ಡಿ ಸಾಮರ್ಥ್ಯದ ಹೊಸ ತಂತ್ರಜ್ಞಾನವುಳ್ಳ (ಇಸ್ರೇಲ್ ಮಾದರಿಯ) ಆಪ್ಟಿಕ್ ಫೈಬರ್ ಫಿಲ್ಟರ್ ಮಿಡಿಯಾ ನೀರು ಶುದ್ಧೀಕರಣ ಘಟಕದ ಸಂಪೂರ್ಣ ದುರಸ್ಥಿ ಕಾರ್ಯ ಕೈಗೊಳ್ಳಲು ಸದರಿ ಘಟಕದ ತಂತ್ರಜ್ಞಾನಗಳ ಅಳವಡಿಕೆ ಮತ್ತು ನಿರ್ವಹಣೆ ಅನುಭವ ಹೊಂದಿರುವ ಸಂಸ್ಥೆಯವರಿಂದ ಕರ್ನಾಟಕ ಸಂಗ್ರಹಣಾಲಯ ಪಾರದರ್ಶಕ ಇ–ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದ್ದು ದಿನಾಂಕ 02–01–2025 ರ ಸಂಜೆ 4.00 ಗಂಟೆ ಒಳಗಾಗಿ ಇ–ಪ್ರಕ್ಯೂರ್‌ಮೆಂಟ್ ನ ಟೆಂಡರ್ ನಲ್ಲಿ ಭಾಗವಹಿಸಲು ಇಚ್ಛಿಸುವ ಏಜೆನ್ಸಿ/ಸಂಸ್ಥೆಯವರು ಅರ್ಹತೆಗಳು, ಮತ್ತು ನಿಬಂಧನೆಗಳು ಇತ್ಯಾದಿ ವಿವರಗಳನ್ನು ವೆಬ್ ಸೈಟ್ www. eproc.karnataka.gov.in ನಲ್ಲಿ ಪಡೆದು ಕೊಳ್ಳಬಹುದು.
**ಪ್ಯಾಕೇಜ್ ನಂ. 01. ಕಾಮಗಾರಿಯ ವಿವರ:** 12 ಎಂ ಎಲ್ ಡಿ ಸಾಮರ್ಥ್ಯದ ಹೊಸ ತಂತ್ರಜ್ಞಾನವುಳ್ಳ ( ಇಸ್ರೇಲ್ ಮಾದರಿಯ ) ಆಪ್ಟಿಕ್ ಫೈಬರ್ ಫಿಲ್ಟರ್ ಮಿಡಿಯಾ ನೀರು ಶುದ್ಧೀಕರಣ ಘಟಕದ ಸಂಪೂರ್ಣ ದುರಸ್ಥಿ ಪಡಿಸುವ ಬಗ್ಗೆ **ಟೆಂಡರ್ ಗಿಟ್ಟ ಮೊತ್ತ (ರೂಗಳಲ್ಲಿ)** : 93,07,250 **ಇ.ಎಂ.ಡಿಮೊತ್ತ (ರೂ.ಗಳಲ್ಲಿ):** 1,86,145 **ಕಾಮಗಾರಿ ಕಾಲಾವಧಿ:** 12 ತಿಂಗಳು **ಗುತ್ತಿಗೆದಾರರ ದರ್ಜೆ:** PWD Registered Class-3 Contractor
Tender Schedule: 1) Date of availability of tender on e-procurement website: 19-12-2024 2) Last date of Tender Submission 02-01-2025 3) Technical Bid Opening Date 04-01-2025 4) Financial Bid Opening Date: after approval of Technical bid

ಸಹಿ/– ಪೌರಾಯುಕ್ತರು, ನಗರಸಭೆ, ಭದ್ರಾವತಿ.
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/24–25143/12/1286

## ಸಮಾಚಾರ ಸಣ್ಣದಲ್ಲ

### ಭಾರತದ 3 ರಾಜ್ಯ ನಮಗೆ ಸೇರಿದ್ದು: ಬಾಂಗ್ಲಾ ಕ್ಯಾತೆ

**ಡಾಕಾ:** ಗಡಿಯಂಚಿನ ಭಾರತದ 3 ರಾಜ್ಯಗಳು ನಮಗೇ ಸೇರಿದ್ದು ಎಂದು ಬಾಂಗ್ಲಾದೇಶ ಹೊಸದಾಗಿ ಕಿತಾಪತಿ ಶುರು ಮಾಡಿದೆ.ಪಶ್ಚಿಮ ಬಂಗಾಳ, ಅಸ್ಸಾಂ ಮತ್ತು ತ್ರಿಪುರಾ ರಾಜ್ಯಗಳು ಬಾಂಗ್ಲಾದ ಭಾಗವಾಗಿವೆ ಎಂದು ಹೇಳುವ ಮೂಲಕ ಬಾಂಗ್ಲಾದೇಶದ ಮಧ್ಯಂತರ ಸರಕಾರದ ಮುಖ್ಯಸ್ಥ ಮುಹಮ್ಮದ್ ಯೂನುಸ್ ಅವರ ಆಪ್ತನಾದ ಮಹ್ಫುಜ್ ಆಲಂ ವಿವಾದ ಹುಟ್ಟುಹಾಕಿದ್ದಾನೆ. ಅಲ್ಲದೇ, ಬಾಂಗ್ಲಾ ಪ್ರಧಾನಿಯಾಗಿದ್ದ ಶೇಖ್ ಹಸೀನಾ ಅವರ ಪದಚ್ಯುತಿಗೆ ಕಾರಣವಾದ ವಿದ್ಯಾರ್ಥಿ ದಂಗೆಯನ್ನೂ ಭಾರತ ಮಾನ್ಯ ಮಾಡಬೇಕು ಎಂದು ಒತ್ತಾಯಿಸಿದ್ದಾನೆ. ಆಲಂ ಕಿಡಿಗೇಡಿತನ ನಿಲ್ಲಿಸಲಿ. ಸಾರ್ವಜನಿಕವಾಗಿ ಇಂತಹ ಹೇಳಿಕೆ ಕೊಡುವಾಗ ಎಚ್ಚರ ಇರಲಿ ಎಂದು ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯ ವಕ್ತಾರ ರಣಧೀರ್ ಜೈಸ್ವಾಲ್ ಗುಡುಗಿದ್ದಾರೆ.

### ಮುಂಬೈ 2 ದೋಣಿಗಳ ಡಿಕ್ಕಿ: ಸಾವು 15ಕ್ಕೆ

**ಮುಂಬೈ:** ಮುಂಬೈ ಕರಾವಳಿಯಲ್ಲಿನ ಪ್ರಯಾಣಿಕ ದೋಣಿ-ಸ್ಪೀಡ್ ಬೋಟ್ ನಡುವೆ ಡಿ.18ರಂದು ಡಿಕ್ಕಿಯಾದ ಘಟನೆಯಲ್ಲಿ ನಾಪತ್ತೆಯಾಗಿದ್ದ ಏಳು ವರ್ಷದ ಬಾಲಕ ಜೋಹಾನ್ ಮೊಹಮ್ಮದ್ ನಿಸಾರ್ ಅಹಮದ್ ಪಠಾಣ್, ಮೂರು ದಿನಗಳ ಶೋಧ ಕಾರ್ಯಾಚರಣೆ ಬಳಿಕ ಶವವಾಗಿ ಶನಿವಾರ ಪತ್ತೆಯಾಗಿದ್ದಾನೆ. ದುರ್ಘಟನೆಯಲ್ಲಿ ಮೃತರ ಸಂಖ್ಯೆ 15ಕ್ಕೇರಿದೆ. ಅವಘಡದಲ್ಲಿ ನೌಕಾಪಡೆಯ ಒಬ್ಬ ನೌಕರ ಮತ್ತು ಇಬ್ಬರು ಗುತ್ತಿಗೆ ಸಿಬ್ಬಂದಿಯೂ ಸಾವನ್ನಪ್ಪಿದ್ದಾರೆ. ಅಪಘಾತ ಸಂಬಂಧ ನೌಕಾಪಡೆಯ ಸ್ಪೀಡ್‌ಬೋಟ್ ಚಾಲಕನ ವಿರುದ್ಧ ಕೊಲಾಬಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ಪೊಲೀಸ್ ಅಧಿಕಾರಿ ಮಾಹಿತಿ ನೀಡಿದ್ದಾರೆ.

### ಮಧ್ಯಪ್ರದೇಶ: ದೇಗುಲದ ಯಂತ್ರಕ್ಕೆ ಸಿಲುಕಿ ಸ್ತ್ರೀ ಸಾವು

**ಉಜ್ಜಯಿನಿ:** ಮಧ್ಯಪ್ರದೇಶ ರಾಜ್ಯದ ಉಜ್ಜಯಿನಿಯಲ್ಲಿನ ಮಹಾಕಾಳೇಶ್ವರ ದೇಗುಲದ ಆಹಾರ ತಯಾರಿಕಾ ಕೇಂದ್ರದ ಆಲೂಗಡ್ಡೆ ಸುಲಿವ ಯಂತ್ರಕ್ಕೆ ದುಪಟ್ಟಾ ಸಿಲುಕಿದ್ದರಿಂದ ಕೆಲಸಗಾರ್ತಿ ರಜನಿ ಖತ್ರಿ ಎಂಬವರು ದುರ್ಮರಣಕ್ಕೀಡಾದರು. ಭೋಜನ ಶಾಲೆ ದೇವಸ್ಥಾನದಿಂದ 500 ಮೀ. ದೂರದಲ್ಲಿದ್ದು, ದೇಗುಲಕ್ಕೆ ಬರುವ ಭಕ್ತರಿಗೆ ಇಲ್ಲಿ ಅನ್ನ ಸಂತರ್ಪಣೆ ನಡೆಸಲಾಗುತ್ತದೆ.

### ಜೈಪುರ ಅನಿಲ ಟ್ಯಾಂಕರ್ ಸ್ಫೋಟ: ಸಾವು 14ಕ್ಕೇರಿಕೆ

**ಜೈಪುರ:** ಜೈಪುರ-ಅಜ್ಮೀರ್ ಹೆದ್ದಾರಿಯಲ್ಲಿ ಅನಿಲ ಟ್ಯಾಂಕರ್ ಸ್ಫೋಟ ಪ್ರಕರಣದಲ್ಲಿ ಸಾವಿಗೀಡಾದವರ ಸಂಖ್ಯೆ 14ಕ್ಕೆ ಏರಿಕೆಯಾಗಿದೆ. ಪೂರ್ಣ ದಹಿಸಿ ಹೋಗಿದ್ದ ಐವರ ಮೃತದೇಹಗಳ ಗುರುತು ಶನಿವಾರ ಪತ್ತೆಯಾಗಿದೆ. ಅವಘಡದಲ್ಲಿ 30ಕ್ಕೂ ಹೆಚ್ಚು ಜನ ಗಾಯಗೊಂಡಿದ್ದು, ಚಿಕಿತ್ಸೆ ನಡೆದಿದೆ. ಹಲವು ಗಾಯಾಳುಗಳ ಸ್ಥಿತಿ ಚಿಂತಾಜನಕವಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಎಸ್ ಎಂಎಸ್ ಆಸ್ಪತ್ರೆಗೆ 27 ಗಾಯಾಳುಗಳು ದಾಖಲಾಗಿದ್ದು, ಇವರಲ್ಲಿ 7 ಮಂದಿ ವೆಂಟಿಲೇಟರ್ ಬೆಂಬಲದಲ್ಲಿದ್ದಾರೆ ಎಂದು ಆಸ್ಪತ್ರೆಯ ಅಧೀಕ್ಷಕ ಸುಶೀಲ್ ಭಾಟಿ ಹೇಳಿದ್ದಾರೆ. ಶುಕ್ರವಾರ ಮುಂಜಾನೆ ಭಂಕ್ರೋಟಾ ಪ್ರದೇಶದಲ್ಲಿ ಅನಿಲ ಟ್ಯಾಂಕರ್ ಅಪಘಾತಕ್ಕೀಡಾಗಿ ಬಳಿಕ ಸ್ಫೋಟಗೊಂಡಿತ್ತು. ಹರಡಿದ ಬೆಂಕಿಯಿಂದ 35ಕ್ಕೂ ಹೆಚ್ಚು ವಾಹನಗಳು ಅಗ್ನಿಗಾಹುತಿಯಾಗಿದ್ದವು.

### ದಲಿತ ವಿದ್ಯಾರ್ಥಿಗೆ ಸ್ಕಾಲರ್‌ಶಿಪ್: ಎಎಪಿ

**ದೆಹಲಿ:** ದೆಹಲಿ ವಿಧಾನಸಭಾ ಚುನಾವಣೆ ಸಮೀಪಿಸುತ್ತಿದ್ದು, ಆಮ್ ಆದ್ಮಿ ಪಕ್ಷದ(ಎಎಪಿ) ರಾಷ್ಟ್ರೀಯ ಸಂಚಾಲಕ ಅರವಿಂದ್ ಕೇಜ್ರಿವಾಲ್ ದಲಿತ ಸಮುದಾಯವನ್ನು ಆಕರ್ಷಿಸುವ ಸಲುವಾಗಿ 'ಡಾ. ಅಂಬೇಡ್ಕರ್ ಸಮ್ಮಾನ್ ವಿದ್ಯಾರ್ಥಿವೇತನ ಯೋಜನೆ' ಘೋಷಿಸಿದ್ದಾರೆ. 2025ರ ಫೆಬ್ರವರಿಯಲ್ಲಿ ನಡೆಯಲಿರುವ ದೆಹಲಿ ವಿಧಾನಸಭೆ ಚುನಾವಣೆಯಲ್ಲಿ ಎಎಪಿ ಗೆಲುವು ಸಾಧಿಸಿದರೆ ದೆಹಲಿ ಸರಕಾರ ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶ ಪಡೆಯುವ ದಲಿತ ವಿದ್ಯಾರ್ಥಿಗಳಿಗೆ ಧನಸಹಾಯ ನೀಡಲಾಗುವುದೆಂದು ಕೇಜ್ರಿವಾಲ್ ಭರವಸೆ ನೀಡಿದರು. ದೆಹಲಿ ವ್ಯಾಪ್ತಿಯ ದಲಿತ ವಿದ್ಯಾರ್ಥಿಗಳು ಹಣದ ಕೊರತೆಯಿಂದ ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ಅಧ್ಯಯನ ನಿಲ್ಲಿಸಬೇಕಾಗಿಲ್ಲ. ಅಂತಹ ವಿದ್ಯಾರ್ಥಿಗಳಿಗೆ ದೆಹಲಿ ಎಎಪಿ ಸರಕಾರ ಅಂಬೇಡ್ಕರ್ ಸಮ್ಮಾನ್ ಸ್ಕಾಲರ್‌ಶಿಪ್ ಯೋಜನೆಯಡಿ ಧನಸಹಾಯ ಮಾಡಲಾಗುವುದು ಎಂದರು. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ರಾಜ್ಯಸಭೆಯಲ್ಲಿ ನೀಡಿದ ಹೇಳಿಕೆಯಿಂದ ಲಕ್ಷಾಂತರ ಅಂಬೇಡ್ಕರ್ ಅನುಯಾಯಿಗಳಿಗೆ ನೋವಾಗಿದೆ.

{ಪೃಥ್ವಿ ಶಾ} ಕ್ರಿಕೆಟ್ ಆಟಗಾರ

ಮುಂಬೈ ಕ್ರಿಕೆಟ್ ಅಸೋಸಿಯೇಷನ್‌ನ ಅಧಿಕಾರಿಯೊಬ್ಬರು ನನಗೆ ಫಿಟ್ನೆಸ್ ಸಮಸ್ಯೆ ಹಾಗೂ ಶಿಸ್ತಿನ ಕೊರತೆ ಇದೆ ಹೇಳಿದ್ದಾರೆ. ಆದರೆ ನನ್ನ ಬಗ್ಗೆ ಸಂಪೂರ್ಣವಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯವಿದ್ದರೆ, ಅದರ ಬಗ್ಗೆ ಮಾತನಾಡಬೇಡಿ. ಅರ್ಧ ಸತ್ಯ ಹೇಳಿದರೆ . ಸಾಕಷ್ಟು ಮಂದಿ ನಂಬುವ ಸಾಧ್ಯತೆ ಇದೆ.

ಪ್ರಧಾನಿ ಮೋದಿಗೆ ಕುವೈತ್ ವಿಶಿಷ್ಟ ಸ್ವಾಗತ | ಕುವೈತ್‌ನ ಅಮೀರ್ ಜತೆ ದ್ವಿಪಕ್ಷೀಯ ಸಭೆ

# 43 ವರ್ಷ ಬಳಿಕ ಭಾರತ ಪ್ರಧಾನಿ ಕುವೈತ್ ಭೇಟಿ

**ದೆಹಲಿ:** ಪ್ರಧಾನಿ ನರೇಂದ್ರ ಮೋದಿ ಅವರ 2 ದಿನಗಳ ಕುವೈತ್ ಪ್ರವಾಸ ಶನಿವಾರ ಆರಂಭಗೊಂಡಿದೆ. ಇದು ಪಶ್ಚಿಮ ಏಷ್ಯಾ ರಾಷ್ಟ್ರ ಕುವೈತ್‌ಗೆ 43 ವರ್ಷಗಳ ಬಳಿಕ ಭಾರತದ ಪ್ರಧಾನಿಯೊಬ್ಬರ ಮೊದಲ ಭೇಟಿಯಾಗಿದೆ. ಈ ಭೇಟಿಯಿಂದ ಭಾರತ-ಕುವೈತ್ ನಡುವಿನ ಬಹುಮುಖಿ ಸಂಬಂಧ ಬಲಪಡಿಸಲು ನೆರವಾಗಲಿದೆ ಎಂದು ಸಚಿವಾಲಯ ತಿಳಿಸಿದೆ.

ಕುವೈತ್‌ನ ಅಮೀರ್, ಶೇಖ್ ಮಿಶಾಲ್ ಅಲ್ ಅಹ್ಮದ್ ಅಲ್ ಜಬೇರ್ ಅಲ್ ಸಬ್ಬಾ ಅವರ ಆಹ್ವಾನದ ಮೇರೆಗೆ ಮೋದಿ ಕುವೈತ್‌ಗೆ ತೆರಳಿದ್ದಾರೆ. ಭೇಟಿ ವೇಳೆ ಮೋದಿ ಅವರು ಅನಿವಾಸಿ ಭಾರತೀಯರ ಜತೆ ಸಂವಾದ ನಡೆಸಿದರು.

ದ್ವಿಪಕ್ಷೀಯ ಸಂಬಂಧ ವೃದ್ಧಿ ಸಲುವಾಗಿ ಮೋದಿ ಕುವೈತ್‌ಗೆ ಭೇಟಿ ನೀಡುತ್ತಿದ್ದು, ಭಾರತದ ಪ್ರಧಾನಿಗೆ ಬಯಾನ್ ಅರಮನೆಯಲ್ಲಿ ಗೌರವ ಸಮರ್ಪಿಸಲಾಗಿದೆ.

ಕುವೈತ್ ಆಡಳಿತದ ಹಿರಿಯ ಪ್ರತಿನಿಧಿಗಳು ಕುವೈತ್ ರಾಜಧಾನಿಯ ವಿಮಾನ ನಿಲ್ದಾಣದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಸ್ವಾಗತಿಸಿದರು

'ಹಾಲಾ ಮೋದಿ ಮೆಗಾ ಡಯಾಸ್ಪೊರಾ' ಕಾರ್ಯಕ್ರಮದಲ್ಲಿ 5,000 ಮಂದಿ ಭಾಗವಹಿಸಲಿದ್ದಾರೆ. ಕುವೈತ್‌ನಲ್ಲಿ ಸದ್ಯ 10 ಲಕ್ಷ ಭಾರತೀಯರು ನೆಲೆಸಿದ್ದಾರೆ. ಅದೇ ಕಾರಣಕ್ಕಾಗಿ ಅಲ್ಲಿರುವ ಭಾರತ ಮೂಲದ ಕಾರ್ಮಿಕ ಸಮುದಾಯದವರನ್ನೂ ಭೇಟಿ ಮಾಡಲಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

> **2 ದಿನಗಳ ಭೇಟಿಗೆ ಕುವೈತ್‌ಗೆ ತೆರಳುತ್ತಿರುವೆ. ಈಗಿನ ಭೇಟಿಯಿಂದ ಕುವೈತ್‌ನೊಂದಿಗಿನ ಭಾರತದ ಐತಿಹಾಸಿಕ ಸಂಬಂಧ ಇನ್ನಷ್ಟು ಗಾಢವಾಗುತ್ತದೆ. ಕುವೈತ್‌ನ ಕ್ರೌನ್ ಪ್ರಿನ್ಸ್ ಮತ್ತು ಪ್ರಧಾನಿ ಅಮೀರ್ ಅವರನ್ನು ಭೇಟಿ ಮಾಡುತ್ತಿದ್ದೇನೆ. ಕುವೈತ್‌ನಲ್ಲಿರುವ ಅನಿವಾಸಿ ಭಾರತೀಯರ ಜತೆಗೂ ಸಂವಾದ ನಡೆಸಲಿದ್ದೇನೆ. ಅರೇಬಿಯನ್ ಗಲ್ಫ್ ಕಪ್ ಉದ್ಘಾಟನಾ ಸಮಾರಂಭದಲ್ಲಿಯೂ ಭಾಗವಹಿಸುತ್ತಿರುವೆ.**
> -ನರೇಂದ್ರ ಮೋದಿ ಪ್ರಧಾನಿ

## ಅರೇಬಿಕ್ ರಾಮಾಯಣ, ಮಹಾಭಾರತ ಪುಸ್ತಕಕ್ಕೆ ಮೋದಿ ಸಹಿ

**ಅಲ್ ಅಸೀಮಾ ಗವರ್ನೇಟ್:** ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಬೆಳಗ್ಗೆ 11.30ರ ವೇಳೆಗೆ ಕುವೈತ್ ರಾಜಧಾನಿ ಅಲ್ ಅಸೀಮಾ ಗವರ್ನೇಟ್ ನಗರದ ವಿಮಾನ ನಿಲ್ದಾಣದಲ್ಲಿ ಬಂದಿಳಿಯುವ ಮೂಲಕ 2 ದಿನಗಳ ಕುವೈತ್ ಪ್ರವಾಸ ಆರಂಭಿಸಿದರು. ಕುವೈತ್‌ನ ಎಮಿರ್ ಶೇಖ್ ಮೆಶಾಲ್ ಅಲ್-ಅಹ್ಮದ್ ಅಲ್-ಜಾಬರ್ ಅಲ್-ಸಬಾಹ್ ಅವರ ಆಹ್ವಾನದ ಮೇರೆಗೆ ಪ್ರಧಾನಿ ಮೋದಿ ಕುವೈತ್‌ಗೆ ಭೇಟಿ ನೀಡಿದ್ದಾರೆ.

ವಿಮಾನ ನಿಲ್ದಾಣದಲ್ಲಿ ಅಪಾರ ಸಂಖ್ಯೆಯಲ್ಲಿ ನೆರೆದಿದ್ದ ಅನಿವಾಸಿ ಭಾರತೀಯರು ಪ್ರಧಾನಿ ಮೋದಿ ಅವರಿಗೆ ಸಾಂಪ್ರದಾಯಿಕ ಸ್ವಾಗತ ಕೋರಿದರು. ಕೇರಳದ ಮೋಹಿನಿ ಆಟ್ಟಂ ವೇಷ ಧರಿಸಿದ್ದ ಕಲಾವಿದರೊಬ್ಬರು ಪ್ರಧಾನಿಗೆ ಸ್ವಾಗತ ಕೋರಿದರು. ಇದೇ ವೇಳೆ ಕುವೈತ್‌ನ ಅಬ್ದುಲ್ಲಾ ಅಲ್ ಬರೌನ್ ಮತ್ತು ಅಬ್ದುಲ್ ಲತೀಫ್ ಅಲ್ ನೆಸೆಫ್ ಎಂಬವರು ಅರೇಬಿಕ್ ಭಾಷೆಯಲ್ಲಿ ಮುದ್ರಿಸಿದ ಭಾರತದ ಧಾರ್ಮಿಕ ಗ್ರಂಥಗಳಾದ ರಾಮಾಯಣ ಮತ್ತು ಮಹಾಭಾರತ ಕೃತಿಗಳನ್ನು ಮೋದಿ ಅವರಿಗೆ ತೋರಿಸಿ ಎರಡೂ ಕೃತಿಗಳಿಗೆ ಮೋದಿ ಅವರಿಂದ ಸಹಿ ಪಡೆದುಕೊಂಡರು. ಕುವೈತ್‌ನ ಪುಸ್ತಕ ಪ್ರಕಾಶಕರಾದ ಇಬ್ರಾಹಿಂ ಎಂಬವರು ರಾಮಾಯಣ ಮತ್ತು ಮಹಾಭಾರತ ಗ್ರಂಥಗಳನ್ನು ಅರೇಬಿಕ್ ಭಾಷೆಗೆ ಅನುವಾದಿಸಿ ಪ್ರಕಟಿಸಿದ್ದಾರೆ. ಎರಡೂ ಗ್ರಂಥಗಳನ್ನು ಅರೇಬಿಕ್ ಭಾಷೆಗೆ ಅನುವಾದಿಸಲು 2 ವರ್ಷಗಳೇ ಬೇಕಾಯಿತು. ಅನುವಾದ ಕಾರ್ಯದಿಂದಾಗಿ ಭಾರತದ ಸಂಸ್ಕೃತಿಯ ಜ್ಞಾನ ತಿಳಿಯಲು ಬಹಳ ಸಹಕಾರಿಯಾಯಿತು ಎಂದು ಇಬ್ರಾಹಿಂ ಹೇಳಿದ್ದಾರೆ.

ಇದೇ ವೇಳೆ, ಮೋದಿ ಅವರು ವಿಮಾನ ನಿಲ್ದಾಣದಲ್ಲಿ ತಮಗಾಗಿ ಕಾದಿದ್ದ ಭಾರತದ ಮಾಜಿ ವಿದೇಶಾಂಗ ಸೇವೆಗಳ (ಐಎಫ್‌ಎಸ್) ಅಧಿಕಾರಿ, 101 ವರ್ಷದ ಹಿರಿಯ ಮಂಗಲ್ ಸೈನ್ ಹಂಡ ಅವರನ್ನು ಭೇಟಿ ಮಾಡಿ ಹಸ್ತಲಾಘವ ನೀಡಿ ಕುಶಲ ವಿಚಾರಿಸಿದರು.

## ಉಕ್ರೇನ್ 8 ಡ್ರೋನ್ ದಾಳಿ; ರಷ್ಯಾದ 3 ಕಟ್ಟಡಗಳಿಗೆ ಹಾನಿ

**ಕೀವ್:** ಕ್ಷಿಪಣಿ ದಾಳಿ ನಡೆಸಿದ್ದ ರಷ್ಯಾಗೆ ಡ್ರೋಣ್ ದಾಳಿ ಮೂಲಕ ಉಕ್ರೇನ್ ತಿರುಗೇಟು ಕೊಟ್ಟಿದೆ.

ರಷ್ಯಾದ ಕಜಾನ್ ನಗರದ 3 ಬೃಹತ್ ಕಟ್ಟಡಗಳ ಮೇಲೆ ಉಕ್ರೇನ್‌ನ 8 ಸ್ಫೋಟಕ ಡ್ರೋನ್‌ಗಳಿಂದ ಶನಿವಾರ ದಾಳಿ ನಡೆದಿದ್ದು, ಕಜಾನ್ ಜನತೆ ಬೆಚ್ಚಿ ಬಿದ್ದಿದ್ದಾರೆ. ಯಾವುದೇ ಸಾವು-ನೋವು ಸದ್ಯ ವರದಿಯಾಗಿಲ್ಲ. ಕಟ್ಟಡಗಳಲ್ಲಿದ್ದ ಜನರನ್ನು ತಕ್ಷಣ ಸ್ಥಳಾಂತರಿಸಿ ಸುರಕ್ಷಿತ ಸ್ಥಳಕ್ಕೆ ಕರೆದೊಯ್ಯಲಾಗಿದೆ. ಆದರೆ, ಮೂರೂ ಕಟ್ಟಡಗಳಿಗೆ ಭಾರಿ ಹಾನಿಯಾಗಿದೆ. ಉಕ್ರೇನ್ ಡ್ರೋನ್‌ಗಳ ದಾಳಿಯನ್ನು ಅಮೆರಿಕದ ಅವಳಿ ಗೋಪುರಗಳ ಮೇಲೆ ನಡೆದಿದ್ದ 9/11 ದಾಳಿಗೆ ಹೋಲಿಸಲಾಗಿದೆ.

ದಾಳಿ ಬಳಿಕ ಎಚ್ಚೆತ್ತ ರಷ್ಯಾ ಆಡಳಿತ ಕಜಾನ್‌ನಲ್ಲಿನ ವಿಮಾನ ನಿಲ್ದಾಣದ ಕಾರ್ಯಾಚರಣೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದೆ. ಜತೆಗೆ ಪಕ್ಕದ ನಗರ ಇಝೆವಸ್ಕ್‌ನಲ್ಲಿನ ವಿಮಾನ ನಿಲ್ದಾಣದಲ್ಲಿ ಹಲವು ನಿರ್ಬಂಧಗಳನ್ನು ಜಾರಿಗೊಳಿಸಲಾಗಿದೆ. ಮಾಸ್ಕೋದ ಪೂರ್ವಕ್ಕೆ 800 ಕೀಮೀ

ದೂರದಲ್ಲಿರುವ ಕಜಾನ್ ನಗರದಲ್ಲಿ ಇತ್ತೀಚೆಗೆ ಬ್ರಿಕ್ಸ್ ಶೃಂಗಸಭೆ ನಡೆದಿತ್ತು. ಪ್ರಧಾನಿ ಮೋದಿ ಸೇರಿದಂತೆ 5 ಬ್ರಿಕ್ಸ್ ದೇಶಗಳ ನಾಯಕರು ಭಾಗಿಯಾಗಿದ್ದರು ಎಂಬುದು ಉಲ್ಲೇಖಾರ್ಹ.

ಶತ್ರುಗಳ ವಾಯುದಾಳಿಗೆ ಪ್ರತಿದಾಳಿ ನಡೆಸುವ ರಷ್ಯಾದ ಆಕಾಶ ರಕ್ಷಣಾ ವ್ಯವಸ್ಥೆಯು ಕಜಾನ್ ನಗರದ ಮೇಲಿನ ಡ್ರೋನ್‌ಗಳ ದಾಳಿಯಲ್ಲಿ ಕೆಲವು ಡ್ರೋನ್‌ಗಳನ್ನು ಹೊಡೆದುರುಳಿಸಿದೆ. ಹಾಗಿದ್ದೂ, ಕೆಲವು ಡ್ರೋನ್‌ಗಳು ಆ ಪ್ರತಿಬಂಧಕ ವ್ಯವಸ್ಥೆಯನ್ನೂ ಭೇದಿಸಿ 3 ಕಟ್ಟಡಗಳ ಮೇಲೆ ದಾಳಿ ನಡೆಸಿವೆ ಎನ್ನಲಾಗಿದೆ.

ದೆಹಲಿ ಲೆ.ಗ. ವಿ.ಕೆ.ಸಕ್ಸೇನಾ ಅನುಮತಿ

## ದೆಹಲಿ ಅಬಕಾರಿ ನೀತಿ ವಿವಾದ: ಕೇಜ್ರಿ ವಿರುದ್ಧ ಕೇಸ್‌ಗೆ ಸಮ್ಮತಿ

**ದೆಹಲಿ:** ಆಮ್ ಆದ್ಮಿ ಪಕ್ಷ(ಎಎಪಿ) ರಾಷ್ಟ್ರೀಯ ಸಂಚಾಲಕ, ದೆಹಲಿಯ ಮಾಜಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್‌ಗೆ ಕಾನೂನು ಸಮಸ್ಯೆಗಳ ಸಂಕಷ್ಟ ಸದ್ಯಕ್ಕೆ ಕೊನೆಗೊಳ್ಳುವಂತೆ ಕಾಣುತ್ತಿಲ್ಲ.

ದೆಹಲಿ ವಿಧಾನಸಭೆಗೆ ಚುನಾವಣೆ ಸಮೀಪಿಸಿರುವಾಗಲೇ ಕೇಜ್ರಿವಾಲ್ ಸುತ್ತ ಮತ್ತೊಂದು ಕೋರ್ಟ್ ಕೇಸ್ ಸುತ್ತಿಕೊಳ್ಳುತ್ತಿದೆ.

ಕೇಜ್ರಿವಾಲ್ ಆಡಳಿತಾವಧಿಯಲ್ಲಿನ ವಿವಾದಿತ ಅಬಕಾರಿ ನೀತಿಗೆ ಸಂಬಂಧಿಸಿದ ಮತ್ತೊಂದು ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಹೊಸದಾಗಿ ಕೇಸು ದಾಖಲಿಸಲು ಜಾರಿ ನಿರ್ದೇಶನಾಲಯಕ್ಕೆ(ಇ.ಡಿ) ದೆಹಲಿ ಲೆಫ್ಟಿನೆಂಟ್ ಗವರ್ನರ್ ವಿನಯ್ ಕುಮಾರ್ ಸಕ್ಸೇನಾ ಅನುಮೋದನೆ ನೀಡಿದ್ದಾರೆ.

ಕೇಜ್ರಿವಾಲ್ ವಿರುದ್ಧ ಕಾನೂನು ಕ್ರಮ ಜರುಗಿಸುವುದಕ್ಕೆ ಲೆ.ಗವರ್ನರ್ ಅನುಮತಿ ಕೋರಿ ಡಿ.5ರಂದು ಜಾರಿ ನಿರ್ದೇಶನಾಲಯ ಮನವಿ ಮಾಡಿತ್ತು. ಇದೀಗ ವಿ.ಕೆ.ಸಕ್ಸೇನಾ ಅನುಮತಿ ನೀಡಿದ್ದಾರೆಂದು ವರದಿಗಳು ತಿಳಿಸಿವೆ.

**ಈವರೆಗೆ:** ಕೇಜ್ರಿವಾಲ್ ವಿರುದ್ಧ ಇ.ಡಿ ಈ ಮೊದಲೇ ಅಕ್ರಮ ಹಣ ವರ್ಗಾವಣೆ ತಡೆ(ಪಿಎಂಎಲ್‌ಎ) ಕಾಯಿದೆಯಡಿ ಒಂದು ಪ್ರಕರಣ ದಾಖಲಿಸಿ ಇದೇ ವರ್ಷದ ಮಾ.21ರಂದು ಬಂಧಿಸಿತ್ತು. ಅದರಲ್ಲಿ ಜಾಮೀನು ಸಹ ಸಿಕ್ಕಿತು. ಇನ್ನೇನು ಬಿಡುಗಡೆಯಾಗಲಿದ್ದಾರೆ ಎಂದುಕೊಂಡಿರುವಾಗಲೇ ಕೇಂದ್ರ ತನಿಖಾ ದಳ(ಸಿಬಿಐ) ಭ್ರಷ್ಟಾಚಾರ ಪ್ರಕರಣ ದಾಖಲಿಸಿತು. ಕೇಜ್ರಿವಾಲ್ ಇ.ಡಿ ಕೇಸ್‌ನಲ್ಲಿ ಜೈಲಿನಲ್ಲಿರುವಾಗಲೇ ಸಿಬಿಐ ಬಂಧಿಸಿತು. ಹಲವು ತಿಂಗಳ ಕಾನೂನು ಹೋರಾಟ ಬಳಿಕ ಕಡೆಗೂ ಸುಪ್ರೀಂ ಕೋರ್ಟ್‌ನಲ್ಲಿ ಕೇಜ್ರಿವಾಲ್‌ಗೆ ಜಾಮೀನು ಸಿಕ್ಕಿದ್ದು, ಸೆಪ್ಟೆಂಬರ್‌ನಲ್ಲಿ ಜೈಲಿನಿಂದ ಹೊರಬಂದರು. ಆ ಬಳಿಕ ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಿ ಆತಿಷಿ ಅವರನ್ನು ಸಿಎಂ ಪಟ್ಟದಲ್ಲಿ ಕೂರಿಸಿದರು. 2025ರಲ್ಲಿ ವಿಧಾನಸಭೆ ಚುನಾವಣೆಯಲ್ಲಿ ಗೆದ್ದ ಬಳಿಕವೇ ಮರಳಿ ಸಿಎಂ ಆಗುವೆ ಎಂದು ಶಪಥ ತೊಟ್ಟಿದ್ದಾರೆ.

ಜೈಸಲ್ಮೇರ್‌ನಲ್ಲಿನ 55ನೇ ಜಿಎಸ್‌ಟಿ ಸಮಿತಿ ಸಭೆ ನಿರ್ಧಾರ | ಆಹಾರ ಸರಬರಾಜು ಆಪ್ ಸೇವೆ ಸದ್ಯಕ್ಕೆ ಚರ್ಚೆಗೆ ಸೀಮಿತ

## ಜೀನ್ಸ್ ಥೆರಪಿ ಸೇವೆಗಿನ್ನು ಜಿಎಸ್‌ಟಿ ಇಲ್ಲ

**ಜೈಸಲ್ಮೇರ್:** ಸರಕು ಮತ್ತು ಸೇವೆಗಳ ತೆರಿಗೆ(ಜಿಎಸ್‌ಟಿ)ಗೆ ಸಂಬಂಧಿಸಿದ, ಸಮಿತಿಯ 55ನೇ ಸಭೆ, ರಾಜಸ್ಥಾನದ ಜೈಸಲ್ಮೇರ್ ನಗರದಲ್ಲಿ ಶನಿವಾರ ನಡೆದಿದ್ದು, ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸಭೆಯ ನೇತೃತ್ವ ವಹಿಸಿದ್ದರು.

ಬಳಿಕ ಸುದ್ದಿಗೋಷ್ಠಿ ನಡೆಸಿದ ಸಚಿವೆ, ಜೀನ್ಸ್ ಥೆರಪಿ ಸೇವೆಯನ್ನು ತೆರಿಗೆ ವ್ಯಾಪ್ತಿಯಿಂದ ಕೈಬಿಡಲು ಸಭೆಯಲ್ಲಿ ನಿರ್ಧರಿಸಲಾಗಿದೆ. ಇದರಿಂದ ಆರೋಗ್ಯ ರಕ್ಷಣಾ ಕ್ಷೇತ್ರಕ್ಕೆ ಮತ್ತು ರೋಗಿಗಳ ಕಡೆಯವರಿಗೆ ಅನುಕೂಲವಾಗಲಿದೆ ಎಂದರು.

ಆಹಾರ ತಿನಿಸುಗಳನ್ನು ಮನೆಗೆ ತಲುಪಿಸುವ ಕ್ಷೇತ್ರದಲ್ಲಿ ಬಳಕೆಯಾಗುತ್ತಿರುವ ಮೊಬೈಲ್ ಆಪ್‌ಗಳ ಸೇವೆಯನ್ನೂ ಜಿಎಸ್‌ಟಿ ವ್ಯಾಪ್ತಿಗೆ ತಂದು ಶೇ.5ರಷ್ಟು ತೆರಿಗೆ ವಿಧಿಸುವ ವಿಚಾರವಾಗಿ ಫಿಟ್‌ಮೆಂಟ್ ಸಮಿತಿ ಜತೆ ಚರ್ಚಿಸಿ ನಿರ್ಧಾರ ಮಾಡಲಾಗುವುದು. ಏಕೆಂದರೆ ಆಹಾರ ಸರಬರಾಜು ಸೇವೆ ಹಲವು ಕೈಗಳನ್ನು ಒಳಗೊಂಡ ಸೇವೆಯಾಗಿದೆ. ಹಾಗಾಗಿ ಚರ್ಚೆ ಅಗತ್ಯ ಎಂದು ಸಿಬಿಐಸಿ ಅಧ್ಯಕ್ಷ ಸಂಜಯ್ ಕುಮಾರ್ ಅಗರ್ವಾಲ್ ಹೇಳಿದರು. ಆನ್‌ಲೈನ್ ಗೇಮಿಂಗ್ ಬಗೆಗೂ ಜಿಎಸ್‌ಟಿ ಕೌನ್ಸಿಲ್ ಸಭೆಯಲ್ಲಿ ಚರ್ಚೆ ಮಾಡಲಾಗಿಲ್ಲ, ಆ ವಿಚಾರವೇ ಸಭೆಯಲ್ಲಿ ಪ್ರಸ್ತಾಪವಾಗಲಿಲ್ಲ ಎಂದು ನಿರ್ಮಲಾ ಸೀತಾರಾಮನ್ ತಿಳಿಸಿದರು.

ಸಭೆಯಲ್ಲಿ ಆರೋಗ್ಯ ವಿಮೆ, ಜೀವ ವಿಮೆ ಕಂತುಗಳ ಮೇಲಿನ ತೆರಿಗೆಗೆ ವಿನಾಯಿತಿ ನೀಡಬೇಕೆಂಬ ವಿಚಾರವೇನೋ ಸಚಿವರುಗಳ ಸಭೆಯಲ್ಲಿ ಚರ್ಚೆಯಾಯಿತು. ಆದರೆ, ಸಚಿವರುಗಳ ಮಟ್ಟದಲ್ಲಿಯೇ ಭಿನ್ನ ಅಭಿಪ್ರಾಯಗಳು ಬಂದಿದ್ದರಿಂದ ಯಾವುದೇ ನಿರ್ಧಾರ ಕೈಗೊಳ್ಳಲು ಆಗಲಿಲ್ಲ. ಭಾರತೀಯ ವಿಮಾ ನಿಯಂತ್ರಣ ಪ್ರಾಧಿಕಾರ(ಐಆರ್‌ಡಿಎಐ)ನಿಂದ ಇನ್ನಷ್ಟು ಮಾಹಿತಿ ಪಡೆದ ಬಳಿಕ ನಿರ್ಧರಿಸುವುದೆಂದು ವಿಷಯವನ್ನು ಮುಂದೂಡಲಾಗಿದೆ. ಆದರೆ, ಇದಕ್ಕೆ ಯಾವುದೇ ಸಮಯ ಮಿತಿ ವಿಧಿಸಲಾಗಿಲ್ಲ ಎಂದರು.

ವಿದ್ಯುಚ್ಛಕ್ತಿ ಚಾಲಿತ ಹೊಸ ವಾಹನಗಳ (ಇ.ವಿ) ಮೇಲೆ ಸದ್ಯ ಶೇ.5ರಷ್ಟು ಜಿಎಸ್‌ಟಿ ವಿಧಿಸಲಾಗುತ್ತಿದೆ. ಹಳೆಯ ಇ.ವಿ.ಗಳನ್ನು ಮಾಲೀಕರು ಮಾರಾಟ ಮಾಡಿದಾಗ ತೆರಿಗೆ ವಿಧಿಸುತ್ತಿಲ್ಲ. ಆದರೆ, ಹಳೆಯ ಇ.ವಿ., ಪೆಟ್ರೋಲ್, ಡೀಸೆಲ್ ವಾಹನಗಳ ಮಾರಾಟವನ್ನು ಕಂಪನಿಗಳ ನಡೆಸಿದರೆ ಜಿಎಸ್‌ಟಿ ವಿಧಿಸಲಾಗುತ್ತಿದೆ. ಆ ತೆರಿಗೆ ಇನ್ನು ಮುಂದೆ ಶೇ.18ಕ್ಕೆ ಏರಿಕೆ ಮಾಡಲು ಜಿಎಸ್‌ಟಿ ಸಮಿತಿ ಸಭೆ ನಿರ್ಧಾರ ಕೈಗೊಂಡಿದೆ ಎಂದು ಸಚಿವೆ ನಿರ್ಮಲಾ ಸೀತಾರಾಮನ್ ವಿವರಿಸಿದರು. ದೇಶದಲ್ಲಿ ಪ್ರಾಕೃತಿಕ ವಿಕೋಪ ಘಟನೆಗಳು ಹೆಚ್ಚಿವೆ. ಅದರಿಂದ ಹಾನಿ ಅನುಭವಿಸಿದ ರಾಜ್ಯಗಳಿಗೆ ಹೆಚ್ಚಿನ ಪರಿಹಾರ ಮೊತ್ತ ಸಿಗಬೇಕಿದೆ. ಹಾಗಾಗಿ ಈಗಿರುವ ಜಿಎಸ್‌ಟಿಯಲ್ಲಿನ ಕೆಲವು ಸೇವೆ ಮತ್ತು ಸರಕುಗಳ ಮೇಲೆ ಶೇ.1ರಷ್ಟು ಕ್ಯಾಲಮಿಟಿ ಸೆಸ್(ಪ್ರಾಕೃತಿಕ ವಿಕೋಪ ಹೆಚ್ಚುವರಿ ತೆರಿಗೆ) ವಿಧಿಸುವ ಬಗ್ಗೆ ಹಾಗೂ ಅದರ ಪ್ರಕ್ರಿಯೆಗಳ ಬಗ್ಗೆ ಚರ್ಚೆ ನಡೆಸಲಾಗಿದೆ. ಈ ವಿಚಾರದಲ್ಲಿ ಆಳವಾಗಿ ಚರ್ಚಿಸಿ ನಿರ್ಧಾರ ಕೈಗೊಳ್ಳಲು ರಾಜ್ಯಗಳ ಹಣಕಾಸು ಸಚಿವರನ್ನು ಒಳಗೊಂಡ ಸಮಿತಿ ರಚಿಸಲು ನಿರ್ಧರಿಸಲಾಗಿದೆ.

> ### ಎಟಿಎಫ್‌ಗೆ ತೆರಿಗೆ; ರಾಜ್ಯಗಳ ವಿರೋಧ
> **ಏವಿಯೇಷನ್ ಟರ್ಬೈನ್ ಫ್ಯುಯೆಲ್ (ಎಟಿಎಫ್-ವಿಮಾನ ಇಂಧನ) ಅನ್ನು ಜಿಎಸ್‌ಟಿ ವ್ಯಾಪ್ತಿಗೆ ಸೇರ್ಪಡೆಗೊಳಿಸುವ ವಿಚಾರದಲ್ಲಿ ರಾಜ್ಯ ಸರಕಾರಗಳಿಂದ ಸಭೆಯಲ್ಲಿ ತೀವ್ರ ವಿರೋಧ ವ್ಯಕ್ತವಾಯಿತು. ಹಾಗಾಗಿ 'ಎಟಿಎಫ್'ಗೆ ತೆರಿಗೆ ಒಳಪಡಿಸುವ ಬಗ್ಗೆ ಈ ಸಭೆಯಲ್ಲಿ ಯಾವುದೇ ನಿರ್ಧಾರ ಕೈಗೊಳ್ಳಲಾಗಿಲ್ಲ. ಮುಂಬರುವ ಸಭೆಗಳಲ್ಲಿ ಚರ್ಚಿಸಿ ನಿರ್ಧಾರ ಕೈಗೊಳ್ಳಲಾಗುವುದು ಎಂದು ಸುದ್ದಿಗಾರರ ಪ್ರಶ್ನೆಗೆ ಸಚಿವೆ ನಿರ್ಮಲಾ ಸೀತಾಮನ್ ಉತ್ತರಿಸಿದರು. ಸದ್ಯ ಎಟಿಎಫ್ ಜಿಎಸ್‌ಟಿಯಿಂದ ಹೊರಗಿದೆ. ಆದರೆ, ಅದಕ್ಕೆ ಕೇಂದ್ರ ಸರಕಾರದ ಶೇ.11ರಷ್ಟು ಅಬಕಾರಿ ಸುಂಕ ಮತ್ತು ರಾಜ್ಯಗಳಲ್ಲಿನ ಬೇರೆ ಬೇರೆ ದರದಲ್ಲಿ ವ್ಯಾಟ್ ಮಾತ್ರ ವಿಧಿಸಲಾಗುತ್ತಿದೆ. ಇಂಧನ ತೈಲಗಳಾದ ಪೆಟ್ರೋಲ್, ಡೀಸೆಲ್, ಕಚ್ಚಾ ತೈಲ, ನೈಸಗಿಕ ಅನಿಲ ಮತ್ತು ಎಟಿಎಫ್ ಜಿಎಸ್‌ಟಿ ವ್ಯಾಪ್ತಿಯಿಂದ ಹೊರಗೆ ಇವೆ.**

ಡಿ. 26ರಿಂದ ಮೆಲ್ಬರ್ನ್ ಟೆಸ್ಟ್ | ಭಾರತ ತಂಡಕ್ಕೆ ಆಘಾತ

## 4ನೇ ಟೆಸ್ಟ್‌ಗೆ ಕೆ. ಎಲ್. ರಾಹುಲ್ ಅನುಮಾನ

**ಮೆಲ್ಬರ್ನ್:** ಮೂರನೇ ಬಾರಿಗೆ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್ ಪ್ರವೇಶಿಸಬೇಕಿದ್ದರೆ ರೋಹಿತ್ ಶರ್ಮ ಪಡೆಗೆ ಮೆಲ್ಬರ್ನ್ ಕ್ರಿಕೆಟ್ ಟೆಸ್ಟ್ ಅತ್ಯಂತ ಮಹತ್ವದ್ದಾಗಿದೆ. ಆದರೆ ಈ ಪಂದ್ಯಕ್ಕೂ ಮುನ್ನವೇ ಭಾರತಕ್ಕೆ ಆತಂಕವೊಂದು ಎದುರಾಗಿದೆ. ಶನಿವಾರ ನೆಟ್ಸ್‌ನಲ್ಲಿ ಬ್ಯಾಟಿಂಗ್ ಅಭ್ಯಾಸ ನಡೆಸುವ ವೇಳೆ ಕೆ.ಎಲ್. ರಾಹುಲ್ ತನ್ನ ಕೈಗೆ ಗಾಯ ಮಾಡಿಕೊಂಡಿದ್ದಾರೆ.

ಅಭ್ಯಾಸ ನಡೆಸುತ್ತಿದ್ದ ವೇಳೆ ಚೆಂಡು ರಾಹುಲ್ ಅವರ ಎಡಗೈಗೆ ಬಡಿದು ಅವರು ನೋವಿನಿಂದ ನರಳಿದ್ದಾರೆ. ಗಾಯಗೊಂಡ ರಾಹುಲ್ ಅವರನ್ನು ತಕ್ಷಣ ಫಿಸಿಯೊಗಳು ಪರೀಕ್ಷೆ ಮಾಡಿ ಗಾಯಕ್ಕೆ ಚಿಕಿತ್ಸೆ ನೀಡಿದ್ದಾರೆ. ಸದ್ಯ ರಾಹುಲ್ ಗಾಯದ ಬಗ್ಗೆ ಯಾವುದೇ ಅಪ್‌ಡೇಟ್ ಹೊರಬಿದ್ದಿಲ್ಲ. ಆಸೀಸ್ ವಿರುದ್ಧ ನಡೆದಿರುವ ಮೂರು ಪಂದ್ಯಗಳಲ್ಲಿಯೂ ಭಾರತ ಪರ ಶ್ರೇಷ್ಠ ಪ್ರದರ್ಶನ ತೋರಿದ್ದು ಕೆ.ಎಲ್ ರಾಹುಲ್ ಮಾತ್ರ, ಆದರೆ ಇದೀಗ ಅವರಿಗೆ ಗಾಯಗೊಂಡಿರುವುದು ತಂಡಕ್ಕೆ ಆತಂಕ ಉಂಟುಮಾಡಿದೆ.

ಶನಿವಾರ ಟೀಮ್ ಇಂಡಿಯಾದ ಎಲ್ಲ ಆಟಗಾರರು ಹೆಚ್ಚುವರಿ ಬ್ಯಾಟಿಂಗ್ ಅಭ್ಯಾಸ ನಡೆಸಿದರು. ವಿರಾಟ್ ಕೊಹ್ಲಿ, ರೋಹಿತ್ ಶರ್ಮ ನೆಟ್ಸ್‌ನಲ್ಲಿ ಅಭ್ಯಾಸ ನಡೆಸಿದ ವಿಡಿಯೊಗಳು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ನಾಲ್ಕನೇ ಪಂದ್ಯ ಡಿ.26ರಂದು ನಡೆಯಲಿದೆ. ಈ ಬಾರಿಯ ಭಾರತ ಮತ್ತು ಆಸೀಸ್ ಪಂದ್ಯದ ಮೊದಲ ದಿನದಾಟದ ಟಿಕೆಟ್‌ಗಳೆಲ್ಲ ಈಗಾಗಲೇ ಸೋಲ್ಡ್ ಔಟ್ ಆಗಿದೆ ಎಂದು ಕ್ರಿಕೆಟ್ ಆಸ್ಟ್ರೇಲಿಯಾ ತಿಳಿಸಿದೆ.

ಭಾರತ ತಂಡ ಇದುವರೆಗೂ 17 ಬಾಕ್ಸಿಂಗ್ ಡೇ ಟೆಸ್ಟ್ ಪಂದ್ಯಗಳನ್ನು ಆಡಿದೆ. ಇದರಲ್ಲಿ ಗೆದ್ದಿದ್ದು 4 ಕೇವಲ ಪಂದ್ಯಗಳನ್ನು ಮಾತ್ರ. ಕೊನೆಯ ಬಾರಿ ಭಾರತ ಬಾಕ್ಸಿಂಗ್ ಡೇ ಟೆಸ್ಟ್ ಗೆಲುವು ಸಾಧಿಸಿದ್ದು 2021ರಲ್ಲಿ. ಸೆಂಚುರಿಯನ್‌ನಲ್ಲಿ ನಡೆದಿದ್ದ ದಕ್ಷಿಣ ಆಫ್ರಿಕಾ ವಿರುದ್ಧದ ಆ ಪಂದ್ಯದಲ್ಲಿ ಭಾರತ ತಂಡಕ್ಕೆ 113 ರನ್‌ಗಳ ಗೆಲುವು ಒಲಿದಿತ್ತು.

## ಮ.ಪ್ರ ಅಗ್ನಿ ಅವಘಡ: ನಾಲ್ವರು ಸಜೀವ ದಹನ

**ದೇವಾಸ್:** ಮಧ್ಯಪ್ರದೇಶದ ದೇವಾಸ್ ಜಿಲ್ಲೆಯ ನಯಾಪುರ ಪ್ರದೇಶದ ಮೂರು ಅಂತಸ್ತಿನ ಕಟ್ಟಡದ ಮನೆಯೊಂದರಲ್ಲಿ ಶನಿವಾರ ಮುಂಜಾನೆ ಅಗ್ನಿ ಅವಘಡವಾಗಿದ್ದು, ಒಂದೇ ಕುಟುಂಬದ ನಾಲ್ವರು ಸಜೀವ ದಹನವಾಗಿದ್ದಾರೆ. ಬೆಂಕಿ ಹೊತ್ತಿದ ಸ್ವಲ್ಪ ಸಮಯಕ್ಕೆಲ್ಲಾ ಬೆಂಕಿಯ ಕೆನ್ನಾಲಿಗೆ ಪೂರ್ಣ ಕಟ್ಟಡವನ್ನು ಆವರಿಸಿದೆ. ಬಳಿಕ ಮನೆಯಲ್ಲಿರಿಸಿದ್ದ ಸಿಲಿಂಡರ್ ಕೂಡ ಸ್ಫೋಟಗೊಂಡಿದೆ. ಸ್ಫೋಟದ ಸದ್ದು ಇಡೀ ಪ್ರದೇಶದಲ್ಲಿ ಪ್ರತಿಧ್ವನಿಸಿದೆ. ಸದ್ದು ಕೇಳಿ ಅಕ್ಕಪಕ್ಕದವರು ಎಚ್ಚರಗೊಂಡು ಅಗ್ನಿಶಾಮಕ ದಳಕ್ಕೆ ಮಾಹಿತಿ ನೀಡಿದ್ದಾರೆ. 3 ಗಂಟೆಗಳ ಪ್ರಯತ್ನದ ಬಳಿಕ ಬೆಂಕಿ ನಂದಿಸಲಾಗಿದೆ. ಆದರೆ, ಅಷ್ಟರಲ್ಲಾಗಲೇ ಮನೆಯಲ್ಲಿದ್ದ ನಾಲ್ವರು ಜೀವಂತ ದಹಿಸಿಹೋಗಿದ್ದಾರೆ. ಮೃತರನ್ನು ದಿನೇಶ್ ಕಾರ್ಪೆಂಟರ್(35), ಗಾಯತ್ರಿ ಕಾರ್ಪೆಂಟರ್(30), ಇಶಿಕಾ (10) ಮತ್ತು ಚಿರಾಗ್ (7) ಎಂದು ಗುರುತಿಸಲಾಗಿದೆ. ದಿನೇಶ್ ಕಟ್ಟಡದ ನೆಲ ಮಹಡಿಯಲ್ಲಿ ಡೈರಿ ನಡೆಸುತ್ತಾ 2ನೇ ಮಹಡಿಯಲ್ಲಿ ವಾಸವಿದ್ದರು. ವಿಧಿವಿಜ್ಞಾನ ತಂಡ ಸಾಕ್ಷ್ಯ ಕಲೆಹಾಕಿದ ನಂತರ ಕಾರಣ ತಿಳಿಯಲಿದೆ ಎಂದು ಪೊಲೀಸರು ತಿಳಿಸಿದ್ದಾರೆ.

## ಮುಂಬೈ ಪಾಲಿಕೆ ಚುನಾವಣೆ; ಉದ್ಧವ್ ಸೇನೆ ಏಕಾಂಗಿ ಸ್ಪರ್ಧೆ

**ಮುಂಬೈ:** ಮುಂಬರುವ ಬೃಹನ್ ಮುಂಬೈ ಮುನ್ಸಿಪಲ್ ಕಾರ್ಪೊರೇಷನ್(ಬಿಎಂಸಿ) ಚುನಾವಣೆಯಲ್ಲಿ ಶಿವಸೇನೆ (ಉದ್ಧವ್ ಬಣ) ಮಹಾ ವಿಕಾಸ್ ಅಘಾ ಡಿಯ ಭಾಗವಾಗಿರುವುದಿಲ್ಲ. ಬದಲಾಗಿ ಏಕಾಂಗಿಯಾಗಿ ಸ್ಪರ್ಧೆ ಮಾಡುವ ಸಾಧ್ಯತೆ ಇದೆ ಎಂದು ರಾಜ್ಯಸಭೆ ಸದಸ್ಯ ಸಂಜಯ್ ರಾವತ್ ಶನಿವಾರ ಹೇಳಿದ್ದಾರೆ. ಸುದ್ದಿಗಾರರ ಜತೆ ಮಾತನಾಡಿದ ರಾವತ್, ಲೋಕಸಭೆ-ವಿಧಾನಸಭೆ ಚುನಾ ವಣೆಗಳಿಗಿಂತ ಬಿಎಂಸಿ ಚುನಾವಣೆಗೆ ಪಕ್ಷ ದಲ್ಲಿ ಹೆಚ್ಚಿನ ಆಕಾಂಕ್ಷಿಗಳಿದ್ದಾರೆ. ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಏಕಾಂಗಿ ಯಾಗಿ ಸ್ಪರ್ಧೆ ಮಾಡೋಣವೆಂದು ಪಕ್ಷದ ಕಾರ್ಯ ಕರ್ತರು ಕೂಡಾ ಒತ್ತಾಯಿಸುತ್ತಿದ್ದಾರೆ. ಉದ್ಧವ್ ಠಾಕ್ರೆ ಮತ್ತು ಪಕ್ಷದ ಇತರೆ ನಾಯಕರ ಈ ಬಗ್ಗೆ ಮಾತುಕತೆ ನಡೆಸುತ್ತಿದ್ದಾರೆ ಎಂದು ವಿವರ ನೀಡಿದರು.

1997ರಿಂದ 2022ರವರೆಗೂ ಅವಿಭಜಿತ ಶಿವಸೇನೆಯು ಸತತ 25 ವರ್ಷ ಕಾಲ ಬಿಎಂಸಿಯಲ್ಲಿ ಆಡಳಿತ ನಡೆಸಿದೆ. ಈ ಬಾರಿಯೂ ಬಿಎಂಸಿ ಚುನಾವಣೆಯಲ್ಲಿ ಗೆಲ್ಲಬೇಕಿದೆ ಎಂದು ಶಿವಸೇನೆ ಸಂಸದ ಹೇಳಿದರು.

ಅಂಡರ್-19 ಮಹಿಳೆಯರ ಏಷ್ಯಾ ಕಪ್ ಕ್ರಿಕೆಟ್ ಫೈನಲ್ | ಟೂರ್ನಿಯುದ್ದಕ್ಕೂ ಭಾರತದ ಮೇಲುಗೈ

# ಇಂದು ಭಾರತ-ಬಾಂಗ್ಲಾ ಫೈನಲ್

**ಕೌಲಾಲಂಪುರ:** ಭಾರತ-ಬಾಂಗ್ಲಾದೇಶ ನಡುವಿನ ಅಂಡರ್-19 ಮಹಿಳೆಯರ ಏಷ್ಯಾ ಕಪ್ ಕ್ರಿಕೆಟ್ ಫೈನಲ್ ಪಂದ್ಯವು ಇಂದಿಲ್ಲಿ ನಡೆಯಲಿದೆ. ನಿಕಿ ಪ್ರಸಾದ್ ನಾಯಕತ್ವ ವಹಿಸಿರುವ ಭಾರತ ತಂಡವು ಈಗಾಗಲೇ ತನ್ನ ಬದ್ಧ ಎದುರಾಳಿಯಾದ ಪಾಕಿಸ್ತಾನವನ್ನು ಸೋಲಿಸಿ ಪಂದ್ಯಾವಳಿಯಲ್ಲಿ ಶುಭಾರಂಭವನ್ನು ಮಾಡಿತ್ತು.

ಲೀಗ್ ಹಂತದ ಕೊನೆಯ ಪಂದ್ಯದಲ್ಲಿ ಭಾರತ ತಂಡವು ಶ್ರೀಲಂಕಾ ತಂಡವನ್ನು ನಾಲ್ಕು ವಿಕೆಟ್‌ಗಳಿಂದ ಮಣಿಸಿ ಫೈನಲ್ ಪ್ರವೇಶಿಸಿತ್ತು. ಲಂಕಾ ತಂಡ ನೀಡಿದ 99 ರನ್‌ಗಳ ಗುರಿಯನ್ನು ಬೆಂಬೆತ್ತಿದ್ದ ಭಾರತ ತಂಡವು ಕೇವಲ 14.5 ಓವರ್‌ನಲ್ಲೇ ಗೆಲುವಿನ ನಗೆ ಬೀರಿತ್ತು. ಅಂಡರ್-19 ಏಷ್ಯಾ ಕಪ್‌ನ ಲೀಗ್ ಹಂತದಲ್ಲಿ 4 ಪಂದ್ಯಗಳನ್ನಾಡಿರುವ ಭಾರತ ತಂಡವು ಒಂದೇ ಒಂದು ಪಂದ್ಯದಲ್ಲೂ ಸೋಲದೆ ಅಜೇಯ ತಂಡವಾಗಿ ಫೈನಲ್ ಪ್ರವೇಶಿಸಿರುವುದು ಈ ಟೂರ್ನಿಯ ವಿಶೇಷ. ಲೀಗ್‌ನ ಮೊದಲ ಪಂದ್ಯದಲ್ಲಿ ಪಾಕಿಸ್ತಾನವನ್ನು ಒಂಭತ್ತು ವಿಕೆಟ್‌ಗಳಿಂದ ಸೋಲಿಸಿದ್ದ ಟೀಂ ಇಂಡಿಯಾ, ಅದಾದ ಬಳಿಕ ಬಾಂಗ್ಲಾದೇಶ ಮತ್ತು ಶ್ರೀಲಂಕಾ ತಂಡಗಳನ್ನೂ ಮಣಿಸಿದೆ. ಆದರೆ ನೇಪಾಳ ವಿರುದ್ಧದ ಪಂದ್ಯ ಮಾತ್ರ ಮಳೆಯಿಂದಾಗಿ ರದ್ದಾಯಿತು, ಆ ಮೂಲಕ ಅಜೇಯ ತಂಡವಾಗಿ ಫೈನಲ್ ಪ್ರವೇಶಿಸಿದೆ.

ಸುಮಯ್ಯ ಅಕ್ತರ್ ನಾಯಕಿಯಾಗಿರುವ ಬಾಂಗ್ಲಾದೇಶ ತಂಡವು ಶ್ರೀಲಂಕಾ ಮತ್ತು ಮಲೇಷ್ಯಾ ತಂಡವನ್ನು ಮಣಿಸಿ ಮುಂದಿನ ಹಂತಗಳಿಗೆ ತನ್ನ ಪ್ರವೇಶವನ್ನು ಪಡೆದುಕೊಂಡಿತ್ತು. ನೇಪಾಳದ ವಿರುದ್ಧ ಬಾಂಗ್ಲಾ ತಂಡ ಗೆದ್ದಿದ್ದರೂ, ಲೀಗ್ ಹಂತದಲ್ಲಿ ಭಾರತ ತಂಡದ ವಿರುದ್ಧದ ಸೋಲು ಅದನ್ನು ದೃಢಿಗೆಡಿಸಿತ್ತು.

ಭಾರತ-ಬಾಂಗ್ಲಾ ನಡುವಿನ ಇಂದಿನ ಪಂದ್ಯವು ಜಿದ್ದಾಜಿದ್ದಿಯಿಂದ ಕೂಡಿರುವ ಸಾಧ್ಯತೆ ಇದ್ದರೂ, ಭಾರತ ತಂಡವು ಟ್ರೋಫಿ ಗೆಲ್ಲುವ ಫೇವರಿಟ್ ತಂಡ ಎನಿಸಿದೆ. ತಂಡದ ನಾಯಕಿ ನಿಕಿ ಪ್ರಸಾದ್ ಹಾಗೂ ಬ್ಯಾಟರ್ ವೈಭವ್ ಸೂರ್ಯವಂಶಿ ಪಂದ್ಯಾವಳಿಯುದ್ದಕ್ಕೂ ಅತ್ಯುತ್ತಮ ಫಾರ್ಮ್‌ನಲ್ಲಿದ್ದಾರೆ. ಅದೇ ರೀತಿ ಬೌಲಿಂಗ್ ವಿಭಾಗದಲ್ಲಿ ಆಯುಷ್ ಮ್ಹಾತ್ರೆ ಬ್ಯಾಟಿಂಗ್ ಮತ್ತು ಉತ್ತಮ ಬೌಲಿಂಗ್ ನಲ್ಲೂ ಉತ್ತಮವಾಗಿಯೇ ಮಿಂಚಿದ್ದಾರೆ. ಈ ಎಲ್ಲಾ ಕಾರಣದಿಂದಾಗಿ ಫೈನಲ್‌ನಲ್ಲೂ ಬಾಂಗ್ಲಾ ತಂಡದ ವಿರುದ್ಧ ಭರ್ಜರಿ ಜಯ ಸಾಧಿಸಿ ಟ್ರೋಫಿ ಗೆಲ್ಲುವ ವಿಶ್ವಾಸ ಭಾರತ ತಂಡಕ್ಕಿದೆ.

> ### ಭಾರತ ತಂಡದ ಆಟಗಾರರು
> **ನಿಕಿ ಪ್ರಸಾದ್ (ನಾಯಕಿ), ಸಾನಿಕಾ ಚಲ್ಕೆ (ಉಪ-ನಾಯಕಿ), ಜಿ. ತ್ರಿಶಾ, ಕಮಲಿನಿ. ಕಿ (ವಿಕೆಟ್ ಕೀಪರ್) ಈಶಾವರಿ ಅವಸರೆ, ಮಿಥಿಲಾ ವಿನೋದ್, ಜೋಶಿತಾ ವಿಜೆ, ಸೋನಮ್ ಯಾದವ್, ಪರುಣಿಕಾ ಸಿಸೋಡಿಯಾ, ಕೇಸರಿ ದೃತಿ, ಆಯುಷಿ ಶುಕ್ಲಾ, ಆನಂದಿತಾ ಕಿಶೋರ್, ಎಂ.ಡಿ. ಶಬನಂ, ನಂದನ. ಎಸ್**

ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ | ಶ್ರೀಜಿತ್ ಸಿಡಿಲಬ್ಬರದ ಬ್ಯಾಟಿಂಗ್

# ಮುಂಬೈ ವಿರುದ್ಧ ಗೆದ್ದ ಕರ್ನಾಟಕ

**ಅಹಮ್ಮದಾಬಾದ್:** ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಪಂದ್ಯಾವಳಿಯಲ್ಲಿ ಬಲಿಷ್ಠ ಮುಂಬೈ ತಂಡವನ್ನು ಮಣಿಸುವಲ್ಲಿ ಕರ್ನಾಟಕ ತಂಡ ಯಶಸ್ವಿಯಾಗಿದೆ. ಅಹಮದಾಬಾದ್‌ನ ನರೇಂದ್ರ ಮೋದಿ ಸ್ಟೇಡಿಯಂ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಮುಂಬೈ ನೀಡಿದ 382 ರನ್‌ಗಳ ಬೃಹತ್ ಗುರಿ ಬೆನ್ನಟ್ಟಿದ ಕರ್ನಾಟಕ ತಂಡ ಇನ್ನು 22 ಎಸೆತಗಳು ಬಾಕಿ ಇರುವಂತೆಯೇ 3 ವಿಕೆಟ್ ಕಳೆದುಕೊಂಡು ಜಯದ ನಗೆಬೀರಿತು. ಕರ್ನಾಟಕದ ಈ ಗೆಲುವಿನಲ್ಲಿ ವಿಕೆಟ್‌ಕೀಪರ್-ಬ್ಯಾಟ್ಸ್‌ಮನ್ ಕೆ.ಎಲ್ ಶ್ರೀಜಿತ್ ಪಾತ್ರ ಅಪಾರವಾಗಿತ್ತು. ಸವಾಲಿನ ಗುರಿ ಬೆನ್ನಟ್ಟಿದ ಕರ್ನಾಟಕ ಪರ ಅಬ್ಬರದ ಬ್ಯಾಟಿಂಗ್ ಮಾಡಿದ ಶ್ರೀಜಿತ್ ಕೇವಲ 101 ಎಸೆತಗಳಲ್ಲಿ 20 ಬೌಂಡರಿ ಹಾಗೂ 4 ಸಿಕ್ಸರ್‌ಗಳ ಸಹಿತ ಅಜೇಯ 150 ರನ್‌ಗಳ ಇನ್ನಿಂಗ್ಸ್ ಆಡಿದರು.

ಉಭಯ ತಂಡಗಳ ನಡುವೆ ನಡೆದ ಈ ಪಂದ್ಯದಲ್ಲಿ ಟಾಸ್ ಗೆದ್ದ ಕರ್ನಾಟಕ ತಂಡವು ಮೊದಲು ಬೌಲಿಂಗ್ ಮಾಡಲು ನಿರ್ಧರಿಸಿತು. ಮೊದಲು ಬ್ಯಾಟಿಂಗ್ ಮಾಡಿದ ಮುಂಬೈ ಕೂಡ ಉತ್ತಮ ಬ್ಯಾಟಿಂಗ್ ಮಾಡಿತು. ತಂಡದ ಪರ ನಾಯಕತ್ವದ ಇನ್ನಿಂಗ್ಸ್ ಆಡಿದ ಶ್ರೇಯಸ್ ಅಯ್ಯರ್ 55 ಎಸೆತಗಳಲ್ಲಿ 114 ರನ್ ಗಳಿಸಿದರೆ, ಶಿವಂ ದುಬೆ ಕೇವಲ 36 ಎಸೆತಗಳಲ್ಲಿ ಅಜೇಯ 63 ರನ್ ಗಳಿಸಿದರು. ಮುಂಬೈ ತಂಡವು 50 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು 382 ರನ್ ಕಲೆಹಾಕಿತು.

ಕರ್ನಾಟಕದ ಉತ್ತಮ ಬ್ಯಾಟಿಂಗ್: ಗುರಿ ಬೆನ್ನಟ್ಟಿದ ಕರ್ನಾಟಕ ತಂಡದ ನಾಯಕ ಮಯಾಂಕ್ ಅಗರ್ವಾಲ್ ತಂಡಕ್ಕೆ ಉತ್ತಮ ಆರಂಭ ನೀಡಿದರು. ಅವರು 48 ಎಸೆತಗಳಲ್ಲಿ 47 ರನ್‌ಗಳ ಇನಿಂಗ್ಸ್ ಆಡಿದರು. ಮಯಾಂಕ್‌ಗೆ ಸಾಥ್ ನೀಡಿದ ಕೆ.ವಿ. ಅನೀಶ್ ಕೂಡ 82 ರನ್ ಕೊಡುಗೆ ನೀಡಿದರು. ಇದಾದ ಬಳಿಕ ಜೊತೆಯಾದ ಕೃಷ್ಣನ್ ಶ್ರೀಜಿತ್ ಮತ್ತು ಪ್ರವೀಣ್ ದುಬೆ ತಂಡವನ್ನು ಗೆಲುವಿನ ದಡ ಮುಟ್ಟಿಸಿದರು. ಈ ವೇಳೆ ಪ್ರವೀಣ್ ದುಬೆ 50 ಎಸೆತಗಳಲ್ಲಿ ಅಜೇಯ 65 ರನ್ ಗಳಿಸಿದರೆ, ಮತ್ತೊಂದೆಡೆ, ಕೃಷ್ಣನ್ ಶ್ರೀಜಿತ್ 101 ಎಸೆತಗಳಲ್ಲಿ 150 ರನ್‌ಗಳ ಅಜೇಯ ಇನ್ನಿಂಗ್ಸ್ ಆಡಿದರು. ಅವರ ಈ ಇನ್ನಿಂಗ್ಸ್‌ನಲ್ಲಿ 20 ಬೌಂಡರಿ ಮತ್ತು 4 ಸಿಕ್ಸರ್‌ಗಳು ಸೇರಿದ್ದವು.

# ರಸ್ತೆ ಚೆನ್ನಾಗಿದ್ದರೆ ದೇಶ ಶ್ರೀಮಂತ!

**ಅತ್ಯುತ್ತಮ ರಸ್ತೆಗಳು ಇದ್ದಾಗ, ವಾಹನಗಳು ಬಹು ವೇಗದಿಂದ ಚಲಿಸಲು ಸಾಧ್ಯ ಮತ್ತು ಬೇಗನೆ ಗುರಿ ಮುಟ್ಟಬಹುದು. ಶರವೇಗದಲ್ಲಿ ಚಲಿಸುವ ಅನುಕೂಲ ಇರುವ ರಸ್ತೆಗಳಲ್ಲಿ ಚಲಿಸುವಾಗ, ವಾಹನ ಸವಾರರು ಎಲ್ಲಾ ರೀತಿಯ ರಸ್ತೆಯ ನಿಯಮಗಳನ್ನು ಪಾಲಿಸುವುದು ತೀರಾ ಅಗತ್ಯ. ಇಲ್ಲವಾದರೆ, ನಾನಾ ರೀತಿಯ ಅಪಘಾತಗಳು ಆಗುವ ಸಾಧ್ಯತೆ ಇರುತ್ತದೆ. ಜಪಾನ್ ದೇಶದಲ್ಲಿ ಅತ್ಯುತ್ತಮ ರಸ್ತೆಗಳಿವೆ ಮತ್ತು ಅಲ್ಲಿ ಚಲಿಸುವ ವಾಹನ ಚಾಲಕರು ಶಿಸ್ತಿನಿಂದ ರಸ್ತೆ ನಿಯಮಗಳನ್ನು ಪಾಲಿಸುತ್ತಾರೆ. ಜತೆಗೆ, ಉತ್ತಮ ರಸ್ತೆಗಳನ್ನು ಹೊಂದಿರುವ ದೇಶವೂ ಶ್ರೀಮಂತವಾಗುತ್ತಾ ಹೋಗುತ್ತದೆ. ಇಂತಹ ಶಿಸ್ತಿನ ವಾತಾವರಣವನ್ನು ಜಪಾನ್ ಪ್ರವಾಸದಲ್ಲಿ ನೋಡಿ, ಖುಷಿಪಟ್ಟ ಲೇಖಕರು, ತಮ್ಮ ಅನುಭವವನ್ನು ಇಲ್ಲಿ ಹಂಚಿಕೊಂಡಿದ್ದಾರೆ.**

» ಕೆ.ಎಸ್. ಹರೀಶ್

ವಿಶ್ವವಾಣಿ ದಿನಪತ್ರಿಕೆಯ ವತಿಯಿಂದ ಪ್ರತಿ ವರ್ಷ ಕರ್ನಾಟಕ ರಾಜ್ಯದ ವಿವಿಧ ವಲಯಗಳಲ್ಲಿ ಉತ್ತಮ ಸೇವೆ ಸಲ್ಲಿಸುತ್ತಿರುವ ಗಣ್ಯರನ್ನು ಗುರುತಿಸಿ 'ಗ್ಲೋಬಲ್ ಅಚೀವರ್ಸ್ ಅವಾರ್ಡ್' ನೀಡುವ ಉತ್ತಮ ಕಾರ್ಯವನ್ನು ಹಮ್ಮಿಕೊಂಡಿದ್ದು, ಈ ಸಮಾರಂಭವನ್ನು ವಿವಿಧ ದೇಶಗಳಲ್ಲಿ ಆಯೋಜಿಸಲಾಗುತ್ತಿದೆ. ಅದರಂತೆ 2024ನೇ ಸಾಲಿನ ಪ್ರಶಸ್ತಿ ಸಮಾರಂಭವನ್ನು ಜಪಾನ್ ದೇಶದಲ್ಲಿ ಆಯೋಜಿಸಿದ್ದು, ವಿವಿಧ ಕಾರ್ಯಕ್ಷೇತ್ರಗಳಲ್ಲಿ ಸೇವೆ ಮತ್ತು ಸಾಧನೆ ಮಾಡಿರುವ 30 ಸಾಧಕರನ್ನು ಗುರುತಿಸಿದ್ದು, ಈ ಪಟ್ಟಿಯಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ನನಗೆ ಸ್ಥಾನ ದೊರಕಿರುವುದು ಅತ್ಯಂತ ಸಂತೋಷಕರವಾಗಿದೆ.

ಈ ಪ್ರವಾಸವನ್ನು ಅಚ್ಚುಕಟ್ಟಾಗಿ ಆಯೋಜಿಸಿದ 'ವಿಶ್ವವಾಣಿ' ತಂಡದ ಎಲ್ಲರಿಗೂ ಅನಾಂತಾನಂತ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಜಪಾನ್ ದೇಶದ ಪ್ರವಾಸದಲ್ಲಿ ನಾವು ಕಳೆದ 5 ದಿವಸಗಳಲ್ಲಿ ನಾನು ಜಪಾನ್ ದೇಶದ ಮೂಲಭೂತ ಸೌಕರ್ಯವಾದ ರಸ್ತೆ ಮತ್ತು ರೈಲು ಜಾಲದ ಬಗ್ಗೆ ಕೆಲವು ವಿಚಾರಗಳನ್ನು ಬರೆಯಲೇಬೇಕು ಎನಿಸಿತು.

ಪ್ರವಾಸದ ಕಾರ್ಯಕ್ರಮದಂತೆ ದಿನಾಂಕ 19-11-2024ರಂದು ಬೆಂಗಳೂರಿನಿಂದ ಹಾಂಕಾಂಗ್ ಮೂಲಕ ಜಪಾನ್‌ನ ಕಾನ್ಸಾಯಿ ವಿಮಾನ ನಿಲ್ದಾಣವನ್ನು ಸಂಜೆ 5.30 ಗಂಟೆಗೆ ತಲುಪಿದೆವು. ವಿಮಾನ ನಿಲ್ದಾಣದಲ್ಲಿ ನಮ್ಮ ತಂಡವನ್ನು ಜಪಾನ್ ದೇಶದಲ್ಲಿ ಕಳೆದ 20 ವರ್ಷಗಳಿಂದ ವಾಸವಿರುವ ಭಾರತೀಯ ಮೂಲದ ಶ್ರೀಮತಿ ಮಿನು ಇವರು ನಮ್ಮನ್ನು ಆತ್ಮೀಯತೆಯಿಂದ ಸ್ವಾಗತಿಸಿ, ವಿಮಾನ ನಿಲ್ದಾಣದಿಂದ ಕ್ಯೋತೊ ಪಟ್ಟಣಕ್ಕೆ ಬಸ್‌ನಲ್ಲಿ ಪ್ರಯಾಣ ಬೆಳೆಸಿದೆವು. ಈ ಸಮಯದಲ್ಲಿ ನನ್ನ ಗಮನ ಸಂಪೂರ್ಣವಾಗಿ ರಸ್ತೆಯ ಮೇಲಿತ್ತು. ಅಚ್ಚುಕಟ್ಟಾದ ರಸ್ತೆ, ಹೆದ್ದಾರಿಯಾಗಿದ್ದರಿಂದ ಇಕ್ಕೆಲಗಳಲ್ಲಿ ಕಾಂಪೌಂಡ್ ನಿರ್ಮಾಣ, ಗುಂಡಿ ರಹಿತ ಸ್ವಚ್ಛ ಹೆದ್ದಾರಿಯಲ್ಲಿ ಪ್ರಯಾಣಿಸಿ ಕ್ಯೋತೊ ನಗರವನ್ನು ತಲುಪಿದೆವು.

## ಪ್ರಶಂಸನೀಯ ರೋಡ್ ಮಾರ್ಕಿಂಗ್

ಎರಡನೇ ದಿನ ಬೆಳಿಗ್ಗೆ ಕ್ಯೋತೋ ನಗರದ ಸುತ್ತಮುತ್ತಲಿನ ಪ್ರೇಕ್ಷಣಿಯ ಸ್ಥಳಗಳನ್ನು ಭೇಟಿ ಮಾಡಿದ್ದು, ಕ್ಯೊತೋ ನಗರವು ಹಳೆಯ ಜಪಾನ್ ದೇಶದ ರಾಜಧಾನಿಯಾಗಿದ್ದು, ಇಲ್ಲಿನ ಪಟ್ಟಣದ ರಸ್ತೆಗಳು ಅತ್ಯಂತ ಕಿರಿದಾಗಿದ್ದರೂ ಸಹ ರಸ್ತೆಗಳ ಉತ್ತಮ ನಿರ್ಮಾಣ, ಸ್ವಚ್ಛತೆ, ಹಾಗೂ ರೋಡ್ ಮಾರ್ಕಿಂಗ್ ಅತ್ಯಂತ ಪ್ರಶಂಸನೀಯ. ಇಲ್ಲಿನ ವಾಸದ ಮನೆಗಳು ಸಹ ಹಳೆಯ ಮಾದರಿಯಲ್ಲಿದ್ದರೂ ಸಹ ಅತ್ಯಂತ ವ್ಯವಸ್ಥಿವಾಗಿ ನಿರ್ವಹಣೆ ಮಾಡಲಾಗಿದೆ.

ಕ್ಯೊತೋ ನಗರದಿಂದ 3ನೇ ದಿನ ನಮ್ಮ ಪ್ರಯಾಣ ಬುಲೆಟ್ ರೈಲಿನಲ್ಲಿ ಟೋಕಿಯೋಗೆ ಪ್ರಯಾಣಿಸಿದ್ದು, ಇದು ಅತ್ಯಂತ ವಿಭಿನ್ನ ಅನುಭವ ನೀಡಿತು. ಜಪಾನ್ ದೇಶದಲ್ಲಿ ಉತ್ತಮ ರೈಲು ಸಂಪರ್ಕ ಜಾಲ ನಿರ್ಮಿಸಿದ್ದು, ಬುಲೆಟ್ ಟ್ರೈನ್ ಅತ್ಯಂತ ಹೆಚ್ಚಿನ ಕಾರ್ಯ ಕ್ಷಮತೆ ಹೊಂದಿರುತ್ತದೆ. ಈ ರೈಲ್ ಪ್ರಯಾಣದಲ್ಲಿ ಗಮನಿಸಿದಂತೆ ರೈಲು ಚಕ್ರ ಮತ್ತು ಹಳಿಯ ನಡುವಿನ ಸಂಘರ್ಷಣೆ ಅತ್ಯಂತ ಕಡಿಮೆ ಹಾಗೂ ಬುಲೆಟ್ ಟ್ರೈನ್ ವಿನ್ಯಾಸ ಮತ್ತು ಅದರ ಬಾಡಿ ಬಿಲ್ಡಿಂಗ್ ಉತ್ತಮ ಗುಣಮಟ್ಟದ ಹಗುರವಾದ ವಸ್ತುಗಳ ಬಳಕೆಯಿಂದ ನಡೆದಿದೆ; ಆದ್ದರಿಂದ ಈ ರೈಲುಗಳು ಗಂಟೆಗೆ 300 ರಿಂದ 350 ಕಿ.ಮೀ. ವೇಗದಲ್ಲಿ ಚಲಿಸಲು ಸಾಧ್ಯವಾಗಿದೆ. ಪ್ರಸ್ತುತ ನಮ್ಮ ದೇಶದಲ್ಲಿ ಜಾರಿಗೆ ಬಂದಿರುವ ವಂದೇ ಭಾರತ್ ರೈಲು ಸಹ ಈ ಮಾದರಿಯಂತೆ ನಿರ್ಮಿಸಿರುವುದು ಅತ್ಯಂತ ಹೆಮ್ಮೆಯ ವಿಷಯವಾಗಿದೆ.

ಟೋಕಿಯೋ ನಗರವು ಜಪಾನ್ ದೇಶದ ರಾಜಧಾನಿಯಾಗಿದ್ದು ಅತೀ ಹೆಚ್ಚಿನ ಜನವಸತಿ ನಗರವಾಗಿದೆ. ಇಷ್ಟು ಜನಸಾಂದ್ರತೆ ಇದ್ದಾಗ್ಯೂ ಕೂಡ ಈ ನಗರವು ಅತ್ಯಂತ ಸ್ವಚ್ಛ ನಗರ. ಇಲ್ಲಿನ ರಸ್ತೆಗಳ ಗುಣಮಟ್ಟದ ಬಗ್ಗೆ ಎರಡು ಮಾತಿಲ್ಲ. ಗುಂಡಿ ರಹಿತ, ವಿಸ್ತಾರವಾದ ಪ್ರಮುಖ ರಸ್ತೆಗಳು ಹಾಗೂ ಚಿಕ್ಕದಾದ ಬೈಲೇನ್ ರಸ್ತೆಗಳನ್ನು ನಿರ್ಮಿಸಲಾಗಿದೆ. ಪ್ರತಿ ಸಿಗ್ನಲ್‌ಗಳಲ್ಲಿ ವಾಹನ ಸವಾರರನ್ನು ಎಚ್ಚರಿಸಲು ಕೆಂಪು ಬಣ್ಣದ ಲೇಪನ ರಸ್ತೆಗಳಿಗೆ ಮಾಡಲಾಗಿದೆ. ಹಾಗೂ ವಾಹನ ಸವಾರರ ಮಾರ್ಗದರ್ಶನಕ್ಕಾಗಿ ರಸ್ತೆಯ ಮಾರ್ಕಿಂಗ್ ಉತ್ತಮವಾಗಿದೆ. ಹಾಗೂ ಜಪಾನಿಯರು ಶಿಸ್ತುಬದ್ಧ ಜೀವನ ಶೈಲಿಯನ್ನು ರೂಪಿಸಿಕೊಂಡಿದ್ದು, ವಾಹನ ಸಂಚಾರದಲ್ಲಿ ಯಾವುದೇ ಉಲ್ಲಂಘನೆ ಕಂಡು ಬರಲಿಲ್ಲ. ಈ ರೀತಿಯ ಶಿಸ್ತಿನ ಜೀವನ, ಶಿಸ್ತಿನಿಂದ ವಾಹನ ಚಾಲನೆ ಇದ್ದಾಗ ಅವಘಡಗಳು ಆಗುವ ಸಂಭವ ಅತಿ ಕಡಿಮೆ.

## ಟೋಕಿಯೋ ಟ್ರೀ ಕಟ್ಟಡ

ಜಪಾನ್ ದೇಶವು ಪ್ರಕೃತಿಯ ವಿಕೋಪಕ್ಕೆ ತುತ್ತಾಗುವ ದೇಶಗಲ್ಲಿ ಮೊದಲಿನ ದೇಶವೆಂಬ ಖ್ಯಾತಿಯನ್ನು ಹೊಂದಿದ್ದರೂ ಪ್ರಕೃತಿಗೆ ಸೆಡ್ಡು ಹೊಡೆಯವ ರೀತಿಯಲ್ಲಿ ಟೋಕಿಯೋ ನಗರದಲ್ಲಿ ನಿರ್ಮಿಸಿರುವ ಗಗನಚುಂಬಿ ಕಟ್ಟಡಗಳು ಅತ್ಯಂತ ಆಕರ್ಷಣೀಯ. ಅಮೇರಿಕ ದೇಶದ ನ್ಯೂಯಾರ್ಕ್ ಮೀರಿಸುವಂತಹ ಕಟ್ಟಡಗಳ ನಿರ್ಮಾಣ, ಸುಂದರವಾದ ಎಲಿವೇಷನ್, ನಗರದ ಸ್ವಚ್ಛತೆ ಕಣ್ಮನ ಸೆಳೆಯುತ್ತದೆ. ಈ ಎಲ್ಲ ಕಟ್ಟಡಗಳಿಗೆ ಕಳಶಪ್ರಾಯದಂತೆ ನಿರ್ಮಿಸಿರುವ ಟೋಕಿಯೋ ಟ್ರೀ ಕಟ್ಟಡ (450 ಮೀಟರ್) ಎತ್ತರದಲ್ಲಿ ಟೋಕಿಯೋ ನಗರ ವೀಕ್ಷಣೆ ಅತ್ಯಂತ ರೋಮಾಂಚನ ಅನುಭವ ನೀಡಿತು.

ಟೋಕಿಯೋ ನಗರವು ಸಮುದ್ರ ತೀರ ಪ್ರದೇಶದಲ್ಲಿದ್ದು, ಸಮುದ್ರದ ಬ್ಯಾಕ್‌ವಾಟರ್ ಕಾಲುವೆಗಳನ್ನು ಅತ್ಯಂತ ಸ್ವಚ್ಛವಾಗಿ ನಿರ್ವಹಣೆ ಮಾಡಿರುವುದು ಕಂಡುಬಂದಿತು. ಆದರೆ ಈ ಕಾಲುವೆಗಳ ಕ್ರೂಸ್‌ನಲ್ಲಿ ಪ್ರಯಾಣಿಸಲು ಅವಕಾಶವಾಗಲಿಲ್ಲ.

## ಟ್ರಾಫಿಕ್ ಜಾಮ್‌ನಲ್ಲೂ ಶಿಸ್ತು

ಇಷ್ಟು ಉತ್ತಮ ಗುಣಮಟ್ಟದ ಹೆದ್ದಾರಿಗಳ ನಿರ್ಮಾಣವಾಗಿದ್ದರೂ ಸಹ ಟೋಕಿಯೋ ನಗರದಿಂದ ಫ್ಯೂಜಿ ಪರ್ವತ ತಲುಪಲು ಸರಾಸರಿ 2 ಗಂಟೆಗೆ ಬದಲಾಗಿ 4.00 ಗಂಟೆ ಪ್ರಯಾಣಿಸಿದ್ದು, ಹೆದ್ದಾರಿಯಲ್ಲಿ ಚಲಿಸುವ ವಾಹನ ಸಾಂದ್ರತೆ ತಿಳಿಸುತ್ತದೆ. ಆದರೆ ಈ ಹೆದ್ದಾರಿಯಲ್ಲಿ ಟ್ರಾಫಿಕ್ ಜಾಮ್ ಇದ್ದರೂ ಸಹ ಎಲ್ಲರೂ ತಮ್ಮ ವಾಹಗಳನ್ನು ಶಿಸ್ತುಬದ್ಧಾಗಿ ಚಾಲನೆ ಮಾಡುವುದಲ್ಲದೆ, ಯಾವುದೇ ರೀತಯ ಹಾರ್ನ್ ಮಾಡದೇ ಸಂಯಮದಿಂದ ವಾಹನಗಳನ್ನು ಚಲಾಯಿಸುವುದು ಅನುಕರಣೀಯ. ಈ ಒಂದು ಶಿಸ್ತಿನಿಂದಾಗಿ, ಸಹಜವಾಗಿ ರಸ್ತೆಯಲ್ಲಿ ಚಲಿಸುವ ವಾಹನಗಳ ನಡುವೆ ಅಪಘಾತವಾಗುವ ಸಂಭವ ಕಡಿಮೆ.

## ದುಬಾರಿ ದಿನಚರಿ!

ಜಪಾನ್ ದೇಶವು ಆಟೋಮೊಬೈಲ್ ಮತ್ತು ಎಲೆಟ್ರಾನಿಕ್ಸ್ ಉದ್ಯಮದಲ್ಲಿ ಮುಂಚೂಣಿಯಲ್ಲಿರುವ ದೇಶ. ಆದರೆ ಇಲ್ಲಿನ ದರಗಳು ಮಾತ್ರ ಅತ್ಯಂತ ದುಬಾರಿಯೆಂಬುದು ನನ್ನ ಅನಿಸಿಕೆ. ಜಪಾನ್ ದೇಶದಲ್ಲಿ ನಮ್ಮ ಪ್ರವಾಸದ ಮಾರ್ಗದರ್ಶಿಯವರು ತಿಳಿಸಿದಂತೆ ಭ್ರಷ್ಟಾಚಾರ, ಕ್ರೈಮ್ ಇಲ್ಲ. ಹಾಗೂ ಇಲ್ಲಿನ ಪ್ರಜೆಗಳು ತಮ್ಮ ದೇಶವನ್ನು ಅತ್ಯಂತ ಹೆಚ್ಚು ಪ್ರೀತಿಸುತ್ತಾರೆ. ಹಾಗೂ ಜಪಾನೀಯರ ನಡತೆ ಅತ್ಯಂತ ಸುಂದರ.

ಅಮೆರಿಕ ದೇಶದ ಹಿಂದಿನ ಅಧ್ಯಕ್ಷರಾದ ಜಾನ್ ಎಫ್ ಕೆನಡಿ ಇವರು ಹೇಳಿರುವಂತೆ ''ಅಮೆರಿಕವು ಶ್ರೀಮಂತವಾಗಿದ್ದರಿಂದ ಅಮೆರಿಕದ ರಸ್ತೆಗಳು ಉತ್ತಮ ಎಂಬ ವಿಚಾರ ಸರಿಯಲ್ಲ; ಬದಲಿಗೆ, ಅಮೆರಿಕದ ರಸ್ತೆಗಳು ಉತ್ತಮವಾಗಿರುವುದರಿಂದಾಗಿ, ಅಮೆರಿಕವು ಶ್ರೀಮಂತ ದೇಶವಾಗಿದೆ'' ಎಂಬಂತೆ ಜಪಾನ್ ದೇಶದಲ್ಲಿ ಸಹ ಉತ್ತಮ ರಸ್ತೆ ಜಾಲ ನಿರ್ಮಿಸಿದ್ದು ಈ ಪ್ರವಾಸದಲ್ಲಿ ನಾನು ಕಂಡುಕೊಂಡ ಸತ್ಯ. ನಮ್ಮ ದೇಶದಲ್ಲಿ ಸಹ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಉತ್ತಮ ಗುಣಮಟ್ಟದ ಹೆದ್ದಾರಿಗಳ ಅಭಿವೃದ್ಧಿಯನ್ನು, ಇತ್ತೀಚಿನ ವರ್ಷಗಳಲ್ಲಿ, ಅಂದರೆ ಕಳೆದ 20 ವರ್ಷಗಳಿಂದ ಕೈಗೊಂಡಿರುವುದು ಶ್ಲಾಘನೀಯ.

'ದೇಶ ಸುತ್ತು ಕೋಶ ಓದು' ಎಂಬ ಹಿರಿಯರ ವಾಣಿಯಲ್ಲಿ ಅಡಗಿರುವ ಸತ್ಯವನ್ನು ಈ ದೇಶದ ಭೇಟಿ ನೀಡಿದಾಗ ನನ್ನ ಅನುಭವಕ್ಕೆ ಬಂದಿದೆ. ಜಪಾನ್‌ನಲ್ಲಿ ಪ್ರವಾಸ ಮಾಡಿದ್ದರಿಂದ ನನ್ನ ತಿಳಿವಳಿಕೆ ಶ್ರೀಮಂತವಾಯಿತು; ಅಲ್ಲಿನ ರಸ್ತೆಗಳ ಗುಣಮಟ್ಟ, ಜನರ ಶಿಸ್ತು ಇವುಗಳನ್ನು ಕಂಡಾಗ, ಒಂದು ದೇಶ ಅಭಿವೃದ್ಧಿ ಹೊಂದಲು ಇಂತಹ ಶಿಸ್ತು ಅಗತ್ಯ ಎಂಬುದು ಸಹ ಗೊತ್ತಾಯಿತು. ಜತೆಗೆ, ಉತ್ತಮ ರಸ್ತೆಗಳು ಮತ್ತು ರಸ್ತೆಯ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ನಾಗರಿಕರು ಇದ್ದಾಗ, ಅಪಘಾತಗಳು ಆಗುವ ಸಂಭವ ತೀರಾ ಕಡಿಮೆ ಎಂಬ ವಿಚಾರವೂ ಅಲ್ಲಿನ ರಸ್ತೆ ಸಂಚಾರವನ್ನು ಕಂಡಾಗ ಗೊತ್ತಾಯಿತು. ಇಂತಹದೊಂದು ಶ್ರೀಮಂತ ಅನುಭವವನ್ನು ಒದಗಿಸಿದ 'ವಿಶ್ವವಾಣಿ' ತಂಡ ಹಾಗೂ ವಿಶ್ವವಾಣಿ ಪತ್ರಿಕೆಯ ಸಂಪಾದಕ ರಾದ ವಿಶ್ವೇಶ್ವರ ಭಟ್ ಇವರಿಗೆ ಅನಂತ ಧನ್ಯವಾದಗಳು.

**ಹಕ್ಕಿಗಳನ್ನು ಗುರುತಿಸುವುದು ಅಥವಾ ಪಕ್ಷಿವೀಕ್ಷಣೆ ಒಂದು ಹವ್ಯಾಸ. ಯಾವ್ಯಾವುದೋ ಅಪರೂಪದ ಹಕ್ಕಿಗಳನ್ನು ಗುರುತಿಸುತ್ತಾ, ಅವುಗಳ ದಿನಚರಿಯ ವಿವಿಧ ಚಟುವಟಿಕೆಗಳನ್ನು ಅಧ್ಯಯನ ಮಾಡುವುದರಿಂದ ಮನಸ್ಸು ಉಲ್ಲಸಿತವಾಗುತ್ತದೆ; ಪಕ್ಷಿವೀಕ್ಷಣೆಯ ನೆಪದಲ್ಲಿ ಬೇರೆ ಬೇರೆ ಜಾಗಗಳನ್ನು ನೋಡುವ ಅವಕಾಶವೂ ಆಗುತ್ತದೆ. ಹಕ್ಕಿಗಳ ವಲಸೆ ಎಂಬ ಬಹು ವಿಸ್ಮಯಕಾರಿ ವಿದ್ಯಮಾನವಿದೆ; ಉತ್ತರದ ತೀವ್ರ ಚಳಿಯ ದೇಶಗಳಿಂದ ಹೊರಟ ಹಕ್ಕಿಗಳು, ತಮ್ಮ ವಲಸೆಯ ಸಮಯದಲ್ಲಿ ಬಹು ದೂರದ ಊರುಗಳಿಗೆ, ದೇಶಗಳಿಗೆ ಪಯಣಿಸುತ್ತವೆ. ಉತ್ತಮ ಜಾಗವನ್ನು ಹುಡುಕುತ್ತಾ ನೇರವಾಗಿ ನೂರಾರು ಕಿಲೋಮೀಟರ್ ಹಾರುವ ಹಕ್ಕಿಗಳೂ ಇವೆ; ಇನ್ನು ಕೆಲವು ಹಕ್ಕಿಗಳು ತಮ್ಮ ದಾರಿಯ ಮಧ್ಯೆ, ಕೆಲವು ಪ್ರದೇಶಗಳಲ್ಲಿ ತಂಗಿ, ಒಂದೆರಡು ದಿನವೋ, ವಾರವೋ ಇದ್ದು ಪುನಃ ತಮ್ಮ ಗುರಿಯತ್ತ ರೆಕ್ಕೆಬೀಸುತ್ತವೆ. ಇವುಗಳನ್ನು ಪ್ಯಾಸೇಜ್ ಮೈಗ್ರೆಂಟ್ಸ್ ಎನ್ನುವರು. ಇವು ನಿಗದಿತ ಪ್ರದೇಶದಲ್ಲಿ ಕೆಲವೇ ದಿನ ಇರುವುದರಿಂದಾಗಿ ಅವು ಅಪರೂಪದ ಹಕ್ಕಿಗಳು. ಅಂತಹ ಅಪರೂಪದ ಮತ್ತು ಕೆಲವೇ ದಿನ ನಮ್ಮ ದೇಶದಲ್ಲಿ ಆತಿಥ್ಯ ಪಡೆಯುವ ಎಂಟು ಹಕ್ಕಿಗಳನ್ನು ನೋಡಲೆಂದೇ ಗುಜರಾತಿನ ಕಚ್ ಪ್ರದೇಶಕ್ಕೆ ಹೋಗಿ, ಅಲ್ಲಿ ತಂಗಿ ಬಂದ ಉತ್ಸಾಹಿ ಪಕ್ಷಿವೀಕ್ಷಕರೊಬ್ಬರ ಅನುಭವ ಇಲ್ಲಿದೆ.**

# ವಲಸೆ ಹಕ್ಕಿಗಳ ಬೆನ್ನು ಹತ್ತಿ

» ಗುರುರಾಜ ಶಾಸ್ತ್ರಿ

ಪ್ರತಿ ವರ್ಷ ಮಧ್ಯ ಏಷಿಯಾ, ಉತ್ತರ ಏಷಿಯಾ ಹಾಗೂ ಯೂರೋಪಿನಿಂದ ಆಫ್ರಿಕಾ ದೇಶಕ್ಕೆ ಲಕ್ಷಾಂತರ ಪಕ್ಷಿಗಳು ವಲಸೆ ಹೋಗುತ್ತವೆ. ಈ ಮಾರ್ಗ ಎಷ್ಟೋ ಸಾವಿರ ಕಿಲೋಮೀಟರ್ ಆಗಿರುತ್ತದೆ. ನೆಲಕ್ಕಿಳಿಯ ದೆಯೇ ಸಾವಿರಕ್ಕೂ ಹೆಚ್ಚು ಕಿಲೋಮೀಟರ್ ಒಮ್ಮೆಗೇ ಹಾರುವ ಈ ಪಕ್ಷಿಗಳಲ್ಲಿ ಕೆಲವು ನಮ್ಮ ದೇಶದ ಮೂಲಕವೂ ಸಾಗುತ್ತವೆ. ಹೀಗೆ ನಿರಂತರವಾಗಿ ಹಾರುವಾಗ ಮಾರ್ಗ ಮಧ್ಯೆ ಅವುಗಳಿಗೂ ಒಂದು ಬ್ರೇಕ್ ಬೇಕಂತೆ. ಅವು ಬ್ರೇಕ್ ತೆಗೆದುಕೊಳ್ಳುವ ಹಲವು ಜಾಗಗಳು ನಮ್ಮ ದೇಶದಲ್ಲಿವೆ; ಅವುಗಳಲ್ಲಿ ಒಂದು ಗುಜರಾತ್ ರಾಜ್ಯ ಕಚ್ ಪ್ರದೇಶ. ಪಕ್ಷಿಪ್ರಿಯರಿಗಂತೂ ಪ್ರತಿ ವರ್ಷದ ಸೆಪ್ಟೆಂಬರ್ ತಿಂಗಳು ಗುಜರಾತಿನ ಈ ಕಚ್ ಪ್ರದೇಶ ಅದರಲ್ಲೂ ಮುಖ್ಯವಾಗಿ ಭುಜ್ ಪ್ರದೇಶ ಸ್ವರ್ಗವಿದ್ದಂತೆ.

ಆಫ್ರಿಕಾಗೆ ಹೋಗುವಾಗ ಮಾತ್ರ ಈ ಭಾರತದ ಮಾರ್ಗವನ್ನು ತೆಗೆದುಕೊಂಡು ವಾಪಸ್ ಉತ್ತರ ಏಷಿಯಾಗೆ ಹಿಂದಿರುಗಬೇಕಾದರೆ ಈ ಪಕ್ಷಿಗಳು ಬೇರೆ ಮಾರ್ಗವನ್ನೇ ಆರಿಸಿಕೊಳ್ಳುತ್ತವೆ. ಆದ್ದರಿಂದ ಸೆಪ್ಟೆಂಬರ್‌ನಲ್ಲಿ ಮಾತ್ರ ಇವುಗಳನ್ನು ಭಾರತದಲ್ಲಿ ನೋಡಲು ಸಿಗುವ ಅವಕಾಶ.

ಕಚ್ ಪ್ರದೇಶ ಎಂದರೆ ಮರಳಿಲ್ಲದ ಮರುಭೂಮಿಯೂ ಹೌದು, ಗಿಡಮರಗಳೇ ಇಲ್ಲದ ವನ್ಯಪ್ರದೇಶವೂ ಹೌದು. ಅಲ್ಲಲ್ಲಿ ಮುಳ್ಳಿನ ಜಾಲಿಮರದ ಪೊದೆಗಳನ್ನು ಹೊಂದಿರುವ, ಕಿಲೋಮೀಟರ್ ದೂರ ವೀಕ್ಷಿಸಬಹುದಾದ ಸಮತಟ್ಟಾದ ಭೂಮಿ. ಜೀಪಿನಲ್ಲಿ ಹೋಗುವಾಗ ಶೇಕಡ ಹತ್ತರಷ್ಟು ಕಚ್ ಪ್ರದೇಶದಲ್ಲಿ ಮಾತ್ರ ನಾವು ಪಯಣಿಸಬಹುದು. ಮಿಕ್ಕೆಲ್ಲಾ ಭೂಮಿಯಲ್ಲಿ ತೇವಾಂಶ ಹೆಚ್ಚಿದ್ದು, ಜೌಗು ನೆಲವಾಗಿದ್ದರಿಂದ ವಾಹನಗಳ ಟೈರ್ ಭೂಮಿಯೊಳಗೆ ಕುಸಿದುಹೋಗುತ್ತದೆ. ಇದರಿಂದಾಗಿ ಕಚ್ ಪ್ರವಾಸವೆಂದರೆ ಈ ಶೇಕಡ 10ರಷ್ಟು ಜಾಗ ಮಾತ್ರ. ಅದು ಬಿಟ್ಟರೆ ನೀರಿನ ತೊರೆಗಳು, ಇನ್ನೊಂದು ಕಡೆ ಸಮುದ್ರ.

## ಇವೇ ಆ ಎಂಟು ಹಕ್ಕಿಗಳು!

ಸಾವಿರಾರು ಎಕರೆ ಭೂಮಿಯ ಈ ಕಚ್ ಪ್ರದೇಶದಲ್ಲಿ ನಾವು ನೋಡ ಹೊರಟಿದ್ದು ಮುಖ್ಯವಾಗಿ ಎಂಟು ಪ್ರಭೇದದ ಪಕ್ಷಿಗಳನ್ನು. ಪಕ್ಷಿಪ್ರಿಯರ ಭಾಷೆಯಲ್ಲಿ ಹೇಳುವುದಾದರೆ ಈ ಎಂಟು ಪಕ್ಷಿಗಳನ್ನು 'ಪ್ಯಾಸೇಜ್ ಮೈಗ್ರೆಂಟ್ಸ್' ಎಂದು ಕರೆಯುತ್ತಾರೆ. ಅವು ಯಾವುವೆಂದರೆ ಯೂರೋಪಿಯನ್ ರೋಲರ್ (ನೀಲಕಂಠದ ಜಾತಿ), ರೆಡ್ ಬ್ಯಾಕ್ಡ್ ಶ್ರೈಕ್ (ಕೆಂಪು ಬೆನ್ನಿನ ಕಳಿಂದ) ಮತ್ತು ರೆಡ್ ಟೈಲ್ಡ್ ಶ್ರೈಕ್ (ಕೆಂಪು ಬಾಲದ ಕಳಿಂದ), ಸ್ಪಾಟೆಡ್ ಫ್ಲೈಕ್ಯಾಚರ್ (ಚುಕ್ಕಿಯ ನೊಣಹಿಡುಕ), ರೂಫಸ್ ಟೈಲ್ಡ್ ಸ್ಕ್ರಬ್ ರಾಬಿನ್(ಚಿಟ್ಟು ಮಡಿವಾಳದ ಜಾತಿ), ಗ್ರೇಟರ್ ವೈಟ್‌ತ್ರೋಟ್ (ಶ್ವೇತಕಂಠ), ಕಾಮನ್ ಕುಕ್ಕೂ ಮತ್ತು ಬ್ಲೂ ಚೀಕಡ್ ಬೀ ಈಟರ್(ನೀಲಿ ಕೆನ್ನೆಯ ಕಳ್ಳಿಪೀರ). ಪಕ್ಷಿಪ್ರಿಯರ ಮಾತುಗಳಲ್ಲಿ ಹೆಚ್ಚು ಆಂಗ್ಲ ಹೆಸರುಗಳೇ ಚಾಲ್ತಿಯಲ್ಲಿರುವದರಿಂದ ಅದನ್ನೇ ಮುಖ್ಯವಾಗಿ ನೀಡಿದ್ದೇನೆ.

ಈ ಎಂಟು ಪಕ್ಷಿಗಳು ಬಹು ಸುಂದರ ಎನ್ನುವದಕ್ಕಿಂತ, ಅವುಗಳನ್ನು ವೀಕ್ಷಿಸುವುದು ಅಪರೂಪದ ಅನುಭವ ಎನ್ನಬಹುದು. ಕೇವಲ ಸೆಪ್ಟೆಂಬರ್ ತಿಂಗಳಿನಲ್ಲಿ ಮಾತ್ರ ನಮ್ಮ ದೇಶದಲ್ಲಿ ಕಾಣಸಿಗುವ ಪಕ್ಷಿಗಳಾಗಿದ್ದರಿಂದಾಗಿ, ಪಕ್ಷಿವೀಕ್ಷಕರಿಗೆ ಇವುಗಳನ್ನು ನೋಡುವ, ಅಧ್ಯಯನ ಮಾಡುವ, ಅವುಗಳ ಛಾಯಾಚಿತ್ರ ತೆಗೆಯುವ ಉತ್ಸಾಹ, ಉಲ್ಲಾಸ.

ಹಿಮಾಲಯ ಪ್ರದೇಶದಲ್ಲಿ ವಾಸಿಸುವ ಪಕ್ಷಿಗಳ ಸೌಂದರ್ಯ ಹಾಗೂ ಬಣ್ಣಗಳಿಗೆ ಹೋಲಿಸಿದರೆ, ಈ ಎಂಟು ಪ್ರಭೇದದ ಪಕ್ಷಿಗಳು ಮೇಲ್ನೋಟಕ್ಕೆ ಸರಳವಾಗಿ ಕಾಣುತ್ತವೆ. ಆದರೆ ಪಕ್ಷಿವೀಕ್ಷಕರಿಗೆ ತಮ್ಮ ಜೀವಿತಾವಧಿಯಲ್ಲಿ ಎಷ್ಟು ತಳಿಯ ಪಕ್ಷಿಗಳನ್ನು ತಾವು ನೋಡಿದ್ದೇವೆ ಎಂದು ಹೇಳಿಕೊಳ್ಳುವುದರಲ್ಲೇ ಒಂದು ಹೆಮ್ಮೆ ಇದೆ. ಹಾಗಾಗಿ ಈ ಎಂಟು ಪಕ್ಷಿಗಳು ಅವರು ಈವರೆಗೆ ನೋಡಿರುವ ಎಲ್ಲಾ ಪಕ್ಷಿಗಳ ಸಂಖ್ಯೆಯಲ್ಲಿ ಕೂಡಿಕೊಳ್ಳಲು ಮಹತ್ವವನ್ನು ಪಡೆದಿದೆ.

## ಮಾರ್ಗದರ್ಶಿಗಳ ಬುಕಿಂಗ್

ಮೊದಲೇ ಹೇಳಿದ ಅಪರೂಪ ಎನಿಸಿದ ಈ ಎಂಟು ಪಕ್ಷಿಗಳನ್ನು ವೀಕ್ಷಿಸುವುದು ಅಷ್ಟು ಸುಲಭದ ಕೆಲಸವೇನಲ್ಲ. ಸ್ಥಳೀಯ ಪಕ್ಷಿ ವೀಕ್ಷಣೆ ಗೈಡ್‌ನ (ಮಾರ್ಗದರ್ಶಿ) ಸಹಾಯದಿಂದ ಮಾತ್ರ ಇದು ಸಾಧ್ಯ. ಈ ಪಕ್ಷಿಗಳ ಬಗ್ಗೆ ಪರಿಣತಿ ಹೊಂದಿರುವ ಗೈಡುಗಳು ಬಹಳ ಕಡಿಮೆ. ಹಾಗಾಗಿ ವರ್ಷಕ್ಕೆ ಮುನ್ನವೇ ಇಲ್ಲಿರುವ ಗೈಡುಗಳನ್ನು ಮುಂಗಡ ಹಣ ಪಾವತಿಸಿ ಕಾಯ್ದಿರಿಸಕೊಳ್ಳಬೇಕಾಗುತ್ತದೆ.

ಗೈಡ್‌ಗಳು ಈ ವಲಸೆ ಪಕ್ಷಿಗಳು ಆಗಮಿಸುವುದನ್ನೇ ಕಾಯುತ್ತಿರುತ್ತಾರೆ. ಅವು ನೆಲದಿಂದ ಮೇಲೆ ಹಾರಾಡುತ್ತಿರುವಾಗ ಅವುಗಳನ್ನು ಹಿಂಬಾಲಿಸಿ ಅವು ಯಾವ ಜಾಗದಲ್ಲಿ ನೆಲೆಸಿದೆಯೆಂದು ನೋಡಿಕೊಳ್ಳುತ್ತಾರೆ. ವಲಸೆ ಬರುವ ಈ ಪಕ್ಷಿಗಳು ಒಮ್ಮೆ ಈ ಕಚ್ ನೆಲಕ್ಕೆ ಇಳಿದರೆ ಅವು ಇಳಿದ ಜಾಗದ ಸುತ್ತಲಿನ ಒಂದೆರೆಡು ಎಕರೆಗಳಷ್ಟು ಜಾಗದಲ್ಲೇ ಉಳಿದುಕೊಳ್ಳುತ್ತವೆ. ಹೀಗಾಗಿ ಗೈಡ್‌ಗಳಿಗೆ ಯಾವ ಜಾಗದಲ್ಲಿ ಯಾವ ಪಕ್ಷಿ ಹುಡುಕಬೇಕೆಂಬ ಮಾಹಿತಿ ಇರುತ್ತದೆ. ಆದರೂ ಪೊದೆಗಳ ಮಧ್ಯದಲ್ಲಿ ಕುಳಿತು ಕ್ಷಣಾರ್ಧದಲ್ಲಿ ಹಾರಿಬಿಡುವ ಈ ಪಕ್ಷಿಗಳನ್ನು ನಮಗೆ ತೋರಿಸುವ ಈ ಗೈಡ್‌ಗಳ ಕೌಶಲ್ಯಕ್ಕೆ ಒಂದು ದೊಡ್ಡ ನಮಸ್ಕಾರ ಹೇಳಲೇಬೇಕು. ಅದರಲ್ಲೂ ಮುಖ್ಯವಾಗಿ ತಮಗೆ ಒಂದು ಒಳ್ಳೇ ಸಂಭಾವನೆಯ ಉದ್ಯೋಗಕ್ಕೆ ಕಾರಣವಾಗಿರುವ ಈ ಪಕ್ಷಿಗಳಿಗೆ, ಪ್ರವಾಸಿಗರಿಂದ ಯಾವುದೇ ತೊಂದರೆ ಯಾಗದಂತೆ ನೋಡಿಕೊಳ್ಳುವ ಜವಾಬ್ಧಾರಿ ಈ ಗೈಡ್‌ಗಳದ್ದು. ಆ ಜವಾಬ್ದಾರಿಯನ್ನು ಅವರು ಉತ್ತಮವಾಗಿ ನಿಭಾಯಿಸುತ್ತಿದ್ದಾರೆ.

## ನಳಸರೋವರದಲ್ಲಿ ಹಕ್ಕಿಗಳು

ನಾವು ಪ್ರವಾಸ ಮಾಡಿದ್ದು ಕಚ್‌ನ ಭುಜ್ ಪ್ರದೇಶಕ್ಕೆ ಮತ್ತು ನಳಸರೋವರ ಎಂಬ ಊರಿಗೆ. ಇದು ಒಟ್ಟು ಐದು ದಿನದ ಪ್ರವಾಸವಾಗಿತ್ತು. ಭುಜ್‌ನಲ್ಲಿ ಎಪಿ ಸೆಂಟರ್ ಎಂಬ ಹೋಮ್ ಸ್ಟೇಯಲ್ಲಿ ಉಳಿದುಕೊಂಡಿದ್ದೆವು;ಆ ಹೋಮ್ ಸ್ಟೇ ಮಾಲೀಕರಾದ ಭರತ್ ಅವರೇ ನಮ್ಮ ಗೈಡ್. ಪ್ರತಿದಿನ ಬೆಳಿಗ್ಗೆ 6 ಗಂಟೆಗೆ ಜೀಪಿನಲ್ಲಿ ನಮ್ಮ ಅಂದಿನ ಪಕ್ಷಿವೀಕ್ಷಣೆ ಆರಂಭವಾಗುತ್ತಿತ್ತು. ಮಾರ್ಗಮಧ್ಯದಲ್ಲೇ ಬೆಳಿಗ್ಗೆ ಎಂಟು ಗಂಟೆಗೆ ನಮಗೆ ಉಪಹಾರ. ಹನ್ನೊಂದು ಗಂಟೆಗೆ ಹೋಮ್‌ಸ್ಟೇಗೆ ವಾಪಸ್. 11 ಗಂಟೆಯಿಂದ ಸಂಜೆ ನಾಲ್ಕು ಗಂಟೆವರೆಗೂ ಆಚೆ ಹೋಗಲಾಗುವುದಿಲ್ಲ. ಕಾರಣ ಇಲ್ಲಿನ ಬಿಸಿಲು ತುಂಬಾ ತೀಕ್ಷ್ಣ; ಚರ್ಮ ಸುಡುತ್ತದೆ. ಸ್ಥಳೀಯರು ಕೂಡಾ ಈ ಸಮಯದಲ್ಲಿ ಹೊರಗೆ ಓಡಾಡಲು ಇಷ್ಟಪಡುವುದಿಲ್ಲ. ಸಂಜೆ ನಾಲ್ಕರ ನಂತರ ಏಳು ಗಂಟೆಯವರೆಗೆ ಮತ್ತೊಮ್ಮೆ ಪಕ್ಷಿ ವೀಕ್ಷಣೆ.

ನಳಸರೋವರದಲ್ಲಿ ನಾವು ಫ್ಲೆಮಿಂಗೋ ರೆಸಾರ್ಟಿನಲ್ಲಿ ಉಳಿದುಕೊಂಡಿದ್ದೆವು. ಇಲ್ಲಿನ ನಮ್ಮ ಗಡ್ ಹೆಸರು ಲತೀಫ್. ಮಿಕ್ಕೆಲ್ಲಾ ಪಕ್ಷಿವೀಕ್ಷಣೆಯ ವಿಷಯವು ಮೇಲೆ ಭುಜ್‌ನಲ್ಲಿ ವಿವರಿಸಿದ ಹಾಗೆಯೇ.

ಹಕ್ಕಿಗಳನ್ನು ನೋಡಲೆಂದೇ ಸುಮಾರು ಏಳು ದಿನಗಳ ಕಾಲ ಕಚ್ ಸುತ್ತಮುತ್ತ ಓಡಾಡಿದ್ದು ತೃಪ್ತಿ ಕೊಟ್ಟಿದೆ. ನಳಸರೋವರವು ಪಕ್ಷಿವೀಕ್ಷಕರ ನೆಚ್ಚಿನ ತಾಣ; ನಾವು ಹೋದಾಗ, ಪ್ರತಿ ದಿನ ಸರಾಸರಿ 50ರಿಂದ 75 ಜನ ಅಲ್ಲಲ್ಲಿ ಪಕ್ಷಿ ವೀಕ್ಷಣೆ ಮಾಡುತ್ತಿದ್ದುದನ್ನು ನೋಡ ಬಹುದಿತ್ತು. ನಮ್ಮ ರಾಜ್ಯದ ಕೆಲವರು ತಮ್ಮದೇ ತಂಡ ಕಟ್ಟಿಕೊಂಡು ಪಕ್ಷಿವೀಕ್ಷಣೆ ಮಾಡುತ್ತಾ, ಈ ಎಂಟು ಹಕ್ಕಿಗಳನ್ನು ಗುರುತಿಸಲು,ಫೋಟೋ ತೆಗೆಯಲು ಪ್ರಯತ್ನ ನಡೆಸಿದ್ದರು.

ಆ ಪ್ರದೇಶಕ್ಕೆ ಬಂದಿದ್ದ ಎಂಟೂ ಪ್ಯಾಸೇಜ್ ಮೈಗ್ರೆಂಟ್ ಹಕ್ಕಿಗಳು ನನ್ನ ಕಣ್ಣಿಗೆ ಬಿದ್ದುದು ಮಾತ್ರವಲ್ಲ, ನನ್ನ ಕ್ಯಾಮೆರಾದಲ್ಲೂ ಸೆರೆಯಾದವು! ಹಾಗಾದರೆ ಈ ಎಂಟು ಪಕ್ಷಿಗಳನ್ನು ನೋಡಿದರೆ ಸಾಕೆ, ಪ್ರವಾಸ ಮುಗಿ ದಂತೆಯೇ? ಎಂದು ನೀವು ಪ್ರಶ್ನಿಸಬಹುದು. ಅದು ಹಾಗಲ್ಲ, ಈ ಎಂಟು ಪಕ್ಷಿಗಳನ್ನು ವೀಕ್ಷಿಸುವುದು ಮೊದಲ ಆದ್ಯತೆ. ಈ ಪಕ್ಷಿಗಳ ಜತೆ, ನಾವು ಸುಮಾರು 110 ಬೇರೆ ಬೇರೆ ಪ್ರಭೇದದ ಪಕ್ಷಿಗಳನ್ನೂ ವೀಕ್ಷಿಸಿದೆವು. ಅದರಲ್ಲೂ ಮುಖ್ಯವಾಗಿ ಯೂರೇಶಿಯನ್ ನೈಟ್‌ಜಾರ್, ಯೂರೇಶಿಯನ್ ಸ್ಕೈಲಾರ್ಕ್, ರೈನ್ ಕ್ವೆಲ್ ಮೊದಲಾದ ಪಕ್ಷಿಗಳನ್ನು ವೀಕ್ಷಿಸಿದ್ದು ನಮ್ಮ ಅದೃಷ್ಟ ಎಂದೇ ನನ್ನ ಭಾವನೆ.

# ಪುಸ್ತಕ ವಿಮಾನ

# ವರ್ತಮಾನದ ಜರೂರಿನ ಕೃತಿ

» ಪ್ರೊ. ಜಿ. ಎನ್. ಉಪಾಧ್ಯ, ಮುಂಬೈ

ಉಡುಪಿ ಜಿಲ್ಲಾ ಬರಹಗಾರರ ಕೋಶ ಇದು ಡಾ. ಅನಿಲ್ ಕುಮಾರ್ ಶೆಟ್ಟಿ ಅವರ ಪರಿಶ್ರಮದಿಂದ ಇತ್ತೀಚಿಗೆ ಬೆಳಕು ಕಂಡ ಮಹತ್ವದ ಉದ್ಗ್ರಥ. ಹೊಸಗನ್ನಡ ಸಾಹಿತ್ಯ ಸಾಕಷ್ಟು ಸಮೃದ್ಧವಾದುದು ಹಾಗೂ ವೈವಿಧ್ಯಮಯವಾದುದು. ಇಪ್ಪತ್ತನೆಯ ಶತಮಾನ ಕನ್ನಡ ಸಾಹಿತ್ಯದ ಮತ್ತೊಂದು ಸುವರ್ಣಯುಗ. ಕಳೆದ ಒಂದೂವರೆ ಶತಮಾನದ ಅವಧಿಯಲ್ಲಿ ಸಾವಿರಾರು ಸೃಜನಶೀಲ ಪ್ರತಿಭೆಗಳಿಂದ ಕನ್ನಡ ಸಾರಸ್ವತ ಲೋಕ ತುಂಬಿ ತೀವಿ ಬಂದಿದೆ. ಆದರೂ ಅನೇಕ ಲೇಖಕರ ಸಾಹಿತ್ಯ ಸಾಧನೆ ಇನ್ನೂ ಸರಿಯಾಗಿ ದಾಖಲಾಗಿಲ್ಲ. ಈ ಕೊರತೆಯನ್ನು ಒಂದು ಜಿಲ್ಲೆಯ ಮಟ್ಟಿಗಾದರೂ ತುಂಬಿಕೊಡುವ ನಿಟ್ಟಿನಲ್ಲಿ ಅನಿಲ್ ಕುಮಾರ್ ಶೆಟ್ಟಿ ಅವರು ಬರೆದು ಸಂಪಾದಿಸಿಕೊಟ್ಟಿರುವ ಉಡುಪಿ ಜಿಲ್ಲಾ ಬರಹಗಾರರ ಕೋಶ ಮುಖ್ಯವಾಗುತ್ತದೆ. ಇದೊಂದು ಬಹು ಆಯಾಮಗಳಿರುವ ಗ್ರಂಥವೂ ಹೌದು. ಸಾಂಪ್ರತ ಕನ್ನಡ ಸಾಹಿತ್ಯ ಚರಿತ್ರೆಯ ಭಾಗವಾಗಿಯೇ ಈ ಕೃತಿಯನ್ನು ನಾವು ಓದಿಕೊಳ್ಳಬೇಕಾಗಿದೆ.

ಉಡುಪಿ ಜಿಲ್ಲೆಯ ಇತಿಹಾಸ,ಸಾಂಸ್ಕೃತಿಕ ಹಿನ್ನೆಲೆ, ಅದರ ಏಳು ಬೀಳು, ಉಡುಪಿ ಜಿಲ್ಲೆಯಲ್ಲಿ ಕನ್ನಡ ಸಾಹಿತ್ಯ ಎಂದು ಉದಯವಾಯಿತು,ಕನ್ನಡ ಸಾಹಿತ್ಯ ವಾಹಿನಿಗೆ ಈ ಜಿಲ್ಲೆಯ ದೇಣಿಗೆ ಏನು,ಯಾವ ಯಾವ ಲೇಖಕರು ಈ ಜಿಲ್ಲೆಯಲ್ಲಿ ಸಾಹಿತ್ಯ ಕೃಷಿಯನ್ನು ಮಾಡಿದರು ಎಂಬುದನ್ನು, ವರ್ಣನಾತ್ಮಕವಾಗಿ ಬಹು ವಿಸ್ತಾರವಾಗಿ ಇಲ್ಲಿ ಕಟ್ಟಿಕೊಡಲಾಗಿದೆ. ದೇಶ ವಿದೇಶಗಳಲ್ಲಿ ಇರುವ ಉಡುಪಿ ಮೂಲದ ಬರಹಗಾರರ ಸಾಹಸ ಸಾಧನೆಯೂ ಇಲ್ಲಿ ದಾಖಲಾಗಿರುವುದು ಉಲ್ಲೇಖನೀಯ ಅಂಶ. ಅಪೂರ್ವ ಸಾಧನೆ ಮಾಡಿಯೂ ಸಾಹಿತ್ಯ ಚರಿತ್ರೆಯ ಪುಟಗಳಲ್ಲಿ ಕಾಣೆಯಾದ ಲೇಖಕರಿಗೆ ಇಲ್ಲಿ ಆದ್ಯತೆ ನೀಡಿ ಅವರ ಯೋಗದಾನವನ್ನು ಸ್ಮರಿಸಿಕೊಂಡಿರುವುದು ಯೋಗ್ಯ ಉಪಕ್ರಮ. ದೊಡ್ಡವರ ದೊಡ್ಡ ಸಾಧನೆಯ ಜತೆಗೆ ಜತೆಗೆ ಸಾಮಾನ್ಯ ಪ್ರತಿಭೆಗಳ ವಿಶೇಷ ಕೊಡುಗೆಯನ್ನು ಇಲ್ಲಿ ಸವಿವರವಾಗಿ ಕೊಡಲಾಗಿದೆ.ಉಡುಪಿ ಜಿಲ್ಲೆಯ ಹಿರಿಮೆ ಗರಿಮೆಯನ್ನು, ಈ ಜಿಲ್ಲೆಯ ಲೇಖಕರ ಕೃತಿಗಳ ಗುಣಾತಿಶಯಗಳನ್ನೂ ಇಲ್ಲಿ ಗುರುತಿಸಿ ಗೌರವಿಸಿರುವುದು ಔಚಿತ್ಯಪೂರ್ಣವಾಗಿದೆ.

**ಒಂದು ಪ್ರದೇಶದ ಸಾಹಿತ್ಯದ ಅವಲೋಕನ, ಅಲ್ಲಿನ ಪ್ರಮುಖ ಲೇಖಕರ ಮಾಹಿತಿಯನ್ನು ವ್ಯವಸ್ಥಿತವಾಗಿ ಇಲ್ಲಿ ನೀಡಲಾಗಿದೆ. ಇದೇ ರೀತಿ ಬೇರೆ ಪ್ರದೇಶಗಳ, ಜಿಲ್ಲೆಗಳ ಸಾಹಿತ್ಯ ಕೋಶಗಳು ಹೊರಬಂದರೆ, ಒಟ್ಟೂ ಕನ್ನಡ ಸಾಹಿತ್ಯ ಚರಿತ್ರೆಗೆ ಮಹತ್ವದ ಕೊಡುಗೆ ದೊರಕಿದಂತಾಗುತ್ತದೆ.**

ಉಡುಪಿ ಜಿಲ್ಲೆಯಲ್ಲಿ ಕಳೆದ ಶತಮಾನದಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ನಡೆದ ಚಟುವಟಿಕೆಗಳು ಮತ್ತು ಅವುಗಳ ಸಾಮಾಜಿಕ ಪರಿಣಾಮಗಳ ವಿಷಯದಲ್ಲಿ ವಿಶೇಷ ಅಧ್ಯಯನ ಮಾಡಿದವರು ಡಾ.ಅನಿಲ್ ಕುಮಾರ್ ಶೆಟ್ಟಿ. ಅವರ ಶತಪ್ರಯತ್ನದಿಂದ ಹೊರ ಬಂದಿರುವ ಈ ಕೋಶ ಕೇವಲ ಮಾಹಿತಿ ಸಂಗ್ರಹಕ್ಕಷ್ಟೇ ಸೀಮಿತವಾಗಿಲ್ಲ. ಈ ಜಿಲ್ಲೆಯ ಆಳ, ಅಗಲ, ಅಂತ:ಸತ್ವ ,ಸಾಂಸ್ಕೃತಿಕ ವೈಭವ,ಸಾಹಿತ್ಯಕ ಸಮೃದ್ಧಿ, ಧಾರ್ಮಿಕ, ಐತಿಹಾಸಿಕ, ಶೈಕ್ಷಣಿಕ ಮೊದಲಾದ ಕ್ಷೇತ್ರಗಳ ಮಹತ್ವಗಳನ್ನು ಇಲ್ಲಿ ಮುನ್ನೆಲೆಗೆ ತಂದು ಚರ್ಚಿಸಲಾಗಿದೆ.

ಬ್ರಿಟಿಷರು 1885 ರಲ್ಲಿ ಮಂಗಳೂರನ್ನು ಜಿಲ್ಲಾ ಕೇಂದ್ರವನ್ನಾಗಿ ಘೋಷಿಸಿ, ಜಿಲ್ಲಾಧಿಕಾರಿ ಕಛೇರಿ ಆರಂಭಿಸಿ, ಮಂಗಳೂರು ಸುತ್ತಲಿನ ನಾಲ್ಕು ನದಿಗಳಿಗೆ ಸೇತುವೆ ನಿರ್ಮಾಣಮಾಡಿ ಮಂಗಳೂರಿನಲ್ಲಿಯೇ ಉನ್ನತ ಶಿಕ್ಷಣ ಕೇಂದ್ರವನ್ನು ತೆರೆದು, ತಮ್ಮ ಆಡಳಿತಾತ್ಮಕ ಅನುಕೂಲಕ್ಕಾಗಿ ಮಂಗಳೂರನ್ನು



**ಉಡುಪಿ ಜಿಲ್ಲಾ ಬರಹಗಾರರ ಕೋಶ**
**ಸಂ:ಡಾ. ಅನಿಲ್ ಕುಮಾರ್ ಶೆಟ್ಟಿ**
**ಪ್ರ: ಬಾಲಾಜಿ ಪಬ್ಲಿಷರ್ಸ್, ಬೆಂಗಳೂರು.**
**9480600838**
**ಬೆಲೆ ರು.1,499/-**
**ಪುಟಗಳು 883**

ಮದರಾಸಿನೊಂದಿಗೆ ಜೋಡಿಸಲು ರೈಲು ಸಂಪರ್ಕವನ್ನು ಸಾಧ್ಯಗೊಳಿಸಿದರು(1907); ಆದರೆ ಮಂಗಳೂರಿನಿಂದ ಈಚೆಗಿನ ಮೂರು ತಾಲೂಕು ಪ್ರದೇಶಗಳ (ಉಡುಪಿ, ಕಾರ್ಕಳ, ಕುಂದಾಪುರ) ಅಭಿವೃದ್ಧಿಗೆ ಶೂನ್ಯ ಕೊಡುಗೆಯನ್ನು ಕೊಟ್ಟರು. ಇದು ಸ್ವಾತಂತ್ರ್ಯ ಪೂರ್ವದ ವಾಸ್ತವ. ಈ ಕಾರಣಗಳಿಂದಾಗಿ 15ನೆಯ ಶತಮಾನದಿಂದ ತೊಡಗಿ, 18ನೆಯ ಶತಮಾನದ ಅಂತ್ಯದವರೆಗೂ ಏರುಗತಿಯಲ್ಲಿ ಪ್ರಗತಿಯನ್ನು ಕಂಡ ಇಂದಿನ ಉಡುಪಿ ಜಿಲ್ಲೆಯ ಭೌಗೋಳಿಕ ಪ್ರದೇಶವು ಸುಮಾರು 19ನೆಯ ಶತಮಾನದ ಮಧ್ಯಭಾಗದಿಂದಲೇ ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಸಾಹಿತ್ಯಕವಾಗಿ ತೀವ್ರವಾಗಿ ಸೊರಗುವುದಕ್ಕೆ ತೊಡಗಿತು. ಹೀಗೆ ಈ ಕೋಶದ ಪ್ರಸ್ತಾವನೆಯಲ್ಲಿ ಅನಿಲ್ ಕುಮಾರ್ ಅವರು ಅನೇಕ ಚಾರಿತ್ರಿಕ ಸಾಂಸ್ಕೃತಿಕ ಮಹತ್ವದ ವಿದ್ಯಮಾನಗಳನ್ನು ವಿಶ್ಲೇಷಣೆ ಮಾಡಿರುವುದು ಈ ಕೋಶದ ವಿಶೇಷ.

ಉಡುಪಿ ಜಿಲ್ಲೆಯಲ್ಲಿ ನಡೆದ ಸ್ವಾತಂತ್ರ್ಯ ಚಳುವಳಿ, ಕನ್ನಡ ಕಾವ್ಯ ವಾಹಿನಿಗೆ ಈ ಜಿಲ್ಲೆಯ ಕೊಡುಗೆ, ಯಕ್ಷಗಾನ ಕಲಾ ಪ್ರಕಾರ ಇಲ್ಲಿ ಬೆಳೆದು ಬಂದ ಬಗೆ, ಶಿವರಾಮ ಕಾರಂತರಿಂದ ತೊಡಗಿ ಉಡುಪಿ ಜಿಲ್ಲೆಯ ಕಾದಂಬರಿಕಾರರು, ಕಥೆಗಾರರು, ರಂಗಭೂಮಿಗೆ ಉಡುಪಿ ಜಿಲ್ಲೆಯ ಕೊಡುಗೆ, ಉಡುಪಿ ಜಿಲ್ಲೆಯ ಪತ್ರಿಕೋದ್ಯಮ ಮೊದಲಾಗಿ ಈ ಜಿಲ್ಲಾ ವ್ಯಾಪ್ತಿಯ ಸಾಂಸ್ಕೃತಿಕ ವಿಶೇಷಗಳ ವಿವೇಚನೆಯೂ ಈ ಕೋಶದಲ್ಲಿ ನೆಲೆ ಪಡೆದುಕೊಂಡಿದೆ. ಇದಕ್ಕಾಗಿ ಲೇಖಕರು ವ್ಯಾಪ್ತಕವಾದ ಕ್ಷೇತ್ರಕಾರ್ಯ ಮಾಡಿ ಬಹಳ ಶ್ರದ್ಧೆಯಿಂದ ಮಾಹಿತಿಗಳನ್ನು ಸಂಗ್ರಹ ಮಾಡಿ ವಿಶ್ಲೇಷಣೆ ಮಾಡಿರುವುದು ಮೆಚ್ಚುವಂತಹದು.

ಇತಿಹಾಸದಲ್ಲಿ ನಮೂದಾಗದ, ಉಪೇಕ್ಷೆಗೆ ಒಳಗಾದ ಅನೇಕ ಲೇಖಕರ ಜೀವನ ವೃತ್ತಾಂತವನ್ನು ಇಲ್ಲಿ ಮೊದಲ ಬಾರಿಗೆ ಲೋಕಮುಖಕ್ಕೆ ತೆರೆದಿಡಲಾಗಿದೆ. ಗ್ರಂಥ ಪ್ರಕಟನೆಯೆಂಬುದು ಸದಾ ನಡೆಯುತ್ತಲೇ ಇರುವಂತಹದಾದುದರಿಂದ ಗ್ರಂಥಸೂಚಿ, ಪುಸ್ತಕಸೂಚಿಗಳೂ ಸಿದ್ಧಗೊಳ್ಳುತ್ತಲೇ ಇರಬೇಕಾಗುತ್ತವೆ. ಆದರೆ ಕನ್ನಡದಲ್ಲಿ ಈ ಸೂಚಿಗಳ ರಚನೆಗೆ ಒಂದು ಖಚಿತವಾದ ಸ್ಥಿರವ್ಯವಸ್ಥೆಯಿಲ್ಲ. ಪ್ರಸ್ತುತ 'ಉಡುಪಿ ಜಿಲ್ಲೆಯ ಬರಹಗಾರರ ಕೋಶ'ವು ಸಾಕಷ್ಟು ವಿಷಯಸಂಗ್ರಹ ಮತ್ತು ಕ್ಷೇತ್ರಕಾರ್ಯ ಸಂಶೋಧನೆಗಳಿಂದ ಸಿದ್ಧಪಡಿಸಲಾದುದಾಗಿದ್ದು, ಹೆಚ್ಚು ಪ್ರಯೋಜಕಾರಿಯಾಗಿದೆ ಎಂಬುದರಲ್ಲಿ ಸಂದೇಹವಿಲ್ಲ. ಎಲ್ಲ ಜಿಲ್ಲೆಗಳ ಲೇಖಕರ ಬಗೆಗೂ ಇಂತಹ ಕೋಶಗಳು ಬಂದಾಗ ಸಮಗ್ರ ಕನ್ನಡದ ಲೇಖಕರ 'ಮಾಹಿತಿ-ಕಣಜ' ಸಿದ್ಧವಾದಂತಾಗುತ್ತದೆ ಎಂಬುದಾಗಿ ಈ ಕೃತಿಯ ಮುಮ್ಮಾತಿನಲ್ಲಿ ಹಿರಿಯ ವಿದ್ವಾಂಸರಾದ ಡಾ.ಪಾದೇಕಲ್ಲು ಡಾ.ವಿಷ್ಣು ಭಟ್ಟ ಅವರು ಹೇಳಿರುವುದು ಅವಲೋಕನೀಯವಾಗಿದೆ. ಸಾಹಿತ್ಯ ಪರಿಷತ್ತು, ಅಕಾಡೆಮಿ, ವಿಶ್ವವಿದ್ಯಾಲಯಗಳು ಮಾಡಬೇಕಾದ ಕೆಲಸವನ್ನು ಅನಿಲ್ ಕುಮಾರ್ ಅವರು ಏಕಾಂಗಿಯಾಗಿ ಮಾಡಿರುವುದು ಅಭಿಮಾನದ ಹೆಮ್ಮೆಯ ಸಂಗತಿ. ಇದೊಂದು ವರ್ತಮಾನದ ಜರೂರಿನ ಮಾದರಿ ಉಪಕ್ರಮ.

## ವಿಶ್ವವಾಣಿ ಅಂಕಿತ ಟಾಪ್ ಟೆನ್

1



ಮಾಗಧ
(ಸಾಮ್ರಾಟ್ ಅಶೋಕನ ಕಾಲದ ರಾಜಕೀಯ-ಧಾರ್ಮಿಕ ಸ್ಥಿತಿಗತಿಗಳ ಚಿತ್ರಣ)
ಲೇ: ಸಹನಾ ವಿಜಯಕುಮಾರ್
ಪ್ರ: ಸಾಹಿತ್ಯ ಭಂಡಾರ, ಬೆಂಗಳೂರು
ಬೆಲೆ : ರೂ 915/-

2



ಪೂರ್ಣಚಂದ್ರ ತೇಜಸ್ವಿ
(ಸಂವಾದ- ಸಂದರ್ಶನ - ಪರಿಸರ ಸಂಕಥನ)
ಲೇ: ನರೇಂದ್ರ ರೈ ದೇರ್ಲ
ಪ್ರ: ಕನಸು ಪ್ರಕಾಶನ, ಪುತ್ತೂರು
ಬೆಲೆ : ರೂ 180/-

3



ತತ್ರಾಣಿ
(ಗತ ಶತಮಾನದ ಉತ್ಕ್ರಾಂತಿಯ ಕಥೆ - ಕಾದಂಬರಿ)
ಲೇ: ದೀಪಾ ಜೋಶಿ
ಪ್ರ: ಅಂಕಿತ ಪುಸ್ತಕ, ಬೆಂಗಳೂರು
ಬೆಲೆ : ರೂ 395/-

4



ವಾತಾಪಿ.....
(ಇಮ್ಮಡಿ ಪುಲಕೇಶಿಯ ರೋಚಕ ಚರಿತ್ರೆ)
ಲೇ: ಸಂತೋಷಕುಮಾರ ಮೆಹೆಂದಳೆ
ಪ್ರ: ಸಾಹಿತ್ಯಲೋಕ ಪಬ್ಲಿಕೇಷನ್ಸ್, ಬೆಂಗಳೂರು
ಬೆಲೆ : ರೂ 449/-

5



ಸಾಂಸ್ಕೃತಿಕ ರಾಜಕೀಯ
(ಇಂದಿನ ಇತಿಹಾಸ)
ಲೇ: ರಾಜೇಂದ್ರ ಚೆನ್ನಿ
ಪ್ರ: ಅಭಿರುಚಿ ಪ್ರಕಾಶನ, ಮೈಸೂರು
ಬೆಲೆ : ರೂ 280/-

6



ಇವಾನ್ ಇಲ್ಲಿಚ್ ಇನ್ನಿಲ್ಲ!
(ಟಾಲ್‌ಸ್ಟಾಯ್ ಅವರ ಕಾದಂಬರಿ)
ಅನು : ಕೆ. ಶ್ರೀನಾಥ್
ಪ್ರ: ನುಡಿ ಪುಸ್ತಕ, ಬೆಂಗಳೂರು
ಬೆಲೆ : ರೂ 150/-

7



ಗಳಿಕೆ ಉಳಿಕೆ ಹೂಡಿಕೆ
(ಹಣಕಾಸು ಆರೋಗ್ಯಕ್ಕೆ ಮೂರು ಮಂತ್ರಗಳು)
ಲೇ: ರಂಗಸ್ವಾಮಿ ಮೂಕನಹಳ್ಳಿ
ಪ್ರ: ಸಾವಣ್ಣ ಪ್ರಕಾಶನ, ಬೆಂಗಳೂರು
ಬೆಲೆ : ರೂ 270/-

8



ಕುಡಿಯೋಣು ಬಾರಾ
(ಗುಂಡಿನ ಕುರಿತ 'ಸಾಂಸ್ಕೃತಿಕ'ಹರಟೆ)
ಲೇ: ವಿಶ್ವೇಶ್ವರ ಭಟ್
ಪ್ರ: ವಿಶ್ವವಾಣಿ ಪುಸ್ತಕ, ಬೆಂಗಳೂರು
ಬೆಲೆ : ರೂ 300/-

9



ಪ್ರವಾಸಿಗರು ಕಂಡ ಬೌದ್ಧ ಸಂಸ್ಕೃತಿ
(ಬೌದ್ಧ ಸ್ಥಳಗಳ ದರ್ಶನ)
ಸಂ : ಪ್ರೊ। ಮಲ್ಲೇಪುರಂ ಜಿ. ವೆಂಕಟೇಶ
ಪ್ರ: ಪಾಲಿ ಇನ್‌ಸ್ಟಿಟ್ಯೂಟ್, ಕಲಬುರಗಿ
ಬೆಲೆ : ರೂ 200/-

10

ದಿ ಗರ್ಲ್ ವಿತ್ ದಿ ಗೋಲ್ಡನ್ ಐಸ್
(ಫ್ರೆಂಚ್ ಕಾದಂಬರಿ)
ಲೇ: ಹೊನೊರೆ ಡಿ ಬಾಲಾಜಕ್
ಅನು : ರಾಜಣ್ಣ ತಗ್ಗಿ
ಪ್ರ: ಸೃಷ್ಟಿ ಪಬ್ಲಿಕೇಷನ್ಸ್, ಬೆಂಗಳೂರು
ಬೆಲೆ : ರೂ 140/-

ಮಾಹಿತಿ: ಅಂಕಿತಪುಸ್ತಕ, 53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560004. ದೂರವಾಣಿ: 26617100/26617755
ಮೊಬೈಲ್ ನಂ: 9019190502

# ದಂತ ಕಥೆಗಳು

» ಅಜಯ್

**ಕನ್ನಡದಲ್ಲಿ ದಂತ ವೈದ್ಯಕೀಯ ಕ್ಷೇತ್ರದ ಪುಸ್ತಕಗಳು ವಿರಳಾತಿವಿರಳ; ಆ ಕೊರತೆಯನ್ನು ತುಂಬುವಂತಿದೆ ಈ ರಸವತ್ತಾದ ಪುಸ್ತಕ.**

ವೃತ್ತಿಯಲ್ಲಿ ದಂತವೈದ್ಯರಾಗಿರುವ, ಪ್ರವೃತ್ತಿಯಲ್ಲಿ ಸಾಹಿತ್ಯವನ್ನು ಗಂಭೀರವಾಗಿ ಪರಿಗಣಿಸಿರುವ ಡಾ. ಕೆ.ಎಸ್. ಚೈತ್ರಾ ಅವರ 'ದಂತ ಕಥೆಗಳು' ಒಂದು ವಿಶಿಷ್ಟ ಪುಸ್ತಕ. ಚೈತ್ರಾ ಅವರು, ತಮ್ಮ ವೃತ್ತಿ ಜೀವನದಲ್ಲಿ ಕಂಡ ವಿವಿಧ ಪ್ರಸಂಗಗಳನ್ನು ಪ್ರಬಂಧದ ರೂಪದಲ್ಲಿ, ಹಾಸ್ಯ ಬರಹದ ರೂಪದಲ್ಲಿ ಇಲ್ಲಿ ಪ್ರಸ್ತುತಪಡಿಸಿದ್ದಾರೆ. ಅವರ ವೈದ್ಯಕೀಯ ವಿದ್ಯಾರ್ಥಿ ಜೀವನದ ಹಲವು ಸ್ವಾರಸ್ಯಕರ ಅನುಭವಗಳೂ ಇಲ್ಲಿದ್ದು, ಅವುಗಳನ್ನು ಓದುತ್ತಾ ಹೋದಂತೆ, ಓದುಗರು ಹೊಸದೊಂದೇ ಲೋಕವನ್ನು ಪ್ರವೇಶಿಸುತ್ತಾರೆ ಎನ್ನಬಹುದು. ''ಹಲ್ಲು 32 ಇರಬಹುದು, ಆದರೆ ನಾನು ಬರೆಯೋದು 28 ಕಥನ ಅಷ್ಟೇ' ಎಂದು ಹಲ್ಲಿನ ಲೋಕದಲ್ಲಿ ಪಯಣ ಹೊರಟವರು ಡಾ. ಕೆ.ಎಸ್.ಚೈತ್ರಾ. 'ಚೈ' ಎಂದೇ ಎಲ್ಲರಿಂದಲೂ ಪ್ರೀತಿಯಿಂದ ಕರೆಸಿಕೊಳ್ಳುವ ಇವರು, ಕನ್ನಡ ಪುಸ್ತಕ ಲೋಕದಲ್ಲಿ ಇಲ್ಲವೇ ಇಲ್ಲ ಎನ್ನುವಂತಿರುವ ದಂತ ವೈದ್ಯಕೀಯದ ಬಗ್ಗೆ ಪುಸ್ತಕ ಬರ್‍ದಿದ್ದಾರೆ. ಅದೂ ಎಷ್ಟು ರಸವತ್ತಾಗಿ ಎಂದರೆ ಇದನ್ನು ನೀವು ಓದದೇ ಇರಲು ಸಾಧ್ಯವೇ ಇಲ್ಲ. ತಾವು ದಂತ ವೈದ್ಯದ ವಿದ್ಯಾರ್ಥಿಯಾಗಿದ್ದಾಗಿನ ಅನುಭವಗಳನ್ನು ನಮ್ಮ ಮುಖದಲ್ಲೂ ಮುಗುಳ್ನಗೆ ಮೂಡುವಂತೆ ಚಿತ್ರಿಸಿರುವ ಚೈತ್ರಾ ಅವರು, ಕನ್ನಡ ಸಾಹಿತ್ಯ ಲೋಕದಲ್ಲಿ ಚಿರಪರಿಚಿತ ಹೆಸರು. ನುಡಿದರೆ ಮುತ್ತಿನ ಹಾರದಂತಿರಬೇಕು ಎನ್ನುವ ಸಾಲನ್ನು 'ನುಡಿಯಲು ಬಾಯಿ ತೆರೆದರೆ ಮುತ್ತಿನ ಹಾರ ಕಾಣುವಂತಿರಬೇಕು' ಎಂದು ಈ ಪುಸ್ತಕ ಓದಿದವರು ಅರ್ಥ ಮಾಡಿಕೊಳ್ಳುವಂತಿದೆ ಈ ಕೃತಿ.''(ಬೆನ್ನುಡಿಯಿಂದ)

ದಂತ ಕಥೆಗಳು
ಲೇ: ಡಾ. ಕೆ.ಎಸ್.ಚೈತ್ರಾ
ಪ್ರ: ಬಹುರೂಪಿ ಬೆಂಗಳೂರು
7019182729
ಬೆಲೆ ರು. 175/-



# ಕಣ್ಣು ಕಂಡ ಕ್ಷಣಗಳು

ಹಲವು ಮಹತ್ವಪೂರ್ಣ ಚಲನಚಿತ್ರಗಳನ್ನು ಕೊಟ್ಟಿರುವ ನಿರ್ದೇಶಕ ಪಿ.ಶೇಷಾದ್ರಿಯವರ ಕುರಿತು ಅವರ ಒಡನಾಡಿಗಳ ನೆನಪುಗಳ ಸಂಕಲನವೇ ಈ ಪುಸ್ತಕ. ''ಸಿನಿಮಾ ತಯಾರಿಕೆಯಲ್ಲಿ ನಿರ್ದೇಶಕನ ಸಾರಥ್ಯವಿದ್ದರೂ ಒಂದು ಸಮಷ್ಟಿ ಕ್ರಿಯೆಯಲ್ಲಿ ನಡೆಯುವ ಚಟುವಟಿಕೆ ಎನ್ನುವುದು ಎಲ್ಲರಿಗೂ ತಿಳಿದಿರುವ ವಿಷಯ. ತನ್ನ ಮನಸ್ಸಿನ ಪಾತಳಿಯಲ್ಲಿ ಹುಟ್ಟಿದ ಕಲ್ಪನೆಯನ್ನು ಸಾಕಾರಗೊಳಿಸಲು ಆ ನಿರ್ದೇಶಕ ಹಲವಾರು ಜನರ ಬೌದ್ಧಿಕ ವಿಸ್ತಾರವನ್ನು ಬಳಸಿಕೊಂಡು ಅಂತ್ಯರೂಪ ಕೊಡುತ್ತಾನೆ. ಹಾಗೆ ಪಾಲ್ಗೊಳ್ಳುವ ಮಂದಿ ತಮ್ಮ ಪ್ರತಿಭೆಯನ್ನು ಉಪಯೋಗಿಸುತ್ತಲೇ ತಮ್ಮ ಮುಖಂಡನಾದ ನಿರ್ದೇಶಕನ ಬಗ್ಗೆ ತಮ್ಮದೇ ಆದ ನಿಲುವು ಹೊಂದಿರುತ್ತಾರೆ. ನಿರ್ದೇಶಕನ ಕುರಿತು ಅವನ ಸಮಕಾಲೀನರಾದ ಇತರ ನಿರ್ದೇಶಕರು, ನಟ ನಟಿಯರು ಕೂಡಾ ತಮ್ಮದೇ ಅಭಿಪ್ರಾಯಗಳನ್ನು ಇಟ್ಟುಕೊಂಡಿರುತ್ತಾರೆ. ಕೆಲವು ಬಾರಿ ಆ ಅಭಿಪ್ರಾಯಗಳು ವಿಮರ್ಶಾತ್ಮಕವಾಗಿ ಇರುತ್ತವಲ್ಲದೆ ಅವನ್ನು ಆರೋಗ್ಯಕರವಾಗಿ ಸ್ವೀಕರಿಸಿದರೆ ಸದರಿ ನಿರ್ದೇಶಕನ ಬೆಳವಣಿಗೆಗೂ ದಿಕ್ಸೂಚಿಯಾಗಬಲ್ಲದು. ಸದ್ಯ ಕನ್ನಡ ಚಿತ್ರರಂಗದಲ್ಲಿ ಅಂಥ ಪರಂಪರೆಯೊಂದು ಇನ್ನೂ ಬಂದಿಲ್ಲವೆನ್ನಬಹುದು. ಅದರಿಂದಾಗಿ ಅನೇಕ ನಿರ್ದೇಶಕರು ಜನಮಾನಸದಿಂದ ಮರೆಯಾಗುವ ಸಾಧ್ಯತೆಗಳೇ ಹೆಚ್ಚು. ಈ ಕೃತಿಯಲ್ಲಿ ಪಿ.ಶೇಷಾದ್ರಿ ಅವರ ಒಡನಾಟಕ್ಕೆ ಬಂದ ಅನೇಕರ ವೈಯಕ್ತಿಕ ಉಲ್ಲೇಖಗಳೂ, ಅವರ ವ್ಯಕ್ತಿತ್ವದ ಬಗ್ಗೆ ಪ್ರತಿಕ್ರಿಯೆಗಳೂ ಇವೆ.''(ಬೆನ್ನುಡಿಯಿಂದ)



**ಕಣ್ಣು ಕಂಡ ಕ್ಷಣಗಳು**
**ಸಂ: ಗೋಪಾಲಕೃಷ್ಣ ಪೈ**
**ಪ್ರ: ಅಂಕಿತ ಪುಸ್ತಕ ಬೆಂಗಳೂರು**
**ಬೆಲೆ ರು.250/-**

# ವಿಶಿಷ್ಟ ದಾಖಲೆಗಳ ಮಹತ್ವದ ಅನುವಾದ

» ಎಂ.ಎಸ್.ಹೆಬ್ಬಾರ್

**ಹಲವು ವರ್ಷಗಳ ಸಂಶೋಧನೆಯಿಂದ ದಾಖಲೆ ಸಂಗ್ರಹಿಸಿ, ಪ್ರಕಟಿಸಿದ ಸೀತಾರಾಮ ಗೋಯಲ್ ಅವರ ಗ್ರಂಥವು ಈಗ ಕನ್ನಡಕ್ಕೆ ಅನುವಾದಗೊಂಡಿದೆ.**

ಇತಿಹಾಸ ಸಂಶೋಧಕರಾದ ಸೀತಾರಾಮ್ ಗೋಯಲ್ ಅವರ 'ಹಿಂದು ಟೆಂಪಲ್ಸ್ - ವಾಟ್ ಹ್ಯಾಪನ್‌ಡ್ ಟು ದೆಮ್: ಮೊದಲ ಸಂಪುಟ - ಎ ಪ್ರಿಲಿಮಿನರಿ ಸರ್ವೇ' ಎಂಬ ಮಹತ್ವದ ಗ್ರಂಥವು ಈಗ ಕನ್ನಡಕ್ಕೆ ಅನುವಾದಗೊಂಡಿದೆ. ಹಲವು ವರ್ಷಗಳ ಪರಿಶ್ರಮದಿಂದ, ಸಾಹಿತಿ ಮತ್ತು ಅಂಕಣಕಾರರಾದ ಮಂಜುನಾಥ ಅಜ್ಜಂಪುರ ಅವರು ಇದನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಇದೊಂದು ಬೃಹತ್ ಗ್ರಂಥ; ಇದರ ಅನುವಾದದ ಕೆಲಸವೂ ಬಹು ಪರಿಶ್ರಮದ್ದು. ಸುಮಾರು 500 ಪುಟಗಳ ಅನುವಾದವನ್ನು ಮಾಡುವಾಗ ಎದುರಾದ ತೊಡಕುಗಳನ್ನು ಅನುವಾದಕಾರರಾದ ಮಂಜುನಾಥ ಅಜ್ಜಂಪುರ ಅವರು ತಮ್ಮ ಮಾತುಗಳಲ್ಲಿ ಹೀಗೆ ಹೇಳಿದ್ದಾರೆ : 'ಭಾಷಾಂತರ, ಅನುಸೃಷ್ಟಿ, ಅನುವಾದಗಳು ಸ್ವಂತ ಬರವಣಿಗೆಗಳಿಗಿಂತ ತೀರಾ ತೀರಾ ಕಷ್ಟ. ಕಥೆ, ಕಾದಂಬರಿ, ಕವನ ಮತ್ತು ಅಂಕಣ ಬರೆಹಗಳಿಗಿಂತ, ವೈಚಾರಿಕ ಕೃತಿಗಳ ಭಾಷಾಂತರ ನಿಜಕ್ಕೂ ಸವಾಲೇ ಸರಿ. ಇನ್ನು ವಿಶ್ವಮಟ್ಟದ ಬರೆಹಗಾರರಾದ ಸೀತಾರಾಮ ಗೋಯಲ್, ಅರುಣ್ ಶೌರಿ ಅಂತಹವರ ಕೃತಿಗಳ ಸಮರ್ಪಕ ಭಾಷಾಂತರ ಕಠಿಣಾತಿಕಠಿಣ. ಇನ್ ಫ್ಯಾಕ್ಟ್, ಈ ಸರಣಿಯ ಅನುವಾದ ಅದೆಷ್ಟು ಶ್ರಮದಾಯಕ ಎಂದರೆ, ಗೋಯಲ್ ಅವರ ಒಂದು ಸಂಕೀರ್ಣ ವಾಕ್ಯದ ಅನುವಾದವು ಒಂದು ಇಡೀ ಪುಟವನ್ನು ತುಂಬಿಕೊಂಡಿತು! ಅನುವಾದ ಮಾಡಲು ಒಂದು ಇಡೀ ದಿನ ಸಾಕಾಗಲಿಲ್ಲ. . .'(ಪುಟ 56) '. . ಈ ಹಿಂದು ಟೆಂಪಲ್ :ವಾಟ್ ಹ್ಯಾಪನ್‌ಡ್ ಟು ದೆಮ್' ಕೃತಿಯಲ್ಲಿ ಅಕ್ಷರಶಃ ಸಹಸ್ರಾರು ಹಿಂದೂ, ಜೈನ, ಬೌದ್ಧ, ಸಿಖ್ ಆರಾಧನಾ ಮಂದಿರಗಳ ಮತ್ತು ಸ್ಥಳಗಳ ವಿವರಗಳಿವೆ. ಈ ಕೃತಿ ಮತ್ತು ಇಂತಹ ಬಹುಪಾಲು ಮಹತ್ತ್ವದ ಕೃತಿಗಳು ಇಂಗ್ಲಿಷ್ ಭಾಷೆಯಲ್ಲಿವೆ ಮತ್ತು (ಇಂಗ್ಲಿಷ್ ಭಾಷೆಗೆ ಲಿಪಿಯೇ ಇಲ್ಲ ಕಾರಣ) ರೋಮನ್ ಲಿಪಿಯಲ್ಲಿವೆ. ರೋಮನ್ ಲಿಪಿಯಲ್ಲಿ ತಕಾರ - ಟಕಾರ, ಡಕಾರ - ದಕಾರ, ಹ್ರಸ್ವ - ದೀರ್ಘ ಯಾವುದರ ಸಮರ್ಥ ಅಭಿವ್ಯಕ್ತಿಯೂ ಸಾಧ್ಯವಿಲ್ಲ. ಈ ಕೃತಿಯಲ್ಲಿ ಬರುವ ಸಾವಿರಾರು ಸ್ಥಳನಾಮಗಳನ್ನೂ, ಇನ್ನಿತರ ಹೆಸರುಗಳನ್ನೂ ಸರಿಯಾಗಿ ಅಭಿವ್ಯಕ್ತಿಗೊಳಿಸುವುದರಲ್ಲಿ ಈ ರೋಮನ್ ಲಿಪಿ ಪೂರ್ಣವಾಗಿ ವಿಫಲವಾಗಿದೆ. ಒಂದೊಂದು ಸ್ಥಳನಾಮಕ್ಕೆ ಮತ್ತು ಇತರ ಮಹತ್ತ್ವದ ಹೆಸರುಗಳಿಗೆ ಮೂಲ ರೂಪವನ್ನು ಅರಿಯಲು, ಸರಿಯಾದ ಉಚ್ಚಾರಣೆಯನ್ನು ಬರೆಯಲು ಹರಸಾಹಸವನ್ನೇ ಮಾಡಬೇಕಾಯಿತು. ಅಂತರಜಾಲ ಮತ್ತು ಇನ್ನಿತರ ಜಾಲತಾಣಗಳಿಂದ ಸರಿಯಾದ ಉಚ್ಚಾರಣೆಯನ್ನು ತಿಳಿಯಲು, ಹಲವು ನೂರು ಘಂಟೆಗಳ ಸಮಯವನ್ನು ವಿನಿಯೋಗಿಸಬೇಕಾಯಿತು. .' (ಪುಟ 59) (ಅನುವಾದ ಜಗತ್ತಿನೊಂದಿಗೆ ಅನುಸಂಧಾನ).

1990ರಲ್ಲಿ ಇಂಗ್ಲಿಷ್‌ನಲ್ಲಿ ಪ್ರಕಟಗೊಂಡ ಮೂಲ ಗ್ರಂಥದ ಕರ್ತೃ ಸೀತಾರಾಮ್ ಗೋಯಲ್ (1921-2003) ಅವರು, ತಮ್ಮ ಅಗಾಧ ಸಂಶೋಧನೆಯ ತಳಹದಿಯಲ್ಲಿ ಹಲವು ಗ್ರಂಥಗಳನ್ನು ರಚಿಸಿದ್ದಾರೆ. ಈಗ ಈ ಸರಣಿಯ ಮೊದಲ ಸಂಪುಟವು ಕನ್ನಡಕ್ಕೆ ಅನುವಾದಗೊಂಡಿದ್ದು, ಎರಡನೆಯ ಸಂಪುಟವು ಇನ್ನಷ್ಟೇ ಹೊರಬರಬೇಕಿದೆ. ಸೀತಾರಾಮ್ ಗೋಯಲ್ ಅವರ ಇತರ ಎಂಟು ಕೃತಿಗಳು ಈಗಾಗಲೇ



**ಹಿಂದೂ ದೇವಾಲಯಗಳು : ಒಂದು ಪೂರ್ವಭಾವಿ ಸರ್ವೇಕ್ಷಣ**
**ಮೊದಲ ಸಂಪುಟ**
**ಮೂಲ : ಸೀತಾರಾಮ ಗೋಯಲ್**
**ಅನು: ಮಂಜುನಾಥ ಅಜ್ಜಂಪುರ**
**ಪ್ರ: ಸಾಹಿತ್ಯ ಸಿಂಧು ಪ್ರಕಾಶನ, ಬೆಂಗಳೂರು**
**9742588860**
**ಬೆಲೆ ರು.600/-**

ಕನ್ನಡಕ್ಕೆ ಅನುವಾದಗೊಂಡಿದ್ದು, ಆ ಅನುವಾದ ಸಿದ್ಧಪಡಿಸುವಲ್ಲಿ ಮಂಜುನಾಥ ಅಜ್ಜಂಪುರ ಅವರ ಪರಿಶ್ರಮ ಮೌಲಿಕವಾದುದು. ಹಿರಿಯ ಸಾಹಿತಿ ಡಾ. ಎಸ್.ಎಲ್.ಭೈರಪ್ಪ ಅವರ ಪ್ರಸ್ತಾವನೆಯನ್ನು ಹೊಂದಿರುವ ಈ ಗ್ರಂಥದಲ್ಲಿ, ಸೀತಾರಾಮ್ ಗೋಯಲ್ ಅವರು ಮೂಲಗ್ರಂಥಕ್ಕೆ ಬರೆದ 17 ಪುಟಗಳ ಸುದೀರ್ಘ ಪ್ರಸ್ತಾವನೆಯೂ ಇದೆ.

ನಮ್ಮ ದೇಶದ ಸಾವಿರಾರು ದೇವಾಲಯಗಳ ಇತಿಹಾಸದ ಕಾಲದಲ್ಲಿ ನಾಶವಾದ ಕುರಿತು ವಿವರವಾದ ಟಿಪ್ಪಣಿ, ಆಧಾರ ಗ್ರಂಥಗಳು, ಶಾಸನದ ಆಧಾರಗಳು, ದಾಖಲೆಗಳು, ವಿಶ್ಲೇಷಣೆ ಎಲ್ಲವನ್ನೂ ಹೊಂದಿರುವ ಈ ಕೃತಿಯು, ಈ ಕ್ಷೇತ್ರದಲ್ಲಿ ಕನ್ನಡಕ್ಕೆ ಅನುವಾದಗೊಂಡ, ಅಪರೂಪದ ದಾಖಲೆಗಳನ್ನು ನೀಡುವ ಬೃಹತ್ ಗ್ರಂಥ ಎನ್ನುವುದರಲ್ಲಿ ಎರಡು ಮಾತಿಲ್ಲ.

# ದೇವೇಗೌಡರ ರಾಜಕೀಯ ಬದುಕಿನ ಕಥನ

» ಕಗ್ಗೆರೆ ಪ್ರಕಾಶ್

ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳು, ಕನ್ನಡಪರ ಚಿಂತಕರೂ ಆದ ನೇ.ಭ. ರಾಮಲಿಂಗಶೆಟ್ಟರು ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರ ಕುರಿತು 'ಮಣ್ಣಿನ ಮಗ ನಾನು ಕಂಡಂತೆ ಮತ್ತು ನಾಡು ಕಂಡಂತೆ' ಎಂಬ ಪುಸ್ತಕ ಪ್ರಕಟಿಸಿದ್ದಾರೆ. ಬಹುವಿಷಯ ವಿಸ್ತಾರದ ಈ ಕೃತಿಯಲ್ಲಿ ಹಲವು ಸತ್ಯಸಂಗತಿಗಳು ದಾಖಲಾಗಿವೆ.

ದೇವೇಗೌಡರ ಸಂಬಂಧಿತ ಹಲವು



ಮಣ್ಣಿನ ಮಗ
ಲೇ: ನೇ.ಭ. ರಾಮಲಿಂಗ ಶೆಟ್ಟಿ
ಪ್ರ: ಸ್ನೇಹ ಬುಕ್ ಹೌಸ್, ಬೆಂಗಳೂರು.
ಬೆಲೆ ರು. 399/-

ಗ್ರಂಥಗಳ ಅಧ್ಯಯನ, ಹಲವಾರು ವ್ಯಕ್ತಿಗಳ ಭೇಟಿ ಮಾಡಿ ವಿಷಯ ಸಂಗ್ರಹಿಸಿರುವುದಲ್ಲದೆ ಸೂಕ್ತ ವ್ಯಕ್ತಿಗಳಿಂದ ಲೇಖನಗಳನ್ನು ಬರೆಸಿರುವುದು ಅಪರೂಪವಾಗಿದೆ. ದೇವೇಗೌಡರ ಬದುಕು, ರಾಜಕೀಯ, ಜೀವನ ವೃತ್ತಾಂತ ಕುರಿತಂತೆ ಕೇವಲ ಏಕಮುಖವಾಗಿ ವಿಷಯಗಳು ಇಲ್ಲಿ ದಾಖಲಾಗಿಲ್ಲ.

ದೇವೇಗೌಡರ ಏಳುಬೀಳುಗಳು, ಟೀಕೆ-ಟಿಪ್ಪಣಿಗಳು, ನೋವು-ಹತಾಶೆ, ದುಃಖ-ದುಮ್ಮಾನಗಳು, ರಾಜಕೀಯ ಸ್ಥಿತ್ಯಂತರಗಳು, ನಾಡು-ನುಡಿ, ರೈತರ ಹಾಗೂ ಮಣ್ಣಿನ ಬಗ್ಗೆ ಇರುವ ಕಾಳಜಿ, ಗೌಡರ ಸಿಟ್ಟು-ಸೆಡವು, ಹಸನ್ಮುಖತೆ ಎಲ್ಲ ವಿಚಾರಗಳೂ ಪುಸ್ತಕದಲ್ಲಿ ಅಡಕವಾಗಿವೆ. ಹಾಗಾಗಿ ಈ ಪುಸ್ತಕ ವಿಶಿಷ್ಟ, ವಿಭಿನ್ನ ಕೃತಿಯಾಗಿ ನಿಲ್ಲುತ್ತದೆ. ಸಾಮಾನ್ಯವಾಗಿ ದೇವೇಗೌಡರ ನಿದ್ದೆ ಮುದ್ದೆಗೂ ಅವಿನಾಭಾವ ಸಂಬಂಧವಿದೆ. ಅದೊಂದು ರಾಜಕೀಯ ಕಾರ್ಯಕ್ರಮ. ಅಲ್ಲಿ ಗೌಡರು ನಿದ್ದೆಯ ಮಂಪರಿನಲ್ಲೇ ಇದ್ದರು. ಶುರುವಾಯಿತು, ದೇವೇಗೌಡರ ನಿದ್ದೆ ಮುದ್ದೆಯ ಗೊರಕೆ ಎಂದು ಯಾರೋ ಹಾಸ್ಯ ಚಟಾಕಿ ಹಾರಿಸಿದರು.

ತಕ್ಷಣವೇ ದೇವೇಗೌಡರ ಅಭಿಮಾನಿ 'ಹೀಗೆಲ್ಲ ಅಪಹಾಸ್ಯ ಮಾಡುವುದು ಸರಿಯಲ್ಲ. ಅವರೊಬ್ಬ ರಾಜಕೀಯ ಸಂತರು. ಕಣ್ಮುಚ್ಚಿ ಗೌಡರು ನಿದ್ದೆ ಮಾಡುತ್ತಿಲ್ಲ. ಮಹಾಮೌನಿಯಾಗಿ ಧ್ಯಾನಸ್ಥ ಸ್ಥಿತಿಯಲ್ಲಿ ಎಲ್ಲ ಆಗುಹೋಗುಗಳನ್ನು ಗಮನಿಸುತ್ತಾರೆ, ಕೇಳುತ್ತಾರೆ' ಎಂದು ವೇದಿಕೆಯ ಮೇಲೆಯೇ ಹೇಳುತ್ತಾರೆ.

ಆಗ ತಕ್ಷಣವೇ ದೇವೇಗೌಡರು ಕಣ್ಣು ಬಿಟ್ಟು 'ಏನಾಯಿತ್ರಿ, ಯಾಕಿಷ್ಟು ಸಲ್ಲದ ವಿಚಾರಗಳು ವೇದಿಕೆ ಮೇಲೆ ಬರುತ್ತಿವೆ. ಏಕೆ ಇದಕ್ಕೆಲ್ಲ ನಾವು ತಲೆಕೆಡಿಸಿಕೊಳ್ಳಬೇಕು? ಈ ಜನರು ಯಾರನ್ನು ತಾನೇ ಅನ್ನದೇ ಬಿಟ್ಟಿದ್ದಾರೆ. ನೀವು ಕಾರ್ಯಕ್ರಮ ಮುಂದುವರಿಸಿ' ಅಂತ ಸಂಘಟಕರಿಗೆ ಸೂಚಿಸುತ್ತಾರೆ. ಇಂಥ ಹಾಸ್ಯ ಪ್ರಸಂಗಗಳು, ಗಂಭೀರ ಚಿಂತನೆಗಳು, ಗೌಡರ ಕಾಲದ ಅಭಿವೃದ್ಧಿ ಕಾರ್ಯಗಳು ಪುಸ್ತಕದಲ್ಲಿ ದಾಖಲಾಗಿರುವುದು ವಿಶೇಷವಾಗಿದೆ.

# ನೆನಪಿನ ದೂರ ತೀರದ ಯಾನ

**ಗಟ್ಟಿಯವರ ಮಾತು ಎಂದೂ ಇಷ್ಟು ಅರ್ಥ ಎಂದು ಬಿಡಿಸಿಡುವಷ್ಟು ಸರಳವಾಗಿ ಇರುವುದಿಲ್ಲ. ಅದೊಂದು ರೀತಿ ಕಡಲಿನ ಬದಿಯ ನೀರವ ಮೌನದಲ್ಲಿ ಅಲೆಗಳ ಸಪ್ಪಳವನ್ನು ಕೇಳುತ್ತಾ ನಮ್ಮ ಹೆಜ್ಜೆ ಸಪ್ಪಳಕ್ಕೆ ನಾವೇ ಬೆಚ್ಚಿ ಬೀಳುತ್ತಾ ಸಾಗುವ ಹಾಗೆ.**

**ಒಡನಾಟ**

» ಶ್ರೀಧರಮೂರ್ತಿ ಎನ್.ಎಸ್.

ಬೆಂಗಳೂರಿನ ಕೋಟೆ ವೆಂಕಟರಮಣ ಸ್ವಾಮಿ ದೇವಸ್ಥಾನದಲ್ಲಿ ಬಹುಮಟ್ಟಿಗೆ ಧಾರ್ಮಿಕ ಸ್ವರೂಪದ ಕಾರ್ಯಕ್ರಮ. ಇದರ ನಡುವೆ ಪುಸ್ತಕ ಬಿಡುಗಡೆ ಕೂಡ ಸೇರಿತ್ತು. ಅದರಲ್ಲಿ ಕೆ.ಟಿ.ಗಟ್ಟಿಯವರ ಪುಸ್ತಕವೂ ಇತ್ತು. ಅವರೊಬ್ಬರೆ ಒಂಟಿಯಾಗಿ ಒಂದು ಮೂಲೆಯಲ್ಲಿ ಕುಳಿತಿದ್ದರು. ಆ ಕಾರ್ಯಕ್ರಮದ ಸ್ವರೂಪಕ್ಕೂ ಅವರಿಗೂ ಒಂದು ರೀತಿಯಲ್ಲಿ ಸಂಬಂಧವೇ ಇರಲಿಲ್ಲ ಎನ್ನುವಂತಿತ್ತು. ನಾನು ಮೆಲ್ಲನೆ ಹೋಗಿ ಅವರ ಪಕ್ಕ ಕುಳಿತೆ. 'ಸರ್ ನೀವೇಕೆ ಈ ಕಾರ್ಯಕ್ರಮಕ್ಕೆ ಬರುವುದಕ್ಕೆ ಹೋದಿರಿ ?' ಎಂದೆ. ಅವರು ಮುಗುಳ್ನಕ್ಕು 'ನನ್ನ ಪುಸ್ತಕವೂ ಇದೆಯಲ್ಲಪ್ಪ' ಎಂದರು. ಹೀಗೆ ಮಾತು ಮುಂದುವರೆಯಿತು. ಗಟ್ಟಿ ಕೊಂಚ ಧ್ವನಿ ತಗ್ಗಿಸಿ 'ಮನುಷ್ಯರು ಆವರಣಗಳನ್ನು ಕಟ್ಟಿ ಕೊಳ್ಳುತ್ತಲೇ ಇರುತ್ತಾರೆ, ಎಷ್ಟರ ಮಟ್ಟಿಗೆ ಎಂದರೆ ಆವರಣಕ್ಕೂ ಅವರಿಗೂ ವ್ಯತ್ಯಾಸವೇ ಇರುವುದಿಲ್ಲ' ಎಂದರು. ಅಷ್ಟು ಹೊತ್ತಿಗೆ ಅವರ ಸರದಿ ಬಂದಿತು. ವೇದಿಕೆ ಹೋಗಿ ಹಾರ ಹಣ್ಣಿನ ಬುಟ್ಟಿ ಜೊತೆ ಬಂದರು. ನನ್ನ ಬಳಿ ತುಸು ಬಗ್ಗಿ ನೋಡಿ, 'ನನಗೆ ಬೆಂಗಳೂರು ಬಹಳ ಚೆನ್ನಾಗಿ ಗೊತ್ತಿಲ್ಲ, ಎಲ್ಲಿಯಾದರೂ ಒಳ್ಳೆಯ ಹೋಟಲ್‌ನಲ್ಲಿ ಊಟ ಮಾಡೋಣ, ಅದಕ್ಕಿಂತ ಮುಖ್ಯ ಒಂದಿಷ್ಟು ಮಾತಾಡೊ' ಎಂದರು. 'ಸರ್, ಇಲ್ಲಿಯೇ ಊಟದ ವ್ಯವಸ್ಥೆ ಇದೆ' ಎಂದರೆ 'ಇಲ್ಲಿ ಬೇಡ' ಎಂದು ಕೊಂಚ ಕುಗ್ಗಿದ ಧ್ವನಿಯಲ್ಲಿ ಹೇಳಿದರು. ನನಗೆ ಅವರ ಮನಸ್ಸು ಅರ್ಥವಾಯಿತು.

ಅವತ್ತು ರಾತ್ರಿ ಬಹಳ ಹೊತ್ತಿನವರೆಗೆ ಮಾತನಾಡಿದೆವು. ಅದು ಏನು ಎಂದು ವಿವರಿಸುವುದೇ ಕಷ್ಟ. ಏಕೆಂದರೆ ಗಟ್ಟಿಯವರ ಮಾತು ಎಂದೂ ಇಷ್ಟು ಅರ್ಥ ಎಂದು ಬಿಡಿಸಿಡುವಷ್ಟು ಸರಳವಾಗಿ ಇರುವುದಿಲ್ಲ . ಅದೊಂದು ರೀತಿ ಕಡಲಿನ ಬದಿಯ ನೀರವ ಮೌನದಲ್ಲಿ ಅಲೆಗಳ ಸಪ್ಪಳವನ್ನು ಕೇಳುತ್ತಾ ನಮ್ಮ ಹೆಜ್ಜೆ ಸಪ್ಪಳಕ್ಕೆ ನಾವೇ ಬೆಚ್ಚಿ ಬೀಳುತ್ತಾ ಸಾಗುವ ಹಾಗೆ.

ಬಾಲ್ಯದಲ್ಲಿಯೇ ಸಾಹಿತ್ಯದ ನಂಟನ್ನು ಹೊಂದಿದ ಗಟ್ಟಿಯವರಿಗೆ ಹೆತ್ತವರೇ ಪ್ರೇರಣೆ. ತಂದೆ ಧೂಮಪ್ಪ ಯಕ್ಷಗಾನ ಪ್ರಿಯರು. ಮನೆಯಲ್ಲಿ ಪುಸ್ತಕದ ರಾಶಿ, ತಾಯಿ ಪರಮೇಶ್ವರಿ ಒಳ್ಳೆಯ ಗಾಯಕಿ ತುಳು-ಮಲೆಯಾಳಂ ಗೀತೆಗಳನ್ನು ಹಾಡುತ್ತಿದ್ದರು.

## ಇಥಿಯೋಪಿಯಾದಲ್ಲಿ ಹುಟ್ಟಿದ ಕಥೆಗಳು

ಇಂಗ್ಲೀಷ್‌ನಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದ ನಂತರ ಉಡುಪಿ ಮತ್ತು ಮಣಿಪಾಲಗಳಲ್ಲಿ ಶಿಕ್ಷಕರಾಗಿದ್ದರು. ಅಲ್ಲಿಂದ ಇಥಿಯೋಪಿಯಾಕ್ಕೆ ತೆರಳಿದರು. ಅನುಭವ ಪ್ರಪಂಚ ವಿಸ್ತಾರವಾದಂತೆ ಅವರೊಳಗೆ ಕತೆಗಳು ಹುಟ್ಟಿಕೊಂಡವು, ಶಬ್ದಗಳು ಸುಧಾ ವಾರಪತ್ರಿಕೆಯಲ್ಲಿ ಧಾರವಾಹಿಯಾಗಿ ಅಪಾರ ಜನಪ್ರಿಯತೆಯನ್ನು ಪಡೆಯಿತು. ಜನಪ್ರಿಯತೆಗೆ ಗಟ್ಟಿ ಮರುಳಾಗಲಿಲ್ಲ, ತನ್ನ ಗಟ್ಟಿತನವನ್ನು ಬಿಡಲಿಲ್ಲ. ನಿರಂತರವಾಗಿ ಬರೆಯುತ್ತಾ ಹೋದರು. ಏನೇ ಬರೆದರೂ ಗಟ್ಟಿಯವರಿಗೆ ಮುಖ್ಯವಾಗಿದ್ದು ಮನುಷ್ಯ. ಸಮಾಜದ ಜೊತೆಗಿನ ಅವನ ಸಂಪರ್ಕ. ಗಟ್ಟಿಯವರ ಕಾದಂಬರಿಗಳಲ್ಲಿ ಸಂಘರ್ಷವೂ ಇದೆ ಸಂಕ್ರಮಣವೂ ಇದೆ ಸಮ್ಮಿಲನವೂ ಇದೆ. ಅದೊಂದು ರೀತಿ ನಿರಂತರ ಮಾನವೀಯತೆಯ ಶೋಧ. ಮನೆ ಕಾಮಯಜ್ಞಗಳು ಬಹಿರಂಗದ ಪ್ರಶ್ನೆಗಳನ್ನು ಎತ್ತಿ ಕೊಂಡರೆ ಅಬ್ರಾಹ್ಮಣ ಮೃತ್ಯೂರ್ಮ

ಅಮೃತಂಗಮಯ ಕರ್ಮಣ್ಯೇ ವಾದಿಕಾರಸ್ತೆ ಅಂತರಂಗದ ಪ್ರಶ್ನೆಗಳನ್ನು ಎತ್ತಿ ಕೊಂಡವು. ನಿರಂತರದಲ್ಲಿ ಕಾಲದ ಮಿತಿಯನ್ನೇ ಮೀರಿ ಅನಂತದಲ್ಲಿ ಮಾನವೀಯತೆಯ ಪ್ರಶ್ನೆಯನ್ನು ತಂದರು. ಅರಗಿನ ಅರಮನೆ, ಸ್ವರ್ಣಮೃಗ, ನವಂಬರ್ 10 ಎಲ್ಲವೂ ವ್ಯಕ್ತಿ ಮತ್ತು ಸಮಾಜದ ಸಂಬಂಧವನ್ನು ಶೋಧಿಸಿದವು. ಜನಪ್ರಿಯ ಆವರಣದಲ್ಲಿದ್ದರೂ ಗಟ್ಟಿಯವರ ಕಾದಂಬರಿಗಳ ವೈಚಾರಿಕ ಹೂರಣ ಗಟ್ಟಿಯಾಗಿತ್ತು. ಇದು ಕನ್ನಡ ಸಾಹಿತ್ಯ ಲೋಕದ ಪರಿಧಿಯನ್ನು ಗಮನಾರ್ಹವಾಗಿ ವಿಸ್ತರಿಸಿತು.

ಕೆ ಟಿ ಗಟ್ಟಿಯವರು ಹಲವಾರು ವರ್ಷಗಳ ಕಾಲ ಪ್ರಾಧ್ಯಾಪಕರಾಗಿದ್ದವರು. ಈ ಅನುಭವದಿಂದ ಭಾಷಾಶಾಸ್ತ್ರಕ್ಕೆ ಸಂಬಂಧಿಸಿದಂತೆ ಭಾಷ್ಯಾಧ್ಯಯನ, ವ್ಯಾಕರಣ, ಇಂಗ್ಲಿಷ್ ಭಾಷೆಯ ಪ್ರಯೋಗ ಉಚ್ಚಾರಶಾಸ್ತ್ರ ಮುಂತಾದ ವಿಷಯಗಳ ಬಗ್ಗೆ ವಿದ್ಯಾರ್ಥಿಗಳಿಗಷ್ಟೇ ಅಲ್ಲದೆ ತಂದೆತಾಯಿಗಳಿಗೂ ಉಪಯುಕ್ತವಾಗುವಂತಹ ಅನೇಕ ಕೃತಿಗಳನ್ನು ಇಂಗ್ಲಿಷ್ ಹಾಗೂ ಕನ್ನಡ ಭಾಷೆಗಳಲ್ಲಿ ರಚಿಸಿದ್ದಾರೆ. ಕನ್ನಡ ಕೃತಿಗಳೆಂದರೆ ಉತ್ಕೃಷ್ಟತೆಗಾಗಿ ತಾಯಿ-ತಂದೆ, ಗುರುಗಳಾಗಿ ತಾಯಿ-ತಂದೆ, ಇಂಗ್ಲಿಷ್ ಮತ್ತು ಕನ್ನಡ ಭಾಷಾಧ್ಯಯನ, ನಿಮ್ಮ ಮಗುವಿಗೆ ಇಂಗ್ಲಿಷ್ ಹಾಗೂ ಕನ್ನಡ ಕಲಿಸುವ ವಿಧಾನ, ಕನ್ನಡ ಆಲಿಸಿ ಕಲಿಸಿ, ಇಂಗ್ಲಿಷ್ ಆಲಿಸಿ ಕಲಿಸಿ ಮುಂತಾದ ಪುಸ್ತಕಗಳಲ್ಲದೆ ಇಂಗ್ಲಿಷಿನಲ್ಲಿ ಕೂಡ ಸಾಕಷ್ಟು ಈ ಮಾದರಿ ಕೃತಿಗಳನ್ನು ರಚಿಸಿದ್ದಾರೆ.

## ಬದಲಾವಣೆಗೆ ಒಪ್ಪದ ಗಟ್ಟಿ

ನಾನು ಮಂಗಳೂರಿನಲ್ಲಿ ಎಂ.ಎ ಮಾಡುತ್ತಿದ್ದಾಗ ಕೆ.ಟಿ.ಗಟ್ಟಿಯವರು ಉಜಿರೆಯಲ್ಲಿದ್ದರು. ಅವರ ಮನೆ 'ವನಸಿರಿ'ಗೆ ನನಗೆ ಸದಾ ತೆರೆದ ಆಹ್ವಾನ ಹೊತ್ತು ಗೊತ್ತಿಲ್ಲದೆ ನುಗ್ಗುವುದು, ಸಮಯದ ಮಿತಿಯಿಲ್ಲದೆ ಹರಟುವುದು. ಗಟ್ಟಿಯವರ ಆಸಕ್ತಿಯ ಹಲವು ಕ್ಷೇತ್ರಗಳಲ್ಲಿ ಸಿನಿಮಾ ಕೂಡ ಒಂದು. ಅವರ 'ಶಬ್ದಗಳು' ಸಿನಿಮಾ ಆದಾಗ ಅವರು ಅದಕ್ಕೆ ಸಂಭಾಷಣೆ ಮಾತ್ರವಲ್ಲದೆ ಹಾಡುಗಳನ್ನು ಕೂಡ ಬರೆದಿದ್ದರು. ಸಿನಿಮಾವನ್ನು ಅಕಾಡಮಿಕ್ ಆಗಿ ನೋಡುವುದು ಹೇಗೆ ಎಂದು ಅವರು ಕಲಿಸಿದರು. ನಾನು ಮಲ್ಲಿಗೆ ಮಾಸಪತ್ರಿಕೆಯಲ್ಲಿದ್ದಾಗ ಕೆ.ಟಿ.ಗಟ್ಟಿ ಕೇಳಿದಾಗಲೆಲ್ಲಾ ಕತೆಗಳನ್ನು ನೀಡಿದರು. ಯಾವ ಮಾದರಿ ಕತೆ ಎಂದರೆ ಸಾಕು ಡೆಡ್ ಲೈನ್ ಎಂದಿಗೂ ತಪ್ಪುತ್ತಿರಲಿಲ್ಲ. ಹೀಗೆ ಪ್ರಕಟವಾಗಬೇಕು ಎಂದವರಲ್ಲ. ಒಮ್ಮೆ ಕೂಡ ಸಂಭಾವನೆ ವಿಷಯ ಕೇಳಿದವರಲ್ಲ. ಆದರೆ ಬದಲಾವಣೆಗೆ ಒಪ್ಪುತ್ತಿರಲಿಲ್ಲ. ನಾನು ಒಮ್ಮೆ ಕೊಂಚ ಚಿಕ್ಕದು ಮಾಡಲು ಸಾಧ್ಯವೆ? ಎಂದು ಕೇಳಿ ಬೈಸಿಕೊಂಡಿದ್ದೆ. 'ನಿಮಗೆ ಪ್ರಕಟಿಸಲು ಆಗದಿದ್ದರೆ ಹಿಂದಿರುಗಿಸಿ' ಎಂದಿದ್ದರು ಕಟುವಾಗಿ. ಅವರ 'ನವಂಬರ್ 10' ಕಾದಂಬರಿ ಬಹಳ ಹಿಂದೆ ಮಲ್ಲಿಗೆಯಲ್ಲಿಯೇ ಪ್ರಕಟವಾಗಿತ್ತು. ಸರ್ ಅದನ್ನು ಮರು ಮುದ್ರಣ ಮಾಡುತ್ತೇನೆ ಎಂದೆ. ಒಂದು ರೀತಿಯಲ್ಲಿ ಅದು ಫ್ಯಾಂಟಸಿಯನ್ನು ವಿಭಿನ್ನವಾಗಿ ಬಳಸಿದ ಕಾದಂಬರಿ. ಆದರೆ ಗಟ್ಟಿ ಒಪ್ಪಲಿಲ್ಲ. 'ಈಗ ನನ್ನ ಮನಸ್ಸು ಆ ಕಾದಂಬರಿ ವೈಚಾರಿಕತೆಗಿಂತ ಭಿನ್ನವಾಗಿದೆ. ಅದು ಆ ಕಾಲದ ಸತ್ಯ. ನಿಮಗೆ ಬೇರೆ ಕಾದಂಬರಿ ಕೊಡುತ್ತೇನೆ' ಎಂದರು.

ಕೆ.ಟಿ.ಗಟ್ಟಿಯವರ ಎರಡು ಕಾದಂಬರಿಗಳ ಮರು ಮುದ್ರಣದಲ್ಲಿ ನನಗೆ ಮಾತನಾಡುವ ಅವಕಾಶ ಸಿಕ್ಕಿತು. ಎರಡೂ ನನಗೆ ಪ್ರಿಯವಾದವೇ. ಕರ್ಮಣ್ಯೇ ವಾದಿಕಾರಸ್ತೇ - ಸಾಮಾಜಿಕ ವಲಯದ ಆಧ್ಯಾತ್ಮಿಕ ನೆಲೆಗಳನ್ನು ಹುಡುಕುವ ಕೃತಿ. ನನಗೆ ಬಹಳ ವಿಸ್ತಾರವಾಗಿ ಮಾತನಾಡಲು ಅವಕಾಶ ಸಿಕ್ಕಿತು. ಗಟ್ಟಿಯವರಿಗೂ ನನ್ನ ಮಾತು ಖುಷಿ ಕೊಟ್ಟಿತ್ತು. ನಿನ್ನೆ ಇಂದು ನಾಳೆ ಒಂದು ರೀತಿಯಲ್ಲಿ ಕರ್ನಾಟಕದ ರಾಜಕೀಯ ಕ್ಷೇತ್ರದ ಸಾಂಸ್ಕೃತಿಕ ಒಳಗಣ್ಣನ್ನು ಹುಡುಕುವ ಪ್ರಯತ್ನ. ಈ ಕಾದಂಬರಿ ರೂಪುಗೊಳ್ಳುವಾಗ ಕೆ.ಟಿ.ಗಟ್ಟಿಯವರ ಜೊತೆ ನಡೆದ ಚರ್ಚೆಯಲ್ಲಿ ಕೂಡ ನಾನು ಭಾಗಿಯಾಗಿದ್ದೆ. ನಾನು ಮಾತನಾಡುವಾಗ ಇದನ್ನೆಲ್ಲಾ ಹೇಳಿದೆ. ಅವತ್ತು ಗಟ್ಟಿಯವರು ಬಂದಿರಲಿಲ್ಲ. ಈ ಕಾದಂಬರಿಯ ಪ್ರಕಾಶಕರಾದ ಇಂದಿರಾ ಸುಂದರ್ ಗಟ್ಟಿಯವರಿಗೆ ಇದನ್ನು ಹೇಳಿದರಂತೆ. ಮರು ದಿನ ಗಟ್ಟಿಯವರು ಫೋನ್ ಮಾಡಿದರು. ಬಹಳ ಹೊತ್ತು ಮಾತನಾಡಿದರು. ಉಜಿರೆ ದಿನಗಳನ್ನು ನೆನಪು ಮಾಡಿ ಕೊಂಡರು. ನಾನು ಅವರ ಜೊತೆ ದೀರ್ಘವಾಗಿ ಮಾತನಾಡಿದ್ದು ಅದೇ ಕೊನೆ. ಮುಂದೆ ಅವರ ಆರೋಗ್ಯ.. ನೆನಪು ಕುಸಿಯುತ್ತಲೇ ಹೋಯಿತು.

ನಮ್ಮ ಪುರಾಣಗಳಲ್ಲಿ ಬಹು ದೂರ ಕಡಲಿನಲ್ಲ ಪ್ರಯಾಣ ಮಾಡಿ ಮುತ್ತುಗಳನ್ನು ತರುವ ನಾವಿಕರ ಚಿತ್ರಣ ಬರುತ್ತದೆ. ಗಟ್ಟಿಯವರೂ ಹಾಗೆ ನಮ್ಮ ಜೊತೆ ಇದ್ದರೂ, ಆಗಾಗ ನಮ್ಮಿಂದ ದೂರವಿರುವ ದ್ವೀಪಗಳಿಗೆ ಹೋಗಿ ಮುತ್ತುಗಳನ್ನು ತರುತ್ತಿದ್ದರು.

ನನ್ನ ಬಳಿ ಅವರು ಕೊಟ್ಟು ಹೋದ ಇಂತಹ ಮುತ್ತುಗಳ ಚೀಲವಿದೆ. ಅದನ್ನು ನಾನು ಸದಾ ಜೋಪಾನವಾಗಿ ಇಟ್ಟು ಕೊಳ್ಳುತ್ತೇನೆ.

# ವಿರಾಮದ ಪೋಸ್ಟ್ ಆಫೀಸು

ಈ ವಾರದ 'ವಿರಾಮ'ವು ವೈವಿಧ್ಯಮಯವಾಗಿತ್ತು. ಮುಖಪುಟದಲ್ಲಿ ಮೂಡಿಬಂದ ಚದುರಂಗ ಚಾಂಪಿಯನ್ ಡಿ.ಗುಕೇಶ್ ಕುರಿತಾದ ಲೇಖನವು, ಓದಿದವರಲ್ಲಿ ಸ್ಫೂರ್ತಿ ತುಂಬುವಂತಿತ್ತು. ಕೇವಲ 18 ವರ್ಷಕ್ಕೆ ವಿಶ್ವ ಚಾಂಪಿಯನ್ ಆಗಿ ಗೆದ್ದು ಬಂದ ಗುಕೇಶ್ ಅವರು, ನಮ್ಮ ದೇಶದ ಸಾವಿರಾರು ಮಕ್ಕಳಿಗೆ ಚೆಸ್ ಕಲಿಯಲು ಪ್ರೇರಣೆಯಾದರೆ ಅಚ್ಚರಿಯಿಲ್ಲ. ಇದಲ್ಲದೇ, ಯಶಸ್ವಿ ಬದುಕಿನ ಪಾಠಗಳೂ ಅವರ ಗೆಲುವಿನಲ್ಲಿದೆ.

» ಕೆ.ಎಸ್.ಹೆಬ್ಬಾರ್, ಜೆ.ಪಿ.ನಗರ

ವಿಶ್ವವಾಣಿಯ ಎಲ್ಲಾ ದಿನದ ಪುರವಣಿಗಳು ಆಕರ್ಷಕವಾಗಿ ಮೂಡಿಬರುತ್ತಿವೆ. ಭಾನುವಾರದ ವಿರಾಮ ಮತ್ತು ಬೇರೆ ದಿನಗಳಲ್ಲಿ ಬರುತ್ತಿರುವ ಆರಾಮ ಪುರವಣಿಯ ಲೇಖನಗಳು ಇಷ್ಟವಾಗುತ್ತವೆ. ನಿಮ್ಮ ಪುರವಣಿಯಲ್ಲಿ ಪರಿಸರ ರಕ್ಷಣೆಯ ಕುರಿತಾದ ಲೇಖನಗಳು ಇನ್ನಷ್ಟು ಮೂಡಿಬರಲಿ.

» ಸಿಂಚನಾ, ಮೈಸೂರು

ವೈವಿಧ್ಯಮಯ ಲೇಖನಗಳು ಮತ್ತು ಪುಸ್ತಕ ವಿಮಾನ ಪುಟಗಳು ವಿರಾಮವನ್ನು ಆಕರ್ಷಕ ಪುರವಣಿಯನ್ನಾಗಿಸಿವೆ. ಮಂಡ್ಯದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಕುರಿತಾಗಿ ವಿರಾಮ ಪುರವಣಿಯಲ್ಲಿ ವಿವರವಾದ ಲೇಖನಗಳನ್ನು ನಿರೀಕ್ಷಿಸಬಹುದೇ?

» ಯಲ್ಲಪ್ಪ ದೊಡ್ಡಮನಿ, ನಾಗರಭಾವಿ

ಪ್ರತಿ ಭಾನುವಾರ ಒಂದು ಕಥೆ ಮತ್ತು ಒಂದು ಕವನವನ್ನು ವಿರಾಮ ಪುರವಣಿಯಲ್ಲಿ ಪ್ರಕಟಿಸಬೇಕಾಗಿ ವಿನಂತಿ. ಇದರಿಂದಾಗಿ, ಕನ್ನಡದ ಉದಯೋನ್ಮುಖ ಲೇಖಕರಿಗೆ ಪ್ರೋತ್ಸಾಹ ದೊರೆತಂತಾಗುತ್ತದೆ.

» ಕುಮಾರಸ್ವಾಮಿ ಎನ್. ಹುಬ್ಬಳ್ಳಿ

# ಮೊಳಕೆಯಿಂದ ಸಿಂಗರಿಸಿದ ತೇರು!

ಮೊಳಕೆ ಬರಿಸಿದ ಧಾನ್ಯದ ಮಡಕೆಯನ್ನು ಹೊತ್ತು, ರಥದೊಂದಿಗೆ ಹೆಜ್ಜೆ ಹಾಕಿದರೆ ಹೇಗಿರುತ್ತದೆ? ಅನುಭವ ಕಥನದ ಮುಂದುವರಿದ ಭಾಗ.

» ಅನುಪಮಾ ಮಂಗಳವೇಢೆ, ಶಿಕಾಗೊ



ಈಶ ಆಶ್ರಮದಲ್ಲಿ ಸಾಧನಪಾದ ಕಾರ್ಯಕ್ರಮಕ್ಕೆ ಹೋಗಿದ್ದೆ ಎಂದಾಗ ಎಲ್ಲರ ಪ್ರಶ್ನೆ ಒಂದೇ. ಮೂರು ಹೊತ್ತೂ ಯೋಗ ಧ್ಯಾನ ಮಾಡುತ್ತ, ಟೀವಿ, ಸಿನಿಮಾ, ಹೋಟೆಲು ಯಾವುದೇ ರೀತಿಯ ಮನೋರಂಜನೆ ಇಲ್ಲದೆ, ಆಶ್ರಮದೊಳಗೇ ಹತ್ತು ತಿಂಗಳು ಕಾಲ ಕಳೆಯುವುದಕ್ಕೆ ಬೋರ್ ಆಗಲಿಲ್ಲವೇ? ಎಂದು. ನಿಜವಾಗಿಯಾದರೆ, ನನ್ನ ಜೀವನದಲ್ಲೇ ಅತಿ ಹೆಚ್ಚು ಸಂತೋಷದಿಂದ ಕಳೆದ ದಿನಗಳಿವು.

## ಹಬ್ಬದಾಚರಣೆಗಳು

ಪ್ರತಿ ಏಕಾದಶಿ, ಹುಣ್ಣಿಮೆ, ಅಮಾವಾಸ್ಯೆಯಂದು, ಹಬ್ಬಹರಿದಿನಗಳಲ್ಲೂ ವಿಶೇಷ ಆಚರಣೆ. ಹೆಂಗಳೆಯರು ಸೀರೆಯುಟ್ಟು ಚೆಂದವಾಗಿ ಸಿಂಗರಿಸಿಕೊಳ್ಳುವುದು, ಗಂಡಸರು ಜುಬ್ಬ ಧರಿಸುವುದು ಸಾಮಾನ್ಯ. ಹುಣ್ಣಿಮೆಯಂದು ಧ್ಯಾನಲಿಂಗದ ಮುಂದೆ ಕೈಲಾಶವಾದ್ಯವಿರುತ್ತದೆ. ಅದರ ಬಡಿತಕ್ಕೆ ಭಕ್ತಿಭಾವ ಪರವಶತೆಯಲ್ಲಿ ಹೆಜ್ಜೆ ಹಾಕುತ್ತಿದ್ದರೆ, ಪಾರ್ಟಿಗಳಲ್ಲಿ ಕುಣಿದಾಗಿನದಕ್ಕಿಂತ ನೂರು ಪಟ್ಟು ಹೆಚ್ಚಿನ ಆನಂದ! ಹಬ್ಬದ ದಿನಗಳಲ್ಲಂತೂ ಆಶ್ರಮದ ಕಳೆಯೇ ಬೇರೆ. ತೋರಣಗಳು, ರಂಗೋಲಿ ಚಿತ್ರಗಳು, ದೀಪಾಲಂಕಾರದಿಂದ ಆಶ್ರಮ ಕಂಗೊಳಿಸುತ್ತದೆ. ಆ ದಿನಗಳಲ್ಲಿ ಬಾಳೆಎಲೆ ಊಟ ವಿಶೇಷ. ತುಪ್ಪ, ಸಿಹಿ ಭಕ್ಷ್ಯಗಳು, ಬಜ್ಜಿ, ಬೋಂಡಗಳು ಭೋಜನಕ್ಕೆ.

ಸಂಕ್ರಾಂತಿಯಲ್ಲಿ ಗೋಶಾಲೆಯ ಹಸುಗಳನ್ನ ಸಿಂಗರಿಸಿ, ಧಾನ್ಯಗಳಿಂದ ಚಿತ್ರಗಳನ್ನು ಬಿಡಿಸಿ ಆಶ್ರಮವು ಸಂಭ್ರಮಿಸುತ್ತದೆ. ದೀಪಾವಳಿ ಹಬ್ಬದಲ್ಲಿ ಆಶ್ರಮದ ಮೂಲೆಮೂಲೆಯೂ ಎಣ್ಣೆಬತ್ತಿಯ ದೀಪಗಳಿಂದ ಪ್ರಕಾಶಿಸುತ್ತದೆ. ಆ ರಾತ್ರಿ ಮೈದಾನದಲ್ಲಿ ಹುಲ್ಲಿನ ಮೇಲೆ ಕುಳಿತು, ಹೊಳೆಯುವ ನಕ್ಷತ್ರಗಳನ್ನು ನೋಡುತ್ತ ಊಟ. ನವರಾತ್ರಿಯಲ್ಲಿ ಗೊಂಬೆಗಳನ್ನಿಡುತ್ತಾರೆ. ಒಂಬತ್ತು ದಿನಗಳೂ ಪ್ರಸಿದ್ಧ ಕಲಾವಿದರಿಂದ ಸಂಗೀತ ಮತ್ತು ನೃತ್ಯ ಕಾರ್ಯಕ್ರಮಗಳು. ಸದ್ಗುರುಗಳ ಜ್ಞಾನೋದಯ ವಾರ್ಷಿಕ ದಿನದಂದು, ಸದ್ಗುರುಗಳ ಅಳಿಯ ಸಂದೀಪ್ ನಾರಾಯಣ್ ಮತ್ತು ಕೌಶಿಕಿ ಚಕ್ರಬೊರ್ತಿ ಅವರ ಜುಗಲಬಂದಿ ಕಾರ್ಯಕ್ರಮವಂತೂ ಮರೆಯಲಾಗದಂಥದ್ದು. ನವರಾತ್ರಿಯಲ್ಲಿ ಸೂರ್ಯಕುಂಡ ಮಂಟಪದ ಮುಂದಿರುವ ಆಲಯ ಮೈದಾನದ ಬಳಿ ಸ್ಟಾಲ್ಸ್ ಹಾಕಿರುತ್ತಾರೆ. ಚಾಟ್ಸ್, ಛೋಲೆ-ಬಟೂರ, ಮಸಾಲೆದೋಸೆ, ಕಟ್ಲೆಟ್ ಮುಂತಾದ ತಿನಿಸುಗಳಿರುತ್ತವೆ. ಸೀರೆ ಮತ್ತು ಜ್ಯುವಲರಿ ಸ್ಟಾಲ್ಸ್ ಕೂಡ ಇರುತ್ತವೆ.

ಕ್ರಿಸ್ಮಸ್ ಮತ್ತು ಡಿಸೆಂಬರ್ 31ರ ರಾತ್ರಿ ಸದ್ಗುರುಗಳ ದರ್ಶನದ ಜೊತೆಗೆ, ಧ್ಯಾನದ ಸೆಶನ್ಸ್ ಇದ್ದು, ಸೌಂಡ್ಸ್ ಆಫ್ ಈಶ ತಂಡದಿಂದ ಗಾಯನ ಕಾರ್ಯಕ್ರಮವಿರುತ್ತದೆ. ಈಶ ತಂಡ ಹಾಡಲಿಕ್ಕೆ ಪ್ರಾರಂಭಿಸಿದರೆಂದರೆ, ಸುಮ್ಮನೆ ಕುಳಿತುಕೊಂಡು ಕೇಳುವುದು ಯಾರಿಗಾದರೂ ಕಷ್ಟವೇ. ಸಂಸ್ಕೃತಿ ಮಕ್ಕಳಿಂದ ನೃತ್ಯ, ಸಂಗೀತ ಹಾಗು ಕಲಾರಿಪಯಟ್ಟು ಕಾರ್ಯಕ್ರಮ ಅನೇಕ ಬಾರಿ ವೀಕ್ಷಿಸಲಿಕ್ಕೆ ಸಿಕ್ಕಿದ್ದು ನಮ್ಮ ಅದೃಷ್ಟ. ಇದಕ್ಕಿಂತ ಹೆಚ್ಚಿನ ಮನೋರಂಜನೆ ಎಲ್ಲಿ ಸಿಗುತ್ತದೆ?

## ಮಾರ್ಗಳಿ ಸಾಧನ

ಮಾರ್ಗಶಿರ ಮಾಸಕ್ಕೆ ತಮಿಳಿನಲ್ಲಿ ಮಾರ್ಗಳಿ ಎನ್ನುತ್ತಾರೆ. ಆಗ ಜಡತ್ವವೇ ಹೆಚ್ಚು. ಖಿನ್ನತೆ ಆವರಿಸಿಕೊಳ್ಳುತ್ತದೆ. ಈ ಸಮಯದಲ್ಲಿ ಸಾಧನದ ತೀವ್ರತೆ ಹೆಚ್ಚಿಸಿಕೊಂಡರೆ ದೈಹಿಕ ಮತ್ತು ಮಾನಸಿಕವಾಗಿ ಸ್ಥಿರತೆಯುಂಟಾಗುತ್ತದೆ. ಈಶ ಆಶ್ರಮದಲ್ಲಿ ಮಾರ್ಗಳಿ ಸಾಧನಕ್ಕೆ ಹೆಚ್ಚಿನ ಪ್ರಾಮುಖ್ಯ.

ಕೊರೆಯುವ ಚಳಿಯಲ್ಲಿ ಬ್ರಾಹ್ಮೀಮಹೂರ್ತದಲ್ಲಿ ಶಕ್ತಿಯುತ ಜಲಮೂಲಗಳಾದ ತೀರ್ಥಕುಂಡಗಳಿಗೆ ಹೋಗಿ ಮಿಂದು ಬರಬೇಕು. ನೆಲದಿಂದ 30 ಅಡಿ ಆಳದಲ್ಲಿರುವ ಚಂದ್ರಕುಂಡಕ್ಕೆ, ಮೂವತ್ತೆರಡು ಬೃಹತ್ ಮೆಟ್ಟಿಲು ಇಳಿದು ಹೋಗಬೇಕು. ಮೇಲ್ಚಾವಣಿಯನ್ನು ಮಹಾಕುಂಭ ಮೇಳದ ವರ್ಣರಂಜಿತ ಭಿತ್ತಿಚಿತ್ರಗಳಿಂದ ಅಲಂಕರಿಸಲಾಗಿದೆ. ನೀರಿನ ಮಧ್ಯದಲ್ಲಿ ರಸಲಿಂಗವನ್ನು ಸ್ಥಾಪಿಸಿದ್ದಾರೆ. ಈ ನೀರಿಗೆ ಅದ್ಭುತವಾದ ಶಕ್ತಿಯಿದೆ. ರಸಲಿಂಗವನ್ನು ತಬ್ಬಿ ಮುಳುಗೆದ್ದರೆ, ನಮ್ಮ ಚರ್ಮದ ಕೊಳೆಯಷ್ಟೇ ಅಲ್ಲ, ನಮ್ಮನ್ನು ಸುತ್ತಿಕೊಂಡ ಕರ್ಮದ ಕೊಳೆಯನ್ನು ತೊಳೆದಂತಾಗುತ್ತದೆ. ಈ ಸ್ಥಿತಿಯಲ್ಲಿ ಯೋಗಕ್ರಿಯೆ ಮಾಡಿದಾಗ ಆಗುವ ಅನುಭವವೇ ಬೇರೆ. ಈ ಮಾಸದಲ್ಲಿ ಹೆಂಗಸರು ಜ್ಯಾಮಿತೀಯವಾದ ರಂಗೋಲಿಗಳನ್ನು ಹಾಕುವುದೂ ಒಂದು ಸಾಧನೆಯಾಗಿದೆ.

ಮಾರ್ಗಳಿ ಮುಗಿಯುತ್ತಿದ್ದಂತೆ ಬರುವ ಮೊದಲ ಹುಣ್ಣಿಮೆಯ ದಿನ, ತಾಯ್‌ಪೂಸಂ. ಭೈರವಿ ಸಾಧನ ಎಂಬ 21 ದಿನಗಳ ಸಾಧನವು ತಾಯ್‌ಪೂಸಂ ದಿನ ಮುಕ್ತಾಯ. ಆಶ್ರಮದಿಂದ 10 ಕಿ.ಮೀ ದೂರವಿರುವ ಆಲಂದುರೈ ಸಮೀಪದ ಕಲ್ಲಿಪಾಳ್ಯಂಗೆ ಬೆಳಗಿನ 4 ಘಂಟೆಗೆ ಬಸ್‌ನಲ್ಲಿ ಹೋದೆವು. ಅಲ್ಲಿ ಲಿಂಗಭೈರವಿ ದೇವಿಯನ್ನು 'ಮುಲೈಪಾರಿ' ಅಂದರೆ ನವಧಾನ್ಯಗಳ ಮೊಳಕೆಯೊಡೆದ ಸಸಿಗಳಿಂದ ಸಿಂಗರಿಸಿ ತೇರು ಸಿದ್ಧಮಾಡಿದ್ದರು. ಸಾಧಕಿಯರಿಗೆಲ್ಲಾ 'ಮುಲೈಪಾರಿ'ಯಿದ್ದ ಮಣ್ಣಿನ ಮಡಕೆಗಳನ್ನು ಕೊಟ್ಟರು. ವಿಜೃಂಭಣೆಯಿಂದ, ಡೋಲು-ಡಮರು ವಾದ್ಯಗಳನ್ನು ಬಾರಿಸುತ್ತ ಆರುವರೆ ಘಂಟೆಗೆ ತೇರನ್ನೆಳೆಯಲು ಪ್ರಾರಂಭಿಸಿದರು. ನಾವು ಮುಲೈಪಾರಿಯನ್ನು ತಲೆಮೇಲೆ ಇಟ್ಟುಕೊಂಡು ತೇರಿನ ಜೊತೆ ಬರಿಗಾಲಲ್ಲಿ ಹೆಜ್ಜೆಹಾಕಿದೆವು. ಸುತ್ತಲಿನ ಹಳ್ಳಿಯ ಜನರೂ ಮೆರವಣಿಗೆಯಲ್ಲಿ ಪಾಲ್ಗೊಂಡು, ಈಶ ಆಶ್ರಮದ ಕಡೆ ತೇರು ಸಾಗಿತು.

ಸೂರ್ಯ ಮೇಲೇರುತ್ತಿದ್ದಂತೆ, ತಲೆಯ ಮೇಲೆ ಏರಿಸಿಕೊಂಡ ಮುಲೈಪಾರಿ ಒಮ್ಮೊಮ್ಮೆ ಭಾರವೆನಿಸುತ್ತಿದ್ದರೂ, ಡೋಲಿನ ಲಯಕ್ಕೆ ಕುಣಿಯುತ್ತಾ ಸಾಗಿದೆವು. ಮಧ್ಯಾಹ್ನ 12 ಘಂಟೆಯ ಹೊತ್ತಿಗೆ ಲಿಂಗಭೈರವಿ ದೇವಸ್ಥಾನಕ್ಕೆ ಬಂದು ದೇವಿಯ ಮುಂದೆ ಮುಲೈಪಾರಿಯನ್ನು ಅರ್ಪಿಸಿದ್ದನ್ನು ನೆನಪಿಸಿಕೊಂಡರೆ ಈಗಲೂ ರೋಮಾಂಚನವೆನಿಸುತ್ತದೆ.

## ಸಂಯಮ

ನಾನು ಈ ಮೊದಲೇ ಸಂಯಮ ಎಂಬ ಎಂಟು ದಿನಗಳ ಮೌನ ಯೋಗಕಾರ್ಯಕ್ರಮವನ್ನು ಈಶ ಆಶ್ರಮದಲ್ಲಿ ಮಾಡಿದ್ದೆ. ಸಾಧನಪಾದದಲ್ಲಿ ಇದ್ದಾಗ ಮತ್ತೊಮ್ಮೆ ಮಾಡುವ ಅವಕಾಶ ಸಿಕ್ಕತು. ಸಂಯಮ ಸಾಮಾನ್ಯವಾಗಿ ಡಿಸೆಂಬರ್ ಅಥವಾ ಜನವರಿ ತಿಂಗಳಲ್ಲಿ ನಡೆಯುವಂತಹದ್ದು. ಇದಕ್ಕೆ ಕನಿಷ್ಠ ಎರಡು ತಿಂಗಳ ತಯಾರಿ ಬೇಕು. ದೀರ್ಘ ಅವಧಿಯ ಧ್ಯಾನ, ಸಂಪೂರ್ಣ ಮೌನದಲ್ಲಿ ಕಳೆಯುವಂತಹ ಸಾಧನವಿದು. ವಾಚ್, ಕನ್ನಡಿ, ಫೋನು ಇವ್ಯಾವುದಕ್ಕೂ ಅವಕಾಶವಿರುವುದಿಲ್ಲ. ಯಾರನ್ನೂ ಕಣ್ಣಲ್ಲಿ ಕಣ್ಣಿಟ್ಟೂ ನೋಡುವ ಹಾಗಿಲ್ಲ. ಸನ್ನೆ ಮಾಡಿ ಕೂಡ ಸಂವಹನ ನಡೆಸುವ ಹಾಗಿಲ್ಲ. ಕರ್ಮಬಂಧನಗಳಿಂದ ಮುಕ್ತಗೊಳಿಸಲು, ದೇಹವ್ಯವಸ್ಥೆಯನ್ನು ಶುದ್ಧೀಕರಿಸಲು ಇದು ನೆರವಾಗುತ್ತದೆ. ಪ್ರಜ್ಞೆಯ ಉನ್ನತ ಮಟ್ಟವನ್ನು ತಲುಪುವ, ಸದ್ಗುರುಗಳ ಉಪಸ್ಥಿತಿಯಲ್ಲಿ ಧ್ಯಾನದ ಉತ್ತುಂಗವನ್ನು ಅನುಭವಿಸುವ ಸಾಧ್ಯತೆಯನ್ನು ನೀಡುತ್ತದೆ.

ಮೂರುಹೊತ್ತು ಸಾತ್ವಿಕ ಆಹಾರವನ್ನೇ ಸೇವಿಸುತ್ತಿದ್ದರೂ, ಎಲ್ಲೂ ಓಡಾಡದೆ ಕುಳಿತಲ್ಲಿಯೇ ಧ್ಯಾನ ಮಾಡುತ್ತಿದ್ದರೂ, 8 ದಿನಗಳಲ್ಲಿ 6 ಪೌಂಡ್ ತೂಕ ಕಳೆದುಕೊಂಡಿದ್ದೆ! ಶಿವರಾತ್ರಿಯನ್ನಂತೂ ಪದಗಳಲ್ಲಿ ವರ್ಣಿಸಲಸಾಧ್ಯ.

anu2nitin@gmail.com (ಮುಂದುವರಿಯುವುದು)

# ನಿಮಗೆ ರುಚಿಕರ ಅಡುಗೆ ಗೊತ್ತೆ?

**ಸುಲಲಿತ ಪ್ರಬಂಧ**

» ಸುಮಾ ರಮೇಶ್, ಹಾಸನ

ಅರವತ್ತನಾಲ್ಕು ವಿದ್ಯೆಗಳಲ್ಲಿ ಒಂದಾದ ಪಾಕಶಾಸ್ತ್ರದಲ್ಲಿ ನನಗೆ ಅಷ್ಟಾಗಿ ಪರಿಣತಿ ಇಲ್ಲದಿದ್ದರೂ, ಅದರಲ್ಲಾಗುವ ಎಡವಟ್ಟುಗಳನ್ನು ರಿಪೇರಿ ಮಾಡುವುದರಲ್ಲಿ ತಕ್ಕಮಟ್ಟಿಗೆ ಪ್ರಾವೀಣ್ಯತೆ ಇದೆ. ಟಾಪರ್ಸ್‌ಗಿಂತಲೂ ಜಸ್ಟ್ ಪಾಸ್ ಆದ ವಿದ್ಯಾರ್ಥಿಗಳು ಉತ್ತಮ ಗೈಡ್ ಆಗಬಲ್ಲರು ಎಂಬಂತೆ ನನ್ನ ಪ್ರಯೋಗ ಮತ್ತು ವೈಫಲ್ಯದ (ಟ್ರಯಲ್ ಅಂಡ್ ಎರರ್) ಅನುಭವದ ಮೇರೆಗೆ ನಾನು ಕೆಲವೊಂದು ಉತ್ತಮ ಟಿಪ್ಸ್ ನೀಡಬಲ್ಲೆ !

ಅಡುಗೆಯೂ ಒಂದು ವಿಜ್ಞಾನ ಎಂಬ ಮಾತು ಒಪ್ಪುವಂತದ್ದೇ. ಮಾಡಿದ ಅಡುಗೆ ಕೆಟ್ಟಾಗ ಅದಕ್ಕೆ ಕೊಂಚ ಫಿಸಿಕಲ್ ಆಂಡ್ ಕೆಮಿಕಲ್ ಚೇಂಜಸ್ ಮಾಡಿ ಸಾಧ್ಯವಾದ ಕಡೆ ಪ್ಲಾಸ್ಟಿಕ್ ಸರ್ಜರಿಯನ್ನೂ ಮಾಡಿ ಸರಿಪಡಿಸುವ ಜಾಣ್ಮೆ ತಿಳಿದಿದ್ದರೆ ಒಳಿತು. ರುಚಿಗೆ ಇರುವಷ್ಟೇ ಮಹತ್ವ ಅದರ ಗಾರ್ನಿಶಿಂಗ್ ಹಾಗು ಪ್ರೆಸೆಂಟಿಂಗ್‌ಗೂ ಇದೆ. ಸುಮಾರಾಗಿ ಮಾಡಿದ ಟೀ ಕಾಫಿಯನ್ನು ಸುಂದರವಾದ ಪಿಂಗಾಣಿ ಕಪ್ ನಲ್ಲಿ ಹಾಕಿ ನಸುನಗುತ್ತಾ ನೀಡಿದರೆ ವಾಹ್! ಎಂದು ಆಸ್ವಾದಿಸುವವರಿಗೆ ಬಣ್ಣ, ರುಚಿ, ಶಕ್ತಿ ಎಲ್ಲವೂ ಗೋಚರಿಸುವುದು. ತಯಾರಾದ ಅಡುಗೆಯ ಮೇಲೆ ಹೆಚ್ಚಿದ ಕೊತ್ತಂಬರಿ, ಈರುಳ್ಳಿ, ಟೊಮೇಟೊ, ಸೌತೆಕಾಯಿ, ಕೋಸಿನ ತುರಿಯಿಂದ ಅಲಂಕರಿಸಿ ಕೊಡಬಹುದು. ಅಡುಗೆ ಮಾಡುವವರ ಸ್ವಚ್ಛತೆ, ಬಡಿಸುವವರ ಪ್ರಸ್ತುತಿ ಹಾಗು ಮನಸ್ಥಿತಿ ಕೆಟ್ಟರೆ ಯಾವೆಲ್ಲಾ ಎಡವಟ್ಟುಗಳಾಗುತ್ತವೆ ಎಂಬುದಕ್ಕೆ ನಿದರ್ಶನವೇ ನಮ್ಮ ಲಚ್ಚವ್ವ.

ಲಚ್ಚವ್ವ, ನಮ್ಮ ತಂದೆಯ ಸೋದರ ಸಂಬಂಧಿ ಮಹಿಳೆ. ಬ್ರಹ್ಮನು, ನಳಮಹಾರಾಜನ ವಿನ್ಯಾಸವನ್ನು ಮೂಡಿಸುವಾಗ ಈಕೆಯೂ ಪಕ್ಕದಲ್ಲೇ ಇದ್ದಿರಬೇಕು. ಅವಳ ಅಡುಗೆ ಕೌಶಲಕ್ಕೆ, ಉಣ್ಣುವವರ ರುಚಿಮೊಗ್ಗುಗಳು ಪರವಶವಾಗಿ ಇನ್ನಷ್ಟು, ಮತ್ತಷ್ಟು ಎಂದು ಹಪಹಪಿಸುತ್ತಿದ್ದವು. ಆದರೆ ಒಂದಕ್ಕೆ ಒಂದು ಫ್ರೀ ಎಂಬಂತೆ ಅವಳ ಅಡುಗೆ ಪರಿಣತಿಯೊಂದಿಗೆ ಸಿಡುಕುತನವೂ ಉಚಿತವಾಗಿ ಜೊತೆಯಾಗಿತ್ತು. ಇದು ಕುಕಿಂಗ್ ಸಮಯದಲ್ಲಿ ಮೌನವಾಗಿದ್ದು ಪ್ರೆಸೆಂಟಿಂಗ್ ಸಮಯಕ್ಕೆ ಸರಿಯಾಗಿ ಪ್ರಕಟವಾಗುತ್ತಿತ್ತು. ಅವಳ ಪಕ್ವಾನ್ನಗಳ ಪರಿಮಳಕ್ಕೆ ಎಲ್ಲರ ನಾಸಿಕಾಗ್ರಗಳೂ ಉದ್ರೇಕಗೊಂಡು ಅವರು ತಾಟು ಹಿಡಿದು ಕೂರುವ ಸಮಯಕ್ಕೆ ಸರಿಯಾಗಿ ಘಾಟು ಹತ್ತಿದಂತೆ ಅವಳ ಮೂಡು ಔಟ್ ಆಗುತ್ತಿತ್ತು. ಅದುವರೆಗಿನ ಶ್ರಮ, ಒಡಲಲ್ಲಿ ಸಾಕಿಕೊಂಡ ಸಿಟ್ಟಿನೊಂದಿಗೆ ಬೆರೆತು ಅವಳ ಮುಖದಲ್ಲಿ, ನಾಲಿಗೆಯಲ್ಲಿ ವ್ಯಕ್ತವಾಗಿ ತಿನ್ನುವವರ ಗಂಟಲಲ್ಲಿ ಕಡುಬು ತುರುಕಿದಂತಾಗುತ್ತಿತ್ತು. ಹಾಗಾಗಿ ಹಬ್ಬ ಹರಿದಿನಗಳಲ್ಲಿ ಲಚ್ಚವ್ವನನ್ನು ಬರಿದೇ ಹೆಡ್ ಕುಕ್ ಆಗಿ ನೇಮಿಸಿ, ಬಡಿಸಲು ಬೇರೆಯದೇ ಟೀಮನ್ನು ರೆಡಿ ಮಾಡುತ್ತಿದ್ದರು.

**'ಹಿಂಗು ತೆಂಗು ಇದ್ರೆ ಮಂಗನೂ ಅಡುಗೆ ಮಾಡುತ್ತೆ' ಎಂಬುದು ಹಳೆಯ ಮಾತು. ಇಂದು ಹಿಂಗು ತೆಂಗಿನ ಜಾಗಕ್ಕೆ ಶುಂಠಿ, ಬೆಳ್ಳುಳ್ಳಿ ಪೇಸ್ಟ್, ಟೊಮ್ಯಾಟೋ ಪ್ಯೂರಿ, ಗರಂ ಮಸಾಲೆ, ರೆಡಿ ಮಿಕ್ಸ್, ಬಾತ್ ಪುಡಿ ಸೇರಿವೆ.**

## ಸೊಂಟ ನೋವು

ಒಂದು ಬೆಳಗ್ಗೆ ಎದ್ದಾಗ ಲಚ್ಚವ್ವನ ಸೊಂಟ ಉಳುಕಿದೆ. ಆದರೂ ನರಳುತ್ತಲೇ ತನ್ನ ಪತಿಗೆ ಪ್ರಿಯವಾದ ಅಕ್ಕಿ ರೊಟ್ಟಿ, ಎಣ್ಣೆಗಾಯಿ ಮಾಡಿದ್ದಾಳೆ. ಕೆದರಿದ ಕೂದಲನ್ನೂ ಒಪ್ಪ ಮಾಡಿಕೊಳ್ಳದೆ ಗೊಣಗುಟ್ಟುತ್ತಲೇ ಬಡಿಸಲು ಬಂದಾಗ ಅವನ ಕಣ್ಣಿಗೆ ಡಾಕಿನಿಯ ಪ್ರತಿರೂಪದಂತೆ ಕಂಡು ಅದನ್ನು ಥಟ್ಟನೆ ಅದನ್ನು ಪ್ರಕಟಿಸಿಯೂ ಬಿಟ್ಟಿದ್ದಾನೆ. ರೊಚ್ಚಿಗೆದ್ದ ಲಚ್ಚಿ ಡಾಕಿನಿಯನ್ನೇ ಮೈಮೇಲೆ ಆವಾಹಿಸಿಕೊಂಡು ಬಡಿಸಲು ತಂದಿದ್ದ ರೊಟ್ಟಿಯನ್ನು ರೊಯ್ಯನೆ ಅವನ ತಟ್ಟೆಗೆಸೆದು ಒಳನಡೆದಿದ್ದಾಳೆ. ತಟ್ಟೆಗೆ ತಾಗಿದ ರೊಟ್ಟಿ ಬೌನ್ಸ್ ಆಗಿ ಚಕ್ರದಂತೆ ಉರುಳುತ್ತಾ ಹೋಗಿ ಮೂಲೆಯಲ್ಲಿಟ್ಟಿದ್ದ ಕಸಬರಿಗೆ ಮೇಲೆ ಬಿದ್ದಿದೆ. ಅಲ್ಲಿಗೆ ಅಂದಿನ ಬ್ರೇಕ್ ಫಾಸ್ಟ್ ಗೆ ಬ್ರೇಕ್ ಬಿದ್ದಿದೆ. ಲಚ್ಚಿಯ ಗಂಡ ಹೆಗಲ ಮೇಲಿನ ಟವೆಲ್ಲನ್ನು ಜಾಡಿಸಿ ಹೊರನಡೆದರೆ, ಲಚ್ಚಿ 'ಕೋಪಂ ಅನರ್ಥ ಸಾಧನಂ 'ಎಂದರಿವಾಗಿ ಕುಸು ಕುಸು ಅಳುತ್ತಾ ಉಳುಕಿದ ಸೊಂಟ ನೀವಿಕೊಳ್ಳುತ್ತಾ ಮಲಗಿದ್ದಾಳೆ.

ರೊಟ್ಟಿ ಚಕ್ರದಂತೆ ಉರುಳಿದ್ದಾದರೂ ಹೇಗೆಂದು ಗಾಬರಿಯಾಗದಿರಿ. ರೊಟ್ಟಿಯಲ್ಲೂ ಹಲವು ಬಗೆಯುಂಟು.... ಹಿಟ್ಟು ಉಕ್ಕರಿಸಿದ ರೊಟ್ಟಿ, ಮಸಾಲೆ ರೊಟ್ಟಿ , ಬಾಣಲೆ ರೊಟ್ಟಿ, ಲಟ್ಟಿಸುವ ರೊಟ್ಟಿ , ತಟ್ಟುವ ರೊಟ್ಟಿ, ಹೀಗೆ. ಕೆಲವರಿಗೆ ಹತ್ತಿಯಂತೆ ಮೃದುವಾದ, ನಾಲಿಗೆಯ ಮೇಲೆ ಇಟ್ಟ ಕೂಡಲೆ ಶ್ರಮವಿಲ್ಲದೆ ಒಳ ಜಾರುವ ರೊಟ್ಟಿ ಪ್ರಿಯವಾದರೆ ಇನ್ನು ಕೆಲವರಿಗೆ ಗಟ್ಟಿಯಾದ, ಚಕ್ರದಂತೆ ಉರುಳುವ, ಹಲ್ಲು ನಾಲಿಗೆಗೆ ಕೊಂಚ ತ್ರಾಸ ಕೊಡುವ ರೊಟ್ಟಿಗಳೇ ಹೆಚ್ಚು ಪ್ರಿಯ.

## ರೊಟ್ಟಿಗೆ ಪ್ಲಾಸ್ಟಿಕ್ ಸರ್ಜರಿ

ಪಾಕಶಾಸ್ತ್ರದ ಪ್ರೊಬೇಷನರಿ ಪಿರಿಯಡ್‌ನಲ್ಲಿ ನಾನು ತಟ್ಟುತ್ತಿದ್ದ ರೊಟ್ಟಿಗಳು ಮಣೆಗೇ ಅಂಟಿಕೊಂಡು ಮೇಲೆತ್ತಲು ಬಾರದೆ ರಚ್ಚೆ ಹಿಡಿಯುತ್ತಿದ್ದವು. ಒಮ್ಮೊಮ್ಮೆ ಮಧ್ಯದಲ್ಲಿ ಕಿತ್ತು ಹೋಗಿ ಉದ್ದಿನ ವಡೆಯ ಆಕಾರ ಪಡೆಯುತ್ತಿದ್ದವು. ಅದನ್ನು ಬಡಿಸಿದಾಗ ತಟ್ಟೆಯ ಮುಂದೆ ಕುಳಿತ ಕುಟುಂಬದ ಸಂತ್ರಸ್ತರನ್ನು ಕಂಡು ನನಗೇ ಮರುಕವಾಗುತ್ತಿತ್ತು. ಇಂತಹ ಸಮಯದಲ್ಲೇ ನನ್ನ ರಿಪೇರಿ ಕೌಶಲ ಜಾಗೃತಗೊಂಡದ್ದು. ರೊಟ್ಟಿಯ ಅಂದ, ಆಕಾರ ಕೆಡಿಸಿ ಹೊರಚಾಚಿರುತ್ತಿದ್ದ ಹೆಚ್ಚುವರಿ ಹಿಟ್ಟನ್ನು ಹಲ್ಲೆಯಿಂದ ಕತ್ತರಿಸಿ, ವಿರೂಪಗೊಂಡ ಭಾಗಗಳಿಗೆ, ಕುಳಿಗಳಿಗೆ ಪ್ಯಾಚ್ ಹಾಕಿ ಪ್ಲಾಸ್ಟಿಕ್ ಸರ್ಜರಿ ಮಾಡುತ್ತಿದ್ದೆ. ನಂತರ ಒಂದು ಚೂಪು ಅಂಚಿನ ತಟ್ಟೆಯನ್ನು ರೊಟ್ಟಿಯ ಮೇಲೆ ಬೋರಲಿಟ್ಟು ಅಮುಕಿದರೆ ತಟ್ಟೆಯೊಳಗೆ ಗುಂಡಗಿನ ರೊಟ್ಟಿ ಸಿಲುಕುತ್ತಿತ್ತು. ಹೊರಭಾಗದ ಸ್ಕ್ರ್ಯಾಪ್‌ಗಳು ನಂತರದ ಪ್ಲಾಸ್ಟಿಕ್ ಸರ್ಜರಿಗೆ ಬಳಕೆಯಾಗುತ್ತಿದ್ದವು.

ಚಪಾತಿ ಅರೆಯುವಾಗಲೂ ಇದೇ ವಿಧಾನವನ್ನು ಅನುಸರಿಸಬಹುದು. ಮಾಡುವಾಗಿನ ಇಂತಹ ಸರ್ಕಸ್ಸನ್ನು ತಿನ್ನುವವರು ನೋಡಿರದಿದ್ದರೆ ಒಳಿತು.

ಸಾರಿಗೆ ಕೈಜಾರಿ ಉಪ್ಪು ಹೆಚ್ಚಾದರೆ ಅದಕ್ಕೆ ಅನ್ನವನ್ನು ಬೆರೆಸಿ, ಒಗ್ಗರಿಸಿ ಬಿಸಿಬೇಳೆ ಬಾತಾಗಿಸಬಹುದು. (ರೆಡಿಮೇಡ್ ಸಾರನ್ನ) ಇನ್ನು ಅನ್ನ ಮೆತ್ತಗಾದರೆ ಅದಕ್ಕೆ ಮೊಸರು, ದಾಳಿಂಬೆ, ಡ್ರೈ ಫ್ರೂಟ್ಸ್ ಬೆರೆಸಿ ಮೊಸರನ್ನವಾಗಿಸುವುದು, ಸಾಲ್ಟೀ ಕಬಾಬನ್ನು ಮಂಚೂರಿಯಾಗಿಸುವುದು, ತೆಳ್ಳಗಾದ ಚಪಾತಿ ಕಣಕಕ್ಕೆ ಇನ್ನಷ್ಟು ನೀರು ಸೇರಿಸಿ ಗೋಧಿ ದೋಸೆ ಮಾಡುವುದು ಇವೆಲ್ಲಾ, ಎಡವಟ್ಟು ರಿಪೇರಿ ಕೌಶಲಗಳು. ಇನ್ನು ರವೆ ಇಡ್ಲಿ, ಕಡುಬು ಮಿಕ್ಕಿದ್ದರೆ ಅದನ್ನು ಪುಡಿ ಮಾಡಿ ಒಗ್ಗರಣೆ ಕೊಟ್ಟು ಉಪ್ಪಿಟ್ಟಾಗಿಸುವುದು, ಉಪ್ಪಿಟ್ಟು ಮಿಕ್ಕಿದ್ದರೆ ಅದನ್ನು ಮಿದು ವಡೆ ಮಾಡಿ ಕರಿಯುವುದು, ತಂಗಳನ್ನಕ್ಕೆ ಮಸಾಲೆ ಬೆರೆಸಿ ಉಂಡೆ ಕಟ್ಟಿ ಒಣಗಿಸಿ ಸಂಡಿಗೆಯಾಗಿಸುವುದು, ಹೀಗೆ ಭೌತಿಕ ಹಾಗು ರಾಸಾಯನಿಕ ಬದಲಾವಣೆಗಳ ಮೂಲಕ ಅಡುಗೆಯೂ ವ್ಯರ್ಥವಾಗದೆ ನಾಲಿಗೆಗೂ ವೈವಿಧ್ಯಮಯ ರುಚಿ ದಕ್ಕುತ್ತದೆ.

## ಸಂಕೀರ್ಣ ಎಂದರೆ ಇದೇ!

ಆಧುನಿಕ ಅಡುಗೆಗಳಿಗೆ ಹೋಲಿಸಿದರೆ ಸಾಂಪ್ರದಾಯಿಕ ಅಡುಗೆಗಳು ಹೆಚ್ಚು ಸಂಕೀರ್ಣ. ಅದರಲ್ಲೂ ಮೋಸ್ಟ್ ಕಾಂಪ್ಲಿಕೇಟೆಡ್ ಅಂದ್ರೆ ಮುದ್ದೆ. ನಾನು ಮಾಡಿದ ಮೊದಲ ಮುದ್ದೆ ಒಂದು ದೊಡ್ಡ ಎಪಿಕ್! ಅತ್ತೆ ಮನೆಯಲ್ಲಿ ಡ್ಯೂಟಿ ರಿಪೋರ್ಟ್ ಮಾಡಿಕೊಂಡ ಪ್ರಾರಂಭದಲ್ಲಿ ಮುದ್ದೆ ಮಾಡುವ ಜವಾಬ್ದಾರಿ ಅತ್ತೆಯದಾಗಿತ್ತು. ಅಂದೊಮ್ಮೆ ಮುದ್ದೆ ಮಾಡಲು ಕುದಿ ಇರಿಸಿದ ಅತ್ತೆ ಕೆಲನಿಮಿಷಗಳವರೆಗೆ ಅನಿವಾರ್ಯವಾಗಿ ಹೊರ ಹೋಗಬೇಕಾಗಿ ಬಂದಾಗ ನನಗೆ ಅದರ ಮುಂದಿನ ಪ್ರಾಸಸ್‌ನ ಹೊಣೆ ಹೊರಿಸಿದರು. ನಾನು ಮೊದಲೇ ಎಲ್ ಬೋರ್ಡ್. ಕುದಿಯುತ್ತಿದ್ದ ಗಂಜಿಗೆ ಹಿಟ್ಟು ಸುರಿದು ಕೋಲೂರಿದೆ. ನಂತರ ಕೆಳಗಿಳಿಸಿ ಐದಾರು ಬಟ್ಟೆಗಳನ್ನು ಕಾಲಿಗೂ, ಪಾತ್ರೆಗೂ ಒತ್ತುಕೊಟ್ಟು ಕೋಲು ತಿರುಗಿಸಲು ಪ್ರಯತ್ನಿಸಿದೆ. ಕ್ಲಾಕ್ ವೈಸ್ ...ಆಂಟಿಕ್ಲಾಕ್ ವೈಸ್ ... ಊಹೂಂ...! ಕೈಕಾಲು ಸುಟ್ಟಿತೇ ಹೊರತು ಪಾತ್ರೆಯೊಳಗಿದ್ದ ಕಚ್ಚಾವಸ್ತು ಮುದ್ದೆಯಾಗುವ ಲಕ್ಷಣ ಕಾಣಲಿಲ್ಲ. ಹತಾಶಳಾಗಿ ಉರಿಯುತ್ತಿದ್ದ ಕೈಕಾಲುಗಳನ್ನು ಉಜ್ಜಿಕೊಳ್ಳುತ್ತಾ ಅತ್ತೆ ಬಂದರೆ ಬೈದಾರೆಂಬ ಭಯದಿಂದ ಆ ಕೆಟ್ಟ ಬೈ ಪ್ರಾಡಕ್ಟನ್ನು ಒಂದು ದೊಡ್ಡ ಕವರಿಗೆ ತುಂಬಿ ಮನೆಯ ಹಿಂದೆ ಇದ್ದ ಪಾಳು ಬಾವಿಗೆ ಎಸೆದು ಬಂದೆ. ನಂತರ ಅದೇ ಪಾತ್ರೆಯನ್ನು ತೊಳೆದು ಹೊಸದಾಗಿ ಕುದಿ ಇರಿಸಿ ವಿಧೇಯತೆಯಿಂದ ನಿಂತೆ. ಅಷ್ಟರಲ್ಲಿ ಹಿಂದಿರುಗಿದ ಅತ್ತೆ 'ಇದೇನು...? ಇನ್ನೂ ಮುದ್ದೆ ಆಗಿಲ್ವಾ....? ನೀನು ಸ್ಟವ್‌ನ ಬಹಳ ಕಡಿಮೆ ಉರಿಯಲ್ಲಿರಿಸಿರುವೆ ' ಎನ್ನುತ್ತಾ ಗೊಂದಲದಿಂದ ಉರಿ ಏರಿಸಿದ್ದರು.

ಇಂದಿನ ಯುವತಿಯರು ನಾನ್ ಸ್ಟಿಕ್ ಪಾತ್ರೆಯಲ್ಲಿ ಮರದ ಹಲ್ಲೆಯನ್ನು ಬಳಸಿ ಯೂಟ್ಯೂಬ್ ಮಾರ್ಗದರ್ಶನದಲ್ಲಿ ಲೀಲಾಜಾಲವಾಗಿ ಮುದ್ದೆ ಮಾಡುವರು. ಕೋಲು ತಿರುಗಿಸಿ ಮಾಡುವುದೇನಿದ್ದರೂ ಪ್ರೊಫೆಷನಲ್ ಬಾಣಸಿಗರು. 'ಹಿಂಗು ತೆಂಗು ಇದ್ರೆ ಮಂಗನೂ ಅಡುಗೆ ಮಾಡುತ್ತೆ' ಎಂಬುದು ಹಳೆಯ ಮಾತು. ಇಂದು ಹಿಂಗು ತೆಂಗಿನ ಜಾಗಕ್ಕೆ ಶುಂಠಿ ಬೆಳ್ಳುಳ್ಳಿ ಪೇಸ್ಟ್ , ಟೊಮ್ಯಾಟೋ ಪ್ಯೂರಿ , ಗರಂ ಮಸಾಲೆಗಳನ್ನು ಕಟ್ ಪೇಸ್ಟ್ ಮಾಡಬಹುದು. ಇಂದಿನ ಅಡುಗೆಗಳೂ ಸರಳ. ರೆಡಿಮೇಡ್ ಪುಡಿಗಳನ್ನು ಬಳಸಿ ಫಟಾಫಟ್ ಅಡುಗೆ ಮಾಡುವ ಕೌಶಲ, ಲಿಂಗಭೇದವಿಲ್ಲದೆ ಎಲ್ಲರಿಗೂ ಕರಗತವಾಗಿದೆ. ರಿಪೇರಿ, ಪ್ಲ್ಯಾಸ್ಟಿಕ್ ಸರ್ಜರಿ ಬಗ್ಗೆ ಯೂಟ್ಯೂಬ್ ನಲ್ಲೇ ಮಾಹಿತಿ ಲಭ್ಯವಿದೆ. ಇವು ಪಾಕಶಾಸ್ತ್ರದ ಪ್ರಯೋಗಶೀಲತೆಯನ್ನು ಹೆಚ್ಚು ಸರಳಗೊಳಿಸಿವೆ.

# ಮರೆಯಾಗುತ್ತಿದೆ ಮರದ ಕೆತ್ತನೆ

## ಮಲೆನಾಡಿನ ಮನೆಗಳಲ್ಲಿ ಬಳಸಿದ ಮರದ ಬಾಗಿಲುಗಳ ಮೇಲೆ, ಕಿಟಕಿಗಳ ಮೇಲೆ ಆಕರ್ಷಕ ಕೆತ್ತನೆಗಳಿರುತ್ತಿದ್ದವು. ಇಂದಿನ ಸಿಮೆಂಟ್ ಮನೆಗಳಲ್ಲಿ ಅಂತಹ ಕೆತ್ತನೆಗೆ ಅವಕಾಶವಿಲ್ಲದೇ ಇರುವುದರಿಂದ, ಅವು ಮರೆಯಾಗುತ್ತಿವೆ.

• ಚಂದ್ರಶೇಖರ ಹೊಡಬಟ್ಟೆ

ನಮ್ಮ ರಾಜ್ಯದ ಮಲೆನಾಡಿನಲ್ಲಿನ ನೂರಾರು ವರ್ಷಗಳ ಹಳೆಯ ಮನೆಗಳನ್ನು ನೋಡುವುದೇ ಒಂದು ಆನಂದದ ಅನುಭೂತಿ. ಒಂದು ಮನೆಯಂತೆ ಮತ್ತೊಂದು ಇರುವುದಿಲ್ಲ. ಹೆಚ್ಚಾಗಿ ಮಂಗಳೂರು ಹಂಚಿನ ಮನೆಗಳು. ಮಣ್ಣು ಗೋಡೆ. ಮುಚ್ಚಿಗೆ ಎಂದು ಕರೆಯುವ ಎರೆಡೆರಡು ಮಾಳಿಗೆಯ ಮನೆಗಳು. ಗೋಡೆ ಮೇಲೆ ಮರದ ದಪ್ಪ ತೊಲೆ, ಅದರ ಮೇಲೆ ಮರದ ಅಡ್ಡೆ, ಅಡ್ಡೆಯ ಮೇಲೆ ಹಲಗೆ ಹಾಕಿ, ಹಲಗೆ ಮೇಲೆ ಮಣ್ಣು ಹಾಕುತ್ತಾರೆ. ಆದರೆ ಪ್ರತಿ ಅಡ್ಡೆ ತೊಲೆಯ ಮೇಲೂ ಚುಕ್ಕಿ ಚಿತ್ತಾರಗಳು. ಇದರ ಅಂದವನ್ನು ಹೆಚ್ಚಿಸಲು ಕೆಳಗಡೆ ಜೇಡಿ ಮಣ್ಣಿನ ಕೆಂಪು ನೆಲ.

ಇನ್ನು ಮನೆಗಳಿಗೆ ತಯಾರಿಸುವ ಮರದ ಬಾಗಿಲು ಕಿಟಕಿಗಳ ಮೇಲಿನ ಕೆತ್ತನೆ ವಿಶಿಷ್ಟ.. ಪ್ರತಿ ಮನೆಗೂ ಪ್ರಧಾನ ಬಾಗಿಲು ಎಂದೇ ಹೆಚ್ಚಾಗಿ ಕರೆಯಿಸಿಕೊಳ್ಳುವ ವಾಸ್ತು ಬಾಗಿಲು. ಅದನ್ನು ತಯಾರಿಸುವುದು ಎಪ್ಪತ್ತು ಎಂಬತ್ತು ವರ್ಷ ಬೆಳೆದ ಹಲಸಿನ ಮರದಿಂದ. ಹಲಸಿನ ಮರವನ್ನು ಬೇಕಾದ ರೀತಿಯಲ್ಲಿ ಕೆತ್ತನೆಗೆ ಪಳಗಿಸಬಹುದು. ಇದರಿಂದ ಮಾಡಿದ ಕೆತ್ತನೆಗಳ ಅಂದ ಚಂದಕ್ಕೆ ಸರಿಸಾಟಿ ಯಾವುದೂ ಇಲ್ಲ. ಸೂಕ್ತ ಹಲಸಿನ ಮರ ಸಿಗದೆ ಇದ್ದರೆ ಬಾಗಿಲಿನ ಕೆತ್ತನೆಗೆ ಬಳಸುವುದು ಸಾಗವಾನಿ ಅಥವಾ ಬೀಟೆ ಮರ. ಪ್ರಧಾನ ಬಾಗಿಲು ಸಾಮಾನ್ಯವಾಗಿ ಐದು ಅಡಿ ಎತ್ತರವಿರುತ್ತದೆ. ಅಂದರೆ ಇದನ್ನು ದಾಟಿ ಮನೆಯೊಳಗೆ ಹೋಗುವವರು ತಲೆ ತಗ್ಗಿಸಿಯೇ ಒಳಗೆ ಹೋಗಬೇಕು. ಕಾರಣ ಇಡೀ ಮನೆಗೆ ಗೌರವ ಕೊಟ್ಟು ಒಳಗೆ ಬರಬೇಕು ಎಂಬುದು ಇದರ ಆಶಯ. ಪ್ರತಿದಿನ ಬೆಳಗ್ಗೆ ಬಾಗಿಲಿಗೆ, ಹೊಸ್ತಿಲಿಗೆ ಕಡ್ಡಾಯವಾಗಿ ರಂಗೋಲಿ, ಅರಿಷಿಣ ಕುಂಕುಮದ ಪೂಜೆ ಮತ್ತು ಹೂವಿನ ಅಲಂಕಾರ ಆಗಲೇಬೇಕು.

ಇಡೀ ಮನೆಯ ಅಂದ ಚಂದವನ್ನು ಹೆಚ್ಚಿಸುವುದೇ ಈ ಪ್ರಧಾನ ಬಾಗಿಲು. ಸುತ್ತ ಚೌಕಾಕಾರದ ಚೌಕಟ್ಟು. ಮತ್ತೆ ಅದರ ಮೇಲೆ ಒಂದರ ಮೇಲೊಂದು ಸುಮಾರು ಮೂರ್ನಾಲ್ಕು ಚೌಕಟ್ಟುಗಳು. ಅದನ್ನು ಸಾಮಾನ್ಯವಾಗಿ ಹೇರಿಕೆಗಳು ಎಂದು ಹೇಳುವುದುಂಟು. ಈ ಇಡೀ ಚೌಕಟ್ಟು ಮತ್ತು ಹೇರಿಕೆಗಳಿಗೆ ಸುಂದರ ಅಲಂಕಾರವನ್ನು ಆಚಾರಿಗಳೆಂದು ಕರೆಯಿಸಿಕೊಳ್ಳುವ ವಿಶ್ವಕರ್ಮರು ತುಂಬಾ ನಾಜೂಕಾಗಿ ಮಾಡುತ್ತಾರೆ. ಈ ಬಾಗಿಲು ಚೌಕಟ್ಟುಗಳಲ್ಲಿ ದೇವರ ಚಿತ್ರಗಳು, ಸುಂದರ ಬಳ್ಳಿಗಳು, ನವಿಲು ಗಿಳಿವಿಂಡುಗಳು ಮತ್ತು ಅಪರೂಪಕ್ಕೆ ದಶಾವತಾರ, ಭಾಗವತದ ಕೆತ್ತನೆಗಳನ್ನು ನೋಡಬಹುದು. ಹೆಚ್ಚಾಗಿ ಪ್ರಧಾನ ಬಾಗಿಲಿನ ಮಧ್ಯದಲ್ಲಿ ಮೊದಲಿಗೆ ಚಕ್ರಾಕಾರದ ದೇವರ ಚಿತ್ರವನ್ನೋ ಅಥವಾ ಸ್ವಸ್ತಿಕವನ್ನೋ ಕೆತ್ತನೆ ಮಾಡಿ ನಂತರ ಅಲ್ಲಿಂದ ಉಳಿದ ಕೆತ್ತನೆಗಳು ಪ್ರಾರಂಭವಾಗುತ್ತವೆ. ಬಾಗಿಲಿನ ಇಕ್ಕೆಲಗಳಲ್ಲೂ ಅಭಾಸಕ್ಕೆ ಎಡೆಯಾಗದಂತೆ ಈ ಕೆತ್ತನೆಗಳು ಒಂದೇ ರೀತಿಯಾಗಿ ಇರಲೇಬೇಕು. ಈ ಮನೆಗಳೆಲ್ಲ ಸುಮಾರು ನೂರಾರು ವರ್ಷಗಳಷ್ಟು ಹಳೆಯದು. ಅಂದು ಈಗಿನ ಕಾಲದ ಹಾಗೆ ಸುಂದರ ಕೆತ್ತನೆಯ ಮತ್ತು ಕುಸುರಿ ಕೆಲಸಕ್ಕೆ ಬೇಕಾದ ಯಾವುದೇ ಯಂತ್ರೋಪಕರಣಗಳು ಇರದಿದ್ದ ಕಾಲ. ಪ್ರತಿ ಕೆತ್ತನೆಗೂ ಉದ್ದಗಲವೆಂದು ಖರಾರುವಾಕ್ಕಾಗಿ ಅಳತೆ ಮಾಡಿಯೇ ಕೆತ್ತನೆ ಮಾಡಬೇಕು. ಸಲ್ಪ ವ್ಯತ್ಯಾಸವಾದರೂ ಇಡೀ ಮರ ಮತ್ತು ಹಲಗೆಯೇ ದಂಡ. ಇದಕ್ಕೆ ಪಳಗಿದ ಕೈಯಾಗಿರಬೇಕು.

ಈ ಪ್ರಧಾನ ಬಾಗಿಲಿನ ಎದುರಿಗೇ ಮನೆಯ ಒಟ್ಟಂದವನ್ನು ಹೆಚ್ಚಿಸುವ ಕುಸುರಿ ಕೆಲಸದ ಕಿಟಕಿಗಳು. ಮರದ ಕಿಟಕಿಗಳಿಗೆ ಈಗಿನಂತೆ ಕಬ್ಬಿಣದ ಸರಳುಗಳು ಇರುತ್ತಿರಲಿಲ್ಲ. ಮರದಿಂದಲೇ ಮಾಡಿದ ಸರಳಿನಾಕಾರದ ಮರದ ಕೋಲುಗಳು ಮತ್ತು ಕಟಾಂಜನಗಳು. ಅವುಗಳ ಮೇಲೂ ಕುಸುರಿ ಕೆತ್ತನೆಗಳು. ಮೊಳೆ, ಸ್ಕ್ರೂ ಬಳಸದೆ ಹೆಚ್ಚಾಗಿ ಒಂದಕ್ಕೊಂದು ಬೆಸೆಯುವ ಪಳಿ ಕೆತ್ತಿಯೇ ಮಾಡುತ್ತಿದ್ದ ಈ ಕಿಟಕಿ ಕಟಾಂಜನಗಳು ಮನೆಯ ಅಂದವನ್ನು ಹೆಚ್ಚಿಸುತ್ತಿದ್ದದರಲ್ಲಿ ಎರಡು ಮಾತಿಲ್ಲ.

ಮರದ ಕೆತ್ತನೆ ಇರುವ ಬಾಗಿಲು, ಕಿಟಕಿ, ಹಳೆಯ ವಾಸ್ತು ಶೈಲಿ ಇವೆಲ್ಲವೂ ಕ್ರಮೇಣ ಕಣ್ಮರೆಯಾಗುತ್ತಿದೆ. ಹೊಸದಾಗಿ ಕಟ್ಟುವ ಮನೆಗಳ ನಿರ್ಮಾಣದಲ್ಲಿ ಸಿಮೆಂಟ್ ಪ್ರಧಾನವಾಗಿದ್ದು, ಹೊಸ ವೇಷ ಭೂಷಣಗಳೊಂದಿಗೆ ನಮ್ಮ ಜೀವನದೊಂದಿಗೆ ಹೆಜ್ಜೆ ಹಾಕುತ್ತಿವೆ. ಕಬ್ಬಿಣ, ಸಿಮೆಂಟ್, ಅಲ್ಯೂಮಿನಿಯಮ್‌ಗಳ ದಾಳಿಯನ್ನು ಎದುರಿಸಲಾಗದೆ ಮನೆಯ ಮುಚ್ಚುಗೆ, ಅಡ್ಡೆ, ಕಟಾಂಜನಗಳು ಸೋತು ಅವಸಾನದ ಹಾದಿ ಹಿಡಿದಿವೆ. ಆವಿಷ್ಕಾರಗೊಂಡ ಹೊಸ ಹೊಸ ಆಧುನಿಕ ಯಂತ್ರ ತಂತ್ರಗಳು ವಿಶ್ವಕರ್ಮರ ಕೆಲಸವನ್ನು ಹಗುರಾಗಿಸಿವೆ.

## ಬಾಳೆಹಣ್ಣನ್ನು ಕಲಾಕೃತಿಯ ರೂಪದಲ್ಲಿ ವಿನ್ಯಾಸಗೊಳಿಸಿ, ಹರಾಜು ಹಾಕಿದಾಗ, ಕೋಟಿಗಟ್ಟಲೆ ಹಣ ದೊರಕಿದ್ದಾದರೂ ಏಕೆ? ಹೇಗೆ?

# ಬಾಳೆಹಣ್ಣಿಗೆ ಕೋಟಿ ಬೆಲೆ!

• ಮಹೇಂದ್ರ ಡಿ.

ಕಳೆದವಾರ ಬಾಳೆಹಣ್ಣಿನ ಕಲಾಕೃತಿಯೊಂದು ವಿಶ್ವಾದ್ಯಂತ ಸದ್ದು ಮಾಡಿತು. ಬಾಳೆಹಣ್ಣನ್ನು ಟೇಪಿನಿಂದ ಅಂಟಿಸಿ ಹರಾಜು ಹಾಕಲಾದ ಕೃತಿ ಮಾರಾಟವಾಗಿದ್ದು ಸುದ್ದಿಯಾದರೆ ಅದನ್ನು ಖರೀದಿಸಿದ ಜಸ್ಟಿನ್ ಸನ್ ಹಾಂಗ್ ಕಾಂಗ್‌ನ ಉನ್ನತ ಮಟ್ಟದ ಹೋಟೆಲ್‌ನಲ್ಲಿ ಪತ್ರಕರ್ತರು ಮತ್ತು ಪ್ರಭಾವಿ ಪ್ರೇಕ್ಷಕರ ಸಮ್ಮುಖದಲ್ಲಿ ಖರೀದಿ ವೇಳೆ ಮಾತು ಕೊಟ್ಟಂತೆ ಬಾಳೆಹಣ್ಣನ್ನು ಕಚ್ಚಿ ತಿನ್ನುವ ಮೂಲಕ ಮತ್ತೆ ಸುದ್ದಿಯಾಗಿದ್ದು ಇನ್ನೊಂದು ಸಂಗತಿ. ಈ ಘಟನೆ ಕಲಾಕೃತಿಯ ಮೂಲ ಉದ್ದೇಶದ ಸ್ಪಷ್ಟತೆಯನ್ನು ಚರ್ಚೆಗಿಂತಲೂ ಈ ಖರೀದಿ ಪ್ರಕ್ರಿಯೆ ಹಿಂದಿನ ಉದ್ದೇಶಗಳು ಚರ್ಚೆಯು ಮುನ್ನೆಲೆಗೆ ಬಂದಿವೆ.

ಕಲೆಯ ಉದ್ದೇಶಗಳೇನು? ಕಲೆಯ ಏಕೈಕ ಉದ್ದೇಶವೂ ಮಾರುಕಟ್ಟೆಯನ್ನೆ ಸೃಷ್ಟಿಸಿಕೊಳ್ಳುವುದೆ! ಅಷ್ಟಕ್ಕೂ ಇಟಾಲಿಯನ್ ಕಲಾವಿದ ಮೌರಿಜಿಯೊ ಕ್ಯಾಟೆಲನ್ ರಚಿಸಿದ 'ಕಾಮಿಡಿಯನ್' (ಹಾಸ್ಯನಟ) ಎಂಬ ಪರಿಕಲ್ಪನೆಯ ಕಲಾಕೃತಿಯು ಗೋಡೆಗೆ ಟೇಪ್ ಮಾಡಿದ ಬಾಳೆಹಣ್ಣು. ಇದರಲ್ಲೇನು ವಿಶೇಷ ಅಂತೀರಾ! ಗೋಡೆಗೆ ಟೇಪ್ ಮಾಡಿದ ಬಾಳೆಹಣ್ಣಿನ ಕಲಾಕೃತಿಯು ನ್ಯೂಯಾರ್ಕ್‌ನ ಸೋಥೆಬಿಸ್‌ನಲ್ಲಿ 6.2 ಮಿಲಿಯನ್ ಯುಎಸ್ ಡಾಲರಿಗೆ ಹರಾಜಾಗುವ ಮೂಲಕ ಜಗತ್ತನ್ನು ದಿಗ್ಭ್ರಮೆಗೊಳಿಸಿತು!

ಹರಾಜು ಪ್ರಕ್ರಿಯೆ 800,000 ಡಾಲರಿನಿಂದ ಆರಂಭಗೊಂಡು, ಖರೀದಿದಾರನ ಅಂತಿಮ ಪ್ರೀಮಿಯಂ ಮೊತ್ತವನ್ನು ಹೆಚ್ಚಿಸುವ ಮೊದಲು ಕೇವಲ ಐದು ನಿಮಿಷಗಳಲ್ಲಿ ಬೆಲೆ 5.2 ಮಿಲಿಯನ್ ಡಾಲರಿಗೆ ಏರಿತು. ಒಟ್ಟಿನಲ್ಲಿ ಕೃತಿರೂಪದಲ್ಲಿ ಬಾಳೆಹಣ್ಣು ಖರೀದಿಸುವುದು ಮತ್ತು ತಿನ್ನುವುದು, ಕಲಾ ಇತಿಹಾಸ ಮತ್ತು ಜನಪ್ರಿಯ ಸಂಸ್ಕೃತಿ ಎರಡರಲ್ಲೂ ಅದರ ಸ್ಥಾನವನ್ನು ಗೌರವಿಸುವುದಾಗಿದೆ ಎಂಬುದ ಈ ಹರಾಜಿನಲ್ಲಿದ್ದ ವಾಣಿಜ್ಯೋದ್ಯಮಿಗಳ ಮಾತು.

ಕ್ರಿಪ್ಟೋಕರೆನ್ಸಿಯನ್ನು ಬಳಸಿಕೊಂಡು ಜಸ್ಟಿನ್ ಸನ್ ಅವರು ಇದನ್ನು ಹೆಚ್ಚಿನ ಬಿಡ್ ಮಾಡಿ ಖರೀದಿ ಮಾಡಿದ್ದಾರೆ, ಆ ಮೂಲಕ ಕ್ರಿಪ್ಟೋಕರೆನ್ಸಿ ಪ್ಲಾಟ್‌ಫಾರ್ಮ್ ನ್ನು ಜನಪ್ರಿಯಗೊಳಿಸಲು ಮಾಡಿದರೆ? ನಿಜವಿರಬಹುದು ಎಂಬುದಕ್ಕೆ ಕಾರಣ ಕ್ರಿಪ್ಟೋಕರೆನ್ಸಿ ಪ್ಲಾಟ್‌ಫಾರ್ಮ್‌ನ ಸಂಸ್ಥಾಪಕ ಸನ್ ಅವರೇ ಆಗಿದ್ದಾರೆ. 'ಈ ಸಾಂಸ್ಕೃತಿಕ ವಿದ್ಯಮಾನವು ಕಲೆ, ಅನುಕರಣೆ ಮತ್ತು ಕ್ರಿಪ್ಟೋಕರೆನ್ಸಿ ಸಮುದಾಯಗಳ ಸೇತುವೆಯಾಗಿ ಪ್ರತಿನಿಧಿಸುತ್ತದೆ' ಎಂಬ ಸನ್ ಹೇಳಿಕೊಂಡರೂ, ಸೂಕ್ಷ್ಮವಾಗಿ ಗಮನಿಸಿ ಡೊನಾಲ್ಡ್ ಜೆ. ಟ್ರಂಪ್ ಅವರ ಚುನಾವಣೆಯ ನಂತರ ಮತ್ತು ಕ್ರಿಪ್ಟೋಕರೆನ್ಸಿಗಳ ಮೌಲ್ಯದಲ್ಲಿ ಏರಿಕೆಯಾದಾಗಿದೆ. 'ನಾವು ಇನ್ನೂ ಕ್ರಿಪ್ಟೋ ಸಮುದಾಯದಿಂದ ತೀವ್ರಮಟ್ಟದಲ್ಲಿ ಕಲಾಕೃತಿಗಳ ಖರೀದಿಯನ್ನು ಮಾಡಲಿದ್ದೇವೆ ಎಂದು ನಾನು ಭಾವಿಸುತ್ತೇನೆ' ಎಂಬ ಸನ್ ಮಾತುಗಳು ಕಲಾ ಮಾರುಕಟ್ಟೆಯಲ್ಲಿ ಸಂಚಲನ ಮೂಡಿಸುವುದಾದರೂ ಕಲಾವಿದರಲ್ಲಿ ಆತಂಕದ ಕಂಪನಕ್ಕೆ ಕಾರಣವಾಗಿದೆ. ಏಕೆಂದರೆ ಕಲೆ ಈ ಮೂಲಕ ಯಾವ ಹಾದಿಯಲಿ ಕ್ರಮಿಸಲಿದೆ ಎಂಬುದು.

ಕಿಚ್ ವಿದ್ಯಮಾನ

ಈ ಘಟನೆಯು ಮಾಧ್ಯಮ ಸಂವೇದನೆಯಾಯಿತು, ದಿ ನ್ಯೂಯಾರ್ಕ್ ಪೋಸ್ಟ್ ಮುಖಪುಟದಲ್ಲಿ ಕಾಣಿಸಿಕೊಂಡಿತು. ಕಲಾವಲಯದಲ್ಲಿ ಸಂಚಲನ ಮೂಡಿಸಿದ ಈ ವಿದ್ಯಮಾನ ಆಧುನಿಕ ಅವಿಷ್ಕಾರವೇನಲ್ಲ! ಕಲೆಯ ಇಂಥದೊಂದು ಕ್ರಿಯೆ 'ಕಿಚ್' ಅಂತಲೆ ಕರೆಯಲಾಗುತ್ತದೆ. ಈಗಾಗಲೆ ಹೇಳಿದಂತೆ ಕಲಾಕ್ಷೇತ್ರದಲ್ಲಿ ಇಂಥ ಉದಾಹರಣೆಗಳು ಅನೇಕ ಆಗಿಹೋಗಿವೆ. 1962ರಲ್ಲಿ ಪ್ರಸಿದ್ಧ ಕಲಾವಿದ ಆಂಡಿ ವಾರ್ಹೋಲ್ ಲಾಸ್ ಏಂಜಲೀಸ್‌ನಲ್ಲಿರುವ ಫೆರಸ್ ಗ್ಯಾಲರಿಯಲ್ಲಿ ಪ್ರದರ್ಶಿಸಿದ ಕ್ಯಾಂಪ್‌ಬೆಲ್ಸ್ ಸೂಪ್ ಅನ್ನೊ ಕೃತಿ ಇಂಥದೊಂದು ಚರ್ಚೆಯನ್ನು ಆಗ ಜಗತ್ತಿನಾದ್ಯಂತ ಹುಟ್ಟುಹಾಕಿತ್ತು. (ಆತನ 32 ವರ್ಣಚಿತ್ರಗಳಲ್ಲಿ ಟೊಮ್ಯಾಟೊದಿಂದ ಪೆಪ್ಪರ್ ಪಾಟ್ ಮತ್ತು ಕ್ರೀಮ್ ಆಫ್ ಸೆಲರಿಯವರೆಗೆ ವಿಭಿನ್ನ ಪರಿಮಳವನ್ನು ಸೂಚಿಸುವಂತೆ ಚಿತ್ರಿಸಲಾಗಿತ್ತು)

ಕಲಾಕೃತಿಯಾಗಿ ಏಕೈಕ ಬಾಳೆಹಣ್ಣು ದೊಡ್ಡ ಜೋಕ್ ಆಗಿರಬಹುದು, ಆದರೆ 6.2 ಮಿಲಿಯನ್ ಡಾಲರ್ ಬೆಲೆ ಅಲ್ಲ !

ಇದು ಕಲಾ ಪ್ರಪಂಚದ ಉನ್ನತೀಕರಿಸುವುದರ ಸಂಕೇತವಾಗಿದೆ ಎಂದೇ ಭಾವಿಸೋಣ. ಕಲಾಕೃತಿಯೊಂದಕ್ಕೆ ಸುರಿದ ಮಿಲಿಯನ್ ಗಟ್ಟಲೆ ಹಣವೂ ಜಾಗತಿಕ ಹೂಡಿಕೆಯ ಭಾಗವಾಗಿ ಒಂದು ಸ್ವಾರ್ಥಸಾಧನೆಯ ಹಿಂದಿನ ಉದ್ದೇಶಗಳಿಗೆ ಬಳಕೆಯಾಗಿರುವುದು ಗಮನಿಸಬೇಕಾದ ಸಂಗತಿ.

ಅಂತಿಮವಾಗಿ, 'ಹಾಸ್ಯನಟ' (ಕಾಮೆಡಿಯನ್)ನ ಮಾರಾಟವು ಕಲೆಯ ಬಗ್ಗೆ ಕಡಿಮೆ ಮತ್ತು ಕಲೆಯಾಗಿಸುವ ಪ್ರಕ್ರಿಯೆಯ ಅಧಿಕಾರದ ಬಗ್ಗೆ ಹೆಚ್ಚು ಗಮನಹರಿಸುತ್ತಿದೆ. ಅದು ವಸ್ತುವಿನ ಮೇಲೆ ಚಮತ್ಕಾರ, ಆಳದ ಮೇಲೆ ಆಳವಿಲ್ಲದಿರುವಿಕೆ ಮತ್ತು ಅರ್ಥದ ಮೇಲೆ ಅನುಕರಣೆ ಆಯ್ಕೆ ಮಾಡುತ್ತದೆ. ಜಸ್ಟಿನ್ ಸನ್ ಕೊಂಡುಕೊಂಡ ಬಾಳೆಹಣ್ಣು ಆತನ ಕಲಾದಾಸ್ತಾನಿನಲ್ಲಿ ಸೇರ್ಪಡೆಯಾಗಿಲ್ಲದಿರಬಹುದು, ಅವನು ಬಾಳೆಹಣ್ಣಿನ ರುಚಿ ನಾಲಿಗೆ ಮೇಲೆ ಉಳಿದಿಲ್ಲದಿರಬಹುದು; ಆದರೆ ಈ ವ್ಯಂಗ್ಯವು ಬಹುಕಾಲ ಉಳಿಯುವುದಿಲ್ಲ ಎಂದು ಅವನು ಕಂಡುಕೊಳ್ಳಬಹುದು.

# ಲೇಖನ ಬರೆಯುವ ಜಾಗದಲ್ಲಿ ಪುಸ್ತಕ ಬರೆಯುತ್ತೀರಿ! ಹೇಗೆ ಸಾಧ್ಯ?

Ask the Editor

• ವಿಶ್ವೇಶ್ವರ ಭಟ್

ಸತಾಯಿಸುವ ಪ್ರಶ್ನೆಗಳಿಗೆ ಸಂತೈಸುವ ಉತ್ತರ
ಯಾವುದೇ ವಿಷಯದ ಬಗ್ಗೆ ಏನು ಪ್ರಶ್ನೆಯನ್ನಾದರೂ ಕೇಳಿ
asktheeditorvv@gmail.com

**ಗಣೇಶ್ ನಾಯಕ್, ಯಲ್ಲಾಪುರ**

• **ಭಟ್ರೇ, ಕೆಲವರು ತಾವು ಹೋಗಿ ಬಂದ ದೇಶದ ಕುರಿತು ಒಂದೆರಡು ಲೇಖನಗಳನ್ನು ಬರೆದರೆ ನೀವು ಒಂದು ಪುಸ್ತಕಕ್ಕೆ ಆಗುವಷ್ಟು ಬರೆಯುತ್ತೀರಿ. ಇದು ನನಗೆ ಅರ್ಥವಾಗದಿರುವ ಸಂಗತಿ. ಈ ವಿಷಯದ ಬಗ್ಗೆ ನಿಮ್ಮ ಅಭಿಪ್ರಾಯವನ್ನು ತಿಳಿಯಲು ಬಯಸುತ್ತೇನೆ.**

– ಗಣೇಶ್ ಅವರೇ, ಬೇರೆಯವರು ವಿದೇಶ ಪ್ರವಾಸದಿಂದ ಮರಳಿದ ಬಳಿಕ ಬರೆಯುವುದಕ್ಕೂ, ನಾನು ಬರೆಯುವುದಕ್ಕೂ, ಸಾಕಷ್ಟು ವ್ಯತ್ಯಾಸವಿದೆ. ಬೇರೆಯವರು ಒಂದೆರಡು ಲೇಖನ ಬರೆದು ಯಾಕೆ ಸುಮ್ಮನಾಗುತ್ತಾರೆಂದರೆ, ಅವರ ಬರಹಗಳನ್ನು ಪ್ರಕಟಿಸಲು ಪತ್ರಿಕೆಗಳು ಆಸಕ್ತಿ ತೋರಲಿಕ್ಕಿಲ್ಲ. ಇದಕ್ಕೆ ಜಾಗದ ಮಿತಿಯೂ ಇರಬಹುದು. ಆದರೆ ಇದು ನನ್ನ ವಿಷಯದಲ್ಲಿ ಬೇರೆ. ನನಗೆ ನನ್ನದೇ ಆದ ಪತ್ರಿಕೆ ಇದೆ ಮತ್ತು ನಾನೇ ಅದರ ಪ್ರಧಾನ ಸಂಪಾದಕ.

ವಿದೇಶಗಳಿಗೆ ಹೋಗಿ ಪುಸ್ತಕಗಳನ್ನ ಬರೆಯುತ್ತಿರುವವರಲ್ಲಿ ನಾನೇ ಮೊದಲಿಗನೇನಲ್ಲ. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಅಮೆರಿಕ ಪ್ರವಾಸ ಮುಗಿಸಿ 'ಅಮೆರಿಕದಲ್ಲಿ ಗೊರೂರು' ಎಂಬ ಪುಸ್ತಕವನ್ನೇ ಬರೆದರು. ನಿವೃತ್ತ ಐಪಿಎಸ್ ಅಧಿಕಾರಿ ಡಾ.ಡಿ.ವಿ.ಗುರುಪ್ರಸಾದ್ ಯಾವುದೇ ದೇಶದಿಂದ ಮರಳಿದರೂ ತಮ್ಮ ಪ್ರವಾಸದ ಅನುಭವಗಳನ್ನು ಪುಸ್ತಕ ರೂಪದಲ್ಲಿ ಕಟ್ಟಿಕೊಡುತ್ತಾ ಬಂದಿದ್ದಾರೆ. ನಾಗತಿಹಳ್ಳಿ ಚಂದ್ರಶೇಖರ್ ಮತ್ತು ನೇಮಿಚಂದ್ರ ಕನ್ನಡದಲ್ಲಿ ಒಳ್ಳೆಯ ಪ್ರವಾಸ ಸಾಹಿತ್ಯವನ್ನು ರಚಿಸಿದ್ದಾರೆ.

ಕನ್ನಡದಲ್ಲಿ ಪ್ರವಾಸ ಸಾಹಿತ್ಯ ಎಂಬ ಪ್ರಕಾರ ಸಮೃದ್ಧವಾಗಿ, ಹುಲುಸಾಗಿ ಬೆಳೆದಿದೆ. ಇತ್ತೀಚಿನ ದಿನಗಳಲ್ಲಂತೂ ಪ್ರವಾಸ ಮುಗಿಸಿ ಬಂದವರು ತಮ್ಮ ಅನುಭವಗಳನ್ನು ಅಕ್ಷರಗಳಲ್ಲಿ ಇಳಿಸುತ್ತಿರುವುದು ಉತ್ತಮ ಬೆಳವಣಿಗೆ. ನಾನು ಹೇಳಿ ಕೇಳಿ ಪತ್ರಕರ್ತ. ನಾನು ನೋಡಿದ, ಕೇಳಿದ, ಓದಿದ ಹೊಸ ವಿಷಯಗಳನ್ನು ನನ್ನ ಓದುಗರಿಗೆ ತಿಳಿಸದಿದ್ದರೆ ನನಗೆ ನಿದ್ದೆ ಬರುವುದಿಲ್ಲ. ಎಲ್ಲವನ್ನೂ ನನ್ನ ಓದುಗರ ಮುಂದೆ ಹೇಳುವ ಧಾವಂತ. ನಾವು ವಿದೇಶಕ್ಕೆ ಹೋದರೆ ಅಲ್ಲಿ ನೋಡುವುದೆಲ್ಲವೂ ಹೊಸತೇ. ಅಷ್ಟೆಲ್ಲ ಹೊಸ ಹೊಸ ವಿಷಯಗಳನ್ನು ಕಣ್ತುಂಬಿಸಿಕೊಂಡು ಬಂದು ಬರೆಯದಿದ್ದರೆ, ಅದನ್ನು ನನ್ನ ಓದುಗರಿಗೆ ತಿಳಿಸದಿದ್ದರೆ ಹೇಗೆ? ಹೀಗಾಗಿ ನಾನು ಅವೆಲ್ಲವನ್ನು ಬರೆಯುತ್ತೇನೆ.

ಹಾಗಂತ ನಾನು ಎಲ್ಲವನ್ನೂ ಬರೆಯುತ್ತೇನೆ ಎಂದಲ್ಲ, ಕೆಲವನ್ನು ಮುಂದೆ ಬೇಕಾಗುತ್ತದೆ ಎಂದು ಉಳಿಸಿಕೊಳ್ಳುತ್ತೇನೆ. ಅದನ್ನು ಸಾಂದರ್ಭಿಕವಾಗಿ, ಮುಂದೆ ನನ್ನ ಬರಹಗಳಲ್ಲಿ ಪ್ರಸ್ತಾಪಿಸುವುದುಂಟು. ಅಂದ ಹಾಗೆ ನಾನು ಇತ್ತೀಚೆಗೆ ಜಪಾನಿಂದ ವಾಪಸ್ಸಾದ ಬಳಿಕ, ಜೋರ್ಡನ್ ಮತ್ತು ಮಸ್ಕತ್‌ಗೆ ಹೋಗಿದ್ದೆ. ಅಲ್ಲಿನ ನನ್ನ ಪ್ರವಾಸದ ಅನುಭವಗಳ ಕುರಿತು ಒಂದಕ್ಷರವನ್ನೂ ಬರೆದಿಲ್ಲ. ಆದರೆ ಅಲ್ಲಿ ನನಗಾದ ಕೆಲವು ಅನುಭವ ಮತ್ತು ಪ್ರಸಂಗಗಳನ್ನು ನಾನು ನನ್ನ ಮುಂದಿನ ಬರಹಗಳಲ್ಲಿ ಪ್ರಸ್ತಾಪಿಸಬಹುದು.

ಕೆಲವರು ತಾವು ಹೋಗಿ ಬಂದ ದೇಶದ ಕುರಿತು ಒಂದೆರಡು ಲೇಖನಗಳನ್ನು ಬರೆದರೆ, ನಾನೇಕೆ ಒಂದು ಪುಸ್ತಕಕ್ಕೆ ಆಗುವಷ್ಟು ಬರೆಯುತ್ತೇನೆ ಎಂಬ ಪ್ರಶ್ನೆಗೆ ಉತ್ತರ ಸಿಕ್ಕಿರಬಹುದಲ್ಲ?

**ಸುನೇತ್ರೀ, ಕುಂದಾಪುರ**

• **ಭಟ್ರೇ, The Monk Who Sold His Ferrari ಕನ್ನಡದಲ್ಲಿ 'ಫೆರಾರಿ ಮಾರಿದ ಫಕೀರ' ಹೆಸರಿನಲ್ಲಿ ಅನುವಾದವಾಗಿದೆ. ಈ ಪುಸ್ತಕದ ಬಗ್ಗೆ ಸಾಕಷ್ಟು ಜನ ಉತ್ತಮ ಅಭಿಪ್ರಾಯ ವ್ಯಕ್ತಪಡಿಸಿರುವುದನ್ನು ನಾನು ಕೇಳಿಸಿಕೊಂಡಿದ್ದೇನೆ. ಆದರೆ ನಾನು ಈ ಪುಸ್ತಕ ಓದಿದಾಗ ಅವರು ಹೇಳಿದ ಯಾವ ಅನುಭವವೂ ನನಗೆ ಆಗಲಿಲ್ಲ. ನಿಜ ಹೇಳಬೇಕು ಅಂದರೆ ಈ ಪುಸ್ತಕ ನನಗೆ ಇಂಟರೆಸ್ಟಿಂಗ್ ಅಂತಲೂ ಅನ್ನಿಸಿಲ್ಲ. ಇದಕ್ಕೆ ಕಾರಣ ಏನಿರಬಹುದು?**

– ಸುನೇತ್ರಿ, ಬೇರೆಯವರಿಗೆ ಚೆನ್ನಾಗಿರುವುದು ನಿಮಗೂ ಹಾಗೆ ಇರಬೇಕಿಲ್ಲ. ಅದು ಸಾಧ್ಯವೂ ಇಲ್ಲ. ಒಬ್ಬೊಬ್ಬರ ಅಭಿರುಚಿ ಮತ್ತು ಆಸಕ್ತಿ ಒಂದೊಂದು ಥರ ಇರುತ್ತದೆ. ಅಷ್ಟಕ್ಕೇ ನೀವು ನಿಮ್ಮ ಬಗ್ಗೆ ಕೀಳರಿಮೆ ಬೆಳೆಸಿಕೊಳ್ಳಬೇಕಿಲ್ಲ. ನಮ್ಮ ಅಭಿರುಚಿ ನಮಗೆ ಬೇರೆಯವರ ಅಭಿರುಚಿ ಬೇರೆಯವರಿಗೆ. ನಿಮಗೆ 'ಸಿಟಿಜನ್ ಕೇನ್' ಸಿನಿಮಾದ ಬಗ್ಗೆ ಹೇಳಬೇಕು. ಈ ಸಿನಿಮಾವನ್ನು ಹೊಗಳದವರೇ ಇಲ್ಲ. ಅದನ್ನು ನೋಡದವರೂ ಆ ಚಿತ್ರವನ್ನು ಹೊಗಳಿದ್ದನ್ನು ಕೇಳಿದ್ದೇನೆ. ಸಾಹಿತಿ ಮತ್ತು ಜ್ಞಾನಪೀಠ ಪ್ರಶಸ್ತ ಪುರಸ್ಕೃತ ಡಾ.ಚಂದ್ರಶೇಖರ ಕಂಬಾರರು ಆ ಸಿನಿಮಾ ಕುರಿತು ಅರ್ಧ ಗಂಟೆ ಮಾತಾಡಿ, ಅದೊಂದು ಅದ್ಭುತ ಸಿನಿಮಾ ಎಂದು ಬಣ್ಣಿಸಿದ್ದರು.

1941 ರಲ್ಲಿ ನಿರ್ಮಾಣವಾದ, ಒರ್ಸನ್ ವೆಲ್ಲೆಸ್ ನಿರ್ದೇಶನದ ಆ ಸಿನಿಮಾವನ್ನು ಠhe greatest film ever made ಎಂದು ಹೇಳುವುದುಂಟು. British Film Institute's Sight & Sound ಪ್ರತಿ ವರ್ಷ ನಡೆಸುವ ಸಮೀಕ್ಷೆಯಲ್ಲಿ ಈ ಚಿತ್ರ ನಲವತ್ತು ವರ್ಷಗಳ ಕಾಲ ನಂಬರ್ ಒಂದನೇ ಸ್ಥಾನದಲ್ಲಿತ್ತು. 1998 ರಲ್ಲಿ ಅಮೆರಿಕದ ಫಿಲಂ ಇನ್ಸ್ಟಿಟ್ಯೂಟ್ 'ಕಳೆದ ನೂರು ವರ್ಷಗಳಲ್ಲಿ ತೆರೆ ಕಂಡ ನೂರು ಅದ್ಭುತ ಸಿನಿಮಾ' ಪಟ್ಟಿಯಲ್ಲೂ 'ಸಿಟಿಜನ್ ಕೇನ್' ಸ್ಥಾನ ಪಡೆದು ಕೊಂಡಿತ್ತು. ಈ ಚಿತ್ರದ ಸಿನಿಮಾಟೋಗ್ರಫಿ, ಎಡಿಟಿಂಗ್, ಸಂಗೀತ, ನಟನೆ, ಚಿತ್ರಕಥೆ... ಹೀಗೆ ಎಲ್ಲ ವಿಭಾಗಗಳಲ್ಲೂ ಪ್ರಶಸ್ತಿಯನ್ನು ಬಾಚಿಕೊಂಡ ಸಿನಿಮಾ ಇದಾಗಿತ್ತು.

ಇಷ್ಟೆಲ್ಲ ಗುಣಕಥನವನ್ನು ಈ ಚಿತ್ರ ಹೊಂದಿದ್ದರೂ, ಈ ಚಿತ್ರ ಬಾಕ್ಸ್ ಆಫೀಸಿನಲ್ಲಿ ಏಕೆ ನೆಲ ಕಚ್ಚಿತು ಎಂಬ ಪ್ರಶ್ನೆ ನನ್ನ ಮನಸ್ಸಿನಲ್ಲಿ ಕೊರೆಯುತ್ತಿತ್ತು. ಒಂದು ಚಿತ್ರ ಚೆನ್ನಾಗಿರುವುದಕ್ಕೂ, ಅದು ವಾಣಿಜ್ಯ ಯಶಸ್ಸು ಕಾಣದಿರುವುದಕ್ಕೂ ಸಂಬಂಧವಿಲ್ಲ. ಈ ಸಿನಿಮಾವನ್ನು ಅಷ್ಟೊಂದು ಜನ ಯಾಕೆ ಇಷ್ಟಪಟ್ಟಿದ್ದಾರೆ, ಈ ಚಿತ್ರದ ಬಗ್ಗೆ ಯಾಕೆ ಇಷ್ಟೊಂದು ಚರ್ಚೆಯಾಗುತ್ತಿದೆ ಎಂಬುದು ನನಗೆ ಅರ್ಥವಾಗಿರಲಿಲ್ಲ. ಅಲ್ಲಿ ತನಕ ನಾನೂ ಆ ಸಿನಿಮಾವನ್ನು ನೋಡಿರಲಿಲ್ಲ. ಒಂದು ಸಲ ನಾನು ಅದನ್ನು ನೋಡಲೇಬೇಕು, ಇಲ್ಲದಿದ್ದರೆ ನನ್ನಿಂದ ಮಹಾಪರಾಧವಾಗಬಹುದು ಎಂದು ಅದನ್ನು ನೋಡಲು ನಿರ್ಧರಿಸಿದೆ. ಆ ಚಿತ್ರವನ್ನು ನೋಡಿದ ನಂತರ ನನಗೆ ಬಹಳ ನಿರಾಸೆ ಆಯಿತು. ನನಗೆ ಆ ಚಿತ್ರ ಸ್ವಲ್ಪವೂ ಇಷ್ಟವಾಗಲಿಲ್ಲ. ಈ ಚಿತ್ರದ ಬಗ್ಗೆ ಯಾಕೆ ಇಷ್ಟೊಂದು ಪ್ರಶಂಸೆ, ಹೈಪ್ ಎಂಬುದು ನನಗೆ ಅರ್ಥವಾಗಲಿಲ್ಲ. ಎಂಬತ್ತೈದು ವರ್ಷಗಳ ಹಿಂದೆ ಆ ಚಿತ್ರ 'ಅದ್ಭುತ' ಎಂದು ಅನಿಸಿದ್ದಿರಬಹುದು. ಈಗ ಆ ಚಿತ್ರ ಅಂಥ ಅದ್ಭುತ ಪರಿಣಾಮವನ್ನುಂಟು ಮಾಡುವುದಿಲ್ಲ. 'ಸಿಟಿಜನ್ ಕೇನ್' ಸ್ವಲ್ಪವೂ ಇಷ್ಟವಾಗಲಿಲ್ಲ ಎಂದು ಹೇಳಿದರೆ ತಮ್ಮ ಅಭಿರುಚಿ ಬಗ್ಗೆ ಏನೆಂದುಕೊಳ್ಳುತ್ತಾರೋ ಎಂಬ ಕಾರಣಕ್ಕೆ ಹಲವರು ಅದನ್ನು ಹೊಗಳುವುದನ್ನು ಕೇಳಿದ್ದೇನೆ.

1954 ರಲ್ಲಿ ನಿರ್ಮಾಣವಾದ ಅಕಿರಾ ಕುರೋಸಾವ ನಿರ್ದೇಶನದ ಖ್ಯಾತ ಜಪಾನೀ ಚಿತ್ರ 'ಸೆವೆನ್ ಸಮುರೈ' ಸಿನಿಮಾ ಕುರಿತು ಪ್ರಸಿದ್ಧ ನಿರ್ದೇಶಕರಾದ ಕೆ.ಎಂ.ಶಂಕರಪ್ಪ ಅವರು ಒಮ್ಮೆ 'ಸಿನಿಮಾ ರಸಗ್ರಹಣ' ಶಿಬಿರದಲ್ಲಿ ಒಂದು ಗಂಟೆ ಮಾತಾಡಿದ್ದರು. ನಂತರ ಬಿಡುವಿನ ವೇಳೆಯಲ್ಲಿ ನಾನು ಅವರನ್ನು ಭೇಟಿ ಮಾಡಿ, 'ಸಾರ್, ಈ ಚಿತ್ರದ ವಸ್ತು ನಿಜಕ್ಕೂ ನೀವು ಹೇಳುವಷ್ಟು ಗ್ರೇಟಾ?' ಎಂದು ಕೇಳಿದಾಗ, ಅವರು 'ಒಮ್ಮೊಮ್ಮೆ ಹಾಗೆ ಹೇಳಬೇಕಾಗುತ್ತದಪ್ಪಾ. ಇಲ್ಲದಿದ್ದರೆ ನಮಗೆ ಸಿನಿಮಾ ಭಾಷೆ ಗೊತ್ತಿಲ್ಲ ಅಂದುಕೊಂಡುಬಿಡುತ್ತಾರೆ' ಎಂದು ಹೇಳಿದ್ದರು. ಆ ಚಿತ್ರವನ್ನೂ the greatest and most influential film ಎಂದು ಅನೇಕರು ಈಗಲೂ ವಾದಿಸುತ್ತಾರೆ.

ಸುನೇತ್ರಿಯವರೇ, ಕಿಕ್ಕೇರಿ ಬಸವನ ಮೂಗಿನೊಳಗೆ ಕೈಯಿಟ್ಟವರೆಲ್ಲ ಚೇಳಿನಿಂದ ಕಡಿಸಿಕೊಂ ಡರೂ, 'ವಾಹ್! ಅದೆಷ್ಟು ತಂಪಾಗಿದೆ' ಎಂದು ಹೇಳುವಂತೆ, ಕೆಲವರ ಅಭಿಪ್ರಾಯವನ್ನು ಗಂಭೀರ ವಾಗಿ ತೆಗೆದುಕೊಳ್ಳಬಾರದು ಮತ್ತು ನಮ್ಮ ಅಭಿಪ್ರಾಯವನ್ನು ಬದಲಿಸಿಕೊಳ್ಳಬಾರದು. ಬೇರೆಯವರಿಗೆ ಇಷ್ಟವಾಗಿದ್ದು ನಮಗೆ ಇಷ್ಟವಾಗಬೇಕಿಲ್ಲ.

**ರಮೇಶ ಎಂ., ಚಿತ್ರದುರ್ಗ**

• **ಸಂಪಾದಕರೇ, ನಾನು ಒಬ್ಬಳನ್ನು ಪ್ರೀತಿಸುತ್ತಿದ್ದೇನೆ. ಆದರೆ ಅದು ಅವಳಿಗೆ ಗೊತ್ತಿಲ್ಲ. ನಾನು ಅವಳಿಗೆ ನನ್ನ ಪ್ರೀತಿಯನ್ನು ಹೇಗೆ ತಿಳಿಸುವುದು? ಹೇಗೆಪ್ರೊಪೋಸ್ ಮಾಡುವುದು? ಇನ್ನೊಂದು ವಿಷಯ ಎಂದರೆ ಅವಳು ಮಾಂಸಾಹಾರಿ ಹಾಗೂ ನಾನು ಸಸ್ಯಾಹಾರಿ. ದಯವಿಟ್ಟು ನನಗೆ ನಿಮ್ಮ ಸಲಹೆ ಅಗತ್ಯವಿದೆ.**

– ರಮೇಶ ಅವರೇ, 'ಪ್ರೀತಿ ಮಾಡಬಾರದು, ಮಾಡಿದರೆ ಜಗಕೆ ಹೆದರಬಾರದು' ಎಂಬ ಹಳೆಯ ಕನ್ನಡ ಚಿತ್ರಗೀತೆಯನ್ನು ಕೇಳಿರಬಹುದು. ನೀವು ಜಗಕ್ಕೆ ಹೆದರುತ್ತೀರೋ ಬಿಡುತ್ತೀರೋ ಗೊತ್ತಿಲ್ಲ, ಆದರೆ ನೀವು ಪ್ರೀತಿಸಿದವಳಿಗೆ ಹೆದರಬಾರದು. ನಿಮ್ಮ ಮನಸ್ಸಿನ ಭಾವನೆಗಳನ್ನು ಹೇಳಲು ಯಾಕೆ ಸಂಕೋಚ ಪಟ್ಟುಕೊಳ್ಳಬೇಕು? ನೀವೇನು ಅಪರಾಧ ಎಸಗುತ್ತಿದ್ದೀರಾ? ಇಲ್ಲವಲ್ಲ. ನೀವು ಪ್ರೀತಿಸುತ್ತಿರುವ ಹುಡುಗಿಯ ಮುಂದೆ ನಿಂತು, 'ನಾನು ನಿನ್ನನ್ನು ಇಷ್ಟಪಟ್ಟಿದ್ದೇನೆ, ಪ್ರೀತಿಸುತ್ತಿದ್ದೇನೆ ನನ್ನನ್ನು ವಿವಾಹವಾಗುತ್ತೀಯ?' ಎಂದು ಹೇಳಿದರೆ, ಹೆಚ್ಚೆಂದರೆ ಆಕೆ 'ಇಲ್ಲ' ಎಂದು ನಿಮ್ಮ ಪ್ರೀತಿಯ ಪ್ರಸ್ತಾಪವನ್ನು ತಿರಸ್ಕರಿಸಬಹುದು. ಇದರ ಹೊರತಾಗಿ ನಿಮ್ಮ ತಲೆ ಕಡಿಯಕ್ಕಿಲ್ಲ, ಅಲ್ಲವೆ!

ಅಷ್ಟಕ್ಕೂ ನೀವು ಹೇಳುತ್ತಿರುವುದು ನಿಮ್ಮ ಮನಸ್ಸಿನ ಸಹಜವಾದ ಭಾವನೆಗಳನ್ನು. ಇದು ನಿಮಗೆ ಸಾಧ್ಯವಾಗದಿದ್ದರೆ ಆಕೆಯ ಮೊಬೈಲ್ ನಂಬರನ್ನು ಹೇಗಾದರೂ ಸಂಪಾದಿಸಿ, ಅವಳಿಗೆ ನಿಮ್ಮ ಪ್ರೀತಿಯ ನಿವೇದನೆಯನ್ನು ವಾಟ್ಸಾಪ್ ಮೂಲಕ ಕಳಿಸಬಹುದು. ಆಕೆಗೆ ಇಷ್ಟವಿದ್ದರೆ ಅವಳು ಪ್ರತಿಕ್ರಿಯೆ ಕೊಡಬಹುದು, ಇಲ್ಲದಿದ್ದರೆ ನಿಮ್ಮ ನಂಬರನ್ನು ಬ್ಲಾಕ್ ಮಾಡಬಹುದು.

ಇದಕ್ಕಿಂತ ಹೆಚ್ಚಾಗಿ ಆಕೆ ಏನನ್ನು ಮಾಡಲಾರಳು. ಒಂದು ವೇಳೆ ತನ್ನ ಅಣ್ಣ-ತಮ್ಮಂದಿರಿಗೆ ತಿಳಿಸಿದರೆ, ಆಗಲೂ ನೀವು ಅವರನ್ನು ಭೇಟಿಯಾಗಿ ಸಮಜಾಯಿಷಿ ನೀಡಬಹುದು. ಇವೆಲ್ಲವೂ ದೈನಂದಿನ ಜೀವನದಲ್ಲಿ ನಡೆಯುವಂಥದ್ದೇ. ನಿಮ್ಮ ಮನಸ್ಸಿನಲ್ಲಿ ನೀವು ಯಾವುದೋ ಅಪರಾಧವನ್ನು ಮಾಡುತ್ತಿದ್ದೇನೆ ಎಂಬ ಭಾವನೆಯನ್ನು ಯಾಕೆ ಬೆಳೆಸಿಕೊಂಡಿದಿರೋ ಗೊತ್ತಾಗುತ್ತಿಲ್ಲ. ಅಂಥ ಭಾವನೆ ಇದ್ದರೆ ಅದನ್ನು ತೆಗೆದು ಹಾಕಿ ಬಿಡಿ. ಎಷ್ಟೋ ಪ್ರೀತಿಗಳು ಅವನ್ನು ಪ್ರಕಟಿಸಲಾಗದೇ ಸತ್ತು ಹೋಗುತ್ತವೆ. ನಿಮ್ಮ ಪ್ರೀತಿಯೂ ಹಾಗೆ ಆಗದಿರಲಿ. 'ಪ್ರೀತಿಸುವುದು ಒಬ್ಬರನ್ನು, ಮದುವೆ ಯಾಗುವುದು ಇನ್ನೊಬ್ಬರನ್ನು' ಎಂಬಂತೆ ನಿಮ್ಮ ಜೀವನ ಕತೆಯೂ ಆಗದಿರಲಿ. ಸಾಧ್ಯವಾದರೆ, ಸಲ್ಮಾನ್ ಖಾನ್ ಮತ್ತು ಕಾಜೋಲ್ ನಟಿಸಿದ 'ಪ್ಯಾರ್ ಕಿಯಾ ತೋ ಡರನಾ ಕ್ಯಾ?' ಅಥವಾ ರವಿಚಂದ್ರ ಮತ್ತು ಜೂಹಿ ಚಾವಲಾ ಅಭಿನಯದ 'ಪ್ರೇಮಲೋಕ' ಸಿನಿಮಾವನ್ನು ನೋಡಿ.

ಕೊನೆಯಲ್ಲಿ ನೀವು, 'ಅವಳು ಮಾಂಸಾಹಾರಿ ಹಾಗೂ ನಾನು ಸಸ್ಯಾಹಾರಿ' ಎಂದು ಹೇಳಿದ್ದೀರಿ. ಅವಳು ಮಾಂಸಾಹಾರಿಯಾದರೆ ಏನಂತೆ? ಅವಳ ಪ್ರೀತಿಯ ಮುಂದೆ ಅದು ದೊಡ್ಡ ಸಮಸ್ಯೆಯಾಗಬಾರದಲ್ಲ? ಹಾಗಾದರೆ ನೀವು ಅವಳ ಯಾವ ಸಂಗತಿಯನ್ನು ನೋಡಿ ಇಷ್ಟಪಟ್ಟು ಪ್ರೀತಿಸುತ್ತೀದ್ದೀರಿ ಮತ್ತು ಮದುವೆಯಾಗಲು ಬಯಸಿದ್ದೀರಿ? ಇದೇ ನಿಮಗೆ ದೊಡ್ಡ ಸಮಸ್ಯೆಯಾಗಿ ಬಾಧಿಸುವುದಾದರೆ, ಈ ಸಮಸ್ಯೆಯಿಂದಲೇ ಈಗಲೇ ದೂರವಾಗುವುದು ವಾಸಿ. ಇಲ್ಲದಿದ್ದರೆ ಮದುವೆಯಾದ ಬಳಿಕ ಇದೇ ತೊಡಕಾಗಬಹುದು. ಒಬ್ಬರ ಆಹಾರ ಪದ್ಧತಿ ಜನ್ಮದ ಸಂಬಂಧಕ್ಕೆ ಎರವಾಗಬಾರದಲ್ಲ?!

**ವೀರೇಶ್ ಹಂದಿಕುಂಟೆ,** (ಇಮೇಲ್ ಮೂಲಕ)

• **ಭಟ್ರೇ, ಕೆಲವೊಮ್ಮೆ ನಮ್ಮ ಎದುರಿಗಿರುವವರು ಸುಳ್ಳು ಹೇಳುತ್ತಿದ್ದಾರೆ, ಮೋಸ ಮಾಡುತ್ತಿದ್ದಾರೆ, ನಾಟಕ ವಾಡುತ್ತಿದ್ದಾರೆ ಎಂಬುದು ಗೊತ್ತಿದ್ದರೂ ನಾವು ಹಿ ಹಿ ಹಿ... ಎಂದು ಹಲ್ಲು ಗಿಂಜಿ ಅವರೇ ಸರಿ ಎಂಬಂತೆ ನಡೆದುಕೊಳ್ಳುತ್ತೇವೆ. ಅದು ನಮ್ಮ ಬಾಸ್ ಎದುರಿಗಿ ರಬಹುದು ಅಥವಾ ನಮಗಿಂತ ಹಣದಲ್ಲಿ ಸಿರಿವಂತ ರಿರಬಹುದು. ಮನಸ್ಸಿಗೆ ಇಷ್ಟವಿಲ್ಲದಿದ್ದರೂ ನಾವು ಈ ರೀತಿ ನಡೆದು ಕೊಳ್ಳುತ್ತೇವೆ. ಅವರನ್ನು ಎದುರಿಸಿ ತೊಂದರೆ ತಂದುಕೊಳ್ಳುವುದು ಬೇಡವೆಂಬುದು ನಮ್ಮ ಧೋರಣೆಯಾಗಿರಬಹುದು. ಆದರೂ ಅಂಥವರಿಗೆ ಹೇಗೆ ಪಾಠ ಕಲಿಸುವುದು?**

– ವೀರೇಶ ಅವರೇ, ಕೆಲವು ಸಂದರ್ಭಗಳಲ್ಲಿ ಪರಿಸ್ಥಿತಿಯ ಒತ್ತಡ, ಅಸಹಾಯಕತೆಯಿಂದ ಆ ರೀತಿ ವರ್ತಿಸುವುದು ಅನಿವಾರ್ಯವಾಗಬಹುದು. ಆದರೆ ಅದನ್ನೇ ನಮ್ಮ ವ್ಯಕ್ತಿತ್ವದ ಅಥವಾ ವರ್ತನೆಯ ಪ್ರಮುಖ ಭಾಗವನ್ನಾಗಿ ಮಾಡಿಕೊಳ್ಳಬಾರದು. ಸರಿ ಅಲ್ಲದ್ದನ್ನು ಸರಿ ಅಲ್ಲವೆಂದು ಹೇಳುವ ಛಾತಿ ಮತ್ತು ಎದೆಗಾರಿಕೆ ಇಲ್ಲದಿರುವುದು ನಮ್ಮ ದೌರ್ಬಲ್ಯ. ಯಾವತ್ತೂ ನಮ್ಮ ದೌರ್ಬಲ್ಯವನ್ನು ಬಳಸಿಕೊಳ್ಳಲು ಅಥವಾ ದುರುಪಯೋಗಪಡಿಸಿಕೊಳ್ಳಲು ನಮ್ಮ ಸುತ್ತಮುತ್ತಲು ಇರುವವರು ಪ್ರಯತ್ನಿಸುತ್ತಲೇ ಇರುತ್ತಾರೆ. ಎಲ್ಲಿಯವರೆಗೆ ನಾವು ಶೋಷಣೆಗೆ ಒಳಗಾಗುತ್ತೇವೋ, ಅಲ್ಲಿಯ ತನಕ ಶೋಷಿಸುವರು ಇದ್ದೇ ಇರುತ್ತಾರೆ.

ನಮಗೆ ಎಲ್ಲ ಸಂದರ್ಭಗಳಲ್ಲೂ ತಪ್ಪನ್ನು ಖಂಡಿಸಲು ಆಗದೇ ಇರಬಹುದು. ಹಾಗಂತ ಅದನ್ನು ಯಾವತ್ತೂ ಸಹಿಸಿಕೊಳ್ಳಲೂಬಾರದು. ಒಂದಲ್ಲ ಒಂದು ರೀತಿಯಲ್ಲಿ ನಮ್ಮ ಪ್ರತಿರೋಧ ಅಥವಾ ಅಸಹನೆಯನ್ನು ಪ್ರಕಟಪಡಿಸಲೇಬೇಕು. ಇಲ್ಲದಿದ್ದರೆ ನಿಮ್ಮನ್ನು ಯಾರು ಬೇಕಾದರೂ ಬೇಕಾಬಿಟ್ಟಿ ಬಳಸಿ, ಬಿಸಾಡಬಹುದು. ನಮಗೂ ಒಂದು ದೃಢ ವ್ಯಕ್ತಿತ್ವವಿದೆ ಎಂಬುದನ್ನು ಸಾಬೀತು ಮಾಡದಿದ್ದರೆ ಎಲ್ಲರೂ ನಮ್ಮನ್ನು ನಿಕೃಷ್ಟವಾಗಿ ಅಥವಾ ತೀರ ಹಗುರವಾಗಿ ಭಾವಿಸುತ್ತಾರೆ.

ನಮ್ಮನ್ನು ಕೆಟ್ಟದಾಗಿ ಯಾರಾದರೂ ನಡೆಸಿಕೊಂಡರೆ ಅದಕ್ಕೆ ನಮ್ಮ ಪರೋಕ್ಷ ಬೆಂಬಲವೂ ಇದೆ ಎಂಬುದನ್ನು ಮರೆಯಬಾರದು. ಯಾರೂ ಸಹ ನಮ್ಮ ಅನುಮತಿ ಇಲ್ಲದೆ ನಮ್ಮ ಎದುರಿಗೇ ಲಘುವಾಗಿ ಕಾಣುವುದಿಲ್ಲ. ನಮ್ಮನ್ನು ಹಗುರವಾಗಿ ಕಂಡರೆ ಅಲ್ಲಿಯೇ ಹೇಳುವ ಎದೆಗಾರಿಕೆ ಪ್ರದರ್ಶಿತದಿದ್ದರೆ ನಮ್ಮನ್ನು ಹಾಗೆ ಕಾಣುವುದನ್ನು ಮುಂದುವರಿಸುತ್ತಾರೆ. ಬೇಸರವಾದರೂ ಸರಿಯೇ ಕೆಲವೊಮ್ಮೆ ನಮ್ಮ ಅಸಮ್ಮತಿಯನ್ನು ಧೈರ್ಯದಿಂದ ಪ್ರಕಟಿಸಲೇಬೇಕು.

ಇದು ನಿಮಗೆ ಸಾಧ್ಯವಾಗದಿದ್ದರೆ, ಗೊಣಗಬಾರದು ಅಥವಾ ಬೇರೆಯವರನ್ನು ದೂರಲೂಬಾರದು. ಹೆಚ್ಚೇನದರೆ ನೀವು ನಿಮ್ಮ ಹಣೆಬರಹವನ್ನು ಅಥವಾ ವ್ಯಕ್ತಿತ್ವವನ್ನು ಹಳಿದು ಸುಮ್ಮನಾಗಬೇಕಷ್ಟೆ. ಹೀಗಿರುವಾಗ ನೀವು ನಿಮ್ಮನ್ನು ನಿಕೃಷ್ಟವಾಗಿ ಕಂಡವರಿಗೆ ಪಾಠ ಕಲಿಸುವ ಮಾತು ದೂರವೇ ಉಳಿಯಿತು.

**ರೇಖಾ,** (ಇಮೇಲ್ ಮೂಲಕ)

• **ಭಟ್ರೇ, ನಾನೊಬ್ಬಳು ಗೃಹಿಣಿ. ನನ್ನ ಗಂಡನ ಕಡೆ ಹಾಗೂ ತವರಿನ ಕಡೆ ಎಲ್ಲ ಉದ್ಯೋಗಸ್ಥ ಮಹಿಳೆಯರೇ ಇದ್ದಾರೆ. ನನ್ನ ಪತಿ ಯಾವಾಗಲೂ ಎಲ್ಲದಕ್ಕೂ ನನ್ನನ್ನು ಹೊಗಳುತ್ತಾರೆ. ಅವರದ್ದೇನು ತೊಂದರೆ ಇಲ್ಲ. ಆದರೆ ಮನೆಗೆ ಬಂದವರು, ನೆಂಟರು ನನ್ನನ್ನು ಕೆಲಸಕ್ಕೆ ಹೋಗಲ್ವ ಎಂದು ತಾತ್ಸರದಿಂದ ನೋಡುತ್ತಾರೆ. ಏನು ಮಾಡುವುದು ತೋಚುವುದಿಲ್ಲ. ಗೃಹಿಣಿಯಾಗಿರುವುದು ತಪ್ಪಾ? ದಯವಿಟ್ಟು ತಿಳಿಸಿ.**

– ರೇಖಾ ಅವರೇ, ಈ ವಿಷಯದಲ್ಲಿ ಊರಿನವರ ಅಥವಾ ಸಮಾಜದ ಅಭಿಪ್ರಾಯಕ್ಕಿಂತ ನಿಮ್ಮ ಯಜಮಾನರ ಅಭಿಪ್ರಾಯ ಬಹಳ ಮುಖ್ಯ. ನಿಮ್ಮ ಯಜಮಾನರು ನಿಮ್ಮನ್ನು ಗೃಹಿಣಿಯಾಗಿ ಇರುವುದನ್ನೇ ಇಷ್ಟಪಟ್ಟಿದ್ದಾರೆ. ಇಲ್ಲದಿದ್ದರೆ ಅವರು ಉದ್ಯೋಗಸ್ಥ ಮಹಿಳೆಯನ್ನೇ ಮದುವೆ ಆಗುತ್ತಿದ್ದರೇನೋ? ಯಜಮಾನರ ಇಷ್ಟಕ್ಕಿಂತ ಮಿಗಿಲಾದುದು ಪತ್ನಿಗೆ ಯಾವುದೂ ಇಲ್ಲ. ಹೀಗಿರುವಾಗ ಬೇರೆಯವರ ಅಭಿಪ್ರಾಯಗಳಿಗೆ ಯಾಕೆ ತಲೆಕೆಡಿಸಿಕೊಳ್ಳುತ್ತೀರಿ?

ಪ್ರಾಯಶಃ ಒಬ್ಬ ಗೃಹಿಣಿಯಾಗಿ ಮನೆಯನ್ನು ಅಂದವಾಗಿಟ್ಟು, ಪತಿಯೊಂದಿಗೆ ಸಂತೃಪ್ತಿಯಿಂದ ಇರುವುದನ್ನು ನಿಮ್ಮ ನೆಂಟರು ಮತ್ತು ಬಂಧು-ಬಾಂಧವರಿಗೆ ನೋಡಲು ಅಥವಾ ಸಹಿಸಿಕೊಳ್ಳಲು ಆಗದಿರಬಹುದು. ಅದಕ್ಕಾಗಿ ನಿಮಗೆ ಕೆಲಸಕ್ಕೆ ಹೋಗಲ್ವಾ ಅಂತ ಕೇಳುತ್ತಿರಬಹುದು.

ನೀವು ಯಾವ ಕಾರಣಕ್ಕೂ ನಿಮ್ಮ ಪ್ಲಸ್ ಪಾಯಿಂಟ್ ಅನ್ನು ಮೈನಸ್ ಎಂದು ಪರಿಗಣಿಸಬೇಡಿ. ಒಂದು ವೇಳೆ ನಿಮ್ಮ ಯಜಮಾನರು ನೀವು ಕೆಲಸಕ್ಕೆ ಹೋಗುತ್ತಿಲ್ಲ ಎಂಬ ಕಾರಣದಿಂದ ತಾತ್ಸರವಾಗಿ ಕಂಡರೆ ಆಗ ತಲೆಕೆಡಿಸಿಕೊಳ್ಳಿ. ಆದರೆ ನೀವು ಹೇಳುವ ಪ್ರಕಾರ, ನಿಮ್ಮ ಯಜಮಾನರು ಅಂಥವರಲ್ಲ, ಯಾಕೆಂದರೆ ಅವರು ಎಲ್ಲರ ಮುಂದೆ ನಿಮ್ಮನ್ನು ಗೌರವದಿಂದ ಮತ್ತು ಪ್ರೀತಿಯಿಂದ ಕಾಣುತ್ತಿದ್ದಾರೆ, ಹೊಗಳುತ್ತಿದ್ದಾರೆ. ಹೀಗಿರುವಾಗ ಬೇರೆಯವರ ಅಭಿಪ್ರಾಯಗಳಿಗೆ ಸೊಪ್ಪು ಹಾಕಬೇಡಿ. ಗಂಡನಿಗೆ ಮಾಡುವ ಅಡುಗೆಯಲ್ಲಿ ಮಾತ್ರ ಧಾರಾಳವಾಗಿ ಸೊಪ್ಪು ಇರಲಿ.